ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಹೋಳಿಯ ಹೊಸ್ತಿಲಲ್ಲಿ ರತಿ-ಮನ್ಮಥರ ಲೋಕದಲ್ಲಿ...

ಕ್ಯಾಪ್‌ನಲ್ಲಿದ್ದ ತಲೆ ಕೂದಲು ಡಿಎನ್‌ಎ ಹೋಲಿಕೆ ? 7
ರಾಜ್ಯ ಸರ್ಕಾರ– ರಾಜ್ಯಪಾಲರ ಜಟಾಪಟ ಚುನಾವಣೆ ಮೇಲೆ ಬೀರುವುದೇ ಪರಿಣಾಮ?
ಸಚಿವರಿಗೆ 'ಕುಟುಂಬ' ಗೆಲ್ಲಿಸುವ ಸವಾಲು 4
ರಾಜಕೀಯ 'ದಾಳ'ವಾದ ರಾಜಭವನ? 5

'ಮುಳುಗುತ್ತಿವೆ' ಜಲಾಶಯಗಳು

ಒಳನೋಟ

• ಎಸ್‌. ರವಿಪ್ರಕಾಶ್‌

ತುಂಗಭದ್ರಾ ಜಲಾಶಯದಲ್ಲಿ ತುಂಬಿರುವ ಹೂಳು ಪ್ರಜಾವಾಣಿ ಚಿತ್ರ:ಲವ ಕೆ.

ಕೆಲ ವರ್ಷಗಳ ಹಿಂದೆ ಕೇರಳದಲ್ಲಿ ಉಂಟಾದ 'ಜಲ ಪ್ರಳಯ' ನೆನಪಿರಬೇಕಲ್ಲ ?

ಆ ಭಯಾನಕ ಘಟನೆಗಳ ದೃಶ್ಯಗಳ ಚಿತ್ರಗಳನ್ನಾದರೂ ನೋಡಿದವರ ಮನಸ್ಸಿನಿಂದ ಮಾಸಿ ಹೋಗಲು ಸಾಧ್ಯವೇ ಇಲ್ಲ. ಇದು ಅತಿವೃಷ್ಟಿಯ ಪರಾಕಾಷ್ಠೆ! ಕರ್ನಾಟಕದಲ್ಲೂ ಶತಮಾನ ಕಂಡಯರಿದ ಮಳೆ ಬಂದಿತ್ತು. ಎಲ್ಲ ನದಿಗಳೂ ಉಕ್ಕಿ ಹರಿದು, ಪ್ರವಾಹ ಅಬ್ಬರಿಸಿ ಜನ ಜೀವನವನ್ನೇ ಆಪೋಶನ ತೆಗೆದುಕೊಂಡಿತ್ತು. ಮುಂಬರುವ ವರ್ಷಗಳಲ್ಲಿ ಇಂತಹ ವಿದ್ಯಮಾನಗಳು ಪದೇ ಪದೇ ಸಂಭವಿಸುವುದರಲ್ಲಿ ಸಂದೇಹವೇ ಇಲ್ಲ. ಅಲ್ಲದೇ, ಮಳೆ ಇಲ್ಲದ ವರ್ಷಗಳಲ್ಲಿ ತೀವ್ರ ಬರಪೀಡಿತ ಪ್ರದೇಶಗಳಿಗೆ ಕುಡಿಯುವುದಕ್ಕೆ ಹನಿ ನೀರು ಸಿಗುವುದೂ ಕಷ್ಟ. ಅತಿವೃಷ್ಟಿ ಮತ್ತು ಅನಾವೃಷ್ಟಿ ನಿಸರ್ಗದ ಆಟವಾದರೂ ಅದರಿಂದ ಉಂಟಾಗುವ ಘೋರ ಸಂಕಷ್ಟಗಳಿಗೆ ಆಧುನಿಕ ಭಾರತದ 'ದೇಗುಲ'ವೆನಿಸಿರುವ ಜಲಾಶಯಗಳೂ ತಮ್ಮದೇ ಆದ 'ಕಾಣಿಕೆ' ನೀಡುತ್ತಿವೆ ಎನ್ನುವುದು ತಜ್ಞರ ಆತಂಕ.

'ಹೂಳು ತುಂಬಿಕೊಂಡು ನಲುಗುತ್ತಿರುವ ಜಲಾಶಯಗಳು ಕ್ರಮೇಣ ಶಾಪವಾಗಿ ಪರಿಣಮಿಸುತ್ತಿವೆಯೇ? ಇಂತಹದ್ದೊಂದು ಸಂಶಯ ಮೂಡದಿರದು. ಏಕೆಂದರೆ, ಅಣೆಕಟ್ಟು ಗಳಲ್ಲಿ ನೀರಿನ ಬದಲು ಹೂಳು, ಕೆಸರು ಭರ್ತಿ ಆಗುತ್ತಿವೆ. ಸಂಗ್ರಹ ಪ್ರಮಾಣ ಕುಸಿಯುತ್ತಿದೆ. ಇದರಿಂದ ನಾಗರಿಕರಿಗೆ ಕುಡಿಯುವ ನೀರಿನ ಪೂರೈಕೆಯ ಪ್ರಮಾಣವೂ ಕಡಿಮೆ ಆಗುತ್ತಿದೆ. ಕೃಷಿಗೆ ನೀರು ಕಡಿಮೆ ಆಗಿ ಬೆಳೆಗಳೂ ಒಣಗುತ್ತವೆ. ಇದರಿಂದ ನೀರಾವರಿ ಪ್ರದೇಶದ ವ್ಯಾಪ್ತಿಯೂ ಕುಗ್ಗುವುದೂ ನಿಶ್ಚಿತ. ಆಹಾರ ಭದ್ರತೆಗೇ ಸಂಚಕಾರ ಬರಲಿದೆ. ಜಲಾಶಯಗಳ ಹೂಳಿನ ನಿರ್ವಹಣೆ ಮತ್ತು ನೀರಿನ ಬಳಕೆ ಹಾಗೂ ನಿರ್ವಹಣೆಗೆ ಹೊಸ ಭಾಷ್ಯ ಬರೆಯದೇ ಇದ್ದರೆ, ಅಪಾಯ ಕಟ್ಟಿಟ್ಟ ಬುತ್ತಿ!

ಜಲಾಶಯದಲ್ಲಿ ನೀರಿನ ಸಂಗ್ರಹ ಕುಸಿತ (ಶೇ)

ಜಲಾಶಯ	ಕುಸಿತದ ಪ್ರಮಾಣ
ಕೆ.ಆರ್‌.ಸಾಗರ	34
ತುಂಗಭದ್ರಾ	42
ಭದ್ರಾ	51
ಲಿಂಗನಮಕ್ಕಿ	56
ನಾರಾಯಣಪುರ	34
ಸೂಪಾ	73
ಆಲಮಟ್ಟಿ	73
ಮಾಣಿ	66
ತಟ್ಟಿಹಳ್ಳ	3

(ಕಳೆದ 10 ವರ್ಷಗಳ ಸರಾಸರಿಗೆ ಹೋಲಿಸಿದಾಗ ಮಾರ್ಚ್ ಮೊದಲ ವಾರದಲ್ಲಿ ಕುಸಿತದ ಪ್ರಮಾಣ: ಕೇಂದ್ರ ಜಲ ಆಯೋಗದ ಬುಲೆಟಿನ್)

ಕೃಷಿಗೆ ನೀರಿನ ಕೊರತೆಯಾಗಿ ರೈತರ ಆದಾಯವೂ ಕುಸಿತವಾಗಲಿದೆ.

6ನೇ ಪುಟ ನೋಡಿ

ಪರ್ಯಾಯವೇನು?

ಜಲಾಶಯಗಳಿಂದ ತೆರವು ಮಾಡುವ ಹೂಳನ್ನು ಏನು ಮಾಡಬೇಕು ,ಯಾವ ರೀತಿ ಬಳಸಿಕೊಳ್ಳಬೇಕು ಎಂಬ ಬಗ್ಗೆ ತಜ್ಞರ ವಲಯದಲ್ಲಿ ಬಹಳ ಹಿಂದಿನಿಂದಲೂ ಚರ್ಚೆ ನಡೆಯುತ್ತಲೇ ಇದೆ. ಹೂಳು ಫಲವತ್ತಾಗಿರುವುದರಿಂದ ಕೃಷಿ ಭೂಮಿಗೆ ಬಳಸಿಕೊಳ್ಳಬಹುದು. ಆದರೆ, ಭಾರೀ ಪ್ರಮಾಣದ ಹೂಳನ್ನು ಕೃಷಿಗೆ ಬಳಸುವುದು ಕಷ್ಟ ಮತ್ತು ಸವಾಲಿನದು.

ದುಬೈನಲ್ಲಿ ಪಾಮ್ ಐಲ್ಯಾಂಡ್ ಎಂಬ ಕೃತಕ ದ್ವೀಪವನ್ನು ಸಮುದ್ರದ ಹೂಳಿನಿಂದಲೇ ನಿರ್ಮಿಸಲಾಗಿದೆ. ಈ ದ್ವೀಪಗಳಲ್ಲಿ ಮನೆಗಳು, ಹೊಟೇಲ್‌ಗಳನ್ನು ನಿರ್ಮಿಸಲಾಗಿದ್ದು, ಅತ್ಯಂತ ಆಕರ್ಷಕವಾಗಿವೆ. ಇದರ ನಿರ್ಮಾಣಕ್ಕೆ ದುಬೈನಿಂದ 6 ನಾಟಿಕಲ್ ಮೈಲಿಗಳಷ್ಟು 94 ದಶಲಕ್ಷ ಕ್ಯೂಬಿಕ್ ಮೀಟರ್ ಆಳ ಸಮುದ್ರದ ಮರಳು, 5.5 ದಶಲಕ್ಷ ಕ್ಯೂಬಿಕ್ ಮೀಟರ್ ಕಲ್ಲುಗಳು ಮತ್ತು 700 ಟನ್ ಸುಣ್ಣದ ಕಲ್ಲುಗಳನ್ನು ಇದಕ್ಕೆ ಬಳಸಲಾಗಿದೆ.

ಬಿಡುಗಡೆಯಾಗದ ಬರ ಪರಿಹಾರ: ಕಾನೂನು ಸಮರ ಸಾರಿದ ಕಾಂಗ್ರೆಸ್‌ ಸರ್ಕಾರ

ಕೇಂದ್ರದ ವಿರುದ್ಧ 'ಸುಪ್ರೀಂ'ಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರದಿಂದ ಕಂಗೆಟ್ಟಿರುವ ಕರ್ನಾಟಕಕ್ಕೆ ಕೇಂದ್ರದ ಬಿಜೆಪಿ ಸರ್ಕಾರ ಪರಿಹಾರ ಕೊಡುತ್ತಿಲ್ಲ; ನೆರವಿಗೂ ಬರುತ್ತಿಲ್ಲ ಎಂದು ಆಪಾದಿಸಿದ್ದ ಕಾಂಗ್ರೆಸ್‌ ನೇತೃತ್ವದ ರಾಜ್ಯ ಸರ್ಕಾರ, ಈಗ ತನ್ನ ಹೋರಾಟವನ್ನು ಸುಪ್ರೀಂ ಕೋರ್ಟ್‌ವರೆಗೆ ಒಯ್ದಿದೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ (ಎನ್‌ಡಿ ಆರ್‌ಎಫ್‌) ತಕ್ಷಣ ಹಣ ಬಿಡುಗಡೆಗೊಳಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ ಕದ ತಟ್ಟಿದೆ. ಪರಿಹಾರ ಬಿಡುಗಡೆಗೆ ಆಗ್ರಹಿಸಿ ಕೇಂದ್ರದ ವಿರುದ್ಧ ರಾಜ್ಯ ಈ ಹಿಂದೆ ನಡೆಸುತ್ತಿರುವ ಹೋರಾಟ ಮತ್ತೊಂದು ಆಯಾಮ ಪಡೆದಿದೆ. ಕೇಂದ್ರದ ಜತೆ ರಾಜ್ಯ ಸರ್ಕಾರ ಪತ್ರ ವ್ಯವಹಾರ ನಡೆಸಿತ್ತು. ರಾಜ್ಯ ಸಚಿವರ ನಿಯೋಗವು ಕೇಂದ್ರ ಸಚಿವರನ್ನು ಭೇಟಿ ಮಾಡಿತ್ತು. ಪ್ರಧಾನಿ ಮತ್ತು ಗೃಹ ಸಚಿವರಿಗೆ ರಾಜ್ಯ ಸರ್ಕಾರದಿಂದ ಮನವಿಯನ್ನೂ ಸಲ್ಲಿಸಲಾಗಿತ್ತು. ಹಲವು ಸುತ್ತಿನ ಆಪಾದನಾ ಪರ್ವಗಳನ್ನು ನಡೆಸಿದ್ದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ, ಸಚಿವ, ಶಾಸಕರ ದಂಡಿನೊಂದಿಗೆ ದೆಹಲಿಯ ಜಂತರ್ ಮಂತರ್‌ನಲ್ಲಿ ಧರಣಿಯನ್ನೂ ನಡೆಸಿ ದೇಶದ ಗಮನ ಸೆಳೆದಿತ್ತು. ಈಗ ಕಾನೂನುಸಮರ ಸಾರಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಕೇಂದ್ರದಿಂದ ನಮ್ಮ ಪಾಲಿನ ಪರಿಹಾರ ಬರುತ್ತದೆ ಎಂದು ಕಾದು ಕಾದು ಸಾಕಾಗಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದೇವೆ ಎಂದು ಹೇಳಿದರು.

9ನೇ ಪುಟ ನೋಡಿ

ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಪರಿಹಾರ (ಕೋಟಿಗಳಲ್ಲಿ)

₹327 ಕುಡಿಯುವ ನೀರು ಸರಬರಾಜು
₹40 ಮೇವು ಪೂರೈಕೆಗೆ
₹650 ರೈತರಿಗೆ ಪರಿಹಾರ

(ಮೊತ್ತ ಕೋಟಿಗಳಲ್ಲಿ)
₹18,171 ಕೇಂದ್ರದಿಂದ ಪರಿಹಾರಕ್ಕೆ ಕೋರಿರುವ ಮೊತ್ತ
₹800 ಬರ ನಿರ್ವಹಣೆಗಾಗಿ ಡಿ.ಸಿಗಳ ಬಳಿ ಇರುವ ಹಣ
₹4,663 ಇನ್‌ಪುಟ್ ಸಬ್ಸಿಡಿ ನೀಡಲು ಬೇಕಿರುವ ಹಣ

ಬರವೂ ಸೇರಿದಂತೆ ತುರ್ತು ಸಂದರ್ಭಗಳಲ್ಲಿ ಜನರಿಗೆ ತುರ್ತಾಗಿ ಸ್ಪಂದಿಸಬೇಕು ಎನ್ನುವ ಉದ್ದೇಶದಿಂದಲೇ 'ವಿಪತ್ತು ನಿರ್ವಹಣಾ ಕಾನೂನು' ಮಾಡಲಾಗಿದೆ. ಆದರೆ, ಐದು ತಿಂಗಳು ಕಳೆದರೂ ಎನ್‌ಡಿಆರ್‌ಎಫ್‌ ನಿಧಿಯಿಂದ ಹಣ ಬಂದಿಲ್ಲ. ಬೇರೆ ದಾರಿ ಇಲ್ಲದೆ ನಾವು ಸುಪ್ರೀಂ ಕೋರ್ಟ್‌ ಬಾಗಿಲು ಬಡಿಯಬೇಕಾಯಿತು
ಸಿದ್ದರಾಮಯ್ಯ, ಮುಖ್ಯಮಂತ್ರಿ

ರಾಜ್ಯ ಸರ್ಕಾರದ ನಡೆ ರಾಜಕೀಯ ಪ್ರೇರಿತವಾಗಿದ್ದು, ಒಕ್ಕೂಟ ವ್ಯವಸ್ಥೆಯಲ್ಲಿ, ಕರ್ನಾಟಕದ ಇತಿಹಾಸದಲ್ಲಿ ಇದೊಂದು ಕರಾಳ ದಿನ. ರೈತರ ನೆರವಿಗೆ ಧಾವಿಸುವುದಕ್ಕಿಂತ ತನ್ನ ರಾಜಕೀಯವೇ ಕಾಂಗ್ರೆಸ್‌ಗೆ ಮುಖ್ಯ
ಆರ್‌. ಅಶೋಕ, ವಿರೋಧ ಪಕ್ಷದ ನಾಯಕ

ನಾಳೆಯಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಸೋಮವಾರದಿಂದ (ಮಾರ್ಚ್‌–25) ಆರಂಭವಾಗುತ್ತಿದ್ದು, ಎಲ್ಲ 2,750 ಕೇಂದ್ರಗಳಲ್ಲೂ ಸಿದ್ಧತಾ ಕಾರ್ಯ ಪೂರ್ಣಗೊಂಡಿವೆ.

ಇದೇ ಮೊದಲ ಬಾರಿ ಪರೀಕ್ಷಾ ಕೇಂದ್ರಗಳಲ್ಲಿ ವೆಬ್‌ಕಾಸ್ಟ್‌ ವ್ಯವಸ್ಥೆ ಮಾಡಲಾಗಿದ್ದು, ಪ್ರತಿ ಪರೀಕ್ಷಾ ಕೇಂದ್ರದಲ್ಲೂ ಅಳವಡಿಸಿದ ಸಿ.ಸಿ.ಟಿ.ವಿ ಕ್ಯಾಮೆರಾಗಳ ಮೂಲಕ ಅಧಿಕಾರಿಗಳು ತಮ್ಮ ಕಚೇರಿಯಲ್ಲೇ ಕುಳಿತು ಪರೀಕ್ಷಾ ಕೇಂದ್ರಗಳಲ್ಲಿನ ಚಲನವಲನ ವೀಕ್ಷಿಸಲಿದ್ದಾರೆ. ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಅಗತ್ಯ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ.

ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ಗೋಡೆಗೆ ಮುಖ ಮಾಡಿಕೊಂಡು ಕುಳಿತು ಪರೀಕ್ಷೆ ಬರೆಯಲಿದ್ದಾರೆ. ಪ್ರತಿ ಕೇಂದ್ರಗಳಲ್ಲೂ ಗೋಡೆಯ ಕಡೆ ಮುಖ ಮಾಡಿ ಕುಳಿತುಕೊಳ್ಳುವಂತೆ ಡೆಸ್ಕ್‌ಗಳನ್ನು ಜೋಡಿಸಲಾಗಿದೆ.

9ನೇ ಪುಟ ನೋಡಿ

ದಾಳಿಗೆ ಉಕ್ರೇನ್‌ ನಂಟು: ರಷ್ಯಾ • ಘಟನೆ ನಡೆದ ಬೆನ್ನಲ್ಲೇ 11 ಮಂದಿ ಬಂಧನ

ಮಾಸ್ಕೊದಲ್ಲಿ ದಾಳಿ: 133 ಸಾವು

ಮಾಸ್ಕೊ (ಎಪಿ): ಮಾಸ್ಕೊದಲ್ಲಿ ಸಂಗೀತ ಕಾರ್ಯಕ್ರಮವೊಂದು ನಡೆಯಬೇಕಿದ್ದ ಕ್ರಾಕಸ್ ಸಿಟಿ ಹಾಲ್ ಸಭಾಂಗಣದ ಮೇಲೆ ಶುಕ್ರವಾರ ತಡರಾತ್ರಿ ನಡೆದ ದಾಳಿಯಲ್ಲಿ ಕನಿಷ್ಠ 133 ಮಂದಿ ಮೃತಪಟ್ಟಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ರಷ್ಯಾದ ಅಧಿಕಾರಿಗಳು 11 ಮಂದಿಯನ್ನು ಶನಿವಾರ ವಶಕ್ಕೆ ತೆಗೆದುಕೊಂಡಿದ್ದಾರೆ.

ಶಂಕಿತರ ಪೈಕಿ ನಾಲ್ಕು ಮಂದಿ ದಾಳಿಯಲ್ಲಿ ನೇರವಾಗಿ ಭಾಗಿಯಾಗಿದ್ದರು ಎಂದು ರಷ್ಯಾದ ತನಿಖಾ ಸಮಿತಿ ಹೇಳಿದೆ. ದಾಳಿಗೆ ತಾನು ಹೊಣೆ ಎಂದು ಇಸ್ಲಾಮಿಕ್ ಸ್ಟೇಟ್ ಸಂಘಟನೆ ಹೇಳಿಕೊಂಡಿದೆ. ಆದರೆ ದಾಳಿಗೆ ಉಕ್ರೇನ್ ನಂಟು ಇದೆ ಎಂಬ ಅರ್ಥದ ಮಾತುಗಳನ್ನು ರಷ್ಯಾದ ತನಿಖಾ ಸಂಸ್ಥೆಗಳು ಹೇಳಿವೆ.

ಈ ದಾಳಿಗೆ ಇಸ್ಲಾಮಿಕ್ ಸ್ಟೇಟ್ ಹೊಣೆ ಎಂಬುದನ್ನು ಅಮೆರಿಕದ ಗುಪ್ತಚರ ಸಂಸ್ಥೆಗಳು ಖಚಿತಪಡಿಸಿವೆ ಎಂದು ಅಮೆರಿಕದ ಗುಪ್ತದಳದ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ನಾಲ್ಕು ಮಂದಿ ಶಂಕಿತರನ್ನು ಪಶ್ಚಿಮ ರಷ್ಯಾದ ಬ್ರ್ಯಾನ್ಸ್ಕ್ ಪ್ರದೇಶದಲ್ಲಿ ಬಂಧಿಸಲಾಗಿದೆ. ಇದು ಉಕ್ರೇನ್ ಗಡಿಯಿಂದ ಹೆಚ್ಚೇನೂ ದೂರದಲ್ಲಿ ಇಲ್ಲ ಎಂದು ಸಮಿತಿಯು ಹೇಳಿದೆ. ಶಂಕಿತರು ಗಡಿದಾಟಿ ಉಕ್ರೇನ್ ಪ್ರವೇಶಿಸುವ ಉದ್ದೇಶ ಹೊಂದಿದ್ದರು, ಅಲ್ಲಿನವರ ಜೊತೆ ಅವರಿಗೆ ನಂಟು ಇದೆ ಎಂದು ರಷ್ಯಾದ ಅಧಿಕಾರಿಗಳನ್ನು ಉಲ್ಲೇಖಿಸಿ ಸರ್ಕಾರಿ ಒಡೆತನದ ಸುದ್ದಿಸಂಸ್ಥೆ ಟಾಸ್ ವರದಿ ಮಾಡಿದೆ. ರಷ್ಯಾದ ಫೆಡರಲ್ ಸೆಕ್ಯುರಿಟಿ ಸರ್ವಿಸ್ (ಎಫ್‌ಎಸ್‌ಬಿ) ಮುಖ್ಯಸ್ಥರು ಈ ಬಂಧನದ ಬಗ್ಗೆ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರಿಗೆ ವಿವರ ನೀಡಿದ್ದಾರೆ ಎಂದು ಕೂಡ ಅದು ವರದಿ ಮಾಡಿದೆ.



ಮಾಸ್ಕೊ ಹೊರವಲಯದ ಕ್ರಾಕಸ್ ಸಿಟಿ ಹಾಲ್‌ನಲ್ಲಿ ಶುಕ್ರವಾರ ರಾತ್ರಿ ಬಂದೂಕುಧಾರಿಗಳು ನಡೆಸಿದ ದಾಳಿಗೆ ಸಿಲುಕಿದವರ ರಕ್ಷಣಾ ಕಾರ್ಯ ನಡೆಯಿತು —ಎಎಫ್‌ಪಿ ಚಿತ್ರ

10ನೇ ಪುಟ ನೋಡಿ

ಜರ್ಮನಿ ನಿಲುವಿಗೆ ಭಾರತದ ಆಕ್ಷೇಪ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಂಧನ ಕುರಿತು ಜರ್ಮನಿಯ ವಿದೇಶಾಂಗ ಸಚಿವಾಲಯ ನೀಡಿದ್ದ ಹೇಳಿಕೆಗೆ ಭಾರತ ತೀವ್ರ ಪ್ರತಿಭಟನೆ ದಾಖಲಿಸಿದೆ.

ಜರ್ಮನಿಯ ರಾಯಭಾರ ಕಚೇರಿಯ ಉಪ ಮುಖ್ಯಸ್ಥ (ಡೆಪ್ಯುಟಿ ಚೀಫ್ ಆಫ್ ಮಿಷನ್) ಜಾರ್ಜ್ ಎಂಜ್‌ವೀಲರ್ ಅವರನ್ನು ಶನಿವಾರ ಕರೆಯಿಸಿಕೊಂಡ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು (ಎಂಇಎ), ಕೇಜ್ರಿವಾಲ್ ಅವರ ಬಂಧನದ ವಿಚಾರವಾಗಿ ಜರ್ಮನಿಯ ವಿದೇಶಾಂಗ ಸಚಿವಾಲಯ ನೀಡಿರುವ ಹೇಳಿಕೆಯು 'ಭಾರತದ ನ್ಯಾಯಾಂಗದ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ದಂತಿದೆ' ಹಾಗೂ 'ಪೂರ್ವಗ್ರಹ ಪೀಡಿತ ನಂಬಿಕೆಗಳನ್ನು ಹೊಂದಿರುವ ಅಗತ್ಯ ಇಲ್ಲವೇ ಇಲ್ಲ' ಎಂದು ಸ್ಪಷ್ಟವಾಗಿ ತಿಳಿಸಿದೆ.

ಕೇಜ್ರಿವಾಲ್ ಬಂಧನ ಕುರಿತು ಹೇಳಿಕೆ

ಕೇಜ್ರಿವಾಲ್ ಬಂಧನ ಕುರಿತು ಹೇಳಿಕೆ ನೀಡಿದ್ದ ಜರ್ಮನಿಯ ವಿದೇಶಾಂಗ ಸಚಿವಾಲಯದ ವಕ್ತಾರರು, 'ನ್ಯಾಯಾಂಗದ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಮೂಲ ತತ್ವಗಳಿಗೆ ಸಂಬಂಧಿಸಿದ ಮಾನದಂಡಗಳನ್ನು ಈ ಪ್ರಕರಣದಲ್ಲಿಯೂ ಅನ್ವಯಿಸಲಾಗುತ್ತದೆ ಎಂಬುದಾಗಿ ನಾವು ನಿರೀಕ್ಷಿಸುತ್ತೇವೆ' ಎಂದಿದ್ದರು.

'ನಮ್ಮ ದೇಶದ ಆಂತರಿಕ ವ್ಯವಹಾರಗಳ ಕುರಿತು ಜರ್ಮನಿಯ ವಿದೇಶಾಂಗ ಕಚೇರಿಯ ವಕ್ತಾರರು ನೀಡಿರುವ ಹೇಳಿಕೆ ಸರಿ ಅಲ್ಲ. ಈ ಸಂಬಂಧ ಜರ್ಮನಿಯ ರಾಯಭಾರಿಯನ್ನು ಕರೆಯಿಸಿ, ಭಾರತ ತೀವ್ರ ಪ್ರತಿಭಟನೆಯನ್ನು ದಾಖಲಿಸಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

8ನೇ ಪುಟ ನೋಡಿ

'ದೀರ್ಘಕಾಲ ಜೈಲಿನಲ್ಲಿ ಇಡಲಾಗದು'



ನವದೆಹಲಿ (ಪಿಟಿಐ): 'ಯಾವುದೇ ಜೈಲಿನಲ್ಲಿ ನನ್ನನ್ನು ದೀರ್ಘಕಾಲ ಇಡಲು ಸಾಧ್ಯವಿಲ್ಲ. ನನ್ನ ಇಡೀ ಜೀವನ ದೇಶಕ್ಕೆ ಮುಡಿಪು. ರಕ್ತದ ಪ್ರತಿ ಹನಿಯೂ ದೇಶಕ್ಕೆ ಸಮರ್ಪಿತ' ಎಂದು ದೆಹಲಿಯ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಶನಿವಾರ ಸಂದೇಶ ಕಳುಹಿಸಿದ್ದಾರೆ. ಜಾರಿ ನಿರ್ದೇಶನಾಲಯದ ವಶದಲ್ಲಿರುವ ಅವರು ಕಳುಹಿಸಿರುವ ಸಂದೇಶವನ್ನು ಅವರ ಪತ್ನಿ ಸುನಿತಾ ಕೇಜ್ರಿವಾಲ್ ಶನಿವಾರ ಓದಿದರು.

'ನನ್ನ ಭರವಸೆಗಳನ್ನು ಉಳಿಸಿಕೊಳ್ಳಲು ಶೀಘ್ರದಲ್ಲಿಯೇ ಹಿಂತಿರುಗುತ್ತೇನೆ' ಎಂದಿದ್ದಾರೆ.

ಕೋಲಾರ, ಹಾಸನ, ಮಂಡ್ಯ ಜೆಡಿಎಸ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋಲಾರ, ಹಾಸನ ಮತ್ತು ಮಂಡ್ಯ ಲೋಕಸಭಾ ಕ್ಷೇತ್ರಗಳನ್ನು ಜೆಡಿಎಸ್‌ಗೆ ಬಿಟ್ಟು ಕೊಡಲಾಗಿದೆ' ಎಂದು ಬಿಜೆಪಿಯ ರಾಜ್ಯ ಚುನಾವಣಾ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್‌ವಾಲ್ ಹೇಳಿದರು.

ನಗರದ ಅರಮನೆ ಮೈದಾನದಲ್ಲಿ ಬಿಜೆಪಿಯ ಮುಖಂಡರು ಮತ್ತು ಕಾರ್ಯಕರ್ತರಿಗೆ ಶನಿವಾರ ಆಯೋಜಿಸಿದ್ದ ಚುನಾವಣಾ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, 'ಕರ್ನಾಟಕದಲ್ಲಿ ಬಿಜೆಪಿ 25 ಮತ್ತು ಜೆಡಿಎಸ್ ಮೂರು ಕ್ಷೇತ್ರಗಳಲ್ಲಿ ಸ್ಪರ್ಧಿಸಲಿವೆ. 28 ಕ್ಷೇತ್ರಗಳಲ್ಲೂ ಗೆಲುವು ಸಾಧಿಸಲು ಎರಡೂ ಪಕ್ಷಗಳ ಕಾರ್ಯಕರ್ತರು ಮುಕ್ತ ಮನಸ್ಸಿನಿಂದ ಒಗ್ಗಟ್ಟಾಗಿ ಕೆಲಸ ಮಾಡಬೇಕು' ಎಂದರು.

'ಬಿಜೆಪಿಯ 25 ಅಭ್ಯರ್ಥಿಗಳ ಆಯ್ಕೆಯಲ್ಲಿ ಜೆಡಿಎಸ್ ನಾಯಕರು ಹಸ್ತಕ್ಷೇಪ ಮಾಡಿಲ್ಲ. ಅವರಿಗೆ ಹಂಚಿಕೆ ಮಾಡಿರುವ ಮೂರು ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆಯಲ್ಲಿ ನಮ್ಮ ಪಕ್ಷದವರು ಹಸ್ತಕ್ಷೇಪ ಮಾಡುವಂತಿಲ್ಲ. ಅಭ್ಯರ್ಥಿ ಯಾರು ಎನ್ನುವುದು ಮುಖ್ಯವಲ್ಲ. ಒಗ್ಗಟ್ಟಿನಿಂದ ಕೆಲಸ ಮಾಡಿ ಗೆಲ್ಲಿಸಿಕೊಂಡು ಬರುವುದು ಮುಖ್ಯ' ಎಂದು ಹೇಳಿದರು.

'ಮಂಡ್ಯ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕುರಿತು ಇನ್ನೂ ನಿರ್ಧಾರವಾಗಿಲ್ಲ' ಎಂಬ ಸಂಸದೆ ಸುಮಲತಾ ಹೇಳಿಕೆ ಬಗ್ಗೆ ಸಭೆಯ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ರಾಧಾಮೋಹನ್, 'ಸುಮಲತಾ ಅವರು ಹೇಳಿಕೆ ನೀಡುವಾಗ ಯಾವುದೇ ತೀರ್ಮಾನ ಆಗಿರಲಿಲ್ಲ. ಈಗ ಮಂಡ್ಯ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡುವ ತೀರ್ಮಾನ ಆಗಿದೆ' ಎಂದರು.

'ಸುಮಲತಾ ಅವರಿಗೆ ಉತ್ತಮವಾದ ರಾಜಕೀಯ ಭವಿಷ್ಯವಿದೆ. ಅವರು ಮಹತ್ತರವಾದ ಪಾತ್ರವನ್ನು ವಹಿಸಲಿದ್ದಾರೆ' ಎಂದು ಹೇಳಿದರು.

ಟಿಡಿಆರ್ ಸಂಬಂಧ ₹ 25 ಲಕ್ಷ ಲಂಚ ಪಡೆದ ಆರೋಪ

ಮುಡಾ ಆಯುಕ್ತ ಅಲಿ ಬಂಧನ

ಪ್ರಜಾವಾಣಿ ವಾರ್ತೆ

ಮನ್ಸೂರ್ ಅಲಿ



ಸಲೀಂ

ಆರೋಪಿಗಳಿಗೆ ಸರ್ಕಾರದ ಕೃಪಾಶೀರ್ವಾದ ಇರುವುದು ಸ್ಪಷ್ಟ. ಇದು ಶೇಕಡ 80ರಷ್ಟು ಲಂಚದ ಸರ್ಕಾರ. ಈ ಹಗರಣದಲ್ಲಿ ಸಿ.ಎಂ, ಡಿಸಿಎಂ ಮತ್ತು ನಗರಾಭಿವೃದ್ಧಿ ಸಚಿವರಿಗೆ ಎಷ್ಟು ಪಾಲು ಇತ್ತು ಎಂದೂ ಬಹಿರಂಗವಾಗಬೇಕು
ವಿ. ಸುನಿಲ್ ಕುಮಾರ್, ಬಿಜೆಪಿ ಶಾಸಕ

ಮಂಗಳೂರು: ಅಭಿವೃದ್ಧಿ ಹಕ್ಕು ವರ್ಗಾವಣೆ (ಟಿಡಿಆರ್) ಪ್ರಮಾಣಪತ್ರ ನೀಡುವುದಕ್ಕೆ ಸಂಬಂಧಿಸಿ ಆಸ್ತಿ ಮಾಲೀಕರೊಬ್ಬರಿಂದ ₹ 25 ಲಕ್ಷ ಲಂಚ ಪಡೆದ ಆರೋಪದ ಮೇಲೆ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಆಯುಕ್ತ ಮನ್ಸೂರ್ ಅಲಿ ಹಾಗೂ ಇದಕ್ಕೆ ಮಧ್ಯಸ್ಥಿಕೆ ವಹಿಸಿದ್ದ ಬರ್ಕೆಯ ಮೊಹಮ್ಮದ್ ಸಲೀಂ ಎಂಬಾತನನ್ನು ಲೋಕಾಯುಕ್ತ ಪೊಲೀಸರು ಶನಿವಾರ ಬಂಧಿಸಿದ್ದಾರೆ.

'ಟಿಡಿಆರ್ ಪ್ರಮಾಣಪತ್ರ ನೀಡುವುದಕ್ಕೆ ಮುಡಾ ಆಯುಕ್ತರು ಸತಾಯಿಸುತ್ತಿರುವ ಬಗ್ಗೆ ಇಲ್ಲಿನ ಕೊಟ್ಟಾರಚೌಕಿಯ ನಿವಾಸಿ ಗಿರಿಧರ ಶೆಟ್ಟಿ ಎಂಬುವವರು ದೂರು ನೀಡಿದ್ದರು. ಟಿಡಿಆರ್ ಪ್ರಮಾಣಪತ್ರ ಒದಗಿಸಲು ಲಂಚಕ್ಕೆ ಆಯುಕ್ತರು ಬೇಡಿಕೆ ಇಟ್ಟಿದ್ದಾರೆ ಎಂದು ಅವರು ಆರೋಪಿಸಿದ್ದರು. ಲಂಚದ ಹಣವನ್ನು ಪಡೆದ ಬ್ರೋಕರ್ ಮೊಹಮ್ಮದ್ ಸಲೀಂ ಹಾಗೂ ಮನ್ಸೂರ್ ಅಲಿ ಅವರನ್ನು ಸಾಕ್ಷ್ಯ ಸಮೇತ ಬಂಧಿಸಲಾಗಿದೆ' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

'ಗಿರಿಧರ ಶೆಟ್ಟಿ ಅವರು ಮಂಗಳೂರು ತಾಲ್ಲೂಕಿನ ಕುಡುಪು ಗ್ರಾಮದ 57/ಪಿ ಸರ್ವೆ ನಂಬರ್‌ನಲ್ಲಿ ಒಟ್ಟು 10 ಎಕರೆ 80 ಸೆಂಟ್ಸ್ ಜಮೀನು ಹೊಂದಿದ್ದರು. ಪಚ್ಚನಾಡಿ ಮತ್ತು ಕುಡುಪು ಗ್ರಾಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಸ ನಿರ್ವಹಣೆಯ ಘಟಕವನ್ನು ವಿಸ್ತರಿಸಲು ಬೇಕಾದ ಜಮೀನನ್ನು ಪಾಲಿಕೆ ಟಿಡಿಆರ್ ನಿಯಮದಡಿ ಖರೀದಿಸಿತ್ತು. 2024ರ ಜನವರಿಯಲ್ಲಿ ಜಮೀನು ಪಾಲಿಕೆ ಹೆಸರಿಗೆ ನೋಂದಣಿಯಾಗಿತ್ತು. ಪಾಲಿಕೆಯ ಆಯುಕ್ತರು ಟಿಡಿಆರ್ ನೀಡಲು ಮುಡಾ ಆಯುಕ್ತರಿಗೆ ಫೆಬ್ರುವರಿ ತಿಂಗಳಲ್ಲಿ ಪ್ರಸ್ತಾವ ಕಳುಹಿಸಿದ್ದರು. ಮುಡಾ ಆಯುಕ್ತ ಮನ್ಸೂರ್ ಅಲಿ ಈ ಕಡತ ಬಾಕಿ ಇರಿಸಿಕೊಂಡಿದ್ದರು. ಗಿರಿಧರ ಶೆಟ್ಟಿ ಈ ಬಗ್ಗೆ ಮುಡಾ ಆಯುಕ್ತರ ಬಳಿ ಮಾತನಾಡಿದಾಗ ಲಂಚಕ್ಕೆ ಬೇಡಿಕೆ ಇಟ್ಟಿದ್ದರು' ಎಂದು ಮಾಹಿತಿ ನೀಡಿದ್ದಾರೆ.

'ಮನ್ಸೂರ್ ಅಲಿ ಅವರ ನಿರ್ದೇಶನದಂತೆ ಬ್ರೋಕರ್ ಸಲೀಂ ಎಂಬವರು ಗಿರಿಧರ ಶೆಟ್ಟಿ ಅವರಿಂದ ಲಂಚದ ಹಣ ಪಡೆದಿದ್ದು, ಇಲ್ಲಿನ ಲೋಕಾಯುಕ್ತ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಅಮಾನುಲ್ಲಾ ಎ. ಹಾಗೂ ಸುರೇಶ್ ಕುಮಾರ್ ಪಿ. ಅವರ ನೇತೃತ್ವದ ತಂಡವು ಅವರಿಬ್ಬರನ್ನು ಬಂಧಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪ್ರಭಾರ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಚಲುವರಾಜು ಬಿ. ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು' ಎಂದು ತಿಳಿಸಿದ್ದಾರೆ.

ಮಲ್ಲೇಶ್ವರಂ
ಸುದರ್ಶನ್ ಜುವೆಲ್ಲರ್ಸ್
916 BIS ಹಾಲ್ಮಾರ್ಕ್ ಜುವೆಲ್ಲರಿ
ಅತ್ಯಂತ ಕಡಿಮೆ
ಚಿನ್ನದ ದರ: ₹6125/gm
ಬೆಳ್ಳಿ ದರ: ₹76/gm
ವೆಸ್ಟೇಜ್ 3% ರಿಂದ ಪ್ರಾರಂಭ
ಬೆಳ್ಳಿ ಸಾಮಗ್ರಿಗಳ ಮೇಲೆ ಮೇಕಿಂಗ್ ಚಾರ್ಜಸ್ ಇಲ್ಲ
ನಿಯಮಗಳು ಮತ್ತು ಷರತ್ತುಗಳು ಅನ್ವಯ
Ph- 080-29909733/ 9513394070

ಇಂದಿನ ಸಂಚಿಕೆಯೊಂದಿಗೆ ಪ್ರಜಾವಾಣಿ ಕ್ಲಾಸಿಫೈಡ್ಸ್ ಪುರವಣಿ ಲಭ್ಯವಿರುತ್ತದೆ

ಅಭ್ಯರ್ಥಿಗಳ ಮಧ್ಯೆ 'ಭಾಷಾ ಸಮರ' 04
ಸಿಕ್ಕಿಂ: ಬಿಜೆಪಿ ಏಕಾಂಗಿ ಸ್ಪರ್ಧೆ 05

ಚಿನಕುರಳಿ

ಪ್ರಕಾಶ್ ಶೆಟ್ಟಿ





ಕಾಯ್ದೆಗೆ ತಿದ್ದುಪಡಿ ಅಗತ್ಯ: ಅಪಾರ್ಟ್‌ಮೆಂಟ್ ಫೆಡರೇಷನ್ ಸಭೆಯಲ್ಲಿ ಜಲಮಂಡಳಿ ಅಧ್ಯಕ್ಷರ ಹೇಳಿಕೆ

ಫ್ಲ್ಯಾಟ್‌ಗಳಿಗೆ ಪ್ರತ್ಯೇಕ ಮೀಟರ್ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪಾರ್ಟ್‌ಮೆಂಟ್‌ಗಳಲ್ಲಿ ಬಳಕೆಯಾಗುವ ನೀರಿನ ಪ್ರಮಾಣವನ್ನು ತಿಳಿಯುವ ಸಲುವಾಗಿ, ಅಪಾರ್ಟ್‌ಮೆಂಟ್‌ನ ಪ್ರತಿಯೊಂದು ಫ್ಲ್ಯಾಟ್‌ಗೂ ಪ್ರತ್ಯೇಕ ಮೀಟರ್ ಅಳವಡಿಸುವ ಚಿಂತನೆ ನಡೆದಿದೆ' ಎಂದು ಜಲಮಂಡಳಿ ಅಧ್ಯಕ್ಷ ಡಾ.ರಾಮ್‌ಪ್ರಸಾತ್ ಮನೋಹರ್ ಹೇಳಿದರು.

ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್ ಸಹಯೋಗದಲ್ಲಿ ಶನಿವಾರ ಆಯೋಜಿಸಲಾಗಿದ್ದ 'ನೀರು ಉಳಿತಾಯ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಫ್ಲ್ಯಾಟ್‌ಗಳಿಗೆ ಪ್ರತ್ಯೇಕ ಮೀಟರ್ ಅಳವಡಿಸಲು ಬೆಂಗಳೂರು ಫೆಡರೇಷನ್ ಸದಸ್ಯರು ಮನವಿ ಮಾಡಿದರು. 'ಇದನ್ನು ಜಾರಿಗೆ ತರಲು ಕಾಯ್ದೆಗೆ ತಿದ್ದುಪಡಿ ಅಗತ್ಯವಿದೆ. ಅಪಾರ್ಟ್‌ಮೆಂಟ್ ನಿರ್ಮಾಣವಾಗುತ್ತಿರುವಂತಹ ಸಂದರ್ಭದಲ್ಲೇ ಫ್ಲ್ಯಾಟ್‌ಗಳಿಗೆ ಪ್ರತ್ಯೇಕವಾಗಿ ಮೀಟರ್ ಅಳವಡಿಕೆಗೆ ಅವಕಾಶ ಮಾಡಿಕೊಡಬೇಕು. ಪ್ರತ್ಯೇಕ ಮೀಟರ್ ಅಳವಡಿಸಲು ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್ ಮನವಿ ನೀಡಿದರೆ, ಅದನ್ನು ಸರ್ಕಾರದ ಗಮನಕ್ಕೆ ತಂದು ನಿರ್ಧಾರ ಕೈಗೊಳ್ಳಲಾಗುವುದು' ಎಂದು ರಾಮ್‌ಪ್ರಸಾತ್ ಭರವಸೆ ನೀಡಿದರು.

'ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್‌ನಲ್ಲಿ 30 ಕ್ಲಸ್ಟರ್‌ಗಳಿವೆ. 15 ಲಕ್ಷಕ್ಕೂ ಹೆಚ್ಚು ಜನರು ಇದ್ದಾರೆ. ಈ ಅಪಾರ್ಟ್‌ಮೆಂಟ್‌ಗಳು ಕಾವೇರಿ ನೀರು, ಕೊಳವೆಬಾವಿಗಳು, ಟ್ಯಾಂಕರ್‌ಗಳ ಮೇಲೆ ಅವಲಂಬಿತವಾಗಿವೆ. ನೀರಿನ ಸಮರ್ಪಕ ನಿರ್ವಹಣೆ ಹಾಗೂ ಮಿತ ಬಳಕೆಯನ್ನು ಉತ್ತೇಜಿಸಲು ಜಲಮಂಡಳಿ 'ಗ್ರೀನ್ ಸ್ಟಾರ್ ರೇಟಿಂಗ್ ಚಾಲೆಂಜ್' ಪ್ರಾರಂಭಿಸಿದೆ. ಇದನ್ನು ಅಪಾರ್ಟ್‌ಮೆಂಟ್‌ನವರು ಒಪ್ಪಿಕೊಂಡಿರುವುದು ಶ್ಲಾಘನೀಯ' ಎಂದರು.

ಮಾಹಿತಿ ಸಂಗ್ರಹ: 'ಯಾವ ಮೂಲಗಳಿಂದ ನೀರು ಸಂಗ್ರಹಿಸಲಾಗುತ್ತಿದೆ ಎಂಬ ವಿವರ ಒದಗಿಸಲು ಅಪಾರ್ಟ್‌ಮೆಂಟ್ ಫೆಡರೇಷನ್‌ಗೆ ಕೇಳಲಾಗಿದೆ. ಅದನ್ನು ಆಧರಿಸಿ 15 ರಿಂದ 30 ದಿನಗಳಲ್ಲಿ ಅಪಾರ್ಟ್‌ಮೆಂಟ್‌ಗಳಿಗೆ ಕನಿಷ್ಠ ಅಗತ್ಯ ನೀರು ಪೂರೈಸಲಾಗುವುದು' ಎಂದು ಅಧ್ಯಕ್ಷರು ಭರವಸೆ ನೀಡಿದರು.

ಟ್ಯಾಂಕರ್‌ಗಳಿಗೆ ಬಾಡಿಗೆ ನಿಗದಿ

ಬೆಂಗಳೂರು: ಜಲಮಂಡಳಿ ವತಿಯಿಂದ ನೀರು ಪೂರೈಕೆಗಾಗಿ ಖಾಸಗಿ ಟ್ಯಾಂಕರ್‌ಗಳನ್ನು ಬಳಸಿಕೊಳ್ಳಲು ಜಿಲ್ಲಾಡಳಿತ ಬಾಡಿಗೆ ದರ ನಿಗದಿಪಡಿಸಿದೆ.

ನಗರ ನಿವಾಸಿಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು 24 ಸಾವಿರ ಲೀಟರ್ ಮೇಲಿನ ಸಾಮರ್ಥ್ಯದ ಸುಮಾರು 200 ಟ್ಯಾಂಕರ್‌ಗಳನ್ನು ಮೂರು ತಿಂಗಳ ಅವಧಿಗೆ ಬಾಡಿಗೆ ಆಧಾರದಲ್ಲಿ ಬಳಸಿಕೊಳ್ಳಲು ಬೆಂಗಳೂರು ಜಲಮಂಡಳಿ ಬಯಸಿ, ಅದಕ್ಕಾಗಿ ಬಾಡಿಗೆ ನಿಗದಿಪಡಿಸಬೇಕು ಎಂದು ಜಿಲ್ಲಾಧಿಕಾರಿಗೆ ಮನವಿ ಮಾಡಿಕೊಂಡಿತ್ತು.

ಸಾರ್ವಜನಿಕರ ಹಿತದೃಷ್ಟಿಯಿಂದ ಕುಡಿಯುವ ನೀರು ಸರಬರಾಜು ವ್ಯವಸ್ಥೆ ನಿಭಾಯಿಸಲು ದರ ನಿಗದಿಗೆ ತಾಂತ್ರಿಕ ಸಮಿತಿಯನ್ನು ಜಿಲ್ಲಾಧಿಕಾರಿ ರಚಿಸಿದ್ದರು. ಲೋಕೋಪಯೋಗಿ ಇಲಾಖೆಯ ಎಸ್.ಆರ್. ದರಗಳು ಹಾಗೂ ವಾಸ್ತವದ ಅಂಕಿ–ಅಂಶಗಳನ್ನು ಅವಲೋಕಿಸಿ ಸಮಿತಿಯು ವರದಿಯನ್ನು ಸಲ್ಲಿಸಿತ್ತು. ಅದರ ಆಧಾರದಲ್ಲಿ ಟ್ಯಾಂಕರ್‌ಗಳಿಗೆ ಬಾಡಿಗೆ ದರ ನಿಗದಿ ಜಿಲ್ಲಾಧಿಕಾರಿ ಮಾರ್ಚ್ 23ರಂದು ಆದೇಶ ಹೊರಡಿಸಿದ್ದಾರೆ.

ಬಾಡಿಗೆ: ಯಾವುದಕ್ಕೆ ಎಷ್ಟು?

ಸಾಮರ್ಥ್ಯ (ಮಲ್ಟಿ ಆಕ್ಸಲ್ ಟ್ಯಾಂಕರ್)	ಪ್ರತಿ ದಿನದ ಬಾಡಿಗೆ (ಜಿಎಸ್‌ಟಿ ಸೇರಿ)
16 ಸಾವಿರ ಲೀಟರ್‌ಗೂ ಹೆಚ್ಚಿನ ಸಾಮರ್ಥ್ಯ	₹12,100
23 ಸಾವಿರ ಲೀಟರ್‌ಗೂ ಹೆಚ್ಚಿನ ಸಾಮರ್ಥ್ಯ	₹15,400
30 ಸಾವಿರ ಲೀಟರ್‌ಗೂ ಹೆಚ್ಚಿನ ಸಾಮರ್ಥ್ಯ	₹17,900

ಬನ್ನೇರುಘಟ್ಟ ರಸ್ತೆಯ ಜೆಡಿ ಮಾರ ಕೊಳೆಗೇರಿಯಲ್ಲಿ ಜಲಮಂಡಳಿಯು ಮೂರು ಹೆಚ್ಚುವರಿ ಸ್ಥಿರ ಟ್ಯಾಂಕ್‌ಗಳನ್ನು ಇಟ್ಟು ನೀರು ಪೂರೈಸುವ ವ್ಯವಸ್ಥೆ ಮಾಡಿದೆ. ಈ ಪ್ರದೇಶದಲ್ಲಿ ನೀರಿನ ಸಮಸ್ಯೆ ಕುರಿತ ಚಿತ್ರ 'ಪ್ರಜಾವಾಣಿ'ಯಲ್ಲಿ ಶನಿವಾರ ಪ್ರಕಟವಾಗಿತ್ತು

ಸುದ್ದಿ 2 ನಿಮಿಷ

ಅಪರಾಧ ತಡೆಗೆ 'ಪೊಲೀಸ್–ಪಬ್ಲಿಕ್ ಬೀಟ್': ದಯಾನಂದ್

ಬೆಂಗಳೂರು: 'ಮನೆಗಳಲ್ಲಿ ಕಳ್ಳತನ, ಸರಕಳವು ಸೇರಿ ಹಲವು ಅಪರಾಧಗಳ ತಡೆಗೆ ಸಾರ್ವಜನಿಕರ ನೆರವಿನಲ್ಲಿ 'ಪೊಲೀಸ್–ಪಬ್ಲಿಕ್ ಬೀಟ್' ಜಾರಿಗೆ ಚಿಂತನೆ ನಡೆದಿದೆ' ಎಂದು ಪೊಲೀಸ್ ಕಮಿಷನರ್ ಬಿ.ದಯಾನಂದ್ ಹೇಳಿದರು.

ಮಹಾಲಕ್ಷ್ಮಿ ಲೇಔಟ್‌ನಲ್ಲಿ ಶನಿವಾರ ನಡೆದ ಮಾಸಿಕ ಜನಸಂಪರ್ಕ ಸಭೆಯಲ್ಲಿ ಅವರು ಮಾತನಾಡಿದರು.

'ಪೊಲೀಸರ ಜೊತೆ ಸ್ವಯಂಸೇವಕರಾಗಿ ಕೆಲಸ ಮಾಡಲು ನಾವು ಸಿದ್ಧರಿದ್ದೇವೆ. ಅವಕಾಶ ಕೊಡಿ' ಎಂಬ ಸಭಿಕರೊಬ್ಬರ ಕೋರಿಕೆ ಪ್ರತಿಕ್ರಿಯಿಸಿ, 'ಹಿಂದೆ ನೆರೆ–ಹೊರೆ ಬೀಟ್ ಇತ್ತು. ಕೆಲವರು ದುರ್ಬಳಕೆ ಮಾಡಿಕೊಂಡಿದ್ದರಿಂದ ರದ್ದು ಮಾಡಲಾಗಿತ್ತು. ಮತ್ತೆ ಚಾಲನೆ ನೀಡುವ ಚಿಂತನೆ ಇದೆ' ಎಂದು ತಿಳಿಸಿದರು.

ಬೆರಳಚ್ಚು ಉಪಕರಣ ನೀಡಿ: 'ಪೊಲೀಸರ ಬಳಿ ಇರುವ ಬೆರಳಚ್ಚು ಪರಿಕರವನ್ನು ನಮಗೂ ಕೊಡಿ. ಆಭರಣ ಅಡವಿರಿಸಲು ಬರುವವರ ಬೆರಳಚ್ಚು ಪರೀಕ್ಷಿಸಿ, ಮಾಹಿತಿ ನೀಡುತ್ತೇವೆ' ಎಂದು ಮಳಿಗೆ ಮಾಲೀಕರೊಬ್ಬರು ಹೇಳಿದರು.

ದಯಾನಂದ್, 'ಇದೊಂದು ಒಳ್ಳೆಯ ಸಲಹೆ. ಪರಿಶೀಲಿಸಲಾಗುವುದು' ಎಂದರು. ಸಭೆಯಲ್ಲಿ ಡಿಸಿಪಿಗಳಾದ ಸೈದುಲು ಅಡಾವತ್ ಹಾಗೂ ಸಿರಿ ಗೌರಿ ಇದ್ದರು.

ಕಾಡುವ ಸಿನಿಮಾ: ನೋಡುವಂತೆ ಮಾಡುವುದೆಂತು?

ಮಂಗಳೂರು: ಕನ್ನಡ ಚಿತ್ರರಂಗದ ಯುವ ನಿರ್ದೇಶಕರು ನಿರ್ಮಿಸಿರುವ ವಿಭಿನ್ನ ಕಥಾ ಹಂದರದ ಸಿನಿಮಾಗಳು ಪ್ರೇಕ್ಷಕರನ್ನು ಕಾಡುವಂತಿವೆ. ಆದರೆ ಭಿನ್ನ ಕಾರಣಗಳಿಂದಾಗಿ ದೊಡ್ಡ ಪ್ರೇಕ್ಷಕ ವರ್ಗವನ್ನು ತಲುಪುತ್ತಿಲ್ಲ. ಇಂತಹ ಸಿನಿಮಾಗಳನ್ನೂ ಜನ ನೋಡುವಂತೆ ಮಾಡುವ ಬಗೆ ಹೇಗೆ?

ಶ್ರೀರಂಗಪಟ್ಟಣದ ಕೆ.ಶೆಟ್ಟಿಹಳ್ಳಿಯ 'ನಿರ್ದಿಗಂತ' ಮತ್ತು ಇಲ್ಲಿನ ಸೇಂಟ್ ಅಲೋಶಿಯಸ್ ಡೀಮ್ಡ್ ವಿಶ್ವವಿದ್ಯಾಲಯದ ರಂಗ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ಇಲ್ಲಿ ಏರ್ಪಡಿಸಿರುವ 'ನೇಹದ ನೆಯ್ಗೆ' ಮಂಗಳೂರು ರಂಗೋತ್ಸವದಲ್ಲಿ ಶನಿವಾರ ನಡೆದ 'ಸಿನಿಮಾ– ನನ್ನ ಒಲವು ನಿಲುವುಗಳು' ಸಂವಾದ ಇಂತಹದ್ದೊಂದು ಚರ್ಚೆಗೆ ವೇದಿಕೆ ಕಲ್ಪಿಸಿತು.

ನಟ ಪ್ರಕಾಶ್ ರಾಜ್ ನಡೆಸಿಕೊಟ್ಟ ಸಂವಾದದಲ್ಲಿ ಯುವ ನಿರ್ದೇಶಕರಾದ 'ಕಿರಗೂರಿನ ಗಯ್ಯಾಳಿಗಳು' ಖ್ಯಾತಿಯ ಸುಮನಾ ಕಿತ್ತೂರು, 'ತಿಥಿ' ಖ್ಯಾತಿಯ ಈರೇಗೌಡ, 'ಡೇರ್ ಡೆವಿಲ್ ಮುಸ್ತಾಫಾ' ಖ್ಯಾತಿಯ ಶಶಾಂಕ್ ಸೌಗಾಲ್ ಹಾಗೂ 'ಫೋಟೊ' ಸಿನಿಮಾದ ನಿರ್ದೇಶಕ ಉತ್ಸವ ಗೊನವಾರ ಅವರು ತಮ್ಮ ಚಿಂತನೆ ಹಂಚಿಕೊಂಡರು.

ವಿಭಿನ್ನ ಆಲೋಚನಾ ಶೈಲಿಯ ಸಿನಿಮಾಗಳನ್ನು ಜನರಿಗೆ ತಲುಪಿಸಲು ಯುವ ನಿರ್ದೇಶಕರು ಎದುರಿಸುತ್ತಿರುವ ಸವಾಲುಗಳು, ಸಿನಿಮಾ ನಿರ್ಮಾಣಕ್ಕೆ ಬಂಡವಾಳ ಹೊಂದಿಸುವ ಸಮಸ್ಯೆಗಳು ಕುರಿತು ಚರ್ಚೆ ನಡೆಯಿತು.

'ಇಂತಹ ಸಿನಿಮಾವನ್ನು ಸುಸ್ಥಿರವಾಗಿ ನಿರ್ಮಿಸುವಂತಹ ವಾತಾವರಣ ರೂಪಿಸುವ ಹಾಗೂ ಅವುಗಳನ್ನು ಜನರಿಗೆ ತಲುಪಿಸುವ ಹೊಣೆ ನಮ್ಮೆಲ್ಲರ ಮೇಲಿದೆ. ಕೇರಳಿಗರು ಇಂತಹ ವ್ಯವಸ್ಥೆ ಕಟ್ಟಿಕೊಂಡಿದ್ದಾರೆ. ಅದು ಕನ್ನಡ ಸಿನಿಮಾ ರಂಗದಲ್ಲೂ ಸಾಧ್ಯವಾಗಬೇಕು. ಸ್ವತಂತ್ರವಾಗಿ ಸಿನಿಮಾ ನಿರ್ಮಿಸುವ ಯುವ ನಿರ್ದೇಶಕರು ಪ್ರತ್ಯೇಕ ದ್ವೀಪಗಳಾಗಿ ಕಾರ್ಯನಿರ್ವಹಿಸುವ ಬದಲು, ಸಿನಿಮಾವನ್ನು ಪ್ರೇಕ್ಷಕರಿಗೆ ತಲುಪಿಸುವಾಗ ಎದುರಾಗುವ ಸಮಸ್ಯೆಗಳನ್ನು ನಿಭಾಯಿಸುವ ಬಗ್ಗೆ ಪರಸ್ಪರ ಚರ್ಚಿಸಿ, ಪರಿಹಾರೋಪಾಯ ಕಂಡುಕೊಳ್ಳಬೇಕು' ಎಂದು ಪ್ರಕಾಶ್ ರಾಜ್ ಸಲಹೆ ನೀಡಿದರು.

ಕೋಲಾರ: ನಾಳೆ ಮೈತ್ರಿ ಅಭ್ಯರ್ಥಿ ಘೋಷಣೆ

ಮುಳಬಾಗಿಲು (ಕೋಲಾರ): 'ನಾನು ಇಲ್ಲವೇ ಬಂಗಾರಪೇಟೆಯ ಮಲ್ಲೇಶ್ ಬಾಬು ಕೋಲಾರ ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿಯಾಗುವುದು ಖಚಿತ' ಎಂದು ಶಾಸಕ ಸಮೃದ್ಧಿ ಮಂಜುನಾಥ್ ಶನಿವಾರ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಸೋಮವಾರ ಒಬ್ಬರ ಹೆಸರನ್ನು ಅಧಿಕೃತವಾಗಿ ಘೋಷಣೆ ಮಾಡಲಿದ್ದಾರೆ. ಇಬ್ಬರಲ್ಲಿ ಯಾರಿಗೇ ಟಿಕೆಟ್ ನೀಡಿದರೂ ಒಗ್ಗಟ್ಟಿನಿಂದ ಕೆಲಸ ಮಾಡುತ್ತೇವೆ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

PUBLIC NOTICE

This is to inform the general public that our client is desirous of entering into a Joint Development Agreement in respect of the below mentioned Schedule Property from its present owner Mr.Julius Felix Sequeira S/o Late LME Sequira.

Any person's or entity having or claiming any manner of right, title, claim lien or interest in the Schedule Property may intimate the same in writing to the undersigned along with documentary evidence in support of their claim within **14 days** from the date of this publication, failing which, our client will be advised to proceed with the Joint Development Agreement as if no valid claims are subsisting against the Schedule Property.

SCHEDULE PROPERTY

All that piece and parcel of the immovable property being seven sites which adjoin each other and forming part of the property bearing No. 103, measuring East to West 255 feet and North to South 49.5 feet in all measuring 13,256 Sq Feet Sq. ft situated in Byrathi Village. Bidarahalli Hobli, Bengaluru East Taluk, presently bearing Municipal Nos. (1) 74/116, (2) 410/171/1, (3) 416/38/172-118, (4) 415/38/170, (5) 358/4-30/1-38/170, (6) 359/1361-38/170, (7) 1094/714/103/1/103 and are together bounded on the
East By : Hennur Main Road
West By : Private Property;
North By : CSI Church; and
South By : Babu Reddy's Property.

Date: 24.03.2024
Place: Bangalore

Sd/-
(S.A.H. RAZVI)
PRIME LAW ASSOCIATES
No. 60, 2nd Floor, M.M. Complex,
Chick Bazaar Road, Tasker Town,
Bangalore-560 051 Cell No: 9845049766
Mail: prime_law@yahoo.com

ಚಿಕ್ಕಬಳ್ಳಾಪುರ: ಡಾ.ಆಂಜನಪ್ಪ ಕೆಆರ್‌ಎಸ್ ಅಭ್ಯರ್ಥಿ

ಬೆಂಗಳೂರು: ಹೆಸರಾಂತ ವೈದ್ಯ ಡಾ.ಟಿ.ಎಚ್.ಆಂಜನಪ್ಪ ಅವರು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಭ್ಯರ್ಥಿಯಾಗಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಕಣಕ್ಕೆ ಇಳಿಯಲಿದ್ದಾರೆ.

'ಆಂಜನಪ್ಪ ಅವರು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರವಿ ಕೃಷ್ಣಾರೆಡ್ಡಿ ಅವರ ಸಮ್ಮುಖದಲ್ಲಿ ಪಕ್ಷ ಸೇರ್ಪಡೆಗೊಂಡಿದ್ದಾರೆ. ಅವರಿಗೆ ಚಿಕ್ಕಬಳ್ಳಾಪುರ ಕ್ಷೇತ್ರದ ಟಿಕೆಟ್ ನೀಡಲಾಗಿದೆ' ಎಂದು ಕೆಆರ್‌ಎಸ್‌ಪಿ ಉಪಾಧ್ಯಕ್ಷ ಲಿಂಗೇಗೌಡ ಹೇಳಿದ್ದಾರೆ.

ಬಿಎಸ್‌ವೈ ಅವರಿಂದ ಚಂಡಿಕಾ ಹೋಮ ಇಂದು

ಚಿಕ್ಕಮಗಳೂರು: ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಮತ್ತು ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಕುಟುಂಬ ಸಮೇತ ಭಾನುವಾರ ಹೊರನಾಡಿನಲ್ಲಿ ಚಂಡಿಕಾ ಹೋಮ ನಡೆಸುವರು ಎಂದು ದೇವಸ್ಥಾನದ ಮೂಲಗಳು ತಿಳಿಸಿವೆ.

'ಮೇಕೆದಾಟು ಯೋಜನೆ ಅವೈಜ್ಞಾನಿಕ'

'ಕುಡಿಯುವ ನೀರಿನ ಸಮಸ್ಯೆ' ಚಿಂತನ ಮಂಥನದಲ್ಲಿ ಟಿ.ವಿ.ರಾಮಚಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೇಕೆದಾಟು ಯೋಜನೆ ಅವೈಜ್ಞಾನಿಕವಾಗಿದ್ದು, ಯೋಜನೆ ಅನುಷ್ಠಾನಗೊಂಡರೆ 5,000 ಹೆಕ್ಟೇರ್ ಕಾಡು ನಾಶವಾಗಲಿದೆ' ಎಂದು ಪರಿಸರ ವಿಜ್ಞಾನಿ ಟಿ.ವಿ.ರಾಮಚಂದ್ರ ಆತಂಕ ವ್ಯಕ್ತಪಡಿಸಿದರು.

ಕರ್ನಾಟಕ ನೆಲ–ಜಲ ಸಂರಕ್ಷಣಾ ಸಮಿತಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಕುಡಿಯುವ ನೀರಿನ ಸಮಸ್ಯೆ' ಚಿಂತನ ಮಂಥನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬೆಂಗಳೂರಿಗೆ ವರ್ಷಕ್ಕೆ 18 ಟಿಎಂಸಿ ಅಡಿ ನೀರು ಬೇಕು. ಮಳೆ ನೀರು ಸಂಗ್ರಹದ ಮೂಲಕವೇ 15 ಟಿಎಂಸಿ ಅಡಿ ನೀರು ಪೂರೈಸಬಹುದು. ಅದನ್ನು ಬಿಟ್ಟು, ಪರಿಸರಕ್ಕೆ ಹಾನಿ ಮಾಡುವ ಯೋಜನೆ ರೂಪಿಸಲಾಗುತ್ತಿದೆ ಎಂದರು.

'5,000 ಹೆಕ್ಟೇರ್ ಅಂದರೆ 100 ಟಿಎಂಸಿ ಅಡಿ ನೀರು ಇಂಗಿಸುವ ಪ್ರದೇಶ. ಅದನ್ನು ನಾಶಪಡಿಸಿ, ಅಣೆಕಟ್ಟು ಕಟ್ಟಿ 65 ಟಿಎಂಸಿ ಅಡಿ ನೀರು ಸಂಗ್ರಹಿಸುವುದಾಗಿ ಹೇಳುವುದರಲ್ಲಿ ಅರ್ಥವಿಲ್ಲ' ಎಂದು ಅಭಿಪ್ರಾಯಪಟ್ಟರು.

'ಬೆಳ್ಳಂದೂರು ಕೆರೆ ನೀರು ತ್ಯಾಜ್ಯದಿಂದ ತುಂಬಿದೆ. ನಾವು ನೇರವಾಗಿ ಕಲುಷಿತ ನೀರು ಬಳಸದಿರಬಹುದು. ಆದರೆ, ಆ ಕೆರೆಯ ಮೀನು, ಕಲುಷಿತ ನೀರಿನಲ್ಲಿ ಬೆಳೆದ ತರಕಾರಿ ಬಳಸಿದರೂ ತೊಂದರೆಯಾಗುತ್ತದೆ. 15 ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಶೇ 1 ಇದ್ದ ಮೂತ್ರ ಪಿಂಡ ಸಮಸ್ಯೆ, ಈಗ ಶೇ 15ಕ್ಕೆ ಏರಿದೆ. ಕ್ಯಾನ್ಸರ್‌ನಲ್ಲಿ ಬೆಂಗಳೂರಿ ನಗರವೇ ಮೊದಲ ಸ್ಥಾನದಲ್ಲಿದೆ. ಇದೆಲ್ಲ ಕಲುಷಿತ ನೀರಿನ ಕೊಡುಗೆ' ಎಂದು ವಿಶ್ಲೇಷಿಸಿದರು.

'ಬೆಳ್ಳಂದೂರು ಮತ್ತು ವರ್ತೂರು ಕೆರೆಯನ್ನು ಪುನರುಜ್ಜೀವನಗೊಳಿಸಬೇಕು ಎಂದು ವರದಿ ನೀಡಿದ್ದೆವು. ಈಗ ಪುನರುಜ್ಜೀವನ ಕೆಲಸ ಮುಗಿಯುವ ಮೊದಲೇ ತ್ಯಾಜ್ಯನೀರು ಶುದ್ಧೀಕರಿಸಿ ಕೆರೆಗೆ ಬಿಡಲು ಅಧಿಕಾರಿಗಳು ಮುಂದಾಗಿದ್ದಾರೆ. ಇದು ₹ 500 ಕೋಟಿ ಲೂಟಿ ಮಾಡುವ ಯೋಜನೆ' ಎಂದು ಟೀಕಿಸಿದರು.

ಜಕ್ಕೂರು ಕೆರೆ ಪುನರುಜ್ಜೀವನಗೊಳಿಸಿದ್ದರಿಂದ ಸುತ್ತಲಿನ 300 ಕೊಳವೆಬಾವಿಗಳಲ್ಲಿ ಕಬ್ಬಿಣದ ಅಂಶವಿಲ್ಲದ ನೀರು ಬರುತ್ತಿದೆ. ಸಾರಕ್ಕಿ ಕೆರೆ ಪುನರುಜ್ಜೀವನಗೊಂಡಿದ್ದರಿಂದ ಅಲ್ಲಿನ ವಾತಾವರಣ ಚೆನ್ನಾಗಿದೆ ಎಂದು ವಿವರಿಸಿದರು.

ಕರ್ನಾಟಕ ನೆಲ–ಜಲ ಸಂರಕ್ಷಣಾ ಸಮಿತಿ ಸಂಚಾಲಕ ಕುರುಬೂರು ಶಾಂತಕುಮಾರ್ ಅವರು, 'ಮೇಕೆದಾಟು ಯೋಜನೆ ರೂಪಿಸಲು ಬಿಡುವುದಿಲ್ಲ ಎಂದು ತಮಿಳುನಾಡಿನ ಮುಖ್ಯಮಂತ್ರಿ ಪ್ರಣಾಳಿಕೆಯಲ್ಲಿ ತಿಳಿಸಿದ್ದಾರೆ. ರಾಜ್ಯ ಸರ್ಕಾರಕ್ಕೆ ಕಾಳಜಿ ಇದ್ದರೆ, ಇದರ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ನೀಡಬೇಕು' ಎಂದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಅಧ್ಯಕ್ಷ ವೂಡೇ ಪಿ.ಕೃಷ್ಣ, ಕರ್ನಾಟಕ ನೆಲ–ಜಲ ಸಂರಕ್ಷಣಾ ಸಮಿತಿ ಸಂಚಾಲಕ 'ಮುಖ್ಯಮಂತ್ರಿ' ಚಂದ್ರು, ಪ್ರತೀಕ್ಷ್ ಎನ್ವಿರೋ ಸಲ್ಯೂಷನ್ಸ್ ವ್ಯವಸ್ಥಾಪಕ ನಿರ್ದೇಶಕಿ ದಾಕ್ಷಾಯಣಿ ಎಸ್. ದಳವಾಯಿ, ರೈತ ಸಂಘದ ರಾಜ್ಯಾಧ್ಯಕ್ಷ ನಾರಾಯಣ ರೆಡ್ಡಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ. ರಾವ್, ಶಿಕ್ಷಣ ತಜ್ಞ ನಿರಂಜನಾರಾಧ್ಯ, ಕನ್ನಡ ಚಳವಳಿಗಾರ ಗುರುದೇವ ನಾರಾಯಣ ಕುಮಾರ್ ಉಪಸ್ಥಿತರಿದ್ದರು.

'ಕುಡಿಯುವ ನೀರಿನ ಸಮಸ್ಯೆ' ಚಿಂತನ ಮಂಥನ ಕಾರ್ಯಕ್ರಮವನ್ನು ಹನಿ ನೀರು ಉಣಿಸಿ ಉದ್ಘಾಟಿಸಲಾಯಿತು. 'ಮುಖ್ಯಮಂತ್ರಿ' ಚಂದ್ರು, ಟಿ.ವಿ. ರಾಮಚಂದ್ರ, ಕುರುಬೂರು ಶಾಂತಕುಮಾರ್, ವೂಡೇ ಪಿ. ಕೃಷ್ಣ, ವಿ.ಪಿ. ನಿರಂಜನಾರಾಧ್ಯ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ನೃತ್ಯ

ನಗರದ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಎಐಎಂ ಆಯೋಜಿಸಿರುವ 16ನೇ ಆವೃತ್ತಿಯ 'ಬೆಂಗಳೂರು ಅಂತರರಾಷ್ಟ್ರೀಯ ಕಲಾ ಮಹೋತ್ಸವ'ದಲ್ಲಿ ರಮಾ ವೈದ್ಯನಾಥನ್ ಮತ್ತು ತಂಡದವರು 'ಪ್ರತಿಬೋಧನಾ' ನೃತ್ಯ ಪ್ರಸ್ತುತಪಡಿಸಿದರು —ಪ್ರಜಾವಾಣಿ ಚಿತ್ರ

ಮುಂಬೈ ರೇಸ್

ಪ್ರೈಡ್ಸ್ ಏಂಜೆಲ್ ಗೆಲ್ಲುವ ನಿರೀಕ್ಷೆ

ಸೇಠ್ ರಾಮ್‌ನಾಥ್ ದಾಫ ಟ್ರೋಫಿ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪ್ರೈಡ್ಸ್ ಏಂಜೆಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಸಂಜೆ 4.30ಕ್ಕೆ ಪ್ರಾರಂಭವಾಗಲಿರುದ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅಡೊನಿಸ್ 1, ಎಲೊಕ್ವೆಂಟ್ 5, ಟಾಕಿಂಗ್ ಪಾಯಿಂಟ್ 6
2ನೇ ರೇಸ್: ಪ್ರೈಡ್ಸ್ ಏಂಜೆಲ್ 3, ಕೊಯೆರ್ ಡಿ ಲಯನ್ 1
3ನೇ ರೇಸ್: ಎಲ್ ಗ್ರಿಕೊ 4, ಗೋಲ್ಡನ್ ಗ್ಲೋ 1, ಕರೀನಾ 3
4ನೇ ರೇಸ್: ಕ್ವಿಕರ್ 2, ಬಕ್ಲಾವ 1, ವಿನ್ಸೆರೊ 4
5ನೇ ರೇಸ್: ನ್ಯೂ ಡೈಮನ್ಶನ್ 3, ರೆಮಿನಿಸೆನ್ಸ್ 5, ಡೆಕ್ಸಾ 1
6ನೇ ರೇಸ್: ಗ್ಯಾಲಪಿಂಗ್ ಅಹೆಡ್ 9, ವಾಟ್ಸ್‌ಇನ್‌ಎನೇಮ್ 10, ಅಟ್ಯೆನ್ಡ್ 7
7ನೇ ರೇಸ್: ಆರ್ಟ್ ಕಲೆಕ್ಟರ್ 1, ಕಿನ್ಸಾಲ್ 4, ಲೈಟ್ ಆಫ್ ಲೈಫ್ 10
ಉತ್ತಮ ಬೆಟ್: ಕ್ವಿಕರ್
ಜಾಕ್‌ಪಾಟ್: 3,4,5,6,7; ಟ್ರಿಬಲ್: 4,5,6

ಉತ್ತಮ ಬೆಟ್: ಕ್ವಿಕರ್

ಜಾಕ್‌ಪಾಟ್‌ಗೆ	ಟ್ರಿಬಲ್
3,4,5,6,7	4,5,6

ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಐ.ಎಂ. ವಿಠಲಮೂರ್ತಿ

ಬಾಲ್ಯದ ನೆನಪು ಬರೆಯೋದು ಕಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾಲ್ಯದ ನೆನಪುಗಳು, ಅನುಭವಗಳನ್ನು ವಯಸ್ಸಾದ ಮೇಲೆ ಬರೆಯುವುದು ಕಷ್ಟ' ಎಂದು ರಾಜ್ಯ ಸರ್ಕಾರದ ನಿವೃತ್ತ ಪ್ರಧಾನ ಕಾರ್ಯದರ್ಶಿ ಐ.ಎಂ.ವಿಠ್ಠಲಮೂರ್ತಿ ಹೇಳಿದರು.

ಅಬ್ಬೂರು ಪ್ರಕಾಶ್ ಅವರ 'ಕಣ್ಣ ಕನ್ನಡಿಯಲ್ಲಿ..' ಮತ್ತು ರೇಖಾ ಹೆಗಡೆ ಬಾಳೇಸರ ಅವರ 'ಕಾಡು ಕಾಡು' ಕೃತಿಗಳನ್ನು ನಗರದಲ್ಲಿ ಶನಿವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಸರ್ಕಾರಿ ಅಧಿಕಾರಿಗಳಿಗೆ ಆಡಳಿತದ ಅನುಭವವನ್ನು ಬರೆಯುವಂಥದ್ದು ಇರುವುದಿಲ್ಲ. ತೀರಾ ವೈಯಕ್ತಿಕವಾದುದನ್ನು ಬಿಟ್ಟರೆ ಎಲ್ಲ ಅಧಿಕಾರಿಗಳ ಅನುಭವ ಒಂದೇ ರೀತಿಯಾಗಿರುತ್ತದೆ. ಅರ್ಧ ಸತ್ಯ, ಇನ್ನರ್ಧ ನಟನೆಯಲ್ಲೇ ಕಾಲ ಕಳೆದು ಹೋಗಿರುತ್ತದೆ' ಎಂದು ವಿಶ್ಲೇಷಿಸಿದರು.

'ನಾನು ನಿವೃತ್ತನಾಗಿ 13 ವರ್ಷಗಳು ಕಳೆದವು. ವಿಧಾನಸೌಧದತ್ತ ತಲೆ ಹಾಕಿಲ್ಲ. ಯಾಕೆಂದರೆ ಹಿಂದೆ ಅದ್ಭುತವಾಗಿ ಕೆಲಸ ಮಾಡಿದ ಅಧಿಕಾರಿಗಳು ನಿವೃತ್ತರಾದ ಮೇಲೆ ವಿಧಾನಸೌಧಕ್ಕೆ ಬಂದು ಅನುಭವಿಸಿದ ಅವಮಾನಗಳನ್ನು ನೋಡಿದ ಮೇಲೆ ನನಗೂ ಅತ್ತ ಹೋಗಬೇಕು ಎಂದೆನ್ನಿಸಿಲ್ಲ' ಎಂದು ತಿಳಿಸಿದರು.

ಪ್ರಕಾಶ್ ಅವರ ಬರವಣಿಗೆ ಸುಲಲಿತವಾಗಿ ಓದಿಸಿಕೊಂಡು ಹೋಗುತ್ತದೆ. ತೇಜಸ್ವಿಯವರು ಮಲೆನಾಡಿನ ಅನುಭವವನ್ನು ಕಟ್ಟಿಕೊಟ್ಟಂತೆ, ಪ್ರಕಾಶ್ ಬಯಲುಸೀಮೆಯ ಅನುಭವ ಕಟ್ಟಿಕೊಟ್ಟಿದ್ದಾರೆ. ರೇಖಾ ಹೆಗಡೆ ಬಾಳೇಸರ ಅವರ ಕೃತಿಯೂ ಚೆನ್ನಾಗಿದೆ ಎಂದು ಶ್ಲಾಘಿಸಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ಕೃತಿಗಳನ್ನು ಪರಿಚಯಿಸಿದರು. ದೂರದರ್ಶನ ಕೇಂದ್ರದ ಕಾರ್ಯಕ್ರಮ ಮುಖ್ಯಸ್ಥೆ ಆರತಿ ಎಚ್.ಎನ್. ಅಧ್ಯಕ್ಷತೆ ವಹಿಸಿದ್ದರು. ಬಹುರೂಪಿ ಪ್ರಕಾಶನದ ಜಿ.ಎನ್. ಮೋಹನ್, ಕೃತಿಕಾರರಾದ ಅಬ್ಬೂರು ಪ್ರಕಾಶ್, ರೇಖಾ ಹೆಗಡೆ ಬಾಳೇಸರ ಉಪಸ್ಥಿತರಿದ್ದರು.

ರಾಜ್ಯ ಸರ್ಕಾರದ ಮಾಜಿ ಪ್ರಧಾನ ಕಾರ್ಯದರ್ಶಿ ಐ.ಎಂ. ವಿಠ್ಠಲಮೂರ್ತಿ (ಎಡದಿಂದ ಎರಡನೇಯವರು) ಅಬ್ಬೂರು ಪ್ರಕಾಶ್ (ಎಡಗಡೆಯವರು) ಅವರ 'ಕಣ್ಣ ಕನ್ನಡಿಯಲ್ಲಿ..' ಹಾಗೂ ರೇಖಾ ಹೆಗಡೆ ಬಾಳೇಸರ (ಎಡದಿಂದ ನಾಲ್ಕನೇಯವರು) ಅವರ 'ಕಾಡು ಕಾಡು' ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಿದರು. ದೂರದರ್ಶನ ಕೇಂದ್ರದ ಮುಖ್ಯಸ್ಥರು (ಕಾರ್ಯಕ್ರಮ) ಆರತಿ ಎಚ್.ಎನ್ ಮತ್ತು ಪತ್ರಕರ್ತ ಜಿ.ಎನ್. ಮೋಹನ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಪುಸ್ತಕ ಪರಿಚಯ

ಕೃತಿ: ಕಣ್ಣ ಕನ್ನಡಿಯಲ್ಲಿ...
ಲೇಖಕ: ಅಬ್ಬೂರು ಪ್ರಕಾಶ್
ಪುಟ: 136
ದರ: ₹ 170

ಕೃತಿ: ಕಾಡು ಕಾಡು
ಲೇಖಕಿ: ರೇಖಾ ಹೆಗಡೆ ಬಾಳೇಸರ
ಪುಟ: 100
ದರ: ₹ 130
ಪ್ರಕಾಶನ: ಬಹುರೂಪಿ

ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್‌. ಸಂತೋಷ್ ಹೆಗ್ಡೆ ಬೇಸರ

‘ಭ್ರಷ್ಟಾಚಾರ ಭದ್ರವಾಗಿ ಬೇರೂರಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಾಜದಲ್ಲಿ ಭ್ರಷ್ಟಾಚಾರ ಭದ್ರವಾಗಿ ಬೇರೂರಿದೆ. ಮೊದಲು ಸಮಾಜ ಬದಲಾಯಿಸಿ, ಆಮೇಲೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸುಧಾರಿಸಬೇಕು’ ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್‌.ಸಂತೋಷ್ ಹೆಗ್ಡೆ ತಿಳಿಸಿದರು.

ಕರ್ನಾಟಕ ಹಿರಿಯ ನಾಗರಿಕರ ವೇದಿಕೆಗಳ ಒಕ್ಕೂಟ ನಗರದಲ್ಲಿ ಶನಿವಾರ ಹಮ್ಮಿಕೊಂಡ ‘ಹಿರಿಯ ನಾಗರಿಕರ ಸಂರಕ್ಷಣೆ ಹಾಗೂ ಪಾಲನೆ’ ವಿಚಾರ ಸಂಕಿರಣ ಉದ್ಘಾಟಿಸಿ, ಮಾತನಾಡಿದರು.

‘ಮತದಾರರು ಜಾಗೃತರಾಗಬೇಕು. ಧರ್ಮ, ಭಾಷೆ ಆಧಾರದಲ್ಲಿ ಮತ ಹಾಕಬಾರದು. ವ್ಯಕ್ತಿಯಿಂದ ಏನು ಸಾಧ್ಯವಿದೆ ಅನ್ನುವುದನ್ನು ತಿಳಿದು ಮತ ಹಾಕಬೇಕು. ಶ್ರೀಮಂತಿಕೆ ಮತ್ತು ಅಧಿಕಾರವನ್ನು ಪೂಜಿಸುವ ಸಮಾಜದಲ್ಲಿ ನಾವಿದ್ದೇವೆ. ಜೈಲಿನಿಂದ ಮರಳಿದ ವ್ಯಕ್ತಿಯನ್ನು ಸ್ವಾಗತಿಸಲು ವಿಮಾನ ನಿಲ್ದಾಣಕ್ಕೇ ಹೋಗಲಾಗುತ್ತಿದೆ’ ಎಂದು ತಿಳಿಸಿದರು.

ಈ ವೇಳೆ ಸಭಿಕರೊಬ್ಬರು ‘ಡಾ.ಸಿ.ಎನ್‌.ಮಂಜುನಾಥ್ ಅವರ ರೀತಿ ನೀವೂ ಚುನಾವಣೆಗೆ ನಿಲ್ಲಬೇಕು’ ಎಂದು ಕೋರಿದರು. ಅದಕ್ಕೆ ಪ್ರತಿಕ್ರಿಯಿಸಿದ ಸಂತೋಷ್ ಹೆಗ್ಡೆ, ‘ರಾಜಕೀಯ ಎನ್ನುವುದು ವೃತ್ತಿಯಾಗಿದೆಯೆ ಹೊರತು, ಸೇವೆಯಲ್ಲ. ಭ್ರಷ್ಟಾಚಾರದ ವಿರುದ್ಧ ನವದೆಹಲಿಯಲ್ಲಿ ನಡೆದ ಹೋರಾಟದಲ್ಲಿ ಅಣ್ಣಾ ಹಜಾರೆ ಜತೆಗೆ ಭಾಗವಹಿಸಿದ್ದೆ. ಭ್ರಷ್ಟಾಚಾರದ ವಿರುದ್ಧ ಹೋರಾಡಿದವರು, ಆಡಳಿತದಲ್ಲಿನ ಭ್ರಷ್ಟಾಚಾರವನ್ನು ಸಮಾಜಕ್ಕೆ ತೋರಿಸಿದವರು ಅಧಿಕಾರಕ್ಕೇರಿದಾಗ ಏನು ಮಾಡುತ್ತಾರೆ ಎನ್ನುವುದು ಈಗ ಬಹಿರಂಗವಾಗುತ್ತಿದೆ’ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ವಿರುದ್ಧ ಪರೋಕ್ಷವಾಗಿ ಬೇಸರ ವ್ಯಕ್ತಪಡಿಸಿದರು.

ಅಂಗವಿಕಲರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಜಂಟಿ ನಿರ್ದೇಶಕ ನಟರಾಜ್, ‘ಇಲಾಖೆಯು 1090 ಹಾಗೂ 1456 ಸಹಾಯವಾಣಿಯನ್ನು ಹಿರಿಯ ನಾಗರಿಕರಿಗೆ ಪ್ರಾರಂಭಿಸಲಾಗಿದೆ. ರಾಜ್ಯದಲ್ಲಿ 267 ವೃದ್ಧಾಶ್ರಮಗಳಿವೆ. ಸೇವಾ ಸಿಂಧು ಪೋರ್ಟಲ್ ಮೂಲಕ ನೇರವಾಗಿ ಹಿರಿಯ ನಾಗರಿಕರಿಗೆ ಗುರುತಿನ ಚೀಟಿ ಒದಗಿಸಲಾಗುತ್ತಿದೆ’ ಎಂದು ಹೇಳಿದರು.

‘ಹಿರಿಯ ನಾಗರಿಕರು ಆರೋಗ್ಯ ಕಾಪಾಡಿಕೊಳ್ಳಲು ವ್ಯಾಯಾಮ, ಯೋಗವನ್ನು ರೂಢಿಸಿಕೊಳ್ಳಬೇಕು. ಏಕಾಂಗಿತನ ಹೋಗಲಾಡಿಸಲು ಸಂಘ–ಸಂಸ್ಥೆಗಳ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು’ ಎಂದು ಹೇಳಿದರು.

ವಿಚಾರ ಸಂಕಿರಣದಲ್ಲಿ ಸಾಮಾಜಿಕ ಕಾರ್ಯಕರ್ತ ಮಿಲಿಂದ್ ಎಸ್‌. ಗೋಖಲೆ, ನ್ಯಾ. ಸಂತೋಷ್ ಹೆಗ್ಡೆ, ಆರ್‌.ವಿ. ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ನಿರ್ದೇಶಕ ಪುರುಷೋತ್ತಮ ಬಂಗ್, ನೈಟಿಂಗೇಲ್ ಮೆಡಿಕಲ್ ಟ್ರಸ್ಟ್ ಅಧ್ಯಕ್ಷೆ ರಾಧಾಮೂರ್ತಿ, ಸಿಬಿಆರ್ ನೆಟ್‌ವರ್ಕ್ ವಿಭಾಗದ ಸಲಹೆಗಾರ್ತಿ ಇಂದುಮತಿ ರಾವ್, ವೃದ್ಧಾಪ್ಯ ವಿಜ್ಞಾನ ತಜ್ಞೆ ಡಾ.ಇಂದಿರಾ ಜಯಪ್ರಕಾಶ್ ಮತ್ತು ಕರ್ನಾಟಕ ಹಿರಿಯ ನಾಗರಿಕರ ವೇದಿಕೆಗಳ ಒಕ್ಕೂಟದ ಅಧ್ಯಕ್ಷ ಜೆ.ಎಸ್‌.ನಾಗಭೂಷಣ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

‘ಹಿರಿಯರ ಹಕ್ಕಿನ ವ್ಯಾಜ್ಯ ಪರಿಹರಿಸಿ’

‘ಈಗಿನ ಸ್ಥಿತಿಯಲ್ಲಿ ಹಿರಿಯ ನಾಗರಿಕರು ತಮ್ಮ ಹಕ್ಕು ಹಾಗೂ ಸೌಲಭ್ಯ ಪಡೆಯುವುದು ಕಷ್ಟವಾಗಿದೆ. ಹಕ್ಕುಗಳಿಗಾಗಿ ಕೋರ್ಟ್‌ಗಳಿಗೆ ಹೋದರೆ ಅಲ್ಲಿ 15–16 ವರ್ಷ ಪ್ರಕರಣ ನಡೆಯುತ್ತವೆ. ತೀರ್ಪು ಬರುವ ವೇಳೆ ಅರ್ಜಿದಾರ ಇರುತ್ತಾನೋ ಇಲ್ಲವೋ ಎಂಬ ಖಾತರಿ ಇರುವುದಿಲ್ಲ. ಹಿರಿಯರ ಹಕ್ಕಿಗೆ ಸಂಬಂಧಿಸಿದ ಪ್ರಕರಣಗಳು ವಿಶೇಷ ನ್ಯಾಯಾಲಯಕ್ಕೆ ಹೋಗಬೇಕೆಂಬ ಅಭಿಯಾನವನ್ನು ಪ್ರಾರಂಭಿಸಬೇಕಿದೆ. ಅಲ್ಲಿ ನಿರ್ದಿಷ್ಟ ಅವಧಿಯಲ್ಲಿ ಪ್ರಕರಣಗಳನ್ನು ಪರಿಹರಿಸಬೇಕಿದೆ’ ಎಂದು ಎನ್‌.ಸಂತೋಷ್ ಹೆಗ್ಡೆ ಹೇಳಿದರು.

‘ಚುನಾವಣೆಗಾಗಿ ರಾಜ್ಯದ ಹಿತ ಬಲಿ’

ಬೆಂಗಳೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬರ ಪರಿಹಾರದ ವಿಚಾರದಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಚುನಾವಣೆಯನ್ನು ಗುರಿಯಾಗಿಟ್ಟುಕೊಂಡು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸುವ ಮೂಲಕ ರಾಜ್ಯದ ಹಿತ ಬಲಿ ಕೊಡಲು ಹೊರಟಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಟೀಕಿಸಿದ್ದಾರೆ.

‘ಸಿದ್ದರಾಮಯ್ಯನವರೇ ಚುನಾವಣೆ ಇದ್ದಾಗ ರಾಜಕೀಯ ಮಾಡಿ. ಆದರೆ, ರಾಜಕೀಯ ಕಥನ ಹೆಣೆಯಲು ಜನರ ಹಿತಾಸಕ್ತಿ ಬಲಿ ಕೊಡುವುದು ಶೋಭೆ ತರುವುದಿಲ್ಲ’ ಎಂದಿದ್ದಾರೆ.

ಹಿಂದೆ ಬಿಜೆಪಿ ಸರ್ಕಾರ ಇದ್ದಾಗ ಬರ, ಪ್ರವಾಹದಂತಹ ನೈಸರ್ಗಿಕ ವಿಕೋಪ ಸಂದರ್ಭದಲ್ಲಿ ಕೇಂದ್ರದ ನೆರವಿಗೆ ಕಾಯದೇ ರಾಜ್ಯ ಸರ್ಕಾರವೇ ಪರಿಹಾರ ವಿತರಿಸಿತ್ತು. ಈಗ ಸಿದ್ದರಾಮಯ್ಯ ಸರ್ಕಾರ ಬರ ಪರಿಹಾರ ವಿಚಾರದಲ್ಲಿ ರಾಜಕೀಯ ಮಾಡಿ ರೈತರಿಗೆ ದ್ರೋಹ ಬಗೆಯುತ್ತಿದೆ ಎಂದು ದೂರಿದ್ದಾರೆ.

2 ಕ್ಷೇತ್ರಗಳ ‘ಕೈ’ ಟಿಕೆಟ್: ಇನ್ನಷ್ಟು ಕಗ್ಗಂಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ಕೆ.ಎಚ್‌. ಮುನಿಯಪ್ಪ ಮತ್ತು ವಿಧಾನಸಭೆಯ ಮಾಜಿ ಅಧ್ಯಕ್ಷ ಕೆ.ಆರ್‌.ರಮೇಶ್ ಕುಮಾರ್ ಬಣಗಳು ಪಟ್ಟು ಸಡಿಲಿಸದ ಕಾರಣ ಕೋಲಾರ ಟಿಕೆಟ್ ಹಂಚಿಕೆ ಮತ್ತಷ್ಟು ಕಗ್ಗಂಟಾಗಿದೆ. ಬಣಗಳ ಬಿಗಿಪಟ್ಟಿನ ಕಾರಣ ಈ ವಿಚಾರವನ್ನು ರಾಜ್ಯ ನಾಯಕರು ಹೈಕಮಾಂಡ್‌ನ ವಿವೇಚನೆಗೆ ಬಿಟ್ಟಿದ್ದಾರೆ.

ಚಿಕ್ಕಬಳ್ಳಾಪುರ ಕ್ಷೇತ್ರದ ಟಿಕೆಟ್ ವಿಚಾರದಲ್ಲೂ ಕಾಂಗ್ರೆಸ್‌ನಲ್ಲಿ ಗೊಂದಲ ಮುಂದುವರಿದಿದೆ. ಕೇಂದ್ರದ ಮಾಜಿ ಸಚಿವ ವೀರಪ್ಪ ಮೊಯಿಲಿ ಹಾಗೂ ಯುವ ಮುಖಂಡ ರಕ್ಷಾ ರಾಮಯ್ಯ ಮಧ್ಯೆ ಟಿಕೆಟ್‌ಗಾಗಿ ಪೈಪೋಟಿ ಮುಂದುವರಿದಿದೆ. ಈ ಕ್ಷೇತ್ರದ ವಿಚಾರವನ್ನೂ ವರಿಷ್ಠರ ತೀರ್ಮಾನಕ್ಕೆ ಬಿಡಲಾಗಿದೆ.

ಮುನಿಯಪ್ಪ ಮತ್ತು ರಮೇಶ್ ಕುಮಾರ್ ಬಣವನ್ನು ಮುಖಾಮುಖಿಯಾಗಿಸಿ ಶನಿವಾರ ನಡೆಸಿದ ಸಂಧಾನ ಸಭೆಯಲ್ಲಿ, ‘ಕೋಲಾರ ಟಿಕೆಟ್ ಯಾರಿಗೇ ನೀಡಿದರೂ ಯಾವುದೇ ಗೊಂದಲಗಳಿಗೆ ಅವಕಾಶ ನೀಡದೆ ಕೆಲಸ ಮಾಡಬೇಕು’ ಎಂದು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಸಲಹೆ ನೀಡಿದ್ದಾರೆ.

‘ಯಾರಿಗೆ ಟಿಕೆಟ್ ನೀಡಿದರೂ ಕೆಲಸ ಮಾಡುತ್ತೇವೆ. ಆದರೆ, ಮುನಿಯಪ್ಪ ಕುಟುಂಬಕ್ಕೆ ಮಾತ್ರ ಟಿಕೆಟ್ ನೀಡಬಾರದು. ನೀಡಿದರೆ ನಾವು ಕೆಲಸ ಮಾಡುವುದಿಲ್ಲ’ ಎಂದು ಮುನಿಯಪ್ಪ ಅವರ ಎದುರೇ ರಮೇಶ್ ಕುಮಾರ್ ಬಣ ವಿರೋಧ ವ್ಯಕ್ತಪಡಿಸಿದೆ. ಅಲ್ಲದೆ, ಕೋಪದಿಂದ ಸಭೆಯಿಂದಲೂ ಹೊರನಡೆದಿದೆ.

‘ಟಿಕೆಟ್ ಬಗ್ಗೆ ಗೊಂದಲ ಬೇಡ. ಭಿನ್ನಾಭಿಪ್ರಾಯ ಮರೆತು ಎಲ್ಲರೂ ಒಟ್ಟಿಗೆ ಕೆಲಸ ಮಾಡೋಣ. ಹೈಕಮಾಂಡ್ ಟಿಕೆಟ್ ನೀಡಿದವರ ಪರ ಕೆಲಸ ಮಾಡಬೇಕು’ ಎಂದು ಮುಖ್ಯಮಂತ್ರಿ ಎರಡು ಬಣಗಳಿಗೆ ಸಮಾಧಾನ ಪಡಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಚಿವ ಕೆ.ಎಚ್‌. ಮುನಿಯಪ್ಪ ಮತ್ತು ರಮೇಶ್ ಕುಮಾರ್ ಬಣವನ್ನು ಮುಖಾಮುಖಿಯಾಗಿಸಿ ಶನಿವಾರ ಸಂಧಾನ ಸಭೆ ನಡೆಸಿದರು

ನಡ್ಡಾ ಬಂಧನಕ್ಕೆ ಎಎಪಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೆಹಲಿ ಅಬಕಾರಿ ನೀತಿ ಹಗರಣದ ಆರೋಪಿ ಪಿ.ಶರತ್‌ಚಂದ್ರ ರೆಡ್ಡಿ ಅವರ ಅರಬಿಂದೋ ಫಾರ್ಮಾ ಕಂಪನಿ ಬಾಂಡ್‌ಗಳ ಮೂಲಕ ಬಿಜೆಪಿಗೆ ₹34.5 ಕೋಟಿ ನೀಡಿದೆ. ಹೀಗಾಗಿ, ಬಿಜೆಪಿ ವಿರುದ್ಧ ಪ್ರಕರಣ ದಾಖಲಿಸಿ, ಆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಬಂಧಿಸಬೇಕು’ ಎಂದು ಆಮ್ ಆದ್ಮಿ ಪಕ್ಷ ಒತ್ತಾಯಿಸಿದೆ.

ಅಬಕಾರಿ ನೀತಿ ಹಗರಣ ಸಂಬಂಧ ಹಲವು ದಾಳಿಗಳು, ತನಿಖೆ ನಡೆಸಿದರೂ, ಎಎಪಿ ನಾಯಕರು ತಪ್ಪಿತಸ್ಥರು ಎನ್ನಲು ಅವರ ಬಳಿ ಪುರಾವೆಗಳಿಲ್ಲ. ಆದರೂ, ಕೇಜ್ರಿವಾಲ್ ಅವರನ್ನು ನರೇಂದ್ರ ಮೋದಿ ಹತ್ತಿಕ್ಕುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಪಕ್ಷದ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ ಆರೋಪಿಸಿದ್ದಾರೆ.

ಸುಧಾ, ಮಯೂರ ಓದಿರಿ

INCOME TAX DEPARTMENT

ಸಾರ್ವಜನಿಕರ ಗಮನಕ್ಕೆ

2024 ಲೋಕಸಭಾ ಚುನಾವಣೆಯ ಪ್ರಯುಕ್ತ 24X7 ಗಂಟೆಗಳ ಕಾಲ ಕಾರ್ಯನಿರ್ವಹಿಸುವ ಕಂಟ್ರೋಲ್ ರೂಂ ಅನ್ನು ಮತದಾನದ ದಿನಾಂಕದವರೆಗೆ (07.05.2024) ಬೆಂಗಳೂರಿನಲ್ಲಿ ಆದಾಯ ತೆರಿಗೆ ಇಲಾಖೆ ತೆರೆದಿದೆ. ಯಾವುದೇ ವ್ಯಕ್ತಿ ಅಥವಾ ಪಕ್ಷಗಳು ನಗದು ಹಣ ವಿತರಣೆ ಅಥವಾ ಯಾವುದೇ ರೀತಿಯ ವಸ್ತುಗಳನ್ನು ಉಡುಗೊರೆ ರೂಪದಲ್ಲಿ ಹಂಚುತ್ತಿರುವುದು ಕಂಡುಬಂದಲ್ಲಿ, ಇತರೆ ಯಾವುದೇ ಆಮಿಷಗಳನ್ನು ತೋರಿಸುತ್ತಿರುವ ಬಗ್ಗೆ ದೂರುಗಳಿದ್ದಲ್ಲಿ ಈ ಕೆಳಗೆ ಇರುವ ಫೋನ್ ನಂ. ಅಥವಾ ಇ-ಮೇಲ್ ಮೂಲಕ ನಮ್ಮೊಂದಿಗೆ ಹಂಚಿಕೊಳ್ಳಬಹುದು. ಮಾಹಿತಿಯನ್ನು ಹಂಚಿಕೊಳ್ಳುವ ವ್ಯಕ್ತಿಗಳ ಹೆಸರು ಮತ್ತು ವಿವರಗಳನ್ನು ಗೌಪ್ಯವಾಗಿಡಲಾಗುತ್ತದೆ. ಸಮಸ್ತ ನಾಗರಿಕರು ಈ ಸೌಲಭ್ಯವನ್ನು ಬಳಸಿಕೊಂಡು, ಸರಿಯಾದ ಮಾಹಿತಿಯನ್ನು ಹಂಚಿಕೊಳ್ಳಬೇಕೆಂದು ಇಲಾಖೆಯು ವಿನಂತಿಸುತ್ತದೆ.

ಶುಲ್ಕ ರಹಿತ ಸಂಖ್ಯೆ : 1800-425-2115
ದೂರವಾಣಿ ಸಂಖ್ಯೆ : 080-22862324
ಫ್ಯಾಕ್ಸ್ ಸಂಖ್ಯೆ : 080-22866916
ಮೊಬೈಲ್ ಸಂಖ್ಯೆಗಳು : 82774 22825
(ವಾಟ್ಸಾಪ್ ನೊಂದಿಗೆ) : 82774 13614
ಇ–ಮೇಲ್: generalelections2024karnataka@incometax.gov.in

ನೋಡಲ್ ಅಧಿಕಾರಿ, ಲೋಕಸಭಾ ಚುನಾವಣೆ, ಕರ್ನಾಟಕ ಮತ್ತು ಆದಾಯ ತೆರಿಗೆ ಹೆಚ್ಚುವರಿ ಆಯುಕ್ತರು, ಕೇಂದ್ರಿಯ ವಲಯ–1, 3ನೇ ಮಹಡಿ, ಸಿ.ಆರ್ ಬಿಲ್ಡಿಂಗ್, ಕ್ವೀನ್ಸ್ ರಸ್ತೆ, ಬೆಂಗಳೂರು – 560001.

ನೃತ್ಯ ಕಲೆಗಳ ದೃಶ್ಯ ವೈಭವ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಂಭವಿ ನೃತ್ಯ ಶಾಲೆ ಕನಕಪುರ ರಸ್ತೆಯ ಶಂಕರ ಫೌಂಡೇಷನ್‌ನಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ‘ಡಾನ್ಸ್ ಜಾತ್ರೆ’ಗೆ ಶನಿವಾರ ಚಾಲನೆ ದೊರೆಯಿತು. ನೃತ್ಯ ಕಲೆಗಳ ವೈಭವ ಅನಾವರಣಗೊಂಡಿತು.

ಕಿರಿಯರು ಹಾಗೂ ಹಿರಿಯರ ವಿಭಾಗದಲ್ಲಿ ಸ್ಪರ್ಧೆಗಳು ನಡೆದವು. ಅಹಮದಾಬಾದ್‌ನ ಸಂಜುಕ್ತ ಸಿನ್ಹಾ ಅವರಿಂದ ಕಥಕ್, ಚೆನ್ನೈನ ಶೀಲಾ ಉನ್ನಿಕೃಷ್ಣನ್ ಅವರಿಂದ ಭರತನಾಟ್ಯ ಹಾಗೂ ಅಹಮದಾಬಾದ್‌ನ ಭೂಮಿ ಠಕ್ಕರ್ ಅವರಿಂದ ದಾಂಡಿಯ ನೃತ್ಯದ ಬಗ್ಗೆ ಕಾರ್ಯಾಗಾರಗಳು ನಡೆದವು.

ಕಲಾಕ್ಷಿತಿ ಸಂಸ್ಥೆಯ ನಿರ್ದೇಶಕ ಎಂ.ಆರ್‌. ಕೃಷ್ಣಮೂರ್ತಿ ಚಾಲನೆ ನೀಡಿದರು. ಸಂಜುಕ್ತ ಸಿನ್ಹಾ, ಶೀಲಾ ಉನ್ನಿಕೃಷ್ಣನ್, ಭೂಮಿ ಠಾಕೂರ್, ಸುಧೀರ್ ರಾವ್, ನಿರೂಪಮಾ ರಾಜೇಂದ್ರ ಹಾಗೂ ಕಲಾವಿದರ ತಂಡವು ಕಥಕ್, ಕೂಚಿಪುಡಿ, ಭರತನಾಟ್ಯ ಸೇರಿ ವಿವಿಧ ಕಲಾ ಪ್ರಕಾರಗಳಲ್ಲಿ ಪ್ರದರ್ಶನ ನೀಡಿತು.

‘ನೃತ್ಯದಂತಹ ಪ್ರದರ್ಶನ ಕಲೆಯನ್ನು ಕಲಾವಿದರು, ವಿಮರ್ಶಕರು, ಕಲಾಸಕ್ತರು ಒಂದೇ ವೇದಿಕೆಯಡಿ ಆಸ್ವಾದಿಸಲಿ ಎಂದು ಈ ಜಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ’ ಎಂದು ಶಾಂಭವಿ ನೃತ್ಯ ಶಾಲೆಯ ವೈಜಯಂತಿ ಕಾಶಿ ತಿಳಿಸಿದರು.

ಭಾನುವಾರವು ಬೆಳಿಗ್ಗೆ 10 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಕನಕಪುರ ರಸ್ತೆಯ ಶಂಕರ ಫೌಂಡೇಷನ್‌ನಲ್ಲಿ ನೃತ್ಯ ಪ್ರದರ್ಶನ, ಸ್ಪರ್ಧೆ ಹಾಗೂ ಕಾರ್ಯಾಗಾರಗಳು ನಡೆಯಲಿವೆ.

ಡಾನ್ಸ್ ಜಾತ್ರೆಯಲ್ಲಿ ಸಂಜುಕ್ತ ಸಿನ್ಹಾ, ತಂಡದಿಂದ ನೃತ್ಯ ಪ್ರದರ್ಶನ ನಡೆಯಿತು

ರೌಡಿಗಳ ಬಳಿ ಪರವಾನಗಿ ಬಂದೂಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 6 ರೌಡಿಗಳ ಬಳಿ ಪರವಾನಗಿ ಬಂದೂಕು ಇರುವುದು ಪತ್ತೆಯಾಗಿದ್ದು, ಅಕ್ರಮವಾಗಿ ಪರವಾನಗಿ ನೀಡಿರುವ ಆರೋಪ ವ್ಯಕ್ತವಾಗಿದೆ.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಶಸ್ತ್ರಾಸ್ತ್ರಗಳನ್ನು ಠಾಣೆಗಳಲ್ಲಿ ಠೇವಣಿ ಇರಿಸಲಾಗುತ್ತಿದೆ. ಪರವಾನಗಿದಾರರು ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿ ತಮ್ಮ ಶಸ್ತಾಸ್ತ್ರಗಳನ್ನು ಪೊಲೀಸರಿಗೆ ಒಪ್ಪಿಸುತ್ತಿದ್ದಾರೆ.

‘ರೌಡಿ ಪಟ್ಟಿಯಲ್ಲಿ ಹೆಸರಿರುವ ಆರು ಮಂದಿ, ತಮ್ಮ ಬಂದೂಕುಗಳನ್ನು ನೀಡಿದ್ದಾರೆ. ರೌಡಿಗಳಿಗೆ ಪರವಾನಗಿ ನೀಡಲು ಅವಕಾಶವಿಲ್ಲ. ಅಷ್ಟಾದರೂ ಪರವಾನಗಿ ಪಡೆದಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ರೌಡಿಗಳಿಗೆ ಪರವಾನಗಿ ನೀಡಿದ್ದಕ್ಕೆ ಕಮಿಷನರ್ ಸಹ ಕೆಲ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ತನಿಖೆ ನಡೆಸಿ ವರದಿ ನೀಡಲು ಸೂಚಿಸಿದ್ದಾರೆ. ರೌಡಿಗಳು ಹೇಗೆ ಅರ್ಜಿ ಸಲ್ಲಿಸಿದರು? ಪರವಾನಗಿ ನೀಡಿದ್ದು ಯಾರು? ಪ್ರಮಾಣಪತ್ರ ನೀಡಿದ್ದು ಯಾರು? ಎಂಬುದು ತಿಳಿಯಬೇಕಿದೆ’ ಎಂದು ಮೂಲಗಳು ತಿಳಿಸಿವೆ.

439 ರೌಡಿ ಮನೆಗಳ ಮೇಲೆ ದಾಳಿ: ಚುನಾವಣೆ ಸಂದರ್ಭದಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಕ್ರಮ ಕೈಗೊಂಡಿರುವ ಪೊಲೀಸರು, ನಗರದ 439 ರೌಡಿ ಮನೆಗಳ ಮೇಲೆ ಶನಿವಾರ ನಸುಕಿನಲ್ಲಿ ದಾಳಿ ಮಾಡಿದರು.

‘ಪಶ್ಚಿಮ ವಿಭಾಗ ವ್ಯಾಪ್ತಿಯ 326 ಹಾಗೂ ಕೇಂದ್ರ ವಿಭಾಗ ವ್ಯಾಪ್ತಿಯ 113 ರೌಡಿಗಳ ಮನೆಗಳ ಮೇಲೆ ದಾಳಿ ಮಾಡಲಾಯಿತು. ಮನೆಯಲ್ಲೆಲ್ಲ ಶೋಧ ನಡೆಸಲಾಯಿತು’ ಎಂದು ಪೊಲೀಸರು ಹೇಳಿದರು. ‘ದಾಳಿ ವೇಳೆ ಹಲವು ರೌಡಿಗಳು ಮನೆಯಲ್ಲಿದ್ದರು. ಅಪರಾಧ ಕೃತ್ಯಗಳಲ್ಲಿ ಭಾಗಿಯಾಗದಂತೆ ಅವರಿಗೂ ಎಚ್ಚರಿಕೆ ನೀಡಲಾಯಿತು’ ಎಂದರು.

ಶಿವಣ್ಣ ಮತ್ತೆ ಬಿಜೆಪಿಗೆ

ಪ್ರಜಾವಾಣಿ ವಾರ್ತೆ

ತುಮಕೂರು: ಕಳೆದ ವಿಧಾನಸಭಾ ಚುನಾವಣೆಯಲ್ಲಿ ತುಮಕೂರು ನಗರ ಕ್ಷೇತ್ರದಿಂದ ಪಕ್ಷೇತರರಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದ ಮಾಜಿ ಸಚಿವ ಸೊಗಡು ಶಿವಣ್ಣ ಅವರು ಶನಿವಾರ ಮರಳಿ ಬಿಜೆಪಿಗೆ ಸೇರ್ಪಡೆಯಾದರು.

ಇಲ್ಲಿ ನಡೆದ ದೇಶ ಭಕ್ತ ಸಮಾನ ಮನಸ್ಕ ಕಾರ್ಯಕರ್ತರ ಮಿಲನ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸಿ.ಟಿ. ರವಿ, ತುಮಕೂರು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಅವರ ಸಮ್ಮುಖದಲ್ಲಿ ಶಿವಣ್ಣ ಬಿಜೆಪಿ ಸೇರಿದರು.

ನಗರದಲ್ಲಿ ಇಂದು

ಆರ್ಗ್ಯಾನಿಕ್ ಸಂತೆ: ಅತಿಥಿಗಳು: ಬಿ.ಎಸ್‌. ಅಜಯ್ ಕುಮಾರ್, ವಾಣಿ ಹರಿಕೃಷ್ಣ, ಟಿ.ಆರ್‌.ಲೋಕೇಶ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ದಿ ಗ್ರೀನ್ ಪಾತ್, ಮಲ್ಲೇಶ್ವರ, ಬೆಳಿಗ್ಗೆ 8

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಮೇಘನಾ ಕುಲಕರ್ಣಿ, ಓಂಕಾರಂತ್ ಹವಾಲ್ದಾರ್, ಕೌಶಿಕ್ ಐತಾಳ್, ಧನಂಜಯ ಹೆಗಡೆ, ತಬಲಾ: ಸಾಗರ್ ಭಾರದ್ವಾಜ, ಯೋಗೇಶ್ ಭಟ್, ಹಾರ್ಮೋನಿಯಂ: ಭರತ್ ಹೆಗಡೆ, ತೇಜಸ್ ಕಾಟೋಟಿ, ಆಯೋಜನೆ: ಸಪ್ತಕ್, ಸ್ಥಳ: ನಾದಶ್ರೀ ಆರ್ಟ್‌ಸ್ಪೇಸ್, ಬಿಸಿಎಂಸಿ ಲೇಔಟ್, ರಘುವನಹಳ್ಳಿ, ಬೆಳಿಗ್ಗೆ 9.30

ಬೆಂಗಳೂರು ಅಂತರರಾಷ್ಟ್ರೀಯ ಕಲಾ ಮಹೋತ್ಸವ: ಗಾಯನ: ವಿಧುಲಾ ವೇಣುಗೋಪಾಲ್ ಮತ್ತು ತಂಡ, ನಾಗರಾಜ್ ರಾವ್ ಹವಾಲ್ದಾರ್ ಮತ್ತು ತಂಡ, ಸಂಗೀತಾ ಕಟ್ಟಿ ಮತ್ತು ತಂಡ, ಹಾರ್ಮೋನಿಯಂ: ಸತ್ಯಜೀತ್ ಸಂಜು, ಚಂದನ್ ಬಾಲ ಕಲ್ಯಾಣ್, ತಬಲಾ: ಆದರ್ಶ ಶೆಣೈ, ಹಿಂದೂಸ್ತಾನಿ ಗಾಯನ: ವೆಂಕಟೇಶ್ ಕುಮಾರ್ ಮತ್ತು ತಂಡ, ಆಯೋಜನೆ: ಎಐಎಂ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಬೆಳಿಗ್ಗೆ 10ರಿಂದ

‘ಆರ್‌.ವಿ.ಶೇಷಾದ್ರಿ ಗವಾಯಿ’ ಅವರ ಶತಮಾನೋತ್ಸವ ಸಮಾರಂಭ: ಅಧ್ಯಕ್ಷತೆ: ವಿ.ಎಂ.ನಾಗರಾಜ್, ಆಯೋಜನೆ ಮತ್ತು ಸ್ಥಳ: ನಾದವಾಹಿನಿ ಶ್ರೀದತ್ತ ಸಂಗೀತ ವಿದ್ಯಾನಿಕೇತನ, ಬಸವೇಶ್ವರನಗರ, ಬೆಳಿಗ್ಗೆ 10

ನೀಲೋತ್ಸವಂ: ಗಾಯನ: ತೇಜಸ್ವಿನಿ ಎಂ.ಕೆ., ಕೊಳಲು: ಎನ್‌.ರಾಜಕಮಾಲ್, ಪಿಟೀಲು: ಬಿ.ಕೆ.ರಘು, ಮೃದಂಗ: ಎಸ್‌. ಅಶೋಕ, ಆಯೋಜನೆ ಮತ್ತು ಸ್ಥಳ: ಅನನ್ಯ ಸಭಾಂಗಣ, ಮಲ್ಲೇಶ್ವರ, ಬೆಳಿಗ್ಗೆ 10

‘ಹಾಫ್ ಆಫ್ ವಾಟ್ ಐ ಸೀ’ ಗ್ಲಾಸ್ ಹೌಸ್ ಫೆಸ್ಟಿವಲ್ ಆಫ್ ಪೊಯಟ್ರಿ–2024: ಅತಿಥಿಗಳು: ಅಂಜು ಕಿಶೋರ್, ಕಲಾ ರಮೇಶ್, ನಮ್ರತಾ ವರದರಾಜನ್, ಶ್ಲೋಕಾ ಶಂಕರ್, ತೇಜಿ ಸೇಥಿ, ವಿನಯ್ ಲಿಯೋ ಆರ್‌., ಕವಿತಾ ರತ್ನ, ಆಯೋಜನೆ: ಆರ್ಟ್ ಮಂತ್ರಂ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 10

ವೈದ್ಯರಿಗೆ ಅಭಿನಂದನೆ: ಅತಿಥಿಗಳು: ಡಾ.ಎನ್‌.ಹರ್ಷ, ಡಾ.ರಾಜ್‌ಕುಮಾರ್, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಸಾಂಸ್ಕೃತಿಕ ಭವನ, ಕೆಂಪೇಗೌಡನಗರ, ಬೆಳಿಗ್ಗೆ 10

ಗಾಯನ, ರಸಪ್ರಶ್ನೆ, ಕವಿಗೋಷ್ಠಿ: ಅಧ್ಯಕ್ಷತೆ: ಸದಾನಂದ, ಅತಿಥಿ: ವಿ.ರಾಣಿ ಗೋವಿಂದರಾಜು, ಉಪಸ್ಥಿತಿ: ಹೇಮಲತಾ, ಆಯೋಜನೆ: ಸಹಮತ, ಸ್ಥಳ: ನಂ. 323, ಹೇಮ ಸದನ, ಸಹಕಾರನಗರ, ಬೆಳಿಗ್ಗೆ 10

ವಿಚಾರ ಸಂಕಿರಣ, ಲೇಖಿಕಾ ಪುಸ್ತಕ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಶೈಲಜಾ ಸುರೇಶ್, ‘ಕನ್ನಡ ಕಟ್ಟಿದ ಮಹಿಳೆಯರು’ ಕುರಿತು: ಎನ್‌.ಆರ್‌.ಲಲಿತಾಂಬ, ‘ಮಹಿಳಾ ಸಾಹಿತ್ಯದ ಪ್ರಾತಃಸ್ಮರಣೀಯರು’ ಕುರಿತು: ವಿ. ಸಂಧ್ಯಾ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನದ ಎಂ.ವಿ.ಸೀ ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಎನ್‌.ಆರ್‌. ಕಾಲೊನಿ, ಬೆಳಿಗ್ಗೆ 10

ಹೊನಲು–2024, ಪ್ರಶಸ್ತಿ ಪ್ರದಾನ ಮತ್ತು ಸನ್ಮಾನ ಸಮಾರಂಭ: ಉಪನ್ಯಾಸ: ವಿದ್ಯಾರಶ್ಮಿ ಪೆಲತ್ತಡ್ಕ, ಸನ್ಮಾನಿತರು: ಎಂ.ಎಸ್‌. ಆಶಾದೇವಿ, ಪ್ರಶಸ್ತಿ ಪುರಸ್ಕೃತರು: ಕಥಾ ಪ್ರಶಸ್ತಿ: ಸದಾಶಿವ ಸೊರಟೂರು, ಕಾವ್ಯಪ್ರಶಸ್ತಿ: ನಿಝಾಮ್ ಗೋಳಿಪಡ್ಪು, ಅತಿಥಿ: ರಶ್ಮಿ ಎಸ್‌., ತೀರ್ಪುಗಾರರು: ದೇವು ಪತ್ತಾರ, ಪ್ರತಿಭಾ ನಂದಕುಮಾರ್, ಆಯೋಜನೆ: ಈ ಹೊತ್ತಿಗೆ, ಸ್ಥಳ: ಕಪ್ಪಣ್ಣ ಅಂಗಳ, ಜೆ.ಪಿ. ನಗರ, ಬೆಳಿಗ್ಗೆ 10.30

ಗಿರೀಶ್ ಕಾಸರವಳ್ಳಿ, ಗೋಪಾಲಕೃಷ್ಣ ಪೈ ಅವರ ‘ಬಿಂಬ ಬಿಂಬನ’ ಪುಸ್ತಕ ಬಿಡುಗಡೆ: ಜಯಮಾಲಾ, ಉದ್ಘಾಟನೆ: ಪಿ.ಶೇಷಾದ್ರಿ, ಪುಸ್ತಕದ ಕುರಿತು: ಕೆ.ಪುಟ್ಟಸ್ವಾಮಿ, ಚ.ಹ.ರಘುನಾಥ, ಅತಿಥಿಗಳು: ಬಿ.ಎಸ್‌. ಲಿಂಗದೇವರು, ಉಪಸ್ಥಿತಿ: ವೀರಕಪುತ್ರ ಶ್ರೀನಿವಾಸ, ಆಯೋಜನೆ: ವೀರಲೋಕ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

‘ಕಿತ್ತೂರು ರಾಣಿ ಚೆನ್ನಮ್ಮ’ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಗಿರಿಜಾ ಲೋಕೇಶ್, ಬಿ.ಆರ್‌. ಲಕ್ಷ್ಮಣರಾವ್, ಅಧ್ಯಕ್ಷತೆ: ಎಸ್‌. ರಾಜಲಕ್ಷ್ಮಿ, ಅತಿಥಿಗಳು: ನಂದಿನಿ, ನಾರಾಯಣಸ್ವಾಮಿ, ರಶ್ಮಿ, ರಂಗಪ್ಪ, ಪ್ರಶಸ್ತಿ ಪುರಸ್ಕೃತರು: ಕೆ.ಎನ್‌.ರೂಪಾ, ಡಾ. ಪ್ರತಿಮಾ ದೇವಿ, ಜಯಲಕ್ಷ್ಮಿ, ಹುಚ್ಚಮಾ ಚೌಧರಿ, ಕೆ. ಕವಿತಾ, ಮಮತಾ ಯಜಮನ್, ನಾಗವೇಣಿ, ಉಷಾ ರಮೇಶ್, ನಳಿನಾಕ್ಷಮ್ಮ, ಸುಧಾ ವೆಂಕಟೇಶ್, ಆಯೋಜನೆ: ಮಾತೃ ವಾತ್ಸಲ್ಯ ಫೌಂಡೇಷನ್, ಸ್ಥಳ: ಸರ್. ಪುಟ್ಟಣಚೆಟ್ಟಿ ಪುರಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 2.30

ಗಿರಿಜಾ ಲೋಕೇಶ್

ಗಿರೀಶ್ ಕಾಸರವಳ್ಳಿ

ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣ ವಚನ ಸಂಭ್ರಮ, ಪುಷ್ಪ ಬಣಕಾರ್ ಅವರ ‘ನೂರೊಸಗೆಗಳು’ ಪುಸ್ತಕ ಬಿಡುಗಡೆ: ಉದ್ಘಾಟನೆ: ಸಿ. ಸೋಮಶೇಖರ್, ಪುಸ್ತಕ ಬಿಡುಗಡೆ: ಎಂ.ಎಸ್‌.ಆಶಾದೇವಿ, ಅತಿಥಿಗಳು: ಲೀಲಾದೇವಿ ಆರ್‌.ಪ್ರಸಾದ್, ಎಚ್‌. ಎನ್‌.ಆರತಿ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ಚಂದ್ರಪ್ರಭಾ ಕಠಾರಿ ಅವರ ‘ನಾಲಿಗೆ, ನೆತ್ತರು ಮತ್ತು ಬುದ್ಧ’ ಪುಸ್ತಕ ಬಿಡುಗಡೆ: ನಟರಾಜ್ ಎಸ್‌.ಎಂ., ಅಧ್ಯಕ್ಷತೆ: ಪದ್ಮಿನಿ ನಾಗರಾಜು, ಪುಸ್ತಕದ ಕುರಿತು: ಎನ್‌. ಸಂಧ್ಯಾರಾಣಿ, ಆಯೋಜನೆ: ಚಿಕ್ಕು ಕ್ರಿಯೇಷನ್ಸ್, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ವಿಶ್ವ ರಂಗಭೂಮಿ ದಿನಾಚರಣೆ, ಕವಿಗೋಷ್ಠಿ, ಗೀತಗಾಯನ, ರಸಪ್ರಶ್ನೆ ಕಾರ್ಯಕ್ರಮ: ಅಧ್ಯಕ್ಷತೆ: ಪದ್ಮಲತಾ ಮೈಸೂರು, ಅತಿಥಿಗಳು: ಮಾರ್ಕಂಡೇಯ, ಕೆ.ಆರ್‌. ಪೇಟೆ ರಮೇಶ್, ಆಯೋಜನೆ: ರವಿಕಿರಣ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ ಟ್ರಸ್ಟ್, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಚಿ.ದೇ.ಸೌಮ್ಯ ಅವರ ‘ಕನ್ನಡದ ಕನ್ನಡಿಯಲ್ಲಿ’, ‘ಮಧ್ಯಕಾಲೀನ ಭಾರತದ ಸಂತ ಮಹಿಳೆಯರು’ ಪುಸ್ತಕಗಳ ಬಿಡುಗಡೆ: ವೂಡೇ ಪಿ.ಕೃಷ್ಣ, ಅಧ್ಯಕ್ಷತೆ: ಮಲ್ಲೇಪುರಂ ಜಿ. ವೆಂಕಟೇಶ್, ಪುಸ್ತಕಗಳ ಕುರಿತು: ಎಸ್‌. ಪೂರ್ಣಿಮಾ, ಜಯಶ್ರೀ ರಾಜು, ಆಯೋಜನೆ: ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಸ್ಥಳ: ಶೇಷಾದ್ರಿಪುರಂ ದತ್ತಿ ಸಭಾಂಗಣ, ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 11

‘ರಂಗಭೂಮಿ ಮಹಿಳೆಯರ ಪರಿವರ್ತನೆಯ ಸವಾಲುಗಳು’ ಕುರಿತು ಉಪನ್ಯಾಸ: ಲಕ್ಷ್ಮಿ ನಾಡಗೌಡ, ಆಯೋಜನೆ: ಲೋಕಚರಿತೆ, ಸ್ಥಳ: ಎಂ.ಇ.ಎಸ್‌. ಕಾಲೇಜು, ಮಲ್ಲೇಶ್ವರ, ಬೆಳಿಗ್ಗೆ 11

‘ಲಿತ್ವಿನ್’ ಸಮಾರಂಭ: ಆಯೋಜನೆ ಮತ್ತು ಸ್ಥಳ: ಮಹರ್ಷಿ ವಾಲ್ಮಿಕಿ ಭವನ, ಚಾಮರಾಜಪೇಟೆ, ಬೆಳಿಗ್ಗೆ 11.30

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಸಾಧಕಿಯರಿಗೆ ಸನ್ಮಾನ: ಉದ್ಘಾಟನೆ: ಪಿ.ಎನ್‌.ಶ್ರೀನಿವಾಸಾಚಾರಿ, ಸನ್ಮಾನಿತರು: ಆರ್‌.ಸುಮಿತ್ರ, ಅನನ್ಯ ಉಪೇಂದ್ರ, ಭಾಗ್ಯಲಕ್ಷ್ಮಿ ಎಂ.ಕೃಷ್ಣ, ಅತಿಥಿ: ಅಖಿಲಿ ವಿದ್ಯಸಂದ್ರ, ಅಧ್ಯಕ್ಷತೆ: ಎನ್‌.ವಿ.ಅಂಬಾಮಣಿ, ಆಯೋಜನೆ: ಕರ್ನಾಟಕ ವಿಶ್ವಕರ್ಮ ಸಾಹಿತ್ಯ ಕಲಾ ಅಕಾಡೆಮಿ, ಸ್ಥಳ: ಕನ್ನಡ ಭವನ, ನಯನ ಸಭಾಂಗಣ, ಜೆ.ಸಿ.ರಸ್ತೆ, ಸಂಜೆ 4

‘ಚಂದ್ರಮುಖಿ ಪ್ರಾಣಸಖಿ’ ನುಡಿ ನಮನ, ಕರೋಕೆ, ಗಾಯನ: ರವಿರಾಜ, ಸಿರಿ ಚಂದ್ರಶೇಖರ್, ರಾಜಲಕ್ಷ್ಮಿ ಗಂಗಾಧರ್, ಅರ್ಚಿಶ ಎಚ್ ರಾವ್, ಲತಾ ಎ.ಎಸ್‌., ಬಿ.ಎಂ.ವಿಜಯಲಕ್ಷ್ಮಿ, ಆಯೋಜನೆ: ವಿಜಯಚಂದ್ರಿಕಾ ಸಂಗೀತ್ ಚಂದನ, ಸ್ಥಳ: ಬಿ.ಎಂ.ಶ್ರೀ ಕಲಾಭವನ, ಎನ್‌.ಆರ್‌. ಕಾಲೊನಿ, ಸಂಜೆ 4

ವೈ.ಬಿ.ಎಚ್ ಜಯದೇವ್ ಅವರ ‘ಅಪ್ಪು’ ಪುಸ್ತಕ ಬಿಡುಗಡೆ: ಶ್ರೀನಾಥ್, ಉದ್ಘಾಟನೆ: ಮಮತಾ ವಾರನಹಳ್ಳಿ, ಅಧ್ಯಕ್ಷತೆ: ಮಹೇಶ ಜೋಶಿ, ಪುಸ್ತಕದ ಕುರಿತು: ಚಿಕ್ಕಹೆಜ್ಜಾಜಿ ಮಹದೇವ್, ಆಯೋಜನೆ: ಸನಾತನಿ ಸಾಹಿತ್ಯ ವೇದಿಕೆ, ಶ್ರೀಕೃಷ್ಣ ಕಲಾ ಸಂಗಮ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 6

ದೀಪ್ತಿ ಪಟ್ನಾಯಕ್ ಅವರ ‘ಬೊಗಸೆ ತುಂಬ ಕನಸುಗಳು’ ಪುಸ್ತಕ ಬಿಡುಗಡೆ: ಚಂದ್ರಶೇಖರ ಕಂಬಾರ, ಅಧ್ಯಕ್ಷತೆ: ಹಂಸಲೇಖ, ಅತಿಥಿಗಳು: ಕವಿತಾ ಲಂಕೇಶ್, ಉಪಸ್ಥಿತಿ: ಪ್ರಣವ ಮಹಾಂತಿ, ಆಯೋಜನೆ: ಪ್ರದ್ಯೋತ ಪ್ರಕಾಶನ, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 4



ಚಂದ್ರಶೇಖರ ಕಂಬಾರ

ಸಚಿವರಿಗೆ 'ಕುಟುಂಬ' ಗೆಲ್ಲಿಸುವ ಸವಾಲು

• ರಾಜೇಶ್ ರೈ ಚಟ್ಲ

ಬೆಂಗಳೂರು: ಪಟ್ಟು ಹಿಡಿದು 'ಕುಟುಂಬ' ಸದಸ್ಯರಿಗೆ ಲೋಕಸಭೆ ಚುನಾವಣೆಯ ಟಿಕೆಟ್ ಗಿಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾದ ಸಚಿವರಿಗೀಗ, ಅವರನ್ನು ಗೆಲ್ಲಿಸಿಕೊಳ್ಳಲೇಬೇಕಾದ ಸವಾಲು ಎದುರಾಗಿದೆ.

ವರ್ಷದ ಹಿಂದೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ನಿರೀಕ್ಷೆಗೂ ಮೀರಿ ಗೆಲುವು ಕಂಡು ಆಡಳಿತ ಚುಕ್ಕಾಣಿ ಹಿಡಿದಿರುವ ಕಾಂಗ್ರೆಸ್‌ಗೆ, ಲೋಕಸಭೆ ಚುನಾವಣೆ ಪ್ರತಿಷ್ಠೆಯೂ ಆಗಿದೆ. 2019ರ ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಜೆಡಿಎಸ್– ಕಾಂಗ್ರೆಸ್ ಮೈತ್ರಿಕೂಟ ರಾಜ್ಯದಲ್ಲಿ ಅಧಿಕಾರದಲ್ಲಿತ್ತು. ಹೀಗಾಗಿ, ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡು ಲೋಕಸಭೆ ಚುನಾವಣೆ ಎದುರಿಸಿದ್ದರೂ ಒಟ್ಟು 28 ಸ್ಥಾನಗಳ ಪೈಕಿ, ಎರಡೂ ಪಕ್ಷಗಳಿಗೆ ಗೆಲ್ಲಲು ಸಾಧ್ಯವಾಗಿದ್ದು ತಲಾ ಒಂದೊಂದು ಸ್ಥಾನ ಮಾತ್ರ. ಮಂಡ್ಯದಲ್ಲಿ ಪಕ್ಷೇತರ ಅಭ್ಯರ್ಥಿ ಸುಮಲತಾ ಬಿಟ್ಟರೆ, ಉಳಿದ 25 ಕ್ಷೇತ್ರಗಳಲ್ಲಿ ಕಮಲ ಅರಳಿತ್ತು.

ಆದರೆ, 'ಅಧಿಕಾರ'ದ ಹಿಡಿತ, 'ಗ್ಯಾರಂಟಿ' ಯೋಜನೆಗಳ ಫಲದ ಪರಿಣಾಮ ಈ ಬಾರಿ ಕನಿಷ್ಠ 20 ಸ್ಥಾನಗಳನ್ನು ಗೆಲ್ಲಲೇಬೇಕೆಂಬ ಗುರಿ– ತುಡಿತ ಕಾಂಗ್ರೆಸ್ ನಾಯಕರದ್ದು. ಈ ದೃಷ್ಟಿಯಿಂದ ಅಭ್ಯರ್ಥಿಗಳ ಆಯ್ಕೆ, ಚುನಾವಣೆ ನಿರ್ವಹಣೆಯ ಹೊಣೆಯನ್ನು ಜಿಲ್ಲಾ ಉಸ್ತುವಾರಿ ಸಚಿವರಿಗೇ ಪಕ್ಷ ನೀಡಿತ್ತು. ಅಲ್ಲದೆ, ಈ ಲೆಕ್ಕಾಚಾರದಲ್ಲಿಯೇ ಕೆಲವು ಕ್ಷೇತ್ರಗಳಲ್ಲಿ ಹಾಲಿ ಸಚಿವರನ್ನೇ ಕಣಕ್ಕಿಳಿಸುವ ಮೂಲಕ, ಸರ್ಕಾರ–ಸಚಿವರ ಸಾಧನೆಯನ್ನು ಪರೀಕ್ಷೆಗೆ ಗುರಿಪಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ವರಿಷ್ಠರು ಮನಸ್ಸು ಮಾಡಿದ್ದರು. ಸಚಿವರಿಗೆ ಈ ವಿಷಯವನ್ನು ಮನವರಿಕೆ ಮಾಡಲು ಯತ್ನಿಸಿದ್ದರು.

ಆದರೆ, ಈ 'ಅಗ್ನಿ ಕುಂಡ'ದಲ್ಲಿ ತಮ್ಮನ್ನು ಪರೀಕ್ಷೆಗೆ ಒಡ್ಡಿಕೊಳ್ಳಲು ಸುತಾರಾಂ ತಯಾರಾಗದ ಸಚಿವರು, ಕ್ಷೇತ್ರಗಳಲ್ಲಿ ಸಾಕಷ್ಟು ವಿರೋಧದ ನಡುವೆಯೂ ತಮ್ಮ ಮಕ್ಕಳು, ಕುಟುಂಬ ಸದಸ್ಯರಿಗೆ ಟಿಕೆಟ್ ನೀಡುವಂತೆ ಒತ್ತಡ ಹೇರಿದ್ದರು. ಅನಿವಾರ್ಯವಾಗಿ ಸಚಿವರ ಬೇಡಿಕೆಗಳಿಗೂ ಮನ್ನಣೆ ನೀಡಿರುವ ಹೈಕಮಾಂಡ್, ಗೆಲ್ಲಿಸಿಕೊಂಡು ಬರಲೇಬೇಕೆಂಬ ಗುರಿಯನ್ನೂ ನೀಡಿದೆ. ಬೇಡಿಕೆ ಈಡೇರಿಸಿಕೊಂಡಿರುವ ಸಚಿವರಿಗೆ ಈಗ 'ಮಾಡು ಇಲ್ಲವೇ ಮಡಿ' ಎಂಬ ಪರಿಸ್ಥಿತಿ ಎದುರಾಗಿದೆ.

ಬಾಗಲಕೋಟೆ ಕ್ಷೇತ್ರದಲ್ಲಿ ತಮ್ಮ ಮಗಳು ಸಂಯುಕ್ತಾ ಪಾಟೀಲರಿಗೆ ಶಿವಾನಂದ ಪಾಟೀಲರು ಟಿಕೆಟ್ ಕೊಡಿಸಿದ್ದಾರೆ. ಪರಿಶಿಷ್ಟ ಜಾತಿ ಮೀಸಲು ವಿಜಯಪುರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಬಸವನಬಾಗೇವಾಡಿ ಶಾಸಕರಾದ ಶಿವಾನಂದ ಪಾಟೀಲರು, ಪಕ್ಕದ ಕ್ಷೇತ್ರವನ್ನು ಗಿಟ್ಟಿಸಿಕೊಂಡಿದ್ದಾರೆ. ಬಾಗಲಕೋಟೆಯಲ್ಲಿ ಮಾಜಿ ಸಂಸದ ಅಜಯ್ ಕುಮಾರ್ ಸರ್‌ನಾಯಕ್, ಮಾಜಿ ಶಾಸಕ ಆನಂದ ನ್ಯಾಮಗೌಡ ಅವರನ್ನು ಕಣಕ್ಕೆ ಇಳಿಸುವ ಇರಾದೆ, ಸಚಿವ ಎಂ.ಬಿ. ಪಾಟೀಲರಿಗೆ ಇತ್ತು. ಶಾಸಕ ವಿಜಯಾನಂದ ಕಾಶಪ್ಪನವರ ಪತ್ನಿ, 2019ರಲ್ಲಿ ಸ್ಪರ್ಧಿಸಿ ಸೋತಿದ್ದ ವೀಣಾ ಕೂಡ ಆಕಾಂಕ್ಷಿಯಾಗಿದ್ದರು. ಹಾಗಿದ್ದರೂ ಸಂಯುಕ್ತಾಗೆ ಕ್ಷೇತ್ರವನ್ನು ದಕ್ಕಿಸಿಕೊಳ್ಳಲಾಗಿದೆ. ಗೆಲ್ಲಿಸುವ ಹೊಣೆ ಸಚಿವರ ಹೆಗಲೇರಿದೆ.

ಉಳಿದ ಕ್ಷೇತ್ರಗಳಲ್ಲಿ ಸಚಿವರು ಪಟ್ಟು ಹಾಕಿದ ಪರಿಣಾಮ 10 ಕ್ಷೇತ್ರಗಳು ಅವರ ಪುತ್ರ, ಪುತ್ರಿಯರ, ಕುಟುಂಬ ಸದಸ್ಯರ ಪಾಲಾಗಿವೆ. ಚಾಮರಾಜನಗರ ಕ್ಷೇತ್ರದಲ್ಲಿ ಸಚಿವ ಮಹದೇವಪ್ಪ ಅವರನ್ನೇ ಕಣಕ್ಕಿಳಿಸಲು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ವರಿಷ್ಠರು ಉತ್ಸುಕರಾಗಿದ್ದಾರೆ. ತಮ್ಮ ಬದಲು ಪುತ್ರ ಸುನಿಲ್ ಬೋಸ್‌ಗೆ ಟಿಕೆಟ್ ಪಡೆಯಲು ಎಚ್‌.ಸಿ. ಮಹದೇವಪ್ಪ ಇನ್ನಿಲ್ಲದ ಕಸರತ್ತು ಮುಂದುವರಿಸಿದ್ದಾರೆ. ಕೋಲಾರದಲ್ಲಿ ಕೆ.ಎಚ್. ಮುನಿಯಪ್ಪ ತಮ್ಮ ಅಳಿಯನಿಗೆ ಟಿಕೆಟ್ ಪಡೆಯಲು ಜಿದ್ದಿಗೆ ಬಿದ್ದಿದ್ದಾರೆ. ಬಳ್ಳಾರಿ ಟಿಕೆಟ್ ಶಾಸಕ ಇ. ತುಕಾರಾಂ ಅವರಿಗೆ ಬಹುತೇಕ ಖಚಿತವಾಗಿದೆ.

ಇನ್ನು 'ಗ್ಯಾರಂಟಿ' ಯೋಜನೆಗಳು ರಾಜ್ಯ ಸರ್ಕಾರವನ್ನು ಆರ್ಥಿಕವಾಗಿ ಕಟ್ಟಿ ಹಾಕಿವೆ. ಮತ್ತೊಂದೆಡೆ, ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿರುವುದರಿಂದ ರೈಲು ಟಿಕೆಟ್ ಖರೀದಿಸಲು; ₹2 ಖರ್ಚು ಮಾಡಲು ಸಾಧ್ಯವಿಲ್ಲದಂತಹ ಸ್ಥಿತಿಗೆ ನೂಕಿದೆ ಎಂದು ಕಾಂಗ್ರೆಸ್ ವರಿಷ್ಠರೇ ಹೇಳಿಕೊಂಡಿದ್ದಾರೆ. ಇಂತಹ ಸ್ಥಿತಿಯಲ್ಲಿ ಅಭ್ಯರ್ಥಿಗಳ ಚುನಾವಣಾ ವೆಚ್ಚ ನಿಭಾಯಿಸುವುದು ಪಕ್ಷಕ್ಕೆ ಸಮಸ್ಯೆಯಾಗಲಿದೆ. ಸಚಿವರ ಕುಟುಂಬ ಸದಸ್ಯರನ್ನೇ ಅಭ್ಯರ್ಥಿ ಮಾಡಿದರೆ 'ಬಂಡವಾಳ' ಹೂಡಿ ಗೆಲ್ಲಿಸಿಕೊಂಡು ಬರುವ ಹೊಣೆಯನ್ನೂ ಅವರೇ ವಹಿಸಿಕೊಳ್ಳುತ್ತಾರೆಂಬ ವಿಶ್ವಾಸವೂ ಕಾಂಗ್ರೆಸ್ ನಾಯಕರದ್ದು. ಅದಕ್ಕೆ ಪೂರಕವಾಗಿ, ಎಲ್ಲವನ್ನೂ ಸುರಿದು ಇನ್ಯಾರನ್ನೊ ಗೆಲ್ಲಿಸುವ ಬದಲು ತಮ್ಮವರನ್ನೇ ಗೆಲ್ಲಿಸುವುದು ಒಳ್ಳೆಯದು ಎಂಬ ಅಭಿಪ್ರಾಯಕ್ಕೆ ಬಂದಿರುವ ಸಚಿವರು, ಕುಟುಂಬ ಸದಸ್ಯರಿಗೆ ಟಿಕೆಟ್ ಪಡೆಯುವಲ್ಲಿಯೂ ಗೆಲುವು ಕಂಡಿದ್ದಾರೆ. ಆದರೆ, ಈಗ ಅವರ ಮುಂದೆ ಗೆಲ್ಲಿಸಿಕೊಂಡು ಬರಲೇಬೇಕಾದ ದೊಡ್ಡ ಸವಾಲಿದೆ. ಗೆಲ್ಲಿಸಿಕೊಂಡು ಬಾರದಿದ್ದರೆ, ಸೋಲಿನ 'ನೈತಿಕ' ಹೊಣೆಯನ್ನು ಅವರೇ ಹೊರಬೇಕಾಗುತ್ತದೆ. ಅದಕ್ಕೆ ಯಾವ ಸಬೂಬು ಸರಿ ಹೋಗದು ಎಂಬ ಸಂದೇಶವೊಂದನ್ನು ಪಕ್ಷದ ವರಿಷ್ಠರು ಈಗಾಗಲೇ ಸಚಿವರಿಗೆ ರವಾನಿಸಿದ್ದಾರೆ.

ಕೊಂಡ ಹಾಯಬೇಕಿದೆ ಡಿಕೆ ಸಹೋದರರು

ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಹಿಂದೆ ಗೆದ್ದಿದ್ದ, ಕರ್ನಾಟಕದ ಏಕೈಕ ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಅವರನ್ನು ಗೆಲ್ಲಿಸಿಕೊಳ್ಳುವುದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೂ ಸವಾಲು. ಈ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಮಾಡಿಕೊಂಡು ಕಣಕ್ಕೆ ಇಳಿದಿವೆ. ಗ್ರಾಮಾಂತರದಲ್ಲಿ ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡರ ಅಳಿಯ, ವೈದ್ಯ ಡಾ.ಸಿ.ಎನ್. ಮಂಜುನಾಥ್ ಬಿಜೆಪಿ ಹುರಿಯಾಳು. ಅತಿ ಹೆಚ್ಚು ಮತಗಳನ್ನು ಹೊಂದಿರುವ ಎರಡು ವಿಧಾನಸಭಾ ಕ್ಷೇತ್ರಗಳು ಬಿಜೆಪಿ ಕೈಯಲ್ಲಿವೆ. ಒಕ್ಕಲಿಗರ ಸಮುದಾಯದ ನಾಯಕನಾಗಿ ಹೊರಹೊಮ್ಮುತ್ತಿರುವ ಡಿ.ಕೆ. ಶಿವಕುಮಾರ್ ಅವರನ್ನು ಕಟ್ಟಿಹಾಕಿ, ರಾಮನಗರಕ್ಕೆ ಸೀಮಿತಗೊಳಿಸುವ ಇರಾದೆ ದೇವೇಗೌಡರ ಕುಟುಂಬದ್ದಾಗಿದೆ. ಒಂದು ಉಪಚುನಾವಣೆ ಸೇರಿದಂತೆ ಮೂರು ಚುನಾವಣೆಗಳಲ್ಲಿ ಗೆದ್ದಷ್ಟು, ಸಲೀಸಿನ ದಾರಿ ಈಗಿನದಲ್ಲ. ಈ ಸವಾಲೆಂಬ ಕೊಂಡವನ್ನು ಡಿಕೆ ಸೋದರರು ಹಾಯಬೇಕಿದೆ.

ಸೋತರೆ ಮಂತ್ರಿಗಿರಿಗೆ ಕುತ್ತು?

ಕದನ ಕಲಿಗಳಾಗಿ ಅಖಾಡಕ್ಕಿಳಿದ ಮಕ್ಕಳು, ಕುಟುಂಬ ಸದಸ್ಯರು ಗೆದ್ದು ಲೋಕಸಭೆ ಪ್ರವೇಶಿಸಿದರೆ ಬಚಾವು; ಸೋತು ಮನೆ ಸೇರಿದರೆ ಅವರ ಸಚಿವ ಸ್ಥಾನಕ್ಕೆ ಕುತ್ತು ಬಂದರೂ ಅಚ್ಚರಿಯಿಲ್ಲ ಎಂಬ ಚರ್ಚೆ ಕಾಂಗ್ರೆಸ್ ಅಂಗಳದಲ್ಲಿ ಆರಂಭವಾಗಿದೆ.

ಲೋಕಸಭೆ ಚುನಾವಣೆ 'ಫಲಿತಾಂಶ'ದ ಬಳಿಕ ರಾಜ್ಯ ಸಚಿವ ಸಂಪುಟದಲ್ಲಿ ಒಂದಷ್ಟು ಬದಲಾವಣೆಗಳಾಗುವ ಸಾಧ್ಯತೆಗಳಿವೆ. ಈ ಚುನಾವಣೆಯಲ್ಲಿ ವರಿಷ್ಠರು ನೀಡಿದ ಹೊಣೆಯನ್ನು ನಿಭಾಯಿಸದವರು ಆಗ ವರಿಷ್ಠರ ಕಣ್ಣಿಗೆ ಬೀಳುವುದಂತೂ ಖಚಿತ. 'ತಲೆದಂಡ'ದ ವಿಚಾರ ಮುಂಚೂಣಿಗೆ ಬಂದಾಗ ತಮ್ಮವರನ್ನು ಗೆಲ್ಲಿಸಿಕೊಳ್ಳಲು ಸಾಧ್ಯವಾಗದವರು ಗುರಿ ಆಗಬಹುದು ಎನ್ನುತ್ತವೆ ಕಾಂಗ್ರೆಸ್ ಮೂಲಗಳು.

ಅಭ್ಯರ್ಥಿಗಳ ಮಧ್ಯೆ 'ಭಾಷಾ ಸಮರ'

ಪ್ರಜಾವಾಣಿ ವಾರ್ತೆ


ಕೋಟ ಶ್ರೀನಿವಾಸ ಪೂಜಾರಿ

ಉಡುಪಿ: ಸಂಸತ್ ಸದಸ್ಯರಾಗಿ ಆಯ್ಕೆಯಾದ ಬಳಿಕ ಅಧಿಕಾರಿಗಳಿಂದ ಕೆಲಸ ಮಾಡಿಸಿಕೊಳ್ಳಲು ಹಿಂದಿ ಅಥವಾ ಇಂಗ್ಲಿಷ್ ಭಾಷೆಯ ಅರಿವಿರಬೇಕು ಎಂಬ ಉಡುಪಿ–ಚಿಕ್ಕಮಗಳೂರು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಜಯಪ್ರಕಾಶ್ ಹೆಗ್ಡೆ ಹೇಳಿಕೆಗೆ ಬಿಜೆಪಿ ಅಭ್ಯರ್ಥಿ ಕೋಟ ಶ್ರೀನಿವಾಸ ಪೂಜಾರಿ ಪ್ರತಿಕ್ರಿಯೆ ನೀಡಿದ್ದಾರೆ.

'ಉಡುಪಿ ಹಾಗೂ ಚಿಕ್ಕಮಗಳೂರು ಕ್ಷೇತ್ರದ ಜನರಿಗೆ ನನ್ನ ಭಾಷೆಯ ತೊಡಕಿನ ಬಗ್ಗೆ ಆತಂಕ ಬೇಡ. ಸಂಸದನಾಗಿ ಆಯ್ಕೆಯಾದ 6 ತಿಂಗಳಲ್ಲಿ ಹಿಂದಿ ಭಾಷೆ ಕಲಿತು ಸದನದಲ್ಲಿ ಭಾಷಣ ಮಾಡುವ ಮೂಲಕ ಭಾಷೆಯ ಬಗ್ಗೆ ಕಾಳಜಿ ವ್ಯಕ್ತಪಡಿಸಿರುವ ಹಿರಿಯರು ಸಹಿತ ಕ್ಷೇತ್ರದ ಜನತೆಗೆ ಖುಷಿಯ ಸುದ್ದಿ ಕೊಡಲಿದ್ದೇನೆ' ಎಂದು ಪೂಜಾರಿ ಹೇಳಿದ್ದಾರೆ.

ಹೆಗ್ಡೆ ಪ್ರತಿಕ್ರಿಯೆ

ರಾಜಕೀಯ ಜೀವನದಲ್ಲಿ ಯಾರ ಮನಸ್ಸನ್ನೂ ನೋಯಿಸಿಲ್ಲ, ಕೇವಲವಾಗಿ ಮಾತನಾಡಿಲ್ಲ. ಭಾಷಾ ಜ್ಞಾನದ ಕುರಿತು ಬಿಜೆಪಿ ಅಭ್ಯರ್ಥಿ ಕೋಟ ಶ್ರೀನಿವಾಸ ಪೂಜಾರಿ ಅವರ ಕುರಿತು ಯಾವುದೇ ಮಾತು ಆಡಿಲ್ಲ ಎಂದು ಜಯಪ್ರಕಾಶ್ ಹೆಗ್ಡೆ ಸ್ಪಷ್ಟನೆ ನೀಡಿದ್ದಾರೆ.


ಜಯಪ್ರಕಾಶ್ ಹೆಗ್ಡೆ

'ಬ್ರಹ್ಮಾವರದ ಕಾರ್ಯಕ್ರಮವೊಂದರಲ್ಲಿ ಮಾತನಾಡುವಾಗ ಲೋಕಸಭೆಯಲ್ಲಿ ಭಾಷಾಂತರಕಾರರು ಇರುವುದರಿಂದ ಕನ್ನಡದಲ್ಲಿಯೂ ಮಾತನಾಡಬಹುದು. ಆದರೆ, ಅಧಿಕಾರಿಗಳು ಹಾಗೂ ಕಚೇರಿಗಳಲ್ಲಿ ಕೆಲಸ ಮಾಡುವಾಗ ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳ ಜ್ಞಾನ ಅಗತ್ಯ ಎಂದು ಹೇಳಿಕೆ ನೀಡಿದ್ದೆ. ಸಂಸದನಾಗಿ ಸೇವೆ ಸಲ್ಲಿಸಿದ ಅನುಭವದಲ್ಲಿ ಹೇಳಿಕೆ ನೀಡಿದ್ದೇನೆಯೇ ಹೊರತು ಯಾರನ್ನೂ ಉದ್ದೇಶಿಸಿ ಹೇಳಿಲ್ಲ. ಹೇಳಿಕೆಯನ್ನು ತಿರುಚಿ ಮತ್ತೊಬ್ಬರ ಹೆಸರಿಗೆ ಜೋಡಿಸುವ ಚಾಳಿ ನಿಲ್ಲಿಸಬೇಕು.

'ರಾಜಕೀಯ ಜೀವನದಲ್ಲಿ ಚುನಾವಣೆಗಳನ್ನು ಸೈದ್ಧಾಂತಿಕ ನೆಲೆಯಲ್ಲಿ ಎದುರಿಸಿದ್ದೇನೆ. ಎದುರಾಳಿಗಳನ್ನು ಸೌಜನ್ಯಯುತ ಹಾಗೂ ಗೌರವದಿಂದ ಕಂಡಿದ್ದೇನೆ. ಅಪಪ್ರಚಾರ ಹಾಗೂ ವದಂತಿ ಮಾಡಿಲ್ಲ' ಎಂದು ಹೆಗ್ಡೆ ತಿಳಿಸಿದ್ದಾರೆ.

ಚಿತ್ರದುರ್ಗ: ಬಿಜೆಪಿ ಕಚೇರಿ ಕಿಟಕಿ ಗಾಜು ಪುಡಿ

ಸುದ್ದಿ ಗದ್ದಲ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ ಬಿಜೆಪಿ ಜಿಲ್ಲಾ ಘಟಕದ ಕಚೇರಿಯ ಕಿಟಕಿ ಗಾಜುಗಳನ್ನು ಪುಡಿ ಮಾಡಿರುವ ಪ್ರತಿಭಟನಕಾರರು

ಚಿತ್ರದುರ್ಗ: ಲೋಕಸಭಾ ಚುನಾವಣೆಯಲ್ಲಿ ಚಿತ್ರದುರ್ಗ ಮೀಸಲು ಕ್ಷೇತ್ರಕ್ಕೆ ಸ್ಥಳೀಯರಿಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿದ್ದ ಗುಂಪೊಂದು ಶನಿವಾರ ಬಿಜೆಪಿ ಜಿಲ್ಲಾ ಘಟಕದ ಕಚೇರಿಗೆ ನುಗ್ಗಿ, ಕಿಟಕಿಯ ಗಾಜುಗಳನ್ನು ಪುಡಿ ಮಾಡಿದೆ.

ಟಿಕೆಟ್ ಹಂಚಿಕೆಯಲ್ಲಿ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿ ಹೊಳಲ್ಕೆರೆ ಶಾಸಕ ಎಂ.ಚಂದ್ರಪ್ಪ ಅವರ ಪುತ್ರ ಎಂ.ಸಿ.ರಘುಚಂದನ್ ಬೆಂಬಲಿಗರು ಪ್ರತಿಭಟನೆ ಹಮ್ಮಿಕೊಂಡಿದ್ದರು. ಜಿಲ್ಲಾಧಿಕಾರಿ ಕಚೇರಿಯಿಂದ ಬಿಜೆಪಿ ಕಚೇರಿವರೆಗೆ ಮೆರವಣಿಗೆ ನಡೆಸಿದರು. 'ಎ.ನಾರಾಯಣಸ್ವಾಮಿ, ಗೋವಿಂದ ಕಾರಜೋಳ ಗೋ ಬ್ಯಾಕ್' ಎಂಬ ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು.

ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಎ.ಮುರಳಿ ಜತೆ ಪ್ರತಿಭಟನಕಾರರು ವಾಗ್ವಾದ ನಡೆಸಿದರು. ಸ್ಥಳದಲ್ಲಿದ್ದ ಪೊಲೀಸರ ಕಣ್ತಪ್ಪಿಸಿ ಕೆಲವರು ಕಚೇರಿಯ ಮೊದಲ ಮಹಡಿಗೆ ನುಗ್ಗಿ ಕಿಟಕಿ ಗಾಜುಗಳನ್ನು ಪುಡಿ ಮಾಡಿದರು.

ಕೈ, ಕಮಲ ತಯಾರಿ ಭರ್ಜರಿ

'ಸುಳ್ಳುಗಳಿಗೆ ಸತ್ಯದ ದಾಖಲೆ ಮಂಡಿಸಿ'

ಮೊದಲ ಹಂತದಲ್ಲಿ ಚುನಾವಣೆ ನಡೆಯುವ 14 ಲೋಕಸಭೆ ಕ್ಷೇತ್ರ ವ್ಯಾಪ್ತಿಯ ಮುಖಂಡರ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಭೆ ನಡೆಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದ ಪ್ರಧಾನಿಗಳಲ್ಲಿ ಅತಿ ಹೆಚ್ಚು ಸುಳ್ಳು ಹೇಳಿದವರು ಪ್ರಧಾನಿ ಮೋದಿ. ಈಗ ನಮ್ಮ ಗ್ಯಾರಂಟಿಗಳನ್ನು ಕದ್ದು ಅದಕ್ಕೆ ಮೋದಿ ಗ್ಯಾರಂಟಿ ಎಂದು ಹೆಸರಿಟ್ಟಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವ್ಯಂಗ್ಯವಾಡಿದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ರಾಜ್ಯ, ಜಿಲ್ಲೆ, ತಾಲ್ಲೂಕು ಸಮಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರ ಸಮಾವೇಶದಲ್ಲಿ ಮಾತನಾಡಿದ ಅವರು, 'ಸರ್ವರನ್ನೂ ಸಮಾನವಾಗಿ ಕಾಣುವ ನಮ್ಮ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ಅರ್ಥ ಮಾಡಿಸಿ ಬಿಜೆಪಿಯ ಸುಳ್ಳುಗಳಿಗೆ ತಕ್ಕ ಸತ್ಯದ ದಾಖಲೆಗಳನ್ನು ಮಂಡಿಸಿ' ಎಂದು ಕರೆ ನೀಡಿದರು.

'ಬಿಜೆಪಿಯವರಂತೆ ನಾವು ಕೇವಲ ಭಾವನಾತ್ಮಕವಾಗಿ ಕೆರಳಿಸಿ ನಿಮ್ಮ ಕೈಬಿಡಲ್ಲ. ಬಿಜೆಪಿಯವರಂತೆ ಸುಳ್ಳು ಹೇಳಲ್ಲ. ನಿಮ್ಮ ಬದುಕಿಗೆ ಸ್ಪಂದಿಸುತ್ತೇವೆ' ಎಂದು ಜನರಿಗೆ ಮನವರಿಕೆ ಮಾಡುವಂತೆ ಸಲಹೆ ನೀಡಿದರು.

'ಪ್ರಧಾನಿ ನರೇಂದ್ರ ಮೋದಿ ನೀಡಿದ್ದ ಆಶ್ವಾಸನೆಗಳು ಸರಣಿ ಸುಳ್ಳುಗಳು' ಎಂದ ಮುಖ್ಯಮಂತ್ರಿ, 'ನಮ್ಮ ಸರ್ಕಾರದ ಗ್ಯಾರಂಟಿಗಳನ್ನು, ಸಾಧನೆಗಳನ್ನು ತಮ್ಮ ಸಾಧನೆ ಎಂದು ಹಳ್ಳಿ ಹಳ್ಳಿಗಳಲ್ಲಿ ಬಿಜೆಪಿಯವರು ನಿರ್ಲಜ್ಜದಿಂದ ಸುಳ್ಳು ಹೇಳುತ್ತಿದ್ದಾರೆ. ಈ ಸುಳ್ಳುಗಳನ್ನು ಅನುಷ್ಠಾನ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳು ಸಮರ್ಥವಾಗಿ ಎದುರಿಸಿ ಜನರಿಗೆ ಸತ್ಯ ತಿಳಿಸಬೇಕು' ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ನೀವು ಪಂಚಾಯಿತಿ ಮಟ್ಟದಲ್ಲಿ ತಂಡಗಳನ್ನು ರಚಿಸಿ ಮನೆ ಮನೆಗೆ ಹೋಗಿ ಜನರಿಗೆ ಗ್ಯಾರಂಟಿ ಯೋಜನೆಗಳನ್ನು ತಲುಪಿಸಬೇಕು. 'ನೀವು ನಿಮ್ಮ ಬೂತ್‌ಗಳಲ್ಲಿ ಪಕ್ಷಕ್ಕೆ ಮುನ್ನಡೆ ತರಲಿಲ್ಲವಾದರೆ ನೀವು ನಾಯಕರಲ್ಲ, ನೀವು ನಿಮ್ಮ ಬೂತ್‌ಗಳಲ್ಲಿ ಪಕ್ಷಕ್ಕೆ ಮುನ್ನಡೆ ತಂದು, ಪಕ್ಷವನ್ನು ಬಲಪಡಿಸಬೇಕು' ಎಂದರು.

ಅನುಷ್ಠಾನ ಸಮಿತಿ ರಾಜ್ಯ ಅಧ್ಯಕ್ಷ ಎಚ್‌.ಎಂ. ರೇವಣ್ಣ, ಉಪಾಧ್ಯಕ್ಷರಾದ ಪುಷ್ಪಾ ಅಮರನಾಥ್, ಸೂರಜ್ ಹೆಗ್ಡೆ, ಮೆಹರೋಜ್ ಖಾನ್, ಬಿಬಿಎಂಪಿ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಜಿ. ಕೃಷ್ಣಪ್ಪ ಇದ್ದರು.

'ಗೆಲುವು ತರದಿದ್ದರೆ ಅಧಿಕಾರಕ್ಕೆ ಕುತ್ತು'

'ಯಾರೂ ಹೊಂದಾಣಿಕೆ ರಾಜಕಾರಣ ಮಾಡಬಾರದು. ಪಕ್ಷದ ಅಭ್ಯರ್ಥಿಯ ಗೆಲುವಿಗೆ ಶ್ರಮಿಸದೇ ಇದ್ದರೆ ಅಧಿಕಾರ ಸ್ಥಾನದಿಂದ ಕೆಳಗಿಳಿಸಲಾಗುವುದು' ಎಂಬ ಸ್ಪಷ್ಟ ಸಂದೇಶವನ್ನು ಸಚಿವರು, ನಿಗಮ, ಮಂಡಳಿ ಅಧ್ಯಕ್ಷರು, ಸದಸ್ಯರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೀಡಿದ್ದಾರೆ.

ಮೊದಲ ಹಂತದಲ್ಲಿ ಚುನಾವಣೆ ನಡೆಯುವ 14 ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯ ಕಾಂಗ್ರೆಸ್ ಶಾಸಕರು, ಪರಿಷತ್ ಸದಸ್ಯರು, ಮಾಜಿ ಶಾಸಕರು, ಜಿಲ್ಲಾ ಘಟಕಗಳ ಅಧ್ಯಕ್ಷರು, ನಿಗಮ, ಮಂಡಳಿ ಅಧ್ಯಕ್ಷರ ಜೊತೆ ಅವರು ಶನಿವಾರ ಸಭೆ ನಡೆಸಿದರು.

'ಪಕ್ಷದಿಂದಾಗಿ ನಾವು ಅಧಿಕಾರ ಅನುಭವಿಸುತ್ತಿದ್ದೇವೆ. ನಾನೂ ಸೇರಿದಂತೆ ಉಪ ಮುಖ್ಯಮಂತ್ರಿ, ಸಚಿವರು ಎಲ್ಲರೂ ಪಕ್ಷದ ಕಾರ್ಯಕರ್ತರೇ. ಅಧಿಕಾರ ಅನುಭವಿಸುತ್ತಿರುವವರಿಗೆ ಕಾರು ಸೇರಿದಂತೆ ಎಲ್ಲ ಸೌಲಭ್ಯ ಸಿಕ್ಕಿದೆ. ಜವಾಬ್ದಾರಿಯನ್ನೂ ನೀಡಲಾಗಿದೆ. ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ಸಾಧ್ಯವಾಗದೇ ಇದ್ದರೆ ಅಧಿಕಾರ ಯಾಕೆ ಕೊಡಬೇಕು? ಕೊಟ್ಟ ಅಧಿಕಾರ ಉಳಿಯಬೇಕೆಂದರೆ ಅಭ್ಯರ್ಥಿಗಳ ಗೆಲುವಿಗೆ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು' ಎಂದಿದ್ದಾರೆ.

'ಸೋಲಿನ ಭಯ ಸಚಿವರ ಸ್ಪರ್ಧೆ ಇಲ್ಲ'

ಬಿಜೆಪಿ ಮಾಧ್ಯಮ ಕೇಂದ್ರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಬಿ.ವೈ. ವಿಜಯೇಂದ್ರ, ಆರ್ ಅಶೋಕ ಅವರು ಪಕ್ಷದ ಮಾಧ್ಯಮ ಘಟಕದ ಪದಾಧಿಕಾರಿಗಳೊಂದಿಗೆ ಪಾಲ್ಗೊಂಡಿದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಸಚಿವರನ್ನೇ ಲೋಕಸಭಾ ಚುನಾವಣೆಯಲ್ಲಿ ಕಣಕ್ಕಿಳಿಸಲು ಕಾಂಗ್ರೆಸ್ ಮುಂದಾಗಿತ್ತು. ಆದರೆ, ಸೋಲಿನ ಭಯದ ಕಾರಣದಿಂದ ಒಬ್ಬ ಸಚಿವರೂ ಸ್ಪರ್ಧಿಸಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಅರಮನೆ ಮೈದಾನದಲ್ಲಿ ಶನಿವಾರ ಆಯೋಜಿಸಿದ್ದ ಬಿಜೆಪಿ ರಾಜ್ಯ ಮಟ್ಟದ ಚುನಾವಣಾ ನಿರ್ವಹಣಾ ಸಮಿತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, 'ಸಾಮಾನ್ಯವಾಗಿ ಹತ್ತು ವರ್ಷಗಳ ಕಾಲ ನಿರಂತರವಾಗಿ ಅಧಿಕಾರದಲ್ಲಿರುವ ಪಕ್ಷಕ್ಕೆ ಆಡಳಿತ ವಿರೋಧಿ ಅಲೆಯ ಬಿಸಿ ತಟ್ಟುತ್ತದೆ. ಆದರೆ, ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಎನ್‌ಡಿಎ ಸರ್ಕಾರ ಈಗಲೂ ಜನಪ್ರಿಯತೆಯಲ್ಲಿ ಮುಂಚೂಣಿಯಲ್ಲಿದೆ' ಎಂದರು.

ಮುಂದಿನ 60 ದಿನಗಳು ಸವಾಲಿನ ಕಾಲ. ರಾಜ್ಯ, ಜಿಲ್ಲೆ, ಮಂಡಲ ಮತ್ತು ಮತಗಟ್ಟೆ ಹಂತದ ಚುನಾವಣಾ ನಿರ್ವಹಣಾ ಸಮಿತಿಯ ಸದಸ್ಯರು ಸಮಯ ವ್ಯರ್ಥ ಮಾಡದೇ ಕೆಲಸ ಮಾಡಬೇಕು ಎಂದರು.

ರಾಜ್ಯದಲ್ಲಿ ಬಿಜೆಪಿಯ ಲೋಕಸಭಾ ಚುನಾವಣಾ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರ್‌ವಾಲ್ ಮಾತನಾಡಿ, 'ಒಂದು ತಿಂಗಳಿನಿಂದ ಕರ್ನಾಟಕದಲ್ಲಿದ್ದೇನೆ. ಇಲ್ಲಿನ ಕಾರ್ಯಕರ್ತರಲ್ಲಿ ಚುನಾವಣೆಯ ಉತ್ಸಾಹ ಜೋರಾಗಿದೆ. ಸಣ್ಣಪುಟ್ಟ ವೈಮನಸ್ಸುಗಳನ್ನು ಮರೆತು ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸುವತ್ತ ಗಮನಹರಿಸಬೇಕು' ಎಂದು ಹೇಳಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಬಿಜೆಪಿ ರಾಜ್ಯ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕ ವಿ. ಸುನಿಲ್ ಕುಮಾರ್, ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಗಳಾದ ಪ್ರೀತಂ ಗೌಡ, ಪಿ.ರಾಜೀವ್, ವಿಧಾನ ಪರಿಷತ್ ಸದಸ್ಯರಾದ ಛಲವಾದಿ ನಾರಾಯಣಸ್ವಾಮಿ, ಭಾರತಿ ಶೆಟ್ಟಿ, ಕೇಶವ ಪ್ರಸಾದ್ ಉಪಸ್ಥಿತರಿದ್ದರು.

'ನಮ್ಮದು ಕುಟುಂಬ ರಾಜಕಾರಣವಲ್ಲ'

'ನಮ್ಮದು ಕುಟುಂಬ ರಾಜಕಾರಣ ಅಲ್ಲ. ನನ್ನನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷನನ್ನಾಗಿ ನೇಮಿಸಿರುವುದರ ಹಿಂದಿನ ಕಾರಣವನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರೇ ಹೇಳಿದ್ದಾರಲ್ಲ' ಎಂದು ಬಿ.ವೈ. ವಿಜಯೇಂದ್ರ ಹೇಳಿದರು.

ಲೋಕಸಭಾ ಚುನಾವಣೆಗಾಗಿ ಆರಂಭಿಸಿರುವ ಮಾಧ್ಯಮ ಕೇಂದ್ರವನ್ನು ಶನಿವಾರ ಉದ್ಘಾಟಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಬಿಜೆಪಿಯಲ್ಲಿನ ಕುಟುಂಬ ರಾಜಕಾರಣದ ಬಗ್ಗೆ ಪಕ್ಷದ ನಾಯಕರ ಟೀಕೆಗಳಿಗೆ ಉತ್ತರಿಸಿದರು.

'ವರುಣ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಲು ನಿರ್ಧಾರ ಮಾಡಿದ್ದೆ. ಆಗ, ಪಕ್ಷದ ವರಿಷ್ಠರು ಒಪ್ಪಿಗೆ ಸೂಚಿಸಲಿಲ್ಲ. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದಾಗ ಪಕ್ಷದ 'ಕೋರ್ ಕಮಿಟಿ'ಯು ನನ್ನನ್ನು ವಿಧಾನ ಪರಿಷತ್ ಸದಸ್ಯನನ್ನಾಗಿ ಮಾಡಲು ತೀರ್ಮಾನಿಸಿತ್ತು. ಆಗಲೂ ವರಿಷ್ಠರು ಒಪ್ಪಿರಲಿಲ್ಲ' ಎಂದರು.

'ಎರಡೂ ಸಂದರ್ಭಗಳಲ್ಲಿ ಪಕ್ಷದ ತೀರ್ಮಾನವನ್ನು ಒಪ್ಪಿಕೊಂಡಿದ್ದೆ, ನಂತರದಲ್ಲೂ ಪಕ್ಷದ ತೀರ್ಮಾನದಂತೆ ನಡೆದುಕೊಂಡಿದ್ದೇನೆ' ಎಂದು ಹೇಳಿದರು.

ಗುಸುಗುಸು

ಮಠಾಧೀಶರ ಮೇಲೆ ಭಯವೋ...

'ನಿಮ್ಮ ಆಶೀರ್ವಾದ ನಮಗಿರಲಿ ಸ್ವಾಮೀಜಿ..' ಕಾಲಿಗೆ ಎರಗಿದ ಅಭ್ಯರ್ಥಿಯೊಬ್ಬರು ಮಠಾಧೀಶರಲ್ಲಿ ಅರಿಕೆ ಮಾಡಿಕೊಂಡರು. ಹಿಂದಿನ ದಿನವಷ್ಟೇ ಮಠಕ್ಕೆ ಭೇಟಿ ನೀಡಿದ್ದ ರಾಜಕೀಯ ಎದುರಾಳಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟ ಚಿತ್ರಗಳನ್ನು ಕಂಡು ದಿಗಿಲಾಗಿ ಬಂದಿದ್ದ ಅಭ್ಯರ್ಥಿಗೆ ಸ್ವಾಮೀಜಿ ಮುಗುಳ್ನಗೆಯಲ್ಲಿಯೇ ಉತ್ತರಿಸಿದರು. ಲೋಕಸಭಾ ಚುನಾವಣೆಗೆ ಟಿಕೆಟ್ ಗಿಟ್ಟಿಸಿ ಯುದ್ಧ ಗೆದ್ದ ರೀತಿಯಲ್ಲಿ ಮಠ ಸುತ್ತುತ್ತಿರುವವರಿಗೆ 'ಕಾವಿಧಾರಿಗಳ ಬಗ್ಗೆ ಇರುವುದು ಭಕ್ತಿಯೋ, ಭಯವೋ..' ಎಂಬ ಗುಸುಗುಸು ಶುರುವಾಗಿದೆ.

ಸಮುದಾಯಕ್ಕೆ ಧಾರ್ಮಿಕ ಶಕ್ತಿ ತುಂಬುವ ಉದ್ದೇಶದಿಂದ ರೂಪುಗೊಂಡ ಮಠಗಳಿಗೆ ಇತ್ತೀಚೆಗೆ ರಾಜಕಾರಣಿಗಳ 'ರನ್' ಶುರುವಾಗಿದೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್.. ಹೀಗೆ ಹಲವು ಪಕ್ಷಗಳ ಹುರಿಯಾಳುಗಳು ಮಠಗಳಿಗೆ ಭೇಟಿ ನೀಡಲು ಸರದಿಯಲ್ಲಿ ಬರುತ್ತಿದ್ದಾರೆ. ತುಮಕೂರು ಕ್ಷೇತ್ರದ ಹುರಿಯಾಳುಗಳಿಬ್ಬರು ಮಠಾಧೀಶರನ್ನು ಭೇಟಿ ಮಾಡಲು ಸ್ಪರ್ಧೆಗೆ ಬಿದ್ದವರಂತೆ ಚಿತ್ರದುರ್ಗ ಜಿಲ್ಲೆ ಪ್ರವೇಶಿಸಿದ್ದರು. 'ಮತದಾರರಿಗೆ ಭಿನ್ನ ಸಂದೇಶ ರವಾನೆಯಾದರೆ ಕಷ್ಟ' ಎಂಬ ಕಾರಣಕ್ಕೆ ಭೇಟಿಯ ದಿನವನ್ನು ಒಬ್ಬರು ಮತ್ತೊಂದು ದಿನಕ್ಕೆ ಮುಂದೂಡಿದರಂತೆ.

ಧಾರ್ಮಿಕ ಸಭೆ, ಅಧ್ಯಾತ್ಮ ಬೋಧನೆ ನಡೆಯುತ್ತಿದ್ದ ಮಠಗಳು ಚುನಾವಣಾ ಸಂದರ್ಭದಲ್ಲಿ ರಾಜಕೀಯ ಮೊಗಸಾಲೆಗಳಾಗಿ ಬದಲಾಗುತ್ತಿವೆ. ಫಲತಾಂಬೂಲ, ಹೂಮಾಲೆ ಹಿಡಿದು ಬರುವ ರಾಜಕಾರಣಿಗಳಿಗೆ 'ಒಳಗೊಳಗೆ ಭಯ ಕಾಡುತ್ತಿದೆ' ಎಂಬುದು ಹಿಂಬಾಲಕರ ಅಂಬೋಣ. 'ಭಕ್ತರನ್ನು ಓಲೈಸುವುದಕ್ಕಿಂತ ರಾಜಕಾರಣದ ಬಗ್ಗೆ ಮಠಾಧೀಶರಿಗೆ ಆಸಕ್ತಿ ಬೆಳೆಯದಂತೆ ನೋಡಿಕೊಳ್ಳುವುದು ಭೇಟಿಯ ಉದ್ದೇಶ ಇರಬಹುದೇ' ಎಂಬ ಚರ್ಚೆ ಜೋರಾಗಿದೆ.



'ಸಮುದಾಯದ ನಾಯಕರ ಪರವಾಗಿ ಮಠಾಧೀಶರು ಲಾಬಿ ಮಾಡಬಲ್ಲರು' ಎಂದುಕೊಂಡಿದ್ದ ರಾಜಕಾರಣಿಗಳು ಗಲಿಬಿಲಿಯಾಗಲು ಕಾರಣವೂ ಇದೆ. 'ಚಿತ್ರದುರ್ಗ ಕ್ಷೇತ್ರದಿಂದ ಮಠಾಧೀಶರೊಬ್ಬರು ಕಣಕ್ಕೆ ಇಳಿಯಲಿದ್ದಾರೆ' ಎಂಬ ಸುದ್ದಿ ಸದ್ದು ಮಾಡುತ್ತಿದ್ದಂತೆಯೇ, ಟಿಕೆಟ್ ಆಕಾಂಕ್ಷಿಯೊಬ್ಬರ ಜಂಘಾಬಲ ಉಡುಗಿಹೋಯಿತು. 'ಮಠ ಒಂದು ರಾಜಕೀಯ ಪಕ್ಷಕ್ಕೆ ಸೀಮಿತವಾಗಿಲ್ಲ. ಮಠವನ್ನು ರಾಜಕೀಯಕ್ಕೆ ಬಳಸಿಕೊಳ್ಳಬಾರದು..' ಎಂದು ಗುಡುಗಿದರು. ಹೀಗೆ ಅಸಮಾಧಾನ ಬಹಿರಂಗಪಡಿಸಲು 'ಉತ್ತರಪ್ರದೇಶದ ಕಾವಿಧಾರಿ ಇವರ ಕನಸಿನಲ್ಲಿ ಬಂದಿರಬೇಕು' ಎಂಬ ಮಾತು ಕ್ಷೇತ್ರದಲ್ಲಿ ಹರಿದಾಡುತ್ತಿದೆ.

ಎಂಥಾ ಮಾತು!

ಕಮಲ ಕೆರೆಯಲ್ಲಿದ್ದರೆ ಚೆಂದ, ತೆನೆ ಹೊಲದಲ್ಲಿದ್ದರೆ, ದಾನ ಧರ್ಮ ಮಾಡುವ ಕೈ ಅಧಿಕಾರದಲ್ಲಿದ್ದರೆ ಚೆಂದ. ಐದು ಬೆರಳು ಸೇರಿ ಕೈ ಮುಷ್ಟಿಯಾಯಿತು. ಐದು ಗ್ಯಾರಂಟಿ ಸೇರಿ ಕೈ ಗಟ್ಟಿಯಾಯಿತು. ಇದನ್ನು ನೋಡಿದ ಕಮಲ ಉದುರಿ ಹೋಯಿತು, ತೆನೆ ಹೊತ್ತ ಮಹಿಳೆ ತೆನೆ ಬಿಸಾಡಿದಳು, ಕರ್ನಾಟಕ ಪ್ರಬುದ್ಧವಾಯಿತು, ಕರ್ನಾಟಕ ಸಮೃದ್ಧವಾಯಿತು.

ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ರಾಷ್ಟ್ರ ಭಕ್ತರ ಬಳಗ ಹೆಸರಿನಡಿ ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಚುನಾವಣೆ ಎದುರಿಸುವೆ. ರಾಷ್ಟ್ರ ಭಕ್ತ ಮುಸ್ಲಿಮರೂ ಬೆಂಬಲ ಸೂಚಿಸುತ್ತಿದ್ದಾರೆ. ಬಿಜೆಪಿ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳ ವಿರುದ್ಧ ಅಸಮಾಧಾನ ಹೊಂದಿರುವ ದೊಡ್ಡ ಸಂಖ್ಯೆಯ ಮತದಾರರು ನನ್ನೊಂದಿಗೆ ಇದ್ದಾರೆ.

ಕೆ.ಎಸ್. ಈಶ್ವರಪ್ಪ, ಮಾಜಿ ಉಪಮುಖ್ಯಮಂತ್ರಿ

ಕ್ಷೇತ್ರ ಮಹಾತ್ಮೆ

ಚಿಕ್ಕೋಡಿ

ಬೆಳಗಾವಿ ಜಿಲ್ಲೆಯಲ್ಲಿ ಕುಟುಂಬ ರಾಜಕಾರಣದ ಹೊಸಮಜಲು ಆರಂಭಿಸಿ, ಜಾರಕಿಹೊಳಿ 'ಸಾಹುಕಾರ'ರ ಭದ್ರಕೋಟೆಗೆ ನುಗ್ಗಿದ 'ಜೊಲ್ಲೆ' ಕುಟುಂಬ, ಚಿಕ್ಕೋಡಿ ಲೋಕಸಭಾ ಕ್ಷೇತ್ರವನ್ನು ತೆಕ್ಕೆಗೆ ತೆಗೆದುಕೊಂಡಿತ್ತು. ಬೆಳಗಾವಿ ಮಟ್ಟಿಗೆ ಜಾರಕಿಹೊಳಿ, ಕತ್ತಿ, ಸವದಿ, ಕೋರೆ, ಹುಕ್ಕೇರಿ ಈ ಕುಟುಂಬಗಳೇ ರಾಜಕೀಯವನ್ನು ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದವು. ನಿಪ್ಪಾಣಿಗೆ ಕಾಲಿಟ್ಟ ಶಶಿಕಲಾ ಜೊಲ್ಲೆ, ಅಲ್ಲಿ ಗೆಲ್ಲುವ ಮೂಲಕ ಕುಟುಂಬ ರಾಜಕಾರಣದ ಹೊಸ ಪರ್ವ ಆರಂಭಿಸಿದರು. 2019ರಲ್ಲಿ ತಮ್ಮ ಗಂಡ ಅಣ್ಣಾಸಾಹೇಬ ಜೊಲ್ಲೆಯವರಿಗೆ ಚಿಕ್ಕೋಡಿ ಲೋಕಸಭೆ ಕ್ಷೇತ್ರಕ್ಕೆ ಟಿಕೆಟ್ ದಕ್ಕಿಸಿಕೊಂಡರು. ಅಲ್ಲಿಗೆ, ಕತ್ತಿ–ಜಾರಕಿಹೊಳಿ–ಹುಕ್ಕೇರಿ ಹಿಡಿತದಲ್ಲಿದ್ದ ಕ್ಷೇತ್ರದಲ್ಲಿ ತಮ್ಮ ರಾಜಕೀಯ ಆರಂಭಿಸಿದರು. ಈ ಬಾರಿ, ಸಚಿವ ಸತೀಶ ಜಾರಕಿಹೊಳಿ ತಮ್ಮ ಭದ್ರಕೋಟೆ ಉಳಿಸಿಕೊಳ್ಳುವ ಅನಿವಾರ್ಯಕ್ಕೆ ಸಿಲುಕಿದ್ದಾರೆ. ಮಗಳು ಪ್ರಿಯಾಂಕಾ ಗೆಲ್ಲಿಸಿಕೊಳ್ಳುವ ಸವಾಲೂ ಅವರ ಮುಂದಿದೆ. ಜತೆಗೆ, ಶಾಸಕ ಲಕ್ಷ್ಮಣ ಸವದಿ ಬಲವೂ 'ಕೈ' ಹಿಡಿಯಬಹುದು. ಸತೀಶ ಅವರ ಸಹೋದರರಾದ ರಮೇಶ ಮತ್ತು ಬಾಲಚಂದ್ರ ಬಿಜೆಪಿ ಶಾಸಕರು. ಲಖನ್ ವಿಧಾನಪರಿಷತ್ತಿನ ಸದಸ್ಯ. ಇವರೆಲ್ಲರೂ ಹೊರಗೆ ಕಚ್ಚಾಡಿಕೊಂಡರೂ ಕುಟುಂಬದ ವಿಷಯ ಬಂದರೆ, ಸತೀಶ ಮಾತೇ ಅಂತಿಮ. ಅಣ್ತಮ್ಮಗಳು ರಕ್ತ ಸಂಬಂಧಿ 'ಮಗಳ' ಪರವೋ, ಜೊಲ್ಲೆ ಕುಟುಂಬದವರಿಗೆ ವರವೋ...? ಫಲಿತಾಂಶದಲ್ಲಷ್ಟೇ ಪ್ರಶ್ನೆಗೆ ಉತ್ತರ ದಕ್ಕೀತು.

ಪೋಸ್ಟ್

ವಿನಯ್‌ಕುಮಾರ್ ಜಿ.ಬಿ (ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ, ಇನ್‌ಸೈಟ್ಸ್ ಐಎಎಸ್ ಅಕಾಡೆಮಿ): ಸಾಧಾರಣ ಕುಟುಂಬವೊಂದರಲ್ಲಿ ಜನಿಸಿರುವುದು ನಮ್ಮ ತಪ್ಪು ಅಲ್ಲ ಎಂಬುದನ್ನು ಸಾಬೀತುಪಡಿಸಲು ಬಯಸಿದ್ದೇನೆ.

ತೇಜಸ್ವಿ ಸೂರ್ಯ (ಬೆಂಗಳೂರು ದಕ್ಷಿಣ ಸಂಸದ): ನೀವು ತಪ್ಪಾದ ರಾಜಕೀಯ ಪಕ್ಷವನ್ನು ಆಯ್ಕೆ ಮಾಡಿಕೊಂಡಿದ್ದೀರಿ ಸಹೋದರ. ನಮ್ಮೊಂದಿಗೆ ಬನ್ನಿ. ಬಿಜೆಪಿ ಸೇರಿ. ನೀವು ಹೇಳಿರುವುದು ಸರಿಯಾಗಿದೆ. ನಿಮಗೆ ಒಳ್ಳೆಯದಾಗಲಿ.

ವಿನಯ್ ಕುಮಾರ್ ಜಿ.ಬಿ.: ಧನ್ಯವಾದಗಳು ಸಹೋದರ. ನಾನು ಸರಿಯಾದ ರಾಜಕೀಯ ಪಕ್ಷವನ್ನೇ ಆಯ್ಕೆ ಮಾಡಿಕೊಂಡಿದ್ದೇನೆ. ನನ್ನ ಪಕ್ಷವು ನನ್ನ ಶ್ರಮವನ್ನು ಪರಿಗಣಿಸಿ, ಕೋಮುವಾದ, ಅನ್ಯಾಯ ಮತ್ತು ಸಂವಿಧಾನವನ್ನು ದುರ್ಬಲಗೊಳಿಸಲು ಯತ್ನಿಸುತ್ತಿರುವವರ ವಿರುದ್ಧ ಹೋರಾಡಲು ಸೂಕ್ತವಾದ ಜವಾಬ್ದಾರಿಯನ್ನು ನೀಡುವ ವಿಶ್ವಾಸ ನನಗಿದೆ.

ಮತ ಆಮಿಷ: ಆಯೋಗದ ವಶ

ನಗದು	₹15.78 ಕೋಟಿ
ಉಚಿತ ಉಡುಗೊರೆ	₹17.35 ಲಕ್ಷ
ಮದ್ಯ	₹23.37 ಕೋಟಿ (7.41ಲಕ್ಷ ಲೀ)
ಮಾದಕವಸ್ತು	₹65.71 ಲಕ್ಷ (66.34 ಕೆ.ಜಿ.)
ಚಿನ್ನ ಮತ್ತು ಬೆಳ್ಳಿ	₹1.57 ಕೋಟಿ (48.41ಕೆ.ಜಿ.)

ರಾಜ್ಯ ಸರ್ಕಾರ– ರಾಜ್ಯಪಾಲರ ಜಟಾಪಟಿ: ಚುನಾವಣೆ ಫಲಿತಾಂಶದ ಮೇಲೆ ಪರಿಣಾಮ ಬೀರುವ ಸಾಧ್ಯತೆ

ರಾಜಕೀಯ 'ದಾಳ'ವಾದ ರಾಜಭವನ?

• ಮಂಜುನಾಥ ಹೆಬ್ಬಾರ್

ನವದೆಹಲಿ: 2019ರ ಲೋಕಸಭಾ ಚುನಾವಣೆಯಲ್ಲಿ ಹಿಂದಿ ಸೀಮೆಯ ರಾಜ್ಯಗಳಲ್ಲಿ ಘನ ವಿಜಯ ಸಾಧಿಸಿದ್ದ ಕೇಸರಿ ಪಾಳಯವು ಕೇರಳ ಹಾಗೂ ತಮಿಳುನಾಡಿನ 59 ಕ್ಷೇತ್ರಗಳಲ್ಲಿ ಖಾತೆ ತೆರೆದಿರಲೇ ಇಲ್ಲ. ಈ ರಾಜ್ಯಗಳಲ್ಲಿ ಸಂಘಟನೆ ಬಲಗೊಳಿಸಲು ಬಿಜೆಪಿ ವರಿಷ್ಠರು ಶತಪ್ರಯತ್ನ ಮಾಡಿದರೂ ನಿರೀಕ್ಷಿತ ಫಲ ಸಿಕ್ಕಿಲ್ಲ.

ಬಿಜೆಪಿಯೇತರ ಸರ್ಕಾರಗಳು ಇರುವ ರಾಜ್ಯಗಳಲ್ಲಿ ಕಳೆದ ಐದು ವರ್ಷಗಳಲ್ಲಿ ವಿಪಕ್ಷಗಳಿಗಿಂತ ಹೆಚ್ಚು ಸುದ್ದಿಯಾದವರು ರಾಜ್ಯಪಾಲರು. ಅವರು ಕೇಂದ್ರ ಸರ್ಕಾರದ ಕೈಗೊಂಬೆಯಾಗಿದ್ದಾರೆ ಹಾಗೂ ಬಿಜೆಪಿ ವಕ್ತಾರರಂತೆ ವರ್ತಿಸುತ್ತಿದ್ದಾರೆ ಎಂದು ಅಲ್ಲಿನ ರಾಜ್ಯ ಸರ್ಕಾರಗಳು ದೂಷಿಸಿವೆ. ರಾಜ್ಯಪಾಲರ ನಡೆ ವಿರುದ್ಧ ಕೇರಳ, ತಮಿಳುನಾಡು, ತೆಲಂಗಾಣ, ಪಂಜಾಬ್ ಹಾಗೂ ಪಶ್ಚಿಮ ಬಂಗಾಳ ಸರ್ಕಾರಗಳು ಹಲವು ಸಲ ಸುಪ್ರೀಂ ಕೋರ್ಟ್ ಕದ ತಟ್ಟಿವೆ.

ರಾಜ್ಯ ಸರ್ಕಾರಗಳಿಗೆ ನಿರಂತರ ಕಿರುಕುಳ ನೀಡುವ ಮೂಲಕ ರಾಜ್ಯಪಾಲರು ಬಿಜೆಪಿಯ ನೆಲೆ ವಿಸ್ತರಿಸಲು ಅನುಕೂಲ ಮಾಡಿಕೊಡುತ್ತಾರೆ ಎಂದು ವಿಪಕ್ಷಗಳು ಆರೋಪಿಸಿದ್ದು ಉಂಟು. ಪಕ್ಷ ರಾಜಕಾರಣ ಮಾಡುತ್ತಿರುವ ರಾಜ್ಯಪಾಲರನ್ನು ಲೋಕಸಭಾ ಚುನಾವಣೆ ಮುಗಿಯುವರೆಗೆ ಬದಲಿಸಬೇಡಿ ಎಂದು ಡಿಎಂಕೆ ನಾಯಕರು ವ್ಯಂಗ್ಯವಾಡಿದ್ದೂ ಇದೆ. ಬಿಜೆಪಿ ಪ್ರಬಲ ನೆಲೆ ಹೊಂದಿರದ ತೆಲಂಗಾಣ, ಪಂಜಾಬ್‌ನಲ್ಲಿ ಸಹ ರಾಜ್ಯಪಾಲರ ವರ್ತನೆ ಇದಕ್ಕಿಂತ ಭಿನ್ನವಲ್ಲ.

ರಾಜ್ಯಪಾಲರ ಅಸಹನೆ, ಅಸಹಕಾರ, ಪಕ್ಷಪಾತಿ ಧೋರಣೆ ವಿಷಯವು ಲೋಕಸಭಾ ಚುನಾವಣಾ ಪ್ರಚಾರದ ವೇಳೆ ಇನ್ನಷ್ಟು ಚರ್ಚೆಗೆ ಗ್ರಾಸವಾಗಲಿದೆ. ದಕ್ಷಿಣದ ಪಕ್ಷ ಏರು ಹಾದಿಯಲ್ಲಿ ಸಾಗಲು ರಾಜ್ಯಪಾಲರು ಸಣ್ಣದೊಂದು ಬುನಾದಿ ಹಾಕಿದ್ದಾರೆ ಎಂಬುದು ಕೇಸರಿ ಪಾಳಯದ ನಂಬಿಕೆ. ಅವರ ಕಠಿಣ ನಿಲುವಿನಿಂದ ಪಕ್ಷಕ್ಕೆ ಒಂದಿಷ್ಟು ಅನುಕೂಲವಾಗಲಿದೆ ಎಂಬ ಮಾತನ್ನು ಬಿಜೆಪಿ ನಾಯಕರೇ ಒಪ್ಪುತ್ತಾರೆ. ಮತ ಪ್ರಮಾಣ ಹಿಗ್ಗಿಸಲು ಬಿಜೆಪಿ ನಡೆಸಿದ ತಂತ್ರ ಎಂದು ವಿಶ್ಲೇಷಿಸಲಾಗಿದೆ.

ಆಗ ರಾಜ್ಯಪಾಲೆ– ಈಗ ಬಿಜೆಪಿ ಅಭ್ಯರ್ಥಿ

ತಮಿಳ್‌ಇಸೈ

- ಮಹಿಳೆ ಎಂಬ ಕಾರಣಕ್ಕೆ ತಮ್ಮನ್ನು ಸರ್ಕಾರವು ಕೆಟ್ಟದಾಗಿ ನಡೆಸಿಕೊಂಡಿದೆ, ರಾಜ್ಯಪಾಲ ಹುದ್ದೆಗೂ ಗೌರವ ಕೊಡುತ್ತಿಲ್ಲ ಎಂದು ತೆಲಂಗಾಣದ ರಾಜ್ಯಪಾಲರಾದ ತಮಿಳ್‌ಇಸೈ ಸೌಂದರರಾಜನ್ ಆರೋಪಿಸಿದ್ದರು.
- ಸರ್ಕಾರಿ ಆಸ್ಪತ್ರೆಗಳು ಅತ್ಯಂತ ಕೆಟ್ಟ ಸ್ಥಿತಿಯಲ್ಲಿವೆ, ಸರ್ಕಾರಿ ಆಸ್ಪತ್ರೆಯ ನಿರ್ದೇಶಕರು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಾರೆ ಎಂದೂ ಆಪಾದಿಸಿದ್ದರು.
- ತಮಿಳ್‌ಇಸೈ ಅವರು 2019ರ ಚುನಾವಣೆಯಲ್ಲಿ ತೂತ್ತುಕುಡಿ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದರು. ಬಳಿಕ ತೆಲಂಗಾಣ ರಾಜ್ಯಪಾಲರನ್ನಾಗಿ ನೇಮಿಸಲಾಗಿತ್ತು. ವಾರದ ಹಿಂದೆ ತಮ್ಮ ಹುದ್ದೆಗೆ ರಾಜೀನಾಮೆ ನೀಡಿರುವ ಅವರು ಚೆನ್ನೈ ದಕ್ಷಿಣದಿಂದ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ.

ಎಎಪಿಯ ಅಬಕಾರಿ 'ನಶೆ' ಇಳಿಸಿದ ಎಲ್.ಜಿ

- ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನೇತೃತ್ವದ ಸರ್ಕಾರವು 2014ರಲ್ಲಿ ಜನ ಲೋಕಪಾಲ ಮಸೂದೆಯನ್ನು ಅಂಗೀಕರಿಸಿ ಆಗಿನ ಎಲ್.ಜಿ ನಜೀಬ್ ಜಂಗ್ ಅವರಿಗೆ ಕಳುಹಿಸಿಕೊಟ್ಟಿತ್ತು. ಜಂಗ್ ಅವರು ಅದನ್ನು ಕೇಂದ್ರ ಕಾನೂನು ಸಚಿವಾಲಯಕ್ಕೆ ಕಳುಹಿಸಿಕೊಟ್ಟು ಕೈ ತೊಳೆದುಕೊಂಡಿದ್ದರು.
- 2016ರಿಂದ 2022ರವರೆಗೆ ಎಲ್.ಜಿಯಾಗಿದ್ದ ಅನಿಲ್ ಬೈಜಾಲ್ ಹಾಗೂ ಕೇಜ್ರಿವಾಲ್ ನಡುವೆ ತಿಕ್ಕಾಟ ನಡೆದಿತ್ತು. ಕೇಜ್ರಿವಾಲ್ ಮತ್ತು ಸಚಿವ ಸಂಪುಟದ ಸದಸ್ಯರು ಎಲ್.ಜಿ ಮನೆಯ ಹೊರಗೆ ಧರಣಿ ನಡೆಸಿದ್ದರು. ವಿಷಯ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ದೆಹಲಿ ಸರ್ಕಾರದ ನೆರವು ಮತ್ತು ಸಲಹೆಗೆ ಅನುಸಾರವಾಗಿ ಎಲ್.ಜಿ ಕೆಲಸ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಸೂಚಿಸಿತ್ತು.
- ಅಬಕಾರಿ ನೀತಿ ಜಾರಿಯ ಅಕ್ರಮದ ಬಗ್ಗೆ ತನಿಖೆ ನಡೆಸುವಂತೆ ಎಲ್.ಜಿ ವಿ.ಕೆ.ಸಕ್ಸೇನಾ ಅವರು ಸಿಬಿಐಗೆ ಪತ್ರ ಬರೆದಿದ್ದರು. ಪತ್ರದ ಆಧಾರದಲ್ಲಿ ಸಿಬಿಐ ಪ್ರಕರಣ ದಾಖಲಿಸಿತ್ತು. ಈ ಪ್ರಕರಣದಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಅಬಕಾರಿ ಸಚಿವ ಮನೀಷ್ ಸಿಸೋಡಿಯಾ ಹಾಗೂ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಜೈಲುಪಾಲಾಗಿದ್ದಾರೆ.

ಉಪರಾಷ್ಟ್ರಪತಿ ಹುದ್ದೆಗೇರುವ ತನಕ ಸಂಘರ್ಷ

- ಪ್ರಸ್ತುತ ಉಪರಾಷ್ಟ್ರಪತಿಯಾಗಿರುವ ಜಗದೀಪ್ ಧನಕರ್ ಅವರು ಈ ಹಿಂದೆ ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿದ್ದರು. ಅಧಿಕಾರದಲ್ಲಿದ್ದ ಅಷ್ಟೂ ದಿನವೂ ಅಲ್ಲಿನ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಜತೆಗೆ ಸಂಘರ್ಷಕ್ಕೆ ಇಳಿದಿದ್ದರು. ಟ್ವೀಟ್ ಮಾಡಿ ಸಲಹೆ ನೀಡುತ್ತಿದ್ದ ಅವರು, ಸರ್ಕಾರದ ನಡೆಯನ್ನು ಪದೇ ಪದೇ ಪ್ರಶ್ನಿಸುತ್ತಿದ್ದರು. ಇದರಿಂದ ಕುಪಿತಗೊಂಡಿದ್ದ ಮಮತಾ ಅವರು ಜಗದೀಪ್ ಅವರ ಟ್ವಿಟರ್ ಖಾತೆಯನ್ನು ಬ್ಲಾಕ್ ಮಾಡಿದ್ದರು.
- ರಾಜಭವನವು ತಮ್ಮ ದೂರವಾಣಿಗಳನ್ನು ಕದ್ದಾಲಿಸುತ್ತಿದೆ ಎಂದು ಮಮತಾ ಆರೋಪಿಸಿದ್ದರು.

ಸುಪ್ರೀಂ 'ಬೆಂಕಿ'ಗೆ ತಣ್ಣಗಾದ ಪುರೋಹಿತ್

ಪಂಜಾಬ್ ವಿಧಾನಸಭೆ ಅಧಿವೇಶನದ ಸಿಂಧುತ್ವವನ್ನು ಪ್ರಶ್ನಿಸಿದ್ದ ರಾಜ್ಯಪಾಲ ಬನ್ವಾರಿಲಾಲ್ ಪುರೋಹಿತ್, 'ಕಾನೂನಿನ ಉಲ್ಲಂಘನೆಯಾಗಿದೆ' ಎಂದು ತಕರಾರು ತೆಗೆದಿದ್ದರು. ವಿಶೇಷ ಅಧಿವೇಶನದಲ್ಲಿ ಅಂಗೀಕರಿಸಿದ ಮಸೂದೆಗಳಿಗೆ ಸಹಿ ಹಾಕುವುದಿಲ್ಲ ಎಂದು ಹೇಳಿದ್ದರು. ಇದನ್ನು ಪ್ರಶ್ನಿಸಿ ಪಂಜಾಬ್ ಎಎಪಿ ಸರ್ಕಾರವು ಸುಪ್ರೀಂ ಕೋರ್ಟ್‌ನ ಮೊರೆ ಹೋಗಿತ್ತು. 'ವಿಧಾನಸಭೆ ಅಧಿವೇಶನದ ಸಿಂಧುತ್ವವನ್ನು ಅನುಮಾನಿಸುವ ಯಾವುದೇ ನಡೆಯು ಪ್ರಜಾಪ್ರಭುತ್ವ ವ್ಯವಸ್ಥೆಗೆ ಗಂಭೀರ ಅಪಾಯವನ್ನು ಉಂಟುಮಾಡಲಿದೆ. ನೀವು ಬೆಂಕಿಯೊಂದಿಗೆ ಆಟವಾಡುತ್ತಿದ್ದೀರಿ' ಎಂದು ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠವು ರಾಜ್ಯಪಾಲರಿಗೆ ಕಟುಮಾತುಗಳಲ್ಲಿ ತರಾಟೆಗೆ ತೆಗೆದುಕೊಂಡಿತ್ತು. ಬಳಿಕ ಮಸೂದೆಗಳಿಗೆ ಸಹಿ ಹಾಕಿದ್ದರು.

ಕೇರಳ: ರಾಜಭವನದಿಂದ ಬೀದಿಯವರೆಗೆ

ಆರಿಫ್ ಮೊಹಮ್ಮದ್ ಖಾನ್

- ಕೇರಳ ವಿಧಾನಸಭೆಯು ಅಂಗೀಕಾರ ನೀಡಿರುವ ಮಸೂದೆಗಳ ವಿಚಾರವಾಗಿ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಎರಡು ವರ್ಷಗಳಿಂದ ಯಾವುದೇ ತೀರ್ಮಾನ ಕೈಗೊಂಡಿರಲಿಲ್ಲ. ಸರ್ಕಾರದ ವಿಳಂಬ ನಡೆ ಪ್ರಶ್ನಿಸಿ ಕೇರಳ ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಬಳಿಕ ಅವರು ಮಸೂದೆಗಳಿಗೆ ಅಂಗೀಕಾರ ನೀಡಿದ್ದರು.
- ರಾಜ್ಯಪಾಲರ ಆಪ್ತ ಕಾರ್ಯದರ್ಶಿಯನ್ನಾಗಿ ಬಿಜೆಪಿ ಮುಖಂಡರೊಬ್ಬರನ್ನು ನೇಮಕ ಮಾಡಿಕೊಂಡಿದ್ದೂ ಆರಿಫ್ ಖಾನ್ ಮತ್ತು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನಡುವೆ ಸಂಘರ್ಷ ಸೃಷ್ಟಿಸಿತ್ತು. ವಿಧಾನಸಭೆಯ ಬಜೆಟ್ ಅಧಿವೇಶನಕ್ಕೂ ಮುನ್ನ ಸದನವನ್ನು ಉದ್ದೇಶಿಸಿ ಭಾಷಣ ಮಾಡಿದ ರಾಜ್ಯಪಾಲರು ಆರಂಭಿಕ ಮತ್ತು ಕೊನೆಯ ಪ್ಯಾರಾ ಮಾತ್ರ ಓದಿದ್ದರು. ಕೇಂದ್ರದ ಬಗ್ಗೆ ಟೀಕೆ ಇರುವ ಪುಟಗಳನ್ನು ಓದುವ ಗೋಜಿಗೆ ಹೋಗಿರಲಿಲ್ಲ.
- ಕೊಲ್ಲಂ ಜಿಲ್ಲೆಯ ನಿಲಮೇಲ್‌ನಲ್ಲಿ ತಮ್ಮ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಎಸ್‌ಎಫ್‌ಐ ಕಾರ್ಯಕರ್ತರ ವಿರುದ್ಧ ರಾಜ್ಯಪಾಲರು ಹರಿಹಾಯ್ದಿದ್ದರು. ರಸ್ತೆ ಬದಿಯಲ್ಲಿ ಕುಳಿತು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ವಿರುದ್ಧ ಕಿಡಿಕಾರಿದ್ದರು.

'ದ್ರಾವಿಡ' ನೆಲದಲ್ಲಿ ರವಿ ರಗಳೆ

ಆರ್.ಎನ್. ರವಿ

- ನೌಕರಿ ಕೊಡಿಸಲು ಹಣ ಪಡೆದ ಆರೋಪದಲ್ಲಿ ತಮಿಳುನಾಡು ಸಚಿವ ವಿ. ಸೆಂಥಿಲ್ ಬಾಲಾಜಿ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿತ್ತು. ಬಾಲಾಜಿ ಅವರನ್ನು ಸಂಪುಟದಿಂದ ವಜಾಗೊಳಿಸಿ ರಾಜ್ಯಪಾಲ ಆರ್.ಎನ್. ರವಿ ಆದೇಶ ಹೊರಡಿಸಿದ್ದರು. ನಂತರ ಇನ್ನೊಂದು ಆದೇಶ ಹೊರಡಿಸಿದ್ದ ರಾಜ್ಯಪಾಲರು, ಮೊದಲ ಆದೇಶವನ್ನು ಅಮಾನತಿನಲ್ಲಿ ಇರಿಸಿದ್ದರು. ಬಳಿಕ ಈ ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಮುಖ್ಯಮಂತ್ರಿಯ ಶಿಫಾರಸು ಇಲ್ಲದೆ ರಾಜ್ಯಪಾಲರು ಸಚಿವರನ್ನು ಸಂಪುಟದಿಂದ ವಜಾಗೊಳಿಸುವಂತಿಲ್ಲ ಎಂದು ಕೋರ್ಟ್ ತಾಕೀತು ಮಾಡಿತ್ತು.
- ಅಕ್ರಮ ಆಸ್ತಿ ಗಳಿಕೆ ಪ್ರಕರಣದಲ್ಲಿ ಹೈಕೋರ್ಟ್‌ನಿಂದ ಶಿಕ್ಷೆಗೊಳಗಾದ ಬಳಿಕ ಕೆ.ಪೊನ್ಮುಡಿ ಅವರು ಸಚಿವ ಸ್ಥಾನ ಕಳೆದುಕೊಂಡಿದ್ದರು. ಪೊನ್ಮುಡಿ ಅವರನ್ನು ಸಚಿವರಾಗಿ ನೇಮಿಸಬೇಕು ಎಂದು ಸ್ಟಾಲಿನ್ ಅವರು ರಾಜ್ಯಪಾಲರಿಗೆ ಶಿಫಾರಸು ಮಾಡಿದ್ದರು. ಅದಕ್ಕೆ ರಾಜ್ಯಪಾಲರು ನಿರಾಕರಿಸಿದ್ದರು. ಇದರ ಬೆನ್ನಲ್ಲೇ ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ರಾಜ್ಯಪಾಲರ ನಡೆಗೆ ನ್ಯಾಯಪೀಠ ಗಂಭೀರ ಕಳವಳ ವ್ಯಕ್ತಪಡಿಸಿತ್ತು. ಅದಾದ ಬಳಿಕ ಸಂಪುಟಕ್ಕೆ ಸೇರ್ಪಡೆಗೆ ರವಿ ಅವರು ಒಪ್ಪಿಗೆ ನೀಡಿದ್ದರಯ.
- ವಿಧಾನಸಭೆಯನ್ನು ಉದ್ದೇಶಿಸಿ ಭಾಷಣ ಮಾಡುವಾಗ ಆರ್.ಎನ್. ರವಿ ಅವರು ಸರ್ಕಾರ ಸಿದ್ಧಪಡಿಸಿಕೊಟ್ಟ ಭಾಷಣವನ್ನು ಪೂರ್ತಿಯಾಗಿ ಓದಲು ನಿರಾಕರಿಸಿದ್ದರು. ಕೇಂದ್ರ ಸರ್ಕಾರ ಜಿಎಸ್‌ಟಿ ಪರಿಹಾರ ಕೊಟ್ಟಿಲ್ಲ ಹಾಗೂ ರಾಜ್ಯದಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆಯನ್ನು ತಮಿಳುನಾಡಿನಲ್ಲಿ ಜಾರಿಗೆ ತರುವುದಿಲ್ಲ ಎಂಬ ಅಂಶಗಳು ಈ ಭಾಷಣದ ಪ್ರತಿಯಲ್ಲಿದ್ದವು.

ಸರ್ಕಾರ ರಚನೆಯಲ್ಲಿ ಕೋಶಿಯಾರಿ ಗಡಿಬಿಡಿ

ಭಗತ್ ಸಿಂಗ್ ಕೋಶಿಯಾರಿ

- ಶಿವಸೇನಾ ನೇತೃತ್ವದ ಎಂವಿಎ ಸರ್ಕಾರವಿದ್ದಾಗ ಅಂದಿನ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಮತ್ತು ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಮಧ್ಯೆ ತಿಕ್ಕಾಟ ತೀವ್ರವಾಗಿತ್ತು. ಸಂಪುಟ ಸದಸ್ಯರ ಪ್ರಮಾಣವಚನ ಸ್ವೀಕಾರಕ್ಕೆ ಕೋಶಿಯಾರಿ ಅವಕಾಶವನ್ನೇ ನೀಡಿರಲಿಲ್ಲ. ಹಲವು ತಿಂಗಳ ನಂತರ ಸಚಿವರು ಅಧಿಕಾರ ಸ್ವೀಕರಿಸಬೇಕಾದ ಸನ್ನಿವೇಶ ಸೃಷ್ಟಿಸಿದ್ದರು.
- ಕೋವಿಡ್ ಸಂದರ್ಭದಲ್ಲಿ ರಾಜ್ಯ ಸರ್ಕಾರ ತೆಗೆದುಕೊಂಡ ಹಲವು ನಿರ್ಧಾರಗಳನ್ನು ರಾಜ್ಯಪಾಲರು ತಿರಸ್ಕರಿಸಿದ್ದರು.
- ಉದ್ಧವ್ ನೇತೃತ್ವದ ಸರ್ಕಾರ ಪತನವಾಗಿ ಏಕನಾಥ ಶಿಂದೆ ನೇತೃತ್ವದ ಸರ್ಕಾರ ರಚನೆಯಾಗುವ ಪ್ರಕ್ರಿಯೆಯಲ್ಲಿ ಕೋಶಿಯಾರಿ ನಡೆದುಕೊಂಡ ರೀತಿಯು ಲೋಪದಿಂದ ಕೂಡಿತ್ತು ಎಂದು ಸುಪ್ರೀಂ ಕೋರ್ಟ್ ಕಟುವಾಗಿ ಹೇಳಿತ್ತು.

ರಂಗೇರುತ್ತಿದೆ ಪ್ರಚಾರ

ರೋಡ್ ಶೋ — ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ರಾಣಾಪುರದಲ್ಲಿ ನಡೆದ ಭಗೋರಿಯಾ ಉತ್ಸವದ ವೇಳೆ ಸಂಭ್ರಮದಿಂದ ಕೈ ಬೀಸಿದರು —ಪಿಟಿಐ ಚಿತ್ರ

9 ಮಾಜಿ ಶಾಸಕರು ಬಿಜೆಪಿಗೆ

ಹಿಮಾಚಲ ಪ್ರದೇಶ: ಮುಂದುವರಿದ ರಾಜಕೀಯ ಬಿಕ್ಕಟ್ಟು

ನವದೆಹಲಿ (ಪಿಟಿಐ): ಹಿಮಾಚಲ ಪ್ರದೇಶದ ಕಾಂಗ್ರೆಸ್‌ನ ಆರು ಅನರ್ಹ ಶಾಸಕರು ಹಾಗೂ ವಿಧಾನಸಭೆಗೆ ರಾಜೀನಾಮೆ ನೀಡಿದ್ದ ಮೂವರು ಪಕ್ಷೇತರ ಶಾಸಕರು ಸೇರಿ ಒಟ್ಟು 9 ಮಾಜಿ ಶಾಸಕರು ಶನಿವಾರ ಬಿಜೆಪಿ ಸೇರ್ಪಡೆಯಾದರು.

ಕೇಂದ್ರ ಸಚಿವ ಅನುರಾಗ್ ಠಾಕೂರ್, ಮಾಜಿ ಮುಖ್ಯಮಂತ್ರಿ ಜೈರಾಮ್ ಠಾಕೂರ್, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರಾಜೀವ್ ಬಿಂದಾಲ್ ಸಮ್ಮುಖದಲ್ಲಿ ಶಾಸಕರು ಬಿಜೆಪಿ ಸೇರಿದರು.

ಕಾಂಗ್ರೆಸ್‌ನಿಂದ ಅನರ್ಹಗೊಂಡಿದ್ದ ಸುಧೀರ್ ಶರ್ಮಾ, ರವಿ ಠಾಕೂರ್, ರಾಜೇಂದರ್ ರಾಣಾ, ಇಂದರ್ ದತ್ ಲಖನ್‌ಪಾಲ್. ಚೈತನ್ಯ ಶರ್ಮಾ, ದೇವೇಂದ್ರ ಕುಮಾರ್ ಭುಟ್ಟೊ ಮತ್ತು ಪಕ್ಷೇತರ ಶಾಸಕರಾಗಿದ್ದ ಆಶೀಶ್ ಶರ್ಮಾ, ಹೋಶಿಯಾರ್ ಸಿಂಗ್ ಹಾಗೂ ಕೆ.ಎಲ್.ಠಾಕೂರ್ ಬಿಜೆಪಿ ಸೇರಿದ್ದಾರೆ.

ಅವರನ್ನು ಪಕ್ಷಕ್ಕೆ ಸ್ವಾಗತಿಸಿದ ಕೇಂದ್ರ ಸಚಿವ ಅನುರಾಗ್ ಠಾಕೂರ್ ಮಾತನಾಡಿ, 'ಪಕ್ಷವು ರಾಜ್ಯದಲ್ಲಿ ಮತ್ತಷ್ಟು ಬಲಿಷ್ಠವಾಗಲಿದ್ದು, ಆಡಳಿತಾರೂಢ ಕಾಂಗ್ರೆಸ್, ಜನರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲವಾಗಿದೆ' ಎಂದು ಆರೋಪಿಸಿದರು.

'ಕಾಂಗ್ರೆಸ್ ಶಾಸಕರಾಗಿದ್ದರೂ, ಸರ್ಕಾರದ ವಿರುದ್ಧ ಜನರಲ್ಲಿರುವ ಸಿಟ್ಟನ್ನು ತೋರಿಸಲು ಇವರೆಲ್ಲ ರಾಜ್ಯಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಬೆಂಬಲಿಸಿದ್ದರು' ಎಂದು ಹೇಳಿದರು.

ಬಿಜೆಪಿ ಸೇರ್ಪಡೆಯಾದ ಶಾಸಕ ರೆಲ್ಲರೂ ಉಪಚುನಾವಣೆಯಲ್ಲಿ ಅವರ ಕ್ಷೇತ್ರಗಳಿಂದಲೇ ಬಿಜೆಪಿ ಅಭ್ಯರ್ಥಿಗಳಾಗಿ ಸ್ಪರ್ಧಿಸಲಿದ್ದಾರೆ.

68 ಸದಸ್ಯ ಬಲದ ವಿಧಾನಸಭೆಯಲ್ಲಿ ಆರು ಮಂದಿ ಕಾಂಗ್ರೆಸ್ ಶಾಸಕರ ರಾಜೀನಾಮೆಯಿಂದ ಆಡಳಿತಾರೂಢ ಪಕ್ಷದ ಬಲವು 39ರಿಂದ 33ಕ್ಕೆ ಕುಸಿದಿತ್ತು. ಬಿಜೆಪಿ 25 ಶಾಸಕರನ್ನು ಹೊಂದಿದೆ. ಮೂವರು ಪಕ್ಷೇತರ ಶಾಸಕರ ರಾಜೀನಾಮೆಯಿಂದ ವಿಧಾನಸಭೆಯ ಬಲವು ಮತ್ತಷ್ಟು ಕುಗ್ಗಿದೆ.

ಎಸ್‌ಕೆಎಂ ಪಕ್ಷದ ಜತೆಗಿನ ಮೈತ್ರಿ ಅಂತ್ಯ

ಸಿಕ್ಕಿಂ: ಬಿಜೆಪಿ ಏಕಾಂಗಿ ಸ್ಪರ್ಧೆ

ಗ್ಯಾಂಗ್ಟಕ್ (ಪಿಟಿಐ): ಸಿಕ್ಕಿಂನ ಆಡಳಿತಾರೂಢ 'ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ' (ಎಸ್‌ಕೆಎಂ) ಜತೆಗಿನ ತನ್ನ ಮೈತ್ರಿ ಅಂತ್ಯಗೊಂಡಿದೆ ಎಂದು ಘೋಷಿಸಿರುವ ಬಿಜೆಪಿ, ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಯನ್ನು ಏಕಾಂಗಿಯಾಗಿ ಎದುರಿಸುವುದಾಗಿ ತಿಳಿಸಿದೆ.

ಎಸ್‌ಕೆಎಂ ಜತೆ ಸೀಟು ಹಂಚಿಕೆ ಬಗ್ಗೆ ದೆಹಲಿಯಲ್ಲಿ ಪಕ್ಷದ ವರಿಷ್ಠರೊಂದಿಗೆ ಚರ್ಚಿಸಿ ರಾಜ್ಯಕ್ಕೆ ಹಿಂದಿರುಗಿದ ಬಳಿಕ ಬಿಜೆಪಿ ಸಿಕ್ಕಿಂ ರಾಜ್ಯ ಘಟಕದ ಅಧ್ಯಕ್ಷ ಡಿ.ಆರ್.ಥಾಪಾ ಮೈತ್ರಿ ಅಂತ್ಯವಾಗಿರುವುದನ್ನು ಘೋಷಿಸಿದರು.

ರಂಗ್ಪೋನಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಥಾಪಾ, 'ಭ್ರಷ್ಟಾಚಾರದ ವಿರುದ್ಧದ ಸ್ವತಂತ್ರ ಕಾರ್ಯಾಚರಣೆ ಮತ್ತು ಸಿಕ್ಕಿಂ ಅಭಿವೃದ್ಧಿಗೆ ಬದ್ಧವಾದ ಹೊಸ ಯುಗ ಆರಂಭವಾಗಿದೆ. ಮೈತ್ರಿಯ ವಿಸರ್ಜನೆಯು ರಾಜ್ಯದ ಜನರ ಸೇವೆ ಮಾಡುವ ಅತ್ಯುನ್ನತ ಅವಕಾಶವನ್ನು ಪಕ್ಷಕ್ಕೆ ಒದಗಿಸಿದೆ' ಎಂದು ಹೇಳಿದರು.

ಸಿಕ್ಕಿಂನ ಎಲ್ಲ 32 ವಿಧಾನಸಭಾ ಕ್ಷೇತ್ರಗಳು ಮತ್ತು ಏಕೈಕ ಲೋಕಸಭಾ ಕ್ಷೇತ್ರದಲ್ಲಿ ಸ್ವತಂತ್ರವಾಗಿ ಸ್ಪರ್ಧಿಸುವುದಕ್ಕೆ ಪಕ್ಷವು ಸಿದ್ಧವಾಗಿದೆ ಎಂದು ಪಕ್ಷದ ಕೇಂದ್ರ ನಾಯಕತ್ವಕ್ಕೆ ಮನವರಿಕೆ ಮಾಡಿರುವುದಾಗಿ ಥಾಪಾ ತಿಳಿಸಿದರು.

ಚುನಾವಣೋತ್ತರ ಮೈತ್ರಿ ಸಾಧ್ಯತೆ: ಇನ್ನೊಂದೆಡೆ, ಥಾಪಾ ಹೇಳಿಕೆಯ ಬಗ್ಗೆ ಪ್ರತಿಕ್ರಿಯಿಸಿದ ಎಸ್‌ಕೆಎಂ ಮುಖಂಡ ಮತ್ತು ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಜಾಕೊಬ್ ಖಾಲಿಂಗ್ ರೈ, 'ಕಳೆದ ಚುನಾವಣೆಯಲ್ಲಿಯೂ ನಾವು ಬಿಜೆಪಿ ಜತೆ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿರಲಿಲ್ಲ. ಆದರೆ, ದೇಶದ ಮತ್ತು ರಾಜ್ಯದ ಹಿತದೃಷ್ಟಿಯಿಂದ ಚುನಾವಣೋತ್ತರವಾಗಿ ಮೈತ್ರಿಯನ್ನು ಸಾಧಿಸಿದ್ದೆವು. ಈ ಬಾರಿಯೂ ಅಂತಹ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ' ಎಂದು ಹೇಳಿದರು.

ರಾಜ್ಯದಲ್ಲಿ ಏಕಾಂಗಿಯಾಗಿ ಚುನಾವಣೆ ಎದುರಿಸುವ ನಿರ್ಣಯ ಕೈಗೊಂಡ ಬಿಜೆಪಿಯನ್ನು ಅವರು ಅಭಿನಂದಿಸಿದರು.

ಅರುಣಾಚಲ: ಎನ್‌ಪಿಪಿಯಿಂದ ಮೊದಲ ಪಟ್ಟಿ

ಇಟಾನಗರ (ಪಿಟಿಐ): ನ್ಯಾಷನಲಿಸ್ಟ್ ಪೀಪಲ್ಸ್ ಪಕ್ಷವು (ಎನ್‌ಪಿಪಿ) ಏಪ್ರಿಲ್ 19ರಂದು ನಡೆಯುವ ಅರುಣಾಚಲ ಪ್ರದೇಶದ ವಿಧಾನಸಭಾ ಚುನಾವಣೆಗಾಗಿ 29 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಶನಿವಾರ ಬಿಡುಗಡೆ ಮಾಡಿದೆ.

ಅರುಣಾಚಲ ಪ್ರದೇಶವು 60 ವಿಧಾನಸಭಾ ಕ್ಷೇತ್ರ ಮತ್ತು 2 ಲೋಕಸಭಾ ಕ್ಷೇತ್ರಗಳನ್ನು ಹೊಂದಿದೆ.

ಮೇಘಾಲಯದ ಮುಖ್ಯಮಂತ್ರಿ ಕಾನ್ರಾಡ್ ಸಂಗ್ಮಾ ನೇತೃತ್ವದ ಎನ್‌ಪಿಪಿಯು ಅರುಣಾಚಲ ಪ್ರದೇಶದ ಎರಡು ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಹಾಕದೇ ಬಿಜೆಪಿಯನ್ನು ಬೆಂಬಲಿಸುತ್ತಿದ್ದು, 'ಈಶಾನ್ಯ ಪ್ರಜಾಸತ್ತಾತ್ಮಕ ಮೈತ್ರಿಕೂಟ'ದ ಭಾಗವಾಗಿರುವುದನ್ನು ಖಚಿತಪಡಿಸಿದೆ.

ಗುಜರಾತ್: ಹಿಂದೆಸರಿದ ಬಿಜೆಪಿ ಅಭ್ಯರ್ಥಿಗಳು

ಅಹಮದಾಬಾದ್ (ಪಿಟಿಐ): ಗುಜರಾತ್‌ನ ವಡೋದರ ಮತ್ತು ಸಾಬರ್‌ಕಾಂಠಾ ಕ್ಷೇತ್ರಗಳ ಬಿಜೆಪಿ ಅಭ್ಯರ್ಥಿಗಳು ವೈಯಕ್ತಿಕ ಕಾರಣ ನೀಡಿ ಚುನಾವಣಾ ಕಣದಿಂದ ಶನಿವಾರ ಹಿಂದೆ ಸರಿದಿದ್ದಾರೆ.

ಬಿಜೆಪಿಯು ವಡೋದರ ಕ್ಷೇತ್ರದಿಂದ ಹಾಲಿ ಸಂಸದೆ ರಂಜನಾಬೆನ್ ಭಟ್ ಅವರನ್ನು ಕಣಕ್ಕಿಳಿಸಿತ್ತು. '2024ರ ಲೋಕಸಭಾ ಚುನಾವಣೆಯಲ್ಲಿ ನಾನು ಸ್ಪರ್ಧಿಸುವುದಿಲ್ಲ' ಎಂದು ಅವರು 'ಎಕ್ಸ್'ನಲ್ಲಿ ತಮ್ಮ ನಿರ್ಧಾರ ಪ್ರಕಟಿಸಿದ್ದಾರೆ.

ಇದರ ಬೆನ್ನಲ್ಲೇ ಸಾಬರ್‌ಕಾಂಠಾ ಕ್ಷೇತ್ರದ ಅಭ್ಯರ್ಥಿ ಭೀಖಾಜಿ ಠಾಕೂರ್ ಅವರೂ ಹಿಂದೆ ಸರಿಯುವ ನಿರ್ಧಾರ ಘೋಷಿಸಿದರು. 'ವೈಯಕ್ತಿಕ ಕಾರಣಗಳಿಂದಾಗಿ ನಾನು ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ' ಎಂದು ಇನ್‌ಸ್ಟಾಗ್ರಾಂ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ವಡೋದರ ಕ್ಷೇತ್ರದಿಂದ ರಂಜನಾಬೆನ್ ಅವರನ್ನು ಕಣಕ್ಕಿಳಿಸಿರುವುದಕ್ಕೆ ಬಿಜೆಪಿಯ ಕೆಲವು ಸ್ಥಳೀಯ ನಾಯಕರಲ್ಲೇ ಅಸಮಾಧಾನ ಇತ್ತು. ಅವರಿಗೆ ಟಿಕೆಟ್ ನೀಡಿರುವುದನ್ನು ಟೀಕಿಸಿ ನಗರದ ಕೆಲವೆಡೆ ಬ್ಯಾನರ್‌ಗಳನ್ನು ಕಟ್ಟಲಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಅವರು 2014 ರಲ್ಲಿ ವಡೋದರ ಕ್ಷೇತ್ರವನ್ನು ಬಿಟ್ಟುಕೊಟ್ಟ ಬಳಿಕ ನಡೆದ ಉಪ ಚುನಾವಣೆಯಲ್ಲಿ ಸ್ಪರ್ಧಿಸಿ ರಂಜನಾಬೆನ್ ಗೆದ್ದಿದ್ದರು.

ಪ್ರಚಾರಕ್ಕೆ ನಟನ ಜತೆಗಿನ ಫೋಟೊ ಬಳಕೆ: ಎಚ್ಚರಿಕೆ

ತ್ರಿಶ್ಶೂರ್ (ಕೇರಳ) (ಪಿಟಿಐ): ಮಲಯಾಳ ನಟ ಟೊವಿನೊ ಥಾಮಸ್ ಜತೆಗಿನ ಫೋಟೊವನ್ನು ಚುನಾವಣಾ ಪ್ರಚಾರಕ್ಕಾಗಿ ಬಳಸಿದ ಕಾರಣಕ್ಕೆ ತ್ರಿಶ್ಶೂರ್ ಲೋಕಸಭಾ ಕ್ಷೇತ್ರದ ಸಿಪಿಐ ಅಭ್ಯರ್ಥಿ ವಿ.ಎಸ್.ಸುನಿಲ್ ಕುಮಾರ್ ಅವರಿಗೆ ಚುನಾವಣಾ ಆಯೋಗವು ಎಚ್ಚರಿಕೆ ನೀಡಿದೆ.

ಟೊವಿನೊ ಅವರು ಚುನಾವಣಾ ಆಯೋಗದ 'ವ್ಯವಸ್ಥಿತ ಮತದಾರರ ಶಿಕ್ಷಣ ಮತ್ತು ಚುನಾವಣಾ ಭಾಗವಹಿಸುವಿಕೆ ಕಾರ್ಯಕ್ರಮ'ದ (ಎಸ್‌ವಿಇಇಪಿ) ರಾಯಭಾರಿಯಾಗಿದ್ದು, ಅವರೊಂದಿಗಿನ ಚಿತ್ರವನ್ನು ಸುನಿಲ್ ಕುಮಾರ್ ಸಾಮಾಜಿಕ ಜಾಲತಾಣದಲ್ಲಿ ಬಳಸಿದ್ದರು.

ಈ ಬಗ್ಗೆ ತ್ರಿಶ್ಶೂರಿನ ಚುನಾವಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿಗೆ ಎನ್‌ಡಿಎ ದೂರು ನೀಡಿತ್ತು. ನಂತರ ಸುನಿಲ್ ಕುಮಾರ್ ಆ ಚಿತ್ರವನ್ನು ಸಾಮಾಜಿಕ ಜಾಲತಾಣದಿಂದ ತೆಗೆದುಹಾಕಿದ್ದರು. ಅಂಥ ಪ್ರಕರಣಗಳು ಮರುಕಳಿಸದಂತೆ ಚುನಾವಣಾ ಆಯೋಗವು ಅವರಿಗೆ ಎಚ್ಚರಿಕೆ ನೀಡಿದೆ. ತ್ರಿಶ್ಶೂರ್ ಲೋಕಸಭಾ ಕ್ಷೇತ್ರದಲ್ಲಿ ನಟ ಸುರೇಶ್ ಗೋಪಿ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ.

ಸಚಿವ ಪ್ರಮಾಣಿಕ್ ವಿರುದ್ಧ 14 ಪ್ರಕರಣ

ಕೋಲ್ಕತ್ತ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದ ಕೂಚ್ ಬಿಹಾರ್ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ನಿಶಿತ್ ಪ್ರಮಾಣಿಕ್ ವಿರುದ್ಧ ಒಟ್ಟು 14 ಕ್ರಿಮಿನಲ್ ಪ್ರಕರಣಗಳು ಬಾಕಿ ಇವೆ.

14 ಪ್ರಕರಣಗಳ ಪೈಕಿ 9 ಪ್ರಕರಣಗಳು 2018ರಿಂದ 2020ರ ನಡುವೆ ದಾಖಲಾದಂಥವು. ಉಳಿದ ಪ್ರಕರಣಗಳು 2009ರಿಂದ 2014ರ ನಡುವೆ ದಾಖಲಾಗಿವೆ ಎಂದು ನಾಮಪತ್ರದ ಜತೆಗೆ ಅವರು ಸಲ್ಲಿಸಿರುವ ಅಫಿಡವಿಟ್‌ನಲ್ಲಿ ಉಲ್ಲೇಖಿಸಲಾಗಿದೆ.

ಅವರ ವಿರುದ್ಧ ದಾಖಲಾಗಿರುವ ಪ್ರಕರಣಗಳಲ್ಲಿ ಕೊಲೆ ಯತ್ನ, ದಂಗೆ ಮತ್ತು ಅನುಮತಿ ಇಲ್ಲದೇ ಸಭೆ ಸೇರಿದ ಆರೋಪಗಳಿಗೆ ಸಂಬಂಧಿಸಿದ ಪ್ರಕರಣಗಳು ಸೇರಿವೆ. ಆದರೆ, ಯಾವುದೇ ಪ್ರಕರಣದ ಸಂಬಂಧ ದೋಷಾರೋಪ ನಿಗದಿ ಮಾಡಲಾಗಿಲ್ಲ ಎಂದು ಪ್ರಮಾಣಿಕ್ ತಿಳಿಸಿದ್ದಾರೆ.

ತನ್ನ ವಿರುದ್ಧದ ಪ್ರಕರಣಗಳು ರಾಜಕೀಯ ಪ್ರೇರಿತ ಎಂದಿರುವ ಪ್ರಮಾಣಿಕ್, 'ಬಹುತೇಕ ಪ್ರಕರಣಗಳು ನಾನು ತೃಣಮೂಲ ಕಾಂಗ್ರೆಸ್ (ಟಿಎಂಸಿ) ತ್ಯಜಿಸಿ ಬಿಜೆಪಿ ಸೇರಿದ ನಂತರ ದಾಖಲಾಗಿರುವವು' ಎಂದು ಹೇಳಿದ್ದಾರೆ.

ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಆರೋಪದ ಮೇಲೆ ಟಿಎಂಸಿ ಪಕ್ಷದಿಂದ ಉಚ್ಚಾಟಿಸಿದ ಬಳಿಕ 2019ರಲ್ಲಿ ಪ್ರಮಾಣಿಕ್ ಬಿಜೆಪಿ ಸೇರಿದ್ದರು. 2019ರ ಲೋಕಸಭಾ ಚುನಾವಣೆ ವೇಳೆ ಸಲ್ಲಿಸಿದ್ದ ಅಫಿಡವಿಟ್‌ನಲ್ಲಿ, ತನ್ನ ವಿರುದ್ಧ 11 ಪ್ರಕರಣಗಳು ದಾಖಲಾಗಿವೆ ಎಂದು ಹೇಳಿದ್ದರು.

ರಾಜಕಾರಣಕ್ಕೆ ಬರುವ ಮುಂಚೆ ಶಾಲಾ ಶಿಕ್ಷಕನಾಗಿದ್ದೆ ಎಂದು ಅವರು ಹೇಳಿದ್ದಾರೆ.

ರಾಜೀವ್ ಚಂದ್ರಶೇಖರ್ ವಿರುದ್ಧ ಕ್ರಮಕ್ಕೆ ಆಗ್ರಹ

ತಿರುವನಂತಪುರ (ಪಿಟಿಐ): ಕೇರಳದ ತಿರುವನಂತಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರಾಜೀವ್ ಚಂದ್ರಶೇಖರ್ ಅವರು ಉದ್ಘಾಟನಾ ಕಾರ್ಯಕ್ರಮ ಸೇರಿದಂತೆ ವಿವಿಧ ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಮೂಲಕ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಡಳಿತಾರೂಢ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಮೈತ್ರಿಕೂಟವು ಚುನಾವಣಾ ಆಯೋಗಕ್ಕೆ ಒತ್ತಾಯಿಸಿದೆ.

ಈ ಕುರಿತು ಎಲ್‌ಡಿಎಫ್ ಮುಖಂಡರು ಶನಿವಾರ ಜಿಲ್ಲಾಧಿಕಾರಿಗೆ ದೂರು ನೀಡಿದ್ದಾರೆ. 'ರಾಜೀವ್ ಅವರು ಸ್ಪಷ್ಟವಾಗಿ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ' ಎಂದು ಕ್ಷೇತ್ರದ ಎಲ್‌ಡಿಎಫ್ ಚುನಾವಣಾ ಸಮಿತಿ ಅಧ್ಯಕ್ಷ ಎಂ.ವಿಜಯ್ ಕುಮಾರ್ ಆರೋಪಿಸಿದರು. ಚುನಾವಣಾ ದಿನಾಂಕ ಘೋಷಣೆಯಾದ ಬಳಿಕವೂ ರಾಜೀವ್ ಅವರು ಜನರಿಂದ ಅಹವಾಲು ಸ್ವೀಕರಿಸುತ್ತಿದ್ದಾರೆ ಎಂದೂ ವಿಜಯ್ ಕುಮಾರ್ ತಿಳಿಸಿದರು.

ಮಹಿಳಾ ಕಾಲೇಜೊಂದರಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲೂ ರಾಜೀವ್ ಅವರು ಪಾಲ್ಗೊಂಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಚುಟುಕು

ಅಭ್ಯರ್ಥಿಗಳ ಆಯ್ಕೆಗೆ ಬಿಜೆಪಿ ಸಿಇಸಿ ಸಭೆ

ನವದೆಹಲಿ (ಪಿಟಿಐ): ಬಿಜೆಪಿಯ ಕೇಂದ್ರ ಚುನಾವಣಾ ಸಮಿತಿಯು (ಸಿಇಸಿ) ಇನ್ನುಳಿದ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆ ಸಂಬಂಧ ಶನಿವಾರ ಸಭೆ ಸೇರಿ ಚರ್ಚೆ ನಡೆಸಿತು.

ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಪಕ್ಷದ ಹಿರಿಯ ನಾಯಕರು ಭಾಗವಹಿಸಿದ್ದರು. ಉತ್ತರ ಪ್ರದೇಶ ಮತ್ತು ರಾಜಸ್ಥಾನ ಸೇರಿದಂತೆ ಹಲವು ರಾಜ್ಯಗಳ ಅಭ್ಯರ್ಥಿಗಳ ಆಯ್ಕೆ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಲಾಯಿತು.

ಸಿಇಸಿ ಈ ಹಿಂದೆ ಎರಡು ಸಲ ಸಭೆ ಸೇರಿ ಉತ್ತರ ಪ್ರದೇಶ, ಗುಜರಾತ್, ಪಶ್ಚಿಮ ಬಂಗಾಳ, ಜಾರ್ಖಂಡ್, ರಾಜಸ್ಥಾನ, ಹರಿಯಾಣ, ಕರ್ನಾಟಕ, ತಮಿಳುನಾಡು, ಉತ್ತರಾಖಂಡ, ಕೇರಳ ಮತ್ತು ತೆಲಂಗಾಣ ರಾಜ್ಯಗಳ 291 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿತ್ತು.

ಜಿಗಿ–ನೆಗೆದಾಟ

ಜೆಡಿಯುಗೆ ಮರಳಿದ ಕುಶ್ವಾಹ

ಪಟ್ನಾ (ಪಿಟಿಐ): ಕೆಲವು ವರ್ಷಗಳ ಹಿಂದೆ ಜೆಡಿಯು ತ್ಯಜಿಸಿದ್ದ ಬಿಹಾರದ ಮಾಜಿ ಶಾಸಕ ರಮೇಶ್ ಸಿಂಗ್ ಕುಶ್ವಾಹ ಅವರು ತಮ್ಮ ಪತ್ನಿ ವಿಜಯಲಕ್ಷ್ಮಿ ಅವರೊಂದಿಗೆ ಶನಿವಾರ ಮರಳಿ ಜೆಡಿಯು ಸೇರ್ಪಡೆಯಾದರು. ಮೂಲಗಳ ಪ್ರಕಾರ, ಕುಶ್ವಾಹ ಅಥವಾ ಅವರ ಪತ್ನಿಯನ್ನು ಸಿವಾನ್ ಕ್ಷೇತ್ರದಿಂದ ಜೆಡಿಯು ಕಣಕ್ಕಿಳಿಸುವ ಸಾಧ್ಯತೆಗಳಿವೆ.

ಕಾಂಗ್ರೆಸ್‌ನಿಂದ ಬಿಜೆಪಿಗೆ: ಮಧ್ಯಪ್ರದೇಶದ ಕಾಂಗ್ರೆಸ್‌ನ ಮಾಜಿ ಶಾಸಕ ಮನೋಜ್ ಚಾವ್ಲಾ ಶನಿವಾರ ಬಿಜೆಪಿ ಸೇರ್ಪಡೆಯಾದರು. 'ವೈಯಕ್ತಿಕ ಕಾರಣ' ಕಾರಣ ನೀಡಿ ಕಾಂಗ್ರೆಸ್ ತ್ಯಜಿಸಿದ ಕೆಲವೇ ಗಂಟೆಗಳಲ್ಲಿ ಅವರು ಬಿಜೆಪಿ ಸೇರಿದರು.

ಎಂಥಾ ಮಾತು!

ಸ್ವಾತಂತ್ರ್ಯಾನಂತರ ಕೇಂದ್ರದಲ್ಲಿ ಆಡಳಿತ ನಡೆಸಿದ್ದ ಕಾಂಗ್ರೆಸ್ ಪಕ್ಷವು ಭ್ರಷ್ಟಾಚಾರ, ದುರಾಡಳಿತ, ಕುಟುಂಬ ರಾಜಕಾರಣ ಮತ್ತು ಸ್ವಜನಪಕ್ಷಪಾತಕ್ಕೆ ಕುಖ್ಯಾತವಾಗಿತ್ತು. ಲೋಕಸಭಾ ಚುನಾವಣೆಗೂ ಮುನ್ನ ವಿರೋಧ ಪಕ್ಷಗಳನ್ನು ಒಗ್ಗೂಡಿಸುವಲ್ಲಿ 'ಇಂಡಿಯಾ' ಒಕ್ಕೂಟವು ಸಂಪೂರ್ಣವಾಗಿ ವಿಫಲವಾಗಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವು 400 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಗುರಿ ಹೊಂದಿದೆ

ಸರ್ವಾನಂದ ಸೋನೊವಾಲ್, ಕೇಂದ್ರ ಸಚಿವ



'ಇಂಡಿಯಾ' ಮೈತ್ರಿಕೂಟವು 'ಫಿಲ್ಟರ್ ಕಾಫಿ' ಇದ್ದಂತೆ. ಲೋಕಸಭಾ ಚುನಾವಣೆ ಸಮೀಪಿಸುತ್ತಿರುವಂತೆಯೇ ಅದು ಹೊಸ ಹುರುಪು ಪಡೆಯುತ್ತಿದೆ. ವಿರೋಧ ಪಕ್ಷಗಳ ಮೈತ್ರಿಕೂಟವನ್ನು ಕಡೆಗಣಿಸಬೇಡಿ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ದೇಶದಾದ್ಯಂತ 'ಕ್ರಾಂತಿಕಾರಿ' ಯಾತ್ರೆಗಳನ್ನು ನಡೆಸುವ ಮೂಲಕ ಪಕ್ಷಕ್ಕೆ ಉತ್ತೇಜನ ನೀಡಿದ್ದಾರೆ

ಶತ್ರುಘ್ನ ಸಿನ್ಹಾ, ಟಿಎಂಸಿ ಮುಖಂಡ

ಕ್ಷೇತ್ರ ಮಹಾತ್ಮೆ

ಮಾಜಿ ಐಪಿಎಸ್ ಅಧಿಕಾರಿ ಕೆ. ಅಣ್ಣಾಮಲೈ ಅವರನ್ನು ತಮಿಳುನಾಡಿನ ಕೊಯಮತ್ತೂರು ಕ್ಷೇತ್ರದಿಂದ ಬಿಜೆಪಿಯು ಕಣಕ್ಕಿಳಿಸಿದ ಬಳಿಕ ಈ ಕ್ಷೇತ್ರವು ಹೆಚ್ಚು ಗಮನ ಸೆಳೆದಿದೆ. ಆಡಳಿತಾರೂಢ ಡಿಎಂಕೆಯು, ಅಣ್ಣಾಮಲೈ ಎದುರಾಳಿಯಾಗಿ ಗಣಪತಿ ಪಿ. ರಾಜಕುಮಾರ್ ಅವರನ್ನು ಅಖಾಡಕ್ಕಿಳಿಸಿದೆ. ವಿರೋಧಪಕ್ಷ ಎಐಎಡಿಎಂಕೆ, ತನ್ನ ಐ.ಟಿ ವಿಭಾಗದ ಮುಖ್ಯಸ್ಥ ಸಿಂಗೈ ಜಿ. ರಾಮಚಂದ್ರನ್ ಅವರನ್ನು ಅಭ್ಯರ್ಥಿಯಾಗಿ ಘೋಷಿಸಿದೆ. ಈ ಬಾರಿಯ ಸ್ಪರ್ಧೆಯು ಅಣ್ಣಾಮಲೈ ಮತ್ತು ಗಣಪತಿ ನಡುವಣ ನೇರ ಹಣಾಹಣಿಗೆ ಸಾಕ್ಷಿಯಾಗಲಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಬಿಜೆಪಿ ತಮಿಳುನಾಡು ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಅಣ್ಣಾಮಲೈ ಅವರು ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವುದು ಇದೇ ಮೊದಲಲ್ಲ. 2021ರಲ್ಲಿ ಅರವಕುರಿಚ್ಚಿ ವಿಧಾನಸಭಾ ಕ್ಷೇತ್ರದಿಂದ ಅದೃಷ್ಟ ಪರೀಕ್ಷೆ ಮಾಡಿ ಸೋತಿದ್ದರು. ಈ ಬಾರಿ ಅವರು ಗೆದ್ದೇ ಗೆಲ್ಲುತ್ತಾರೆಂಬ ವಿಶ್ವಾಸವು ಪಕ್ಷಕ್ಕಿದೆ. 2020ರಲ್ಲಿ ಎಐಎಡಿಎಂಕೆ ತೊರೆದು ಡಿಎಂಕೆಗೆ ಸೇರ್ಪಡೆಗೊಂಡಿದ್ದ ಗಣಪತಿ ಅವರು ಎಐಎಡಿಎಂಕೆಯಲ್ಲಿದ್ದಾಗ ಕೊಯಮತ್ತೂರಿನ ಮೇಯರ್ ಆಗಿಯೂ ಕಾರ್ಯನಿರ್ವಹಿಸಿದ್ದರು. ಈ ಕಾರಣಕ್ಕೆ ಕಣವು ಇನ್ನಷ್ಟು ರಂಗೇರಿದೆ. ಎಐಎಡಿಎಂಕೆ ಮಾಜಿ ಶಾಸಕ ಸಿಂಗೈ ಗೋವಿಂದರಸು ಅವರ ಮಗ ಸಿಂಗೈ ರಾಮಚಂದ್ರನ್ ಅವರೂ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಕಳೆದ ಚುನಾವಣೆಯಲ್ಲಿ ಸಿಪಿಎಂನ ಪಿ.ಆರ್. ನಟರಾಜನ್ ಅವರು ಗೆದ್ದಿರುವ ಈ ಕ್ಷೇತ್ರದಲ್ಲಿ, ಎಡರಂಗ ಪರ ಮತಗಳು ನಿರ್ಣಾಯಕವಾಗಲಿವೆ.

ಮುಖಾಮುಖಿ

ತಿರುವನಂತಪುರ (ಕೇರಳ)

ಶಶಿ ತರೂರ್
ಕಾಂಗ್ರೆಸ್

ತಿರುವನಂತಪುರ ಲೋಕಸಭಾ ಕ್ಷೇತ್ರದಿಂದ ಮೂರು ಬಾರಿ ಗೆಲುವಿನ ನಗೆ ಬೀರಿರುವ ಕಾಂಗ್ರೆಸ್‌ನ ಹಿರಿಯ ಮುಖಂಡ ಶಶಿ ತರೂರ್ ಅವರು ಈ ಬಾರಿಯೂ ಅಲ್ಲಿಂದಲೇ ಕಣಕ್ಕಿಳಿದಿದ್ದಾರೆ. ತರೂರ್ ಬಗ್ಗೆ ರಾಜ್ಯದ ಕೆಲವು ಕಾಂಗ್ರೆಸ್ ನಾಯಕರಲ್ಲಿ ಹಿಂದಿನಿಂದಲೂ ಅಸಮಾಧಾನವಿದ್ದರೂ ಇವರು ಹೈಕಮಾಂಡ್‌ನ ನೆಚ್ಚಿನ ಅಭ್ಯರ್ಥಿಯಾಗಿದ್ದಾರೆ. ಮೂಲತಃ ಕೇರಳದವರಾದ ತರೂರ್ ಅವರು ರಾಜ್ಯದಲ್ಲೂ ತಮ್ಮ ಛಾಪು ಮೂಡಿಸಿದ್ದಾರೆ. ವಾಗ್ಮಿ ಮತ್ತು ಲೇಖಕರಾಗಿರುವ ಇವರು ವಿಶ್ವಸಂಸ್ಥೆಯ ಶಾಂತಿಪಾಲಕರಾಗಿಯೂ ಕೆಲಸ ಮಾಡಿದ್ದರು. 68 ವರ್ಷದ ಅವರು ಮಾಹಿತಿ ತಂತ್ರಜ್ಞಾನದ ಸಂಸದೀಯ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧ ಸ್ಪರ್ಧಿಸುವ ಮೂಲಕ ಸ್ವಪಕ್ಷೀಯರ ಕೆಂಗಣ್ಣಿಗೂ ಗುರಿಯಾಗಿದ್ದರು.

V/S

ರಾಜೀವ್ ಚಂದ್ರಶೇಖರ್
ಬಿಜೆಪಿ

ಕೇಂದ್ರದ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರು ಮೊದಲ ಬಾರಿ ಲೋಕಸಭಾ ಚುನಾವಣಾ ಅಖಾಡಕ್ಕಿಳಿದಿದ್ದಾರೆ. ಅದೂ ಪ್ರಬಲ ಅಭ್ಯರ್ಥಿಯಾಗಿರುವ ಶಶಿ ತರೂರ್ ವಿರುದ್ಧ. ಮೂಲತಃ ಕೇರಳದವರಾದರೂ ರಾಜೀವ್ ಅವರು ಕರ್ನಾಟಕ ಮತ್ತು ರಾಷ್ಟ್ರಮಟ್ಟದ ರಾಜಕಾರಣದಲ್ಲಿ ಛಾಪು ಮೂಡಿಸಿದವರು. ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ಅವರು ಈ ಹಿಂದೆ ಬಿಜೆಪಿಯ ರಾಷ್ಟ್ರೀಯ ವಕ್ತಾರರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ತಿರುವನಂತಪುರ ಕ್ಷೇತ್ರದಲ್ಲಿ ಗೆಲುವಿನ ಸಾಧ್ಯತೆ ಕಾಂಗ್ರೆಸ್ ಅಭ್ಯರ್ಥಿಗೆ ಹೆಚ್ಚಿದೆ ಎಂಬುದು ಸ್ಪಷ್ಟವಿದ್ದರೂ ಪಕ್ಷದ ವರಿಷ್ಠರ ನಿರ್ಧಾರಕ್ಕೆ ಮಣಿದು ಇವರು ಸ್ಪರ್ಧಾ ಕಣಕ್ಕಿಳಿದಿದ್ದಾರೆ. ಉದ್ಯಮಿಯಾಗಿಯೂ ಪ್ರಸಿದ್ಧರಾಗಿರುವ 59 ವರ್ಷದ ಚಂದ್ರಶೇಖರ್ ಅವರ ರಾಜಕೀಯ ಭವಿಷ್ಯದ ದೃಷ್ಟಿಯಿಂದಲೂ ಈ ಸ್ಪರ್ಧೆ ಮಹತ್ವದ್ದು ಎಂದು ವಿಶ್ಲೇಷಿಸಲಾಗಿದೆ.

'ಮುಳುಗುತ್ತಿವೆ' ಜಲಾಶಯಗಳು



1,40,598 ಚ.ಕಿ.ಮೀ ರಾಜ್ಯದಲ್ಲಿ ಕೃಷಿ ಯೋಗ್ಯ ಭೂಮಿ

1,07,000 ಚ.ಕಿ.ಮೀ ಬೇಸಾಯ ನಡೆಯುತ್ತಿರುವ ಪ್ರದೇಶ

40.66 ಲಕ್ಷ ಹೆಕ್ಟೇರ್ ನೀರಾವರಿಗೆ ಒಳಪಡಿಸುವ ಉದ್ದೇಶ

29.19 ಲಕ್ಷ ಹೆಕ್ಟೇರ್ ನೀರಾವರಿಗೆ ಒಳಪಟ್ಟ ಪ್ರದೇಶ

ಆಲಮಟ್ಟಿ ಜಲಾಶಯದ ಹಿನ್ನೀರು –ಪ್ರಜಾವಾಣಿ ಚಿತ್ರ: ಶಶಿಕಿರಣ್ ದೇಸಾಯಿ ಬಿ.

ಒಂದನೇ ಪುಟದಿಂದ

ಕೃಷಿ ಆಧಾರಿತ ಆರ್ಥಿಕತೆಯೂ ಕುಸಿಯುವ ಸಾಧ್ಯತೆ ದಟ್ಟವಾಗಿದೆ. ಸರ್ಕಾರ ಗಳಾಗಲಿ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಾಗಲಿ, ರೈತ ಸಂಘಟನೆಗಳ ಮುಖಂಡರಾಗಲಿ, ಕೃಷಿ ತಜ್ಞರಾಗಲಿ ಇತ್ತ ಚಿತ್ತ ಹಾಯಿಸಿಲ್ಲ' ಎಂದು ಎಚ್ಚರಿಕೆಯ ನೀಡುತ್ತಾರೆ ಕೇಂದ್ರ ಜಲ ಆಯೋಗದ ನಿರ್ದೇಶಕ ಜೆ.ಹರ್ಷ.

'ಅಣೆಕಟ್ಟೆಗಳು ಆಧುನಿಕ ಭಾರತದ ದೇವಾಲಯಗಳು' ಎಂದು ದೇಶದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ ವ್ಯಾಖ್ಯಾನಿಸಿದ್ದರು. ದೊಡ್ಡ ಅಣೆಕಟ್ಟೆಗಳನ್ನು ನಿರ್ಮಿಸುವುದರಿಂದ ದೇಶದ ಎಲ್ಲ ಸಮಸ್ಯೆಗಳು ಪರಿಹಾರ ಆಗುತ್ತವೆ ಎಂದು ಅವರು ದೃಢವಾಗಿ ನಂಬಿದ್ದರು. ಆದರೆ, ಈಗ ಕರ್ನಾಟಕವೂ ಸೇರಿ ದೇಶದ ಬಹಳಷ್ಟು ಅಣೆಕಟ್ಟುಗಳು 'ಮೃತ್ಯುಶಯ್ಯೆ'ಯತ್ತ ಸಾಗುತ್ತಿವೆ. ಇದಕ್ಕೆ ಕಾರಣ ಅಣೆಕಟ್ಟೆಗಳಲ್ಲಿ ನೀರಿನ ಪ್ರಮಾಣಕ್ಕಿಂತ ಹೂಳಿನ ಪ್ರಮಾಣವೇ ಹೆಚ್ಚಾಗಿದೆ. ಇದರಿಂದ ನೀರಿನ ಸಂಗ್ರಹಣಾ ಸಾಮರ್ಥ್ಯವೂ ಕುಸಿದಿದೆ. ತುಂಬಿಕೊಂಡ ಹೂಳು ತೆರವು ಮಾಡುವುದು ಹೇಗೆ? ಜಲಾಶಯಗಳ ನಿರ್ವಹಣೆ ಹೇಗೆ? ಎಂಬುದು ಗೊತ್ತಿಲ್ಲದೇ ತಲೆ ಮೇಲೆ ಕೈಹೊತ್ತು ಕೂರುವ ಸ್ಥಿತಿಗೆ ತಜ್ಞರು ತಲುಪಿದ್ದಾರೆ. ಸರ್ಕಾರಗಳಿಗೆ ಅದರ ಗಂಭೀರತೆ ಅರ್ಥವಾಗುತ್ತಿಲ್ಲ. ಪರಿಸ್ಥಿತಿ ಹೀಗೆ ಮುಂದುವರಿದರೆ ಅಣೆಕಟ್ಟೆಗಳೇ ಹೂಳಿನಿಂದ ಮುಳುಗುವ ದಿನಗಳು ದೂರವಿಲ್ಲ. ಆ ರೀತಿ ಆದಾಗ ಪದೇ ಪದೇ ಪ್ರವಾಹ, 'ಜಲಪ್ರಳಯ' ತಪ್ಪಿದ್ದಲ್ಲ ಎನ್ನುತ್ತಾರೆ ಜಲಸಂಪನ್ಮೂಲ ತಜ್ಞರು.

ಹಲವು ರಾಜ್ಯಗಳಲ್ಲಿ ನೀರಾವರಿ ಮತ್ತು ಜಲಾಶಯಗಳ ಹೆಸರಿನಲ್ಲಿ ರಾಜಕೀಯ ನಡೆಯುತ್ತದೆ. ನೀರಾವರಿ ಹೆಸರಿನಲ್ಲಿ ಭ್ರಷ್ಟಾಚಾರ ನಡೆಸುವುದು ದೇಶದ ಉದ್ದಗಲಕ್ಕೂ ಕಾಣಬಹುದು. ಆದರೆ ಜಲಾಶಯಗಳನ್ನು ಸದಾ ಸುಸ್ಥಿತಿಯಲ್ಲಿಡುವುದು ಮತ್ತು ನೀರಿನ ಸದ್ಬಳಕೆಗಾಗಿ ನೀರಾವರಿಯ ಹಿತಕಾಯುವ ಶ್ರೇಣಿ ಎಂಬ ಹೊಣೆಗಾರಿಕೆ ಹೊರಲು ಯಾರೂ ತಯಾರಿಲ್ಲ. ಕರ್ನಾಟಕದ ಜಲಾಶಯಗಳ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ರಾಜ್ಯದ ಪ್ರಮುಖ 16 ಜಲಾಶಯಗಳಲ್ಲಿ ನೀರಿನ ಸಂಗ್ರಹ ಪ್ರಮಾಣ ಅವುಗಳ ಮೂಲ ಸಂಗ್ರಹ ಸಾಮರ್ಥ್ಯಕ್ಕಿಂತ ತೀವ್ರ ಪ್ರಮಾಣದಲ್ಲಿ ಕುಸಿದು ಹೋಗಿದೆ. ಕೇಂದ್ರ ಜಲ ಆಯೋಗ ಇತ್ತೀಚೆಗೆ ಬಿಡುಗಡೆ ಮಾಡಿದ ವರದಿಯ ಅನ್ವಯ 16 ಜಲಾಶಯಗಳಲ್ಲಿ ನೀರಿನ ಸಂಗ್ರಹ ಮಟ್ಟ ಕಳೆದ 10 ವರ್ಷಗಳ ಸರಾಸರಿಗೆ ಹೋಲಿಸಿದಾಗ ಶೇ 50 ಕ್ಕಿಂತಲೂ ಕಡಿಮೆ ಆಗಿದೆ. ಬಹುತೇಕ ಜಲಾಶಯಗಳಲ್ಲಿ ಹೂಳು ತುಂಬಿಕೊಂಡು ನೀರಿನ ಧಾರಣಾ ಶಕ್ತಿಯೂ ಕುಸಿದಿದೆ.

ಇತ್ತೀಚಿನ ವರ್ಷಗಳಲ್ಲಿ ಹವಾಮಾನ ಬದಲಾವಣೆ ಮತ್ತು ಮಳೆ ಸುರಿಯುವ ವಿಧಾನದಲ್ಲಿ (Rain pattern) ಆಗಿರುವ ವ್ಯತ್ಯಾಸದಿಂದಾಗಿಯೂ ಜಲಾಶಯಗಳಿಗೆ ಅಪಾರ ಪ್ರಮಾಣದಲ್ಲಿ ಹೂಳು ಬಂದು ಸೇರಿಕೊಳ್ಳುತ್ತಿದೆ. ಸಂಗ್ರಹ ಸಾಮರ್ಥ್ಯವೂ ಕುಸಿಯಲು ಇದೂ ಒಂದು ಮುಖ್ಯ ಕಾರಣ.

ಹವಾಮಾನ ಬದಲಾವಣೆ ಯಿಂದಾಗಿ ಒಂದು ತಿಂಗಳಲ್ಲಿ ಬೀಳುವ ಮಳೆ ಪ್ರಮಾಣ ಒಂದೇ ದಿನದಲ್ಲಿ ಬೀಳುತ್ತದೆ. ಒಂದು ದಿನದಲ್ಲಿ ಬೀಳುವ ಮಳೆ ಕೇವಲ 15 ನಿಮಿಷಗಳಲ್ಲಿ ಸುರಿಯುತ್ತದೆ. ಇದನ್ನು 'ವಿಪರೀತ ವಿದ್ಯಮಾನ' ಎಂದೇ ಕರೆಯಲಾಗುತ್ತದೆ. ಈ ರೀತಿ ಬಿದ್ದ ನೀರನ್ನು ಹಿಡಿದಿಟ್ಟುಕೊಳ್ಳುವುದು ಅತಿ ಮುಖ್ಯ. ಆದರೆ, ಅಂತಹ ವ್ಯವಸ್ಥೆ ನಮ್ಮಲ್ಲಿ ಇಲ್ಲ. ಯೋಜನೆಯೂ ಮಾಡುತ್ತಿಲ್ಲ. ಪರ್ಯಾಯ ಚಿಂತನೆಗಳೂ ಇಲ್ಲದ ಕಾರಣ ಮಳೆ ನೀರು ನೇರವಾಗಿ ಜಲಾಶಯಕ್ಕೆ ಹೋಗುತ್ತದೆ. ಹೆಚ್ಚುವರಿ ನೀರನ್ನು ಜಲಾಶಯದಿಂದ ಹೊರಗೆ ಬಿಡಲಾಗುತ್ತದೆ. ಮಳೆ ನೀರಿನ ಜತೆ ಬರುವ ಅಪಾರ ಪ್ರಮಾಣದ ಮಣ್ಣು ಮಾತ್ರ ಅಣೆಕಟ್ಟೆಗಳಲ್ಲಿ ಶೇಖರಣೆ ಆಗುತ್ತದೆ. ನೀರು ಸಮುದ್ರವನ್ನು ಸೇರುತ್ತದೆ.

2022ರಲ್ಲಿ ವಿಪರೀತ ಮಳೆ ಆದ ಸಂದರ್ಭದಲ್ಲಿ 'ಕೃಷ್ಣಾ'ದಿಂದ ನೆರೆಯ ಆಂಧ್ರ, ತೆಲಂಗಾಣ ರಾಜ್ಯಗಳಿಗೆ ನಿಗದಿತ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ 1,500 ಟಿಎಂಸಿ ಅಡಿ ಮತ್ತು ಕಾವೇರಿಯಿಂದ ತಮಿಳುನಾಡಿಗೆ 400 ಟಿಎಂಸಿ ಅಡಿ ನೀರನ್ನು ಹೊರಗೆ ಬಿಡಲಾಗಿತ್ತು. ಮುಂದಾಲೋಚನೆ ಮತ್ತು ಸೂಕ್ತ ಯೋಜನೆ ಇದ್ದಿದ್ದರೆ ಹೆಚ್ಚುವರಿ ನೀರನ್ನು ಕೆರೆ–ಕಟ್ಟೆಗಳಲ್ಲಿ ನಾವೇ ಸಂಗ್ರಹಿಸಿಟ್ಟುಕೊಳ್ಳಬಹುದಿತ್ತು. ರಾಜ್ಯದಲ್ಲಿ ಪ್ರತಿ ವರ್ಷ ವಾಡಿಕೆಯಷ್ಟು ಮಳೆಯಾದರೆ ಸುಮಾರು 3,500 ಟಿಎಂಸಿ ಅಡಿಗಳಷ್ಟು ನೀರು ಉತ್ಪತ್ತಿ ಆಗುತ್ತದೆ. ಆದರೆ, ರಾಜ್ಯದಲ್ಲಿ ವಿವಿಧ ಜಲಾಶಯಗಳು ಮತ್ತು ಕೆರೆ ಕುಂಟೆಗಳಲ್ಲಿ ಸುಮಾರು 1,200 ಟಿಎಂಸಿ ಅಡಿಯಷ್ಟು ನೀರು ಮಾತ್ರ ಸಂಗ್ರಹಿಸಬಹುದು. ಉಳಿದ ನೀರು 'ವ್ಯರ್ಥ'ವಾಗಿ ಹರಿದು ಹೋಗುತ್ತಿದೆ. ಅದನ್ನು ಸಂಗ್ರಹಿಸಿ ಬಳಸಿಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳಬೇಕು ಎನ್ನುತ್ತಾರೆ ಜಲ ತಜ್ಞರು.

> ರಾಜ್ಯದಲ್ಲಿ ತುಂಗಭದ್ರಾ ಜಲಾಶಯ ಬಿಟ್ಟರೆ ಬೇರೆ ಜಲಾಶಯಗಳಲ್ಲಿ ಹೂಳಿನ ಗಂಭೀರ ಸಮಸ್ಯೆ ತಲೆದೋರಿಲ್ಲ. ತುಂಗಭದ್ರಾಗೆ ಸಮಾನಾಂತರ ಜಲಾಶಯ ನಿರ್ಮಿಸಿ, ಹೂಳಿನಿಂದ 30 ರಿಂದ 40 ಟಿಎಂಸಿ ಅಡಿಗಳಷ್ಟು ನೀರು ಸಂಗ್ರಹಿಸಿಟ್ಟುಕೊಳ್ಳಲಾಗದೇ ವ್ಯರ್ಥವಾಗಿ ಹರಿದು ಹೋಗುತ್ತಿರುವುದನ್ನು ಸಮಾನಾಂತರ ಜಲಾಶಯದಲ್ಲಿ ಸಂಗ್ರಹಿಸಬಹುದು. ನಮ್ಮ ಹಂತದ ಅಧಿಕಾರಿಗಳ ಮಟ್ಟದಲ್ಲಿ ಮಾತುಕತೆ ಆಗಿದೆ. ಸಮಾನಾಂತರ ಜಲಾಶಯ ನಿರ್ಮಾಣದ ಅಗತ್ಯತೆಯನ್ನು ಮನವರಿಕೆ ಮಾಡಿದ್ದೇವೆ. ರಾಜಕಾರಣಿಗಳ ಹಂತದಲ್ಲಿ ಮಾತುಕತೆ ನಡೆಸಿ,ಪರಿಹಾರ ಕಂಡುಕೊಳ್ಳಬೇಕಿದೆ. ಇದಕ್ಕೆ ದಿನಾಂಕ, ಸಮಯ ನಿಗಮೆ ಮಾಡಲು ಸಿದ್ಧರಿದ್ದೇವೆ. ರಾಜಕಾರಣಿಗಳು ಮುಂದಕ್ಕೆ ಬರಬೇಕು ಅಷ್ಟೆ.
>
> **ರಾಕೇಶ್ ಸಿಂಗ್**
> ಹೆಚ್ಚುವರಿ ಮುಖ್ಯಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ

ಆದರೆ, ರಾಜ್ಯದ ವಿವಿಧ ಜಲಾಶಯಗಳಲ್ಲಿ ಹೂಳಿನ ಪ್ರಮಾಣ ಎಷ್ಟು ಇದೆ ಎಂಬ ಕುರಿತು ಗಂಭೀರ ಅಧ್ಯಯನವನ್ನು ಇತ್ತೀಚಿನ ವರ್ಷಗಳಲ್ಲಿ ನಡೆಸಿಯೇ ಇಲ್ಲ. ಹೀಗಾಗಿ ನಿಖರ ಮಾಹಿತಿಗಳು ಲಭ್ಯವಿಲ್ಲ. ಜಲಸಂಪನ್ಮೂಲ ಇಲಾಖೆಯಲ್ಲಿ ಲಭ್ಯ ಇರುವ ಮಾಹಿತಿ ಬಹುಪಾಲು 2009– 2010 ಸಾಲಿಗೂ ಹಿಂದಿನದು. ಜಲಾಶಯಗಳಲ್ಲಿ ಕ್ರಮೇಣ ನೀರಿನ ಜಾಗವನ್ನು ಹೂಳು ಆಕ್ರಮಿಸಿಕೊಳ್ಳುತ್ತಿದೆ ಎನ್ನುವುದು ಕೇಂದ್ರ ಜಲ ಆಯೋಗದ ಮಾಹಿತಿ. ರಾಜ್ಯದ ಜಲಸಂಪನ್ಮೂಲ ಇಲಾಖೆ ಮತ್ತು ನೀರಾವರಿ ನಿಗಮಗಳು ವಿವಿಧ ಯೋಜನೆಗಳಿಗೆ ಟೆಂಡರ್ ಕೊಡುವುದು ಮತ್ತು ಬಿಲ್ ಪಾವತಿಗಷ್ಟೇ ಸೀಮಿತವಾಗಿವೆ. ರಾಜ್ಯದಲ್ಲಿ ಲಭ್ಯವಿರುವ ನೀರನ್ನು ಪರಿಣಾಮಕಾರಿಯಾಗಿ ಹೇಗೆ ಸಂಗ್ರಹಿಸಿಡಬೇಕು, ನಾಲೆಯ ಕಟ್ಟ ಕಡೆಯ ರೈತನ ಹೊಲಕ್ಕೆ ಪೂರೈಕೆ ಮಾಡುವುದು ಹೇಗೆ ಎಂಬ ಬಗ್ಗೆ ಜಲಸಂಪನ್ಮೂಲ ಇಲಾಖೆ ಗಂಭೀರ ಚಿಂತನೆ ನಡೆಸುತ್ತಿಲ್ಲ. ಸಾವಿರಾರು ಕೋಟಿ ಮೊತ್ತದ ಟೆಂಡರ್ ಕೊಡುವುದಕ್ಕೆ ಇರುವ ಆಸಕ್ತಿ, ಜಲಾಶಯಗಳು ಮತ್ತು ಅಣೆಕಟ್ಟೆ ನಿರ್ವಹಣೆ, ಪರ್ಯಾಯ ವಿಧಾನಗಳ ಮೂಲಕ ನೀರಿನ ಸಂಗ್ರಹ, ಹೂಳಿನ ನಿರ್ವಹಣೆ ಬಗ್ಗೆ ಅಧಿಕಾರಿಗಳು ತಲೆ ಕೆಡಿಸಿಕೊಳ್ಳುತ್ತಿಲ್ಲ ಎನ್ನುತ್ತಾರೆ ತಜ್ಞರೊಬ್ಬರು.

'ಜಲಾಶಯ ನಿರ್ಮಾಣ ಆದ ಮೇಲೆ ಅದರ ನಿರ್ವಹಣೆಯ ಜವಾಬ್ದಾರಿ ಸಂಪೂರ್ಣ ರಾಜ್ಯಗಳಿಗೆ ಸಂಬಂಧಪಟ್ಟಿದ್ದು. ಆದರೆ, ಆ ಬಗ್ಗೆ ಅಧಿಕಾರಿಗಳು ಯೋಜನೆ ರೂಪಿಸುವ ಮಾತು ಹಾಗಿರಲಿ, ಕನಿಷ್ಠ ಯೋಚಿಸುವವರೂ ಇಲ್ಲ. ಅಣೆಕಟ್ಟೆ ಸುರಕ್ಷತೆ ಪರಿಶೀಲನೆಗೆ ಕೇಂದ್ರ ತಂಡ ಬರುವಾಗಲಷ್ಟೇ ಆಯಾ ರಾಜ್ಯಗಳ ಅಧಿಕಾರಿಗಳು 'ಗಡಿಬಿಡಿ' ತೋರಿಸುತ್ತಾರೆ ಎಂದು ಬೇಸರಿಸುತ್ತಾರೆ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಕೇಂದ್ರದ ಮಾಜಿ ನಿರ್ದೇಶಕ ಹಾಗೂ ಜಲತಜ್ಞ ಡಾ.ಜಿ.ಎಸ್.ಶ್ರೀನಿವಾಸ ರೆಡ್ಡಿ.

2050 ರ ವೇಳೆಗೆ ಪರ್ಯಾಯ ವ್ಯವಸ್ಥೆಗಳ ಬಗ್ಗೆ ಯೋಚಿಸದೇ ಹೂಳಿನ ಪ್ರಮಾಣ ಇನ್ನೂ ಹೆಚ್ಚಾಗಲು ಬಿಟ್ಟರೆ, ಕೃಷಿ ಮತ್ತು ಕುಡಿಯುವ ಉದ್ದೇಶಕ್ಕೆ ಅಗತ್ಯವಿರುವಷ್ಟು ನೀರು ಸಿಗುವುದಿಲ್ಲ. ಬಿತ್ತಿದ ಬೀಜ ನೀರಿಲ್ಲದೇ ಒಣಗಬಹುದು, ಇಲ್ಲವೇ ಮಳೆಯನ್ನೇ ಆಶ್ರಯಿಸಿ ಕೃಷಿ ಮಾಡಬೇಕಾಗುತ್ತದೆ. ಆಹಾರ ಭದ್ರತೆಗೆ ಖಾತರಿಯೂ ಇಲ್ಲವಾಗುತ್ತದೆ ಎಂದು ಜೆ. ಹರ್ಷ ಅಭಿಪ್ರಾಯಪಡುವರು.

ಹೂಳೆತ್ತಲು ಸಾಧ್ಯವೇ?

'ಜಲಾಶಯಗಳಿಂದ ಹೂಳೆತ್ತಲು ಅಪಾರ ಪ್ರಮಾಣದ ಹಣ ಬೇಕು. ಅಷ್ಟೇ ಅಲ್ಲ, ತೆರವು ಮಾಡಿದ ಹೂಳನ್ನು ಎಲ್ಲಿ ಹಾಕಬೇಕು? ಅದರ ಸಾಗಣೆ ಹೇಗೆ? ಕಾಲುವೆಗಳಲ್ಲಿರುವ ಹೂಳನ್ನೂ ತೆಗೆಯಬೇಕು... ಹೀಗೆ ಹಲವು ಸವಾಲುಗಳು ಇವೆ' ಎಂದು ಶ್ರೀನಿವಾಸ ರೆಡ್ಡಿ ವಿವರಿಸಿದರು.

'ತುಂಗಭದ್ರಾದಂತಹ ದೊಡ್ಡ ಜಲಾಶಯಗಳಲ್ಲಿ ಹೂಳು ತೆಗೆಯುವುದಕ್ಕಿಂತ ಅವುಗಳಿಗೆ ಸಮತೋಲನ ಜಲಾಶಯಗಳನ್ನು ನಿರ್ಮಿಸುವುದೇ ಸೂಕ್ತ. ಕೆಲವು ದೇಶಗಳಲ್ಲಿ ನೀರು ಜಲಾಶಯಕ್ಕೆ ಬರುವುದಕ್ಕೆ ಮೊದಲೇ ಹೂಳನ್ನು ತಡೆಯುವ ಕೆಲಸ ಮಾಡುತ್ತಾರೆ. ಕೆಸರನ್ನು ತೆಗೆಯುವ ತಂತ್ರಜ್ಞಾನ ನಮ್ಮಲ್ಲಿ ಇಲ್ಲ. ನಮ್ಮಲ್ಲೂ ಕೂಡ ಮೂಲದಲ್ಲೇ ಮಣ್ಣು ನದಿಗೆ ಸೇರುವುದನ್ನು (ಸಿಲ್ಟ್ ಟ್ರ್ಯಾಪ್) ತಡೆಯಬೇಕು. ಪ್ರವಾಹದ ಸಂದರ್ಭದಲ್ಲಿ ನೀರು ಮಣ್ಣನ್ನು ತನ್ನ ಒಡಲಲ್ಲಿ ಹೊತ್ತು ಸಾಗುತ್ತದೆ. ಅದನ್ನು ಅಲ್ಲೇ ತಡೆದು, ಆ ಮಣ್ಣನ್ನು ಬೇರೆ ಉದ್ದೇಶಗಳಿಗೂ ಬಳಸಬಹುದು. ಇಟ್ಟಿಗೆ, ಹೆಂಚು ಸೇರಿದಂತೆ ಮಣ್ಣಿನ ಉತ್ಪನ್ನಗಳನ್ನು ತಯಾರಿಸಲು ಉಪಯೋಗಿಸಬಹುದು' ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಹೆಚ್ಚು ನೀರು ಸಂಗ್ರಹಕ್ಕೆ ಸಮತೋಲನದಂತಹ ಜಲಾಶಯಗಳು ಮತ್ತು ಹೆಚ್ಚಿನ ಸಂಖ್ಯೆಯ ಸಣ್ಣ ಅಣೆಕಟ್ಟೆಗಳನ್ನೂ ನಿರ್ಮಿಸಬೇಕು. ಜಲಾಶಯಗಳಿಂದ ಕೆಸರು ತುಂಬಿದ ನೀರನ್ನು ಕಡೆಗೋಲಿನಿಂದ ಮಜ್ಜಿಗೆ ಕಡೆಯುವ ಮಾದರಿಯಲ್ಲಿ ಕಡೆದು ಪ್ರತ್ಯೇಕ ತೂಬಿನ ಮೂಲಕ ಹೊರಬಿಡಬಹುದು. ಈ ವಿಧಾನದಿಂದಲೂ ಅಣೆಕಟ್ಟೆಗಳಲ್ಲಿ ಹೂಳು ಕಡಿಮೆ ಮಾಡಬಹುದು ಎನ್ನುತ್ತಾರೆ ಶ್ರೀನಿವಾಸರೆಡ್ಡಿ.

ತುಂಗಭದ್ರೆಯ ಸಂಕಷ್ಟವೇನು?

ರಾಜ್ಯದಲ್ಲಿ ಅತಿ ಹೆಚ್ಚು ಹೂಳು ತುಂಬಿರುವ ಜಲಾಶಯಗಳಲ್ಲಿ ತುಂಗಭದ್ರಾ ಜಲಾಶಯ ಮುಂಚೂಣಿಯಲ್ಲಿದೆ. ಇದು ಅಂತರರಾಜ್ಯ ನೀರು ಹಂಚಿಕೆಗೆ ಒಳಪಟ್ಟಿದ್ದರೂ, ವಿವಾದವೇ ಇಲ್ಲದ ಮಾದರಿ ನೀರಾವರಿ ಯೋಜನೆಯೂ ಹೌದು. ಮುಂಗಾರು, ಹಿಂಗಾರು ಲೆಕ್ಕ ಹಾಕಿದರೆ ಇಲ್ಲಿ ಸರಾಸರಿ 212 ಟಿಎಂಸಿ ಅಡಿ ನೀರು ಸಿಗುತ್ತದೆ. ಲಭ್ಯ ನೀರಿನಲ್ಲಿ ಶೇ 65ರಷ್ಟು (139 ಟಿಎಂಸಿ ಅಡಿ) ಕರ್ನಾಟಕಕ್ಕೆ, ಶೇ 35 ರಷ್ಟು (73 ಟಿಎಂಸಿ ಅಡಿ) ಆಂಧ್ರಕ್ಕೆ ಎಂಬ ಸರಳ ಸಿದ್ಧ ಸೂತ್ರದಲ್ಲಿ ಕಳೆದ 70 ವರ್ಷಗಳಿಂದಲೂ ನೀರು ಹಂಚಿಕೆ ಆಗುತ್ತಿದೆ.

ಈ ಜಲಾಶಯದಲ್ಲಿ ಸದ್ಯ 28 ರಿಂದ 30 ಟಿಎಂಸಿ ಅಡಿಯಷ್ಟು ಹೂಳು ತುಂಬಿದೆ. ಹೀಗಾಗಿ ನೀರು ಸಂಗ್ರಹ ಪ್ರಮಾಣ 133 ಟಿಎಂಸಿ ಅಡಿಯಿಂದ 105 ಟಿಎಂಸಿ ಅಡಿಗೆ ಕುಸಿದಿದೆ ಎಂದು ಅಂದಾಜಿಸಲಾಗಿದೆ. 1 ಟಿಎಂಸಿ ಅಡಿ ಹೂಳು ಅಂದರೆ 50 ಲಕ್ಷ ಲಾರಿ ಲೋಡ್‌ನಷ್ಟಾಗುತ್ತದೆ. ಒಂದು ಲೋಡ್ ಹೂಳನ್ನು ಸಾಗಿಸಲು ಕನಿಷ್ಠ ₹1 ಸಾವಿರ ಖರ್ಚಿನ ಲೆಕ್ಕ ಇಟ್ಟುಕೊಂಡರೂ, ₹500 ಕೋಟಿ ಹಾಗೂ 28 ಟಿಎಂಸಿ ಅಡಿ ಹೂಳೆತ್ತಲು ₹14,000 ಕೋಟಿ ಹಣ ಬೇಕು. ಪ್ರತಿ ವರ್ಷ 0.45 ಟಿಎಂಸಿ ಅಡಿಯಷ್ಟು ಹೂಳು ಜಲಾಶಯಕ್ಕೆ ಸೇರುತ್ತಲೇ ಇರುತ್ತದೆ. ಹೂಳು ತೆಗೆಯುವುದು ಶಾಶ್ವತ ಪರಿಹಾರ ಆಗುವುದೂ ಇಲ್ಲ.

'ಮಳೆಗಾಲದಲ್ಲಿ ಎರಡೂ ರಾಜ್ಯಗಳ ಹಕ್ಕಿನ ನೀರು ಜಲಾಶಯದಿಂದ ನದಿಗೆ ಹರಿದು ಹೋಗುವುದನ್ನು ತಪ್ಪಿಸಬೇಕಿರುವುದು ತುರ್ತು ಅಗತ್ಯ. 9 ವರ್ಷ ಬಿಟ್ಟರೆ ಉಳಿದ 61 ವರ್ಷಗಳಲ್ಲಿ ವಾರ್ಷಿಕ ಸರಾಸರಿ 200 ರಿಂದ 300 ಟಿಎಂಸಿ ಅಡಿಯಷ್ಟು ನೀರು ನದಿಗೆ ಹರಿದು ಹೋಗಿದೆ. ಇದನ್ನು ಬಳಸಿಕೊಳ್ಳಬೇಕಿದ್ದರೆ ಸಮತೋಲಿತ ಜಲಾಶಯ ನಿರ್ಮಾಣ, ಪರ್ಯಾಯ ಪ್ರವಾಹ ಕಾಲುವೆ ನಿರ್ಮಾಣ ಆಗಬೇಕು. ಜತೆಗೆ ಹೂಳನ್ನೂ ತೆಗೆಯಬೇಕು. ಈ ಮೂರೂ ಕೆಲಸ ಭಾರಿ ವೆಚ್ಚದಾಯಕ ನಿಜ. ಆದರೆ ನೀರನ್ನು ಬಳಸಿಕೊಳ್ಳಲು ಇದನ್ನು ಮಾಡುವುದರ ಹೊರತು ಬೇರೆ ದಾರಿಯೇ ಇಲ್ಲ' ಎನ್ನುತ್ತಾರೆ ತುಂಗಭದ್ರಾ ಮಂಡಳಿಯ ನಿವೃತ್ತ ಅಧೀಕ್ಷಕ ಎಂಜಿನಿಯರ್ ಗೋವಿಂದಲು.

ಯಾವ ಜಲಾಶಯಗಳಲ್ಲಿ ಎಷ್ಟು ಹೂಳು

ಜಲಾಶಯ	ನೀರಿನ ಸಂಗ್ರಹ (ಟಿಎಂಸಿಗಳಲ್ಲಿ)	ತುಂಬಿರುವ ಹೂಳು (ಕ್ಯೂಬಿಕ್ ಮೀಟರ್‌ಗಳಲ್ಲಿ)
ತುಂಗಭದ್ರಾ	100.855	28 ರಿಂದ30
ನಾರಾಯಣಪುರ	32.313	10.157
ಆಲಮಟ್ಟಿ	123.081	5.309
ಕೃಷ್ಣರಾಜಸಾಗರ	49.452	3.318
ಮಲಪ್ರಭಾ	37.73	2.744
ಹೇಮಾವತಿ	37.103	2.689
ಭದ್ರಾ	71.535	2.152
ಹಾರಂಗಿ	8.50	0.833
ಕಬಿನಿ	19.52	0.814

(ಇದು 2010 ಕ್ಕೂ ಮೊದಲು ನಡೆದ ಸಮೀಕ್ಷೆಯ ಮಾಹಿತಿ. ಆ ಬಳಿಕ ಎಲ್ಲ ಜಲಾಶಯಗಳಲ್ಲಿ ಹೂಳಿನ ಸಮೀಕ್ಷೆ ನಡೆದಿಲ್ಲ)

ಸದ್ಯದ ಸುಲಭ ಪರಿಹಾರ

ಈ ಮೂರು ಪರಿಹಾರ ಮಾರ್ಗಗಳ ಪೈಕಿ ಕಡಿಮೆ ವೆಚ್ಚದಲ್ಲಿ ಆಗಬಹುದಾದ ಯೋಜನೆ ಎಂದರೆ ಬಲದಂಡೆಯಲ್ಲಿ ಪರ್ಯಾಯ ಪ್ರವಾಹ ಕಾಲುವೆ ನಿರ್ಮಿಸುವುದು. ಆಂಧ್ರದ ಪೆನ್ನಾರ್ ಅಚ್ಚುಕಟ್ಟು ಪ್ರದೇಶದಲ್ಲಿ ಈಗಾಗಲೇ 20 ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯದ ಜಲಾಶಯ ಇರುವ ಕಾರಣ ಅಲ್ಲಿಗೆ ಪ್ರವಾಹದ ನೀರನ್ನು ಹರಿಸಿದರೆ ಒಟ್ಟು ನೀರಿನ ಪಾಲಿನಂತೆ ರಾಜ್ಯಕ್ಕೂ ಅನುಕೂಲವೇ. ಆಂಧ್ರ ಸರ್ಕಾರ 1985 ರಲ್ಲೇ ಮುಂದಿಟ್ಟ ಪ್ರಸ್ತಾವ ಇದು.

ಏನೂ ಖರ್ಚಿಲ್ಲದ ಸರಳ ಪರಿಹಾರ ಎಂದರೆ ಮುಂಗಾರು ಮಳೆ ಆರಂಭವಾಗುತ್ತಲೇ, ತುಂಗಭದ್ರಾ ಅಣೆಕಟ್ಟೆಯಲ್ಲಿ ನೀರು 1,585 ಅಡಿ ತಲುಪಿದಾಗ ಎಡದಂಡೆ ಕಾಲುವೆಗೆ ನೀರು ಹರಿಸುವುದು ಹಾಗೂ 1,600 ಅಡಿಗೆ ತಲುಪಿದಾಗ ಬಲದಂಡೆಯ ಕಾಲುವೆಗಳಿಗೆ ನೀರು ಹರಿಸುವುದು. ಅಣೆಕಟ್ಟೆಯ ಗರಿಷ್ಠ ಮಟ್ಟ 1,633 ಅಡಿ. ಇದರಿಂದ ಎರಡೂ ರಾಜ್ಯಗಳಿಗೆ ಅಣೆಕಟ್ಟು ತುಂಬುತ್ತಿರುವ ಹಂತದಲ್ಲೇ 6 ರಿಂದ 8 ಟಿಎಂಸಿ ಅಡಿಯಷ್ಟು ನೀರು ಬಳಕೆಯಾದಂತಾಗುತ್ತದೆ, ಕೃಷಿ ಚಟುವಟಿಕೆಗಳೂ ಜುಲೈನಲ್ಲೇ ಆರಂಭವಾಗುವುದಕ್ಕೆ ನೆರವಾಗುತ್ತದೆ ಎಂಬ ಸಲಹೆಯನ್ನೂ ನೀಡುತ್ತಾರೆ ಗೋವಿಂದಲು.

ಬೃಹತ್ ಸಮಸ್ಯೆ ಮತ್ತು ಸವಾಲಾಗಿ ಪರಿಣಮಿಸುತ್ತಿರುವ ಜಲಾಶಯಗಳ ಹೂಳು ನಿರ್ವಹಣೆ ಬಗ್ಗೆ ತಕ್ಷಣದಲ್ಲೇ ವಿಸ್ತೃತ ಕಾರ್ಯಯೋಜನೆ ರೂಪಿಸಬೇಕು. ಮಣ್ಣು ನೀರಿನೊಂದಿಗೆ ಹರಿದುಬರುವುದನ್ನು ಮೂಲದಲ್ಲೇ ತಡೆಬೇಕು. ಈಗ ಜಲಾಶಯಗಳಲ್ಲಿರುವ ಹೂಳು ತೆರವು ಮಾಡಿದರೆ, ಅದರ ಪ್ರಯೋಜನ ಹೇಗೆ ಪಡೆಯಬಹುದು ಎಂಬ ಬಗ್ಗೆಯೂ ಗಮನಹರಿಸಲೇಬೇಕಾಗಿದೆ. ಇಲ್ಲವಾದಲ್ಲಿ ಭವಿಷ್ಯದಲ್ಲಿ ದೊಡ್ಡ ದುರಂತಗಳಿಗೆ ತುತ್ತಾಗಬೇಕಾಗುತ್ತದೆ ಎಂಬ ತಜ್ಞರ ಎಚ್ಚರಿಕೆಯ ಮಾತುಗಳು ಅತಿಶಯೋಕ್ತಿ ಎನಿಸದು.

ಮಾಹಿತಿ: ಎಂ.ಎನ್.ಯೋಗೇಶ್, ಇಮಾಮ್ ಹುಸೇನ್ ಗೂಡನವರ, ಬಿ.ಜಿ. ಪ್ರವೀಣಕುಮಾರ

ಪರೀಕ್ಷೆಗೆ ಏಕೈಕ ವಿದ್ಯಾರ್ಥಿನಿ 24 ಸಿಬ್ಬಂದಿ ನಿಯೋಜನೆ

ಮಹಾಲಿಂಗಪುರ (ಬಾಗಲಕೋಟೆ): ಪಟ್ಟಣದ ಕೆಎಲ್ಇ ಸಂಸ್ಥೆಯ ಎಸ್‌ಸಿಪಿ ಪಿಯು ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಶುಕ್ರವಾರ ಹಿಂದಿ ಪರೀಕ್ಷೆಗೆ ಏಕೈಕ ವಿದ್ಯಾರ್ಥಿನಿ ಆಸ್ಮಾ ಅಮೀರಸಾಬ ಕಡಿವಾಳ ಹಾಜರಾದರು. ಪರೀಕ್ಷಾ ಕರ್ತವ್ಯಕ್ಕೆ 24 ಸಿಬ್ಬಂದಿ ನಿಯೋಜಿಸಲಾಗಿತ್ತು.

ಚಿಮ್ಮಡ ಗ್ರಾಮದ ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ಆಸ್ಮಾ ಅಮೀರಸಾಬ ಕಡಿವಾಲ ವಾಣಿಜ್ಯ ವಿಭಾಗದಲ್ಲಿ ಪ್ರವೇಶ ಪಡೆದು ಕನ್ನಡ ಭಾಷಾ ವಿಷಯದ ಬದಲು ಹಿಂದಿ ಭಾಷೆ ಆಯ್ಕೆ ಮಾಡಿ ಪರೀಕ್ಷೆ ಬರೆದರು.

ಪರೀಕ್ಷಾ ಮುಖ್ಯಸ್ಥ, ಜಂಟಿ ಮುಖ್ಯಸ್ಥ, ಕಚೇರಿ ಅಧೀಕ್ಷಕಿ, ಉತ್ತರ ಪತ್ರಿಕೆ ಪಾಲಕ, ಸಿಟ್ಟಿಂಗ್ ಸ್ಕ್ವಾಡ್, ಉಪತಹಶೀಲ್ದಾರ್, ಎಸ್ಕಾರ್ಟ್ಸ್, ಚಾಲಕ, ಆರೋಗ್ಯ ಇಲಾಖೆ, ಕೊಠಡಿ ಮೇಲ್ವಿಚಾರಕ, ಕಚೇರಿ ಸಿಬ್ಬಂದಿ, ಸಿಪಾಯಿಗಳು, ವಾಚಮನ್ ಹಾಗೂ ಪೊಲೀಸ್ ಕರ್ತವ್ಯ ನಿರ್ವಹಿಸಿದರು.

ಕಾಡಾನೆ ದಾಳಿ: ವ್ಯಕ್ತಿ ಸಾವು

ಮಡಿಕೇರಿ: ತಾಲ್ಲೂಕಿನ ಕಕ್ಕಬ್ಬೆ ಸಮೀಪದ ನಾಲಾಡಿ ಗ್ರಾಮದ ಕಂಬೆಯಂಡ ರಾಜದೇವಯ್ಯ ಅವರು ಶನಿವಾರ ತಮ್ಮ ಕಾಫಿ ತೋಟದಲ್ಲಿ ನಡೆದುಕೊಂಡು ಹೋಗುವಾಗ (59) ಕಾಡಾನೆ ದಾಳಿಗೆ ಸಿಲುಕಿ ಮೃತಪಟ್ಟರು.

ಈ ವರ್ಷ ಇಲ್ಲಿಯವರೆಗೆ ಜಿಲ್ಲೆಯಲ್ಲಿ ಕಾಡಾನೆ ದಾಳಿಗೆ ನಾಲ್ವರು ಸಿಲುಕಿ ಮೃತಪಟ್ಟಿದ್ದಾರೆ. ಅವರಲ್ಲಿ ಮೂವರು ಮಾರ್ಚ್ ತಿಂಗಳಿನಲ್ಲೇ ದಾಳಿಗೆ ಸಿಲುಕಿದ್ದು, ಸ್ಥಳೀಯರಲ್ಲಿ ಆತಂಕ ಹೆಚ್ಚಿಸಿದೆ.

ಅಟ್ಟಿಸಿಕೊಂಡು ಬಂದ ಆನೆ ಸೊಂಡಿಲಿನಿಂದ ಹೊಡೆದ ಪರಿಣಾಮ ತೀವ್ರವಾಗಿ ಗಾಯಗೊಂಡು ಅವರು ಸ್ಥಳದಲ್ಲೆ ಮೃತಪಟ್ಟರು. ಅವರೊಂದಿಗಿದ್ದ ನಾಯಿ ವಾಪಸ್ ಮನೆಗೆ ಬಂದ ಬಳಿಕ ಅನುಮಾನಗೊಂಡ ಕುಟುಂಬದವರು ಹುಡುಕಾಡಿದಾಗ ಮೃತದೇಹ ಪತ್ತೆಯಾಗಿದೆ. ಅವರ ಸೋದರ ಸಹ 8 ತಿಂಗಳ ಹಿಂದೆ ಕಾಡಾನೆ ದಾಳಿಯಿಂದ ಗಾಯಗೊಂಡಿದ್ದರು.

ಘಟನೆಯಿಂದಾಗಿ ಸ್ಥಳೀಯರು, ಅರಣ್ಯಾಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, 'ಕಾಡಾನೆಗಳು ನಿರಂತರ ದಾಳಿ ನಡೆಸುತ್ತಿದ್ದರೂ ಕ್ರಮಗಳನ್ನು ಕೈಗೊಂಡಿಲ್ಲ' ಎಂದು ದೂರಿದರು.

ಸ್ಥಳಕ್ಕೆ ಭೇಟಿ ನೀಡಿದ್ದ ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, 'ಕಾಡಾನೆಗಳನ್ನು ಕಾಡಿಗಟ್ಟಲು ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

'ಆನೆಗಳನ್ನು ಹುಡುಕುತ್ತಿದ್ದು, ಪತ್ತೆಯಾದ ಕೂಡಲೇ ಕಾಡಿಗೆ ಓಡಿಸಲಾಗುವುದು. ಕಾಡಾನೆ ಸೆರೆ ಹಿಡಿಯಲು ಪ್ರಸ್ತಾವ ಸಲ್ಲಿಸಲಾಗುವುದು' ಎಂದು ಡಿಸಿಎಫ್ ಭಾಸ್ಕರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ನಾಗರಹೊಳೆ: ಹುಲಿ ಸಾವು

ಹುಣಸೂರು (ಮೈಸೂರು ಜಿಲ್ಲೆ): 'ನಾಗರಹೊಳೆ ಹುಲಿ ಸಂರಕ್ಷಿತಾರಣ್ಯದ ಆನೆಚೌಕೂರು ವಲಯದಲ್ಲಿ 12ರಿಂದ 13 ವಯಸ್ಸಿನ ಹೆಣ್ಣು ಹುಲಿ ವಯೋಸಹಜವಾಗಿ ಸಾವನ್ನಪ್ಪಿರುವುದು ಶನಿವಾರ ಪತ್ತೆಯಾಗಿದೆ' ಎಂದು ಹುಲಿ ಯೋಜನಾ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ ತಿಳಿಸಿದ್ದಾರೆ.

'ಗಣಗೂರು ಗಸ್ತಿನ ತಾವರೆಕೆರೆ ಅರಣ್ಯ ಪ್ರದೇಶದಲ್ಲಿ ಹುಲಿಯ ಮೃತದೇಹ ಪತ್ತೆಯಾಗಿದ್ದು, ಡಾ.ರಮೇಶ್, ಡಾ.ಭವಿಷ್ಯ ಕುಮಾರ್ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಸ್ಥಳದಲ್ಲೇ ಅಂತ್ಯ ಸಂಸ್ಕಾರ ನಡೆಸಲಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ಥಳಕ್ಕೆ ಎಸಿಎಫ್ ದಯಾನಂದ್, ರಾಷ್ಟ್ರೀಯ ಹುಲಿ ಪ್ರಾಧಿಕಾರದ ನಾಮ ನಿರ್ದೇಶನ ಸದಸ್ಯರಾದ ಬೋಸನ್ ಮಾದಪ್ಪ, ತಮ್ಮಯ್ಯ, ಗ್ರಾ.ಪಂ.ಸದಸ್ಯ ನವೀನ್ ಮತ್ತು ದೇವರಾಜ್ ಹಾಜರಿದ್ದರು.

ರಂಭಾಪುರಿ ಜಾತ್ರೆಯಲ್ಲಿ ಅಂಗಡಿ ಮುಂಗಟ್ಟುಗಳು ಹಾರಿ ಹೋಗಿರುವುದು

ರಾಜ್ಯದ ಕೆಲವೆಡೆ ಭರ್ಜರಿ ಮಳೆ

ಚಿಕ್ಕಮಗಳೂರು/ ಹುಬ್ಬಳ್ಳಿ: ಚಿಕ್ಕಮಗಳೂರು ಜಿಲ್ಲೆಯ ಕಳಸ, ಬಾಳೆಹೊನ್ನೂರು, ಆಲ್ದೂರು ಸುತ್ತಮುತ್ತ ಶನಿವಾರ ಸಂಜೆ ಬಿರುಸಿನ ಮಳೆಯಾಗಿದ್ದು, ಸುತ್ತಮುತ್ತಲ ಪ್ರದೇಶಕ್ಕೆ ತಂಪೆರೆದಿದೆ.

ಬಿರುಗಾಳಿ, ಗುಡುಗು, ಸಿಡಿಲಿನ ಆರ್ಭಟದ ನಡುವೆ ಒಂದು ಗಂಟೆಗೂ ಹೆಚ್ಚು ಕಾಲ ಮಳೆ ಸುರಿದಿದ್ದು, ಬೇಸಿಗೆಯ ಕಾವು ಕಡಿಮೆ ಆಗಿದೆ. ಕಾಫಿ, ಮೆಣಸು, ಏಲಕ್ಕಿ ಮತ್ತು ಟೀ ತೋಟಗಳು ನೀರಿನ ಕೊರತೆಯಿಂದ ಒಣಗುತ್ತಿದ್ದವು. ಝರಿ, ತೊರೆಗಳು ಬತ್ತಿ ಹೋಗಿದ್ದವು. ಅಂತರ್ಜಲವೂ ಪಾತಾಳ ಸೇರಿತ್ತು. ಭರ್ಜರಿ ಮಳೆಯಾಗಿರುವುದು ರೈತರು, ಬೆಳೆಗಾರರ ಮೊಗದಲ್ಲಿ ಸಂತಸ ಮೂಡಿದೆ. ಬಾಳೆಹೊನ್ನೂರು ಸಮೀಪ ಎರಡು ಮನೆಗಳ ಮೇಲೆ ಮರ ಬಿದ್ದು ಹಾನಿಯಾಗಿದ್ದರೆ, ರಂಭಾಪುರಿ ಜಾತ್ರೆಯಲ್ಲಿದ್ದ ಅಂಗಡಿ–ಮುಂಗಟ್ಟುಗಳು ಗಾಳಿಯ ರಭಸಕ್ಕೆ ಹಾರಿ ಹೋಗಿವೆ.

ಬಾಗಲಕೋಟೆ, ವಿಜಯಪುರದಲ್ಲಿ ಮಳೆ: ಬಾಗಲಕೋಟೆ ಜಿಲ್ಲೆಯ ಹುನಗುಂದ, ಚಿತ್ತವಾಡಗಿ, ಯಡಹಳ್ಳಿ ಗ್ರಾಮದಲ್ಲಿ ಮತ್ತು ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿಯಲ್ಲಿ ಕೆಲ ಹೊತ್ತು ಮಳೆಯಾಯಿತು. ಧಾರವಾಡ ತುಂತುರು ಮಳೆಯಾಯಿತು.

ಗುಂಡಣ್ಣ

25 ವರ್ಷಗಳ ಹಿಂದೆ
ಬುಧವಾರ, 24-3-1999

● **ಬಡ್ತಿ ಮೀಸಲಾತಿ ಪ್ರಶ್ನೆ: ಸರ್ವಪಕ್ಷ ಸಭೆಗೆ ಒಪ್ಪಿಗೆ**

ಬೆಂಗಳೂರು, ಮಾ. 23– ವಿಧಾನಸಭಾಧ್ಯಕ್ಷರ ನೇತೃತ್ವದಲ್ಲಿ ಸರ್ವಪಕ್ಷಗಳ ಸಭೆಯನ್ನು ಇನ್ನೆರಡು ದಿನಗಳಲ್ಲಿ ಕರೆದು ಬಡ್ತಿ ಮೀಸಲಾತಿಗೆ ಸಂಬಂಧಿಸಿದ ವಿವಾದವನ್ನು ಬಗೆಹರಿಸುವುದಾಗಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ವಿಧಾನಸಭೆಯಲ್ಲಿ ಭರವಸೆ ನೀಡಿದರು.

ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು 69ನೇ ನಿಯಮದ ಪ್ರಕಾರ ಈ ವಿಷಯವನ್ನು ಪ್ರಸ್ತಾಪಿಸಲು ವಿಧಾನಸಭಾಧ್ಯಕ್ಷ ರಮೇಶ್ ಕುಮಾರ್ ಅವರು ಅವಕಾಶ ಮಾಡಿಕೊಟ್ಟಿದ್ದರು. ಖರ್ಗೆ ಜತೆ ಬಿಜೆಪಿ ಕೆ.ಎಸ್. ಈಶ್ವರಪ್ಪ ಸೇರಿದಂತೆ ಕೆಲವರು ಮಾತನಾಡಿದರು.

50 ವರ್ಷಗಳ ಹಿಂದೆ
ಭಾನುವಾರ, 24-3-1974

● **ಮೈಸೂರು ಬಳಿ ಬೃಹತ್ ಟೈರು ಕಾರ್ಖಾನೆಗೆ ಶಂಕುಸ್ಥಾಪನೆ**

ಮೈಸೂರು, ಮಾ. 23– ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು 21 ಕೋಟಿ ರೂ. ವೆಚ್ಚದ ವಿಕ್ರಾಂತ್ ಟೈರು ಕಾರ್ಖಾನೆಯ ಶಂಕುಸ್ಥಾಪನೆಯನ್ನು ಇಂದು ನೆರವೇರಿಸಿ ಬೃಹತ್ ಟೈರು ಕಾರ್ಖಾನೆ ಸ್ಥಾಪಿಸುವ ಮೈಸೂರಿಗರ ಬಹುಕಾಲದ ಕನಸನ್ನು ನನಸಾಗಿಸಿದರು.

ಮೈಸೂರು – ಕೃಷ್ಣರಾಜ ಸಾಗರ ರಸ್ತೆಯಲ್ಲಿ 222 ಎಕರೆ ಪ್ರದೇಶದಲ್ಲಿ ಜೆಕೊಸ್ಲೋವಾಕಿಯಾ ಸರ್ಕಾರದ ಸಹಕಾರದಲ್ಲಿ ಈ ಟೈರು ಕಾರ್ಖಾನೆ ಸ್ಥಾಪಿತವಾಗಿದೆ. ಮುಂದಿನ ಸೆಪ್ಟೆಂಬರ್ ವೇಳೆಗೆ ಮೊದಲ ಟೈರು ಮಾರುಕಟ್ಟೆಗೆ ಬರುವ ನಿರೀಕ್ಷೆ ಇದೆ.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ
ಭಾನುವಾರ ಮಾರ್ಚ್ 24, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಚತುರ್ದಶಿ ಗಂ. 09-56 **ನಕ್ಷತ್ರ:** ಪೂರ್ವಫಲ್ಗುನಿ ಗಂ. 07-34 **ಯೋಗ:** ಗಂಡ ಗಂ. 20-34 **ಕರಣ:** ವಣಿಜ ಗಂ. 09-56, ಮೀನ ಮಾಸದ 10 ನೇ ದಿನ, **ಮಳೆನಕ್ಷತ್ರ:** ಉತ್ತರಾಭಾದ್ರ 3.
ರಾಹುಕಾಲ : ಸಾಯಂಕಾಲ 04-30 - 06-00
ಸೂರ್ಯೋದಯ : 06-35 **ಸೂರ್ಯಾಸ್ತ :** 06-38
ಮುಸ್ಲಿಂ ದಿನಾಂಕ : 13 ರಂಜಾನ್, **ದಿನ ವಿಶೇಷ :** ಹೋಳಿಕಾ ದಹನ
ಅದೃಷ್ಟ ಸಂಖ್ಯೆ : 9, 2

ಮೇಷ: ದೇವರ ಅನುಗ್ರಹದಿಂದ ನೀವು ಬಹಳ ಹಳೆಯದಾದ ಹಾಗೂ ಕೌಟುಂಬಿಕವಾದ ಮುಖ್ಯ ಕೆಲಸವೊಂದನ್ನು ಪೂರ್ಣಗೊಳಿಸುವಿರಿ. ಪಿತ್ತ ಪ್ರಕೋಪದಿಂದ ದೈಹಿಕವಾಗಿ ಹಲವು ಸಮಸ್ಯೆಗಳು ಕಾಡಬಹುದು.

ವೃಷಭ: ಹೊಸ ಹುದ್ದೆಯಲ್ಲಿ ಗೌರವ, ಸಂತೋಷ, ಹೊಸ ರೀತಿಯ ಅನುಭವ ಸಿಗಲಿದೆ. ಆಮದು ಆಹಾರ ಪದಾರ್ಥಗಳಿಂದ ಹಾಗೂ ಕಾಡು ಉತ್ಪನ್ನಗಳ ಮಾರಾಟದಿಂದ ಲಾಭ ಸಿಗಲಿದೆ. ಖರ್ಚು ವೆಚ್ಚಗಳಲ್ಲಿ ಹಿಡಿತವಿರಲಿ.

ಮಿಥುನ: ದೈಹಿಕ ಕೆಲಸವನ್ನು ಮಾಡಿ ದುಡಿಮೆ ಮಾಡುತ್ತಿರುವವರು ದೇಹಕ್ಕೆ ಸ್ವಲ್ಪಮಟ್ಟಿನ ವಿಶ್ರಾಂತಿ ನೀಡಬೇಕಾಗುತ್ತದೆ. ಅತಿಯಾಗಿ ಪ್ರೀತಿಸುವ ಹಾಗೂ ಆದರಿಸುವ ಜನರೊಂದಿಗೆ ಕಾಲ ಕಳೆಯಲು ಈ ದಿನ ಸಕಾಲವಾಗಿದೆ.

ಕರ್ಕಾಟಕ: ವಿಪರೀತ ಕೆಲಸಗಳಿಂದ ದೇಹಾಲಸ್ಯ ತೋರಿ ವಿಶ್ರಾಂತಿ ಬಯಸುವಿರಿ. ಕೆಲವೊಂದು ಕಠಿಣ ನಿರ್ಧಾರಗಳನ್ನು ಕೈಗೊಳ್ಳಬೇಕಾಗಬಹುದು. ಮನಸ್ಸಿದ್ದರೆ ಮಾರ್ಗ ಎಂಬ ಮಾತು ಇಂದು ನಿಮಗೆ ಅನ್ವಯಿಸುತ್ತದೆ.

ಸಿಂಹ: ಹಲವು ದಿನಗಳಿಂದ ಅನುಭವಿಸುತ್ತಿರುವ ಅನಾರೋಗ್ಯ ಸಮಸ್ಯೆ ಉಪಶಮನವಾಗುವುದು. ಸಾಂಸಾರಿಕವಾಗಿ ಪತಿ ಪತ್ನಿಯ ಅನ್ಯೋನ್ಯತೆಯ ಕನಸು ನನಸಾಗಲಿದೆ. ಕಾಫೀ ಬೆಳೆಗಾರರಿಗೆ ಸಂತೋಷದ ವಾತಾವರಣ.

ಕನ್ಯಾ: ಸಮಸ್ಯೆ ಬಗೆಹರಿಸಲು ಬೇಕಾದ ಜಾಣತನ ನಿಮ್ಮಲ್ಲಿರುವುದರ ಜತೆ ಸ್ನೇಹಿತರ ಸಹಾಯ ಸಿಗುವುದು. ಸಮಯ ಪ್ರಜ್ಞೆಯಿಂದ ಕಾರ್ಯನಿರ್ವಹಿಸುವುದರಿಂದ ಶುಭವಾಗುವುದು. ನಿಮ್ಮ ಎಣಿಕೆಯಂತೆ ಕಾರ್ಯಗಳು ಸಿದ್ಧಿಸುವವು.

ತುಲಾ: ಸರಳ ಸ್ವಭಾವದ ನಿಮಗೆ ಸಂಬಂಧಿಕರಲ್ಲಿ ಗೌರವವು ಹೆಚ್ಚಾಗುವುದು. ಭವಿಷ್ಯದ ಕುರಿತು ಯೋಜನೆಗಳನ್ನು ರೂಪಿಸಲು ಇದು ಸುದಿನ. ಕೋರ್ಟು ಕಚೇರಿಗಳ ವ್ಯವಹಾರದಲ್ಲಿ ವಿಳಂಬವಾದರೂ ಯಶಸ್ಸು ನಿಮ್ಮದಾಗಲಿದೆ.

ವೃಶ್ಚಿಕ: ಮನೆಯಲ್ಲಿ ನಡೆಯಬೇಕಿರುವ ಶುಭ ಕಾರ್ಯಕ್ಕೆ ಬಂಧುಗಳ ಆಗಮನ ಸಂತೋಷವುಂಟುಮಾಡಲಿದೆ. ವ್ಯಾಪಾರದಲ್ಲಿ ಮೋಸ ಹೋಗುವ ಸಂಭವ. ಕೃಷಿಗೆ ಸಂಬಂಧಪಟ್ಟ ಕಾರ್ಯಗಳು ಬಿಡುವಿಲ್ಲದೆ ನಡೆಸುವುದು ಉತ್ತಮ.

ಧನು: ಹಣ ಉಳಿತಾಯದ ಮಾರ್ಗಗಳನ್ನು ಕಂಡುಕೊಳ್ಳುವಿರಿ, ಅದರಂತೆಯೇ ಉಳಿತಾಯವಾಗಲಿದೆ. ಚರ್ಮ ಸಂಬಂಧಿತ ಉದ್ಯಮದವರಿಗೆ ರಫ್ತು ವ್ಯಾಪಾರಗಳಿಂದ ಲಾಭ. ಶೀತ ಬಾಧೆಯಿಂದ ಮುಕ್ತರಾಗುವಿರಿ.

ಮಕರ: ಲೇಖಕರಿಗೆ ವಿಷಯ ಸಂಗ್ರಹಕ್ಕೆ ಬೇಕಾದ ವಾತಾವರಣ ಸಿಗುತ್ತದೆ ಮತ್ತು ಈ ದಿನ ಬರೆಯುವ ಲೇಖನಕ್ಕೆ ಸರಸ್ವತಿಯ ಅನುಗ್ರಹ ಇದ್ದಂತೆ ಅನುಭವವಾಲಿದೆ. ವ್ಯಾಪಾರದಲ್ಲಿ ಲಾಭ ನಷ್ಟದ ಮಿಶ್ರಫಲ ಕಾಣುವಿರಿ.

ಕುಂಭ: ಅವಶ್ಯಕವಾಗಿ ಬೇಕಾಗಿರುವ ಮತ್ತು ನಿಮ್ಮ ನೆಚ್ಚಿನ ಉದ್ಯೋಗ ದೊರಕಿಸಿಕೊಳ್ಳಲು ತೀವ್ರ ಪ್ರಯತ್ನವನ್ನು ನಡೆಸಬೇಕಾಗುತ್ತದೆ. ಬಹಳ ದಿನಗಳ ಬಳಿಕ ಬಂಧು-ಮಿತ್ರರ ಜೊತೆಗಿನ ಒಡನಾಟ ಸಂತೋಷ ತರಲಿದೆ.

ಮೀನ: ಕುಟುಂಬದ ಸದಸ್ಯರೊಂದಿಗೆ ಶುಭ ಕಾರ್ಯದ ನಿಮಿತ್ತ ದೂರದ ಊರಿಗೆ ಪ್ರಯಾಣ ಮಾಡುವಿರಿ. ವಿರೋಧದ ನಡುವೆಯೂ ಕಾರ್ಯ ಸಾಧನೆ ಮಾಡಿದ ಹೆಮ್ಮೆ ನಿಮಗಿರುವುದು. ವಿದ್ಯಾಭ್ಯಾಸ ನಿಶ್ಚಿಂತೆಯಿಂದ ಸಾಗಲಿದೆ.

ಪದಬಂಧ 5630
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಶ್ರೀಗಂಧ ಇಲ್ಲಿದೆ (4)
3.ವನದಲ್ಲಿರುವ ಆದಾಯ (4)
5.ಗಂಭೀರವಾದುದು ಇದು (3)
7.ಪ್ರೇಮಿಗಳ ಅಗಲಿಕೆಯ ನೋವು (3)
9.ಲಾಂಗೂಲ ಹಿಡಿದಿರುವ ಹುಡುಗ (3)
10.ಮೊದಲನೆಯ ಹಿಂದೂ ಸಂವತ್ಸರ (3)
11.ಆಸೆ ಈ ರೀತಿ ಮೂಡಿದೆ (3)
13.ನಯವಾಗಿ ಹೊಳೆಯುತ್ತಿರುವ ಅಕ್ಷಿ (3)
14.ಆನೆಯ ಮರಿ ಇಲ್ಲಿದೆ (3)
16.ಮಾತೆಯಲ್ಲಿರುವ ಗೌರವ! (3)
18.ಕೊನೆಗೆ ಬರವಿದ್ದಾಗ ಶವ ಕಾಣುತ್ತಿದೆಯಲ್ಲಾ! (4)
19.ಪಕ್ಕದ ಗೃಹವಿದು (4)

ಮೇಲಿಂದ ಕೆಳಕ್ಕೆ
1.ವಿನಯದಿಂದ ಮಾಡಿಕೊಂಡಿರುವ ಅರಿಕೆ (3)
2.ಜಗಲಿಯಲ್ಲೇ ಪ್ರಪಂಚವನ್ನು ಹುಡುಕಿ! (2)
3.ಭವನದ ಹತ್ತಿರವಿರುವ ಕಾಡು (2)
4.ನಡುವೆಯೇ ಬಂದಿರುವ ಕಂಪನ (3)
6.ಆಹಾರ ಬಯಸುವ ಸ್ಥಿತಿ (3)
8.ಅಶ್ವದ ಮೊಗವಿದು (5)
9.ಬಾಲ ಹಿಡಿದು ಬಂದಿರುವ ಅನುಯಾಯಿ (5)
12.ಅದ್ವಿತೀಯವಾದುದನ್ನು ಹೀಗೆನ್ನಿ (3)
13.ಈತ ನೃತ್ಯ ಮಾಡುವವನು (3)
15.ದೇವರ ಸ್ತುತಿಯನ್ನು ಹಾಡುವುದು (3)
16.ಮನ್ಮಥನ ಇನ್ನೊಂದು ಹೆಸರು (2)
17.ಧಾನ್ಯದ ಹೊಡೆ ಇಲ್ಲಿದೆ (2)

1			2	■	3			4
	■	■	5	6		■	■	
7		8	■		■	9		
■	■		■		■		■	■
10			■	■	■	11		
■	■		■	12	■		■	■
13			■		■	14		15
	■	■	16		17	■	■	
18				■	19			

5629ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಕಸ್ಮಿಕ 3.ಜಲಪಾತ
5.ವಿಸ್ಮಯ 7.ರಾಡಿ
8.ದರ 10.ಮನವಿ
11.ಸಂಪತ್ತು 13.ರಿಪು
15.ಮಿತ್ರ 16.ಅಂಕುಶ
18.ತೆಗಳಿಕೆ 19.ರವಿಸುತ

ಮೇಲಿಂದ ಕೆಳಕ್ಕೆ:
1.ಆಯುರ್ವೇದ 2.ಕವಿ
3.ಜಯ 4.ತಕ್ಕಡಿ
6.ಸ್ಮಶಾನ 7.ರಾಯಭಾರಿ
9.ರಕ್ಷಾಪತ್ರ 12.ಪರಾಕು
14.ಪುರಸ್ಕೃತ 15.ಮಿಡತೆ
16.ಅಂಕೆ 17.ಶರ

ಸುಡೊಕು 6015

		1			7		3	
			2	3				
5		2		1		9		7
2		5					7	
				5	3	8		9
	9		8				5	
4		3			2			
	5			4		7	9	2
7		9	6		5		1	4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6014 ಸುಡೊಕು

8	9	5	6	7	2	4	1	3
7	3	1	9	5	4	6	8	2
6	2	4	3	1	8	7	5	9
5	8	3	7	6	9	1	2	4
1	7	6	2	4	5	3	9	8
2	4	9	8	3	1	5	6	7
9	5	7	1	8	3	2	4	6
4	6	2	5	9	7	8	3	1
3	1	8	4	2	6	9	7	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅಭಿಮತ

‘ಜಿಲ್ಲಾ ನ್ಯಾಯಾಧೀಶರಿಗೂ ಬೇಕು ಭದ್ರತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರಿನಲ್ಲಿ ಶನಿವಾರ ನಡೆದ ನ್ಯಾಯಾಂಗ ಅಧಿಕಾರಿಗಳ ದ್ವೈವಾರ್ಷಿಕ 21ನೇ ರಾಜ್ಯಮಟ್ಟದ ಸಮ್ಮೇಳನದಲ್ಲಿ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸಿದ್ದರು

ಬೆಂಗಳೂರು: ಸುಪ್ರೀಂ ಕೋರ್ಟ್, ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ಇರುವ ಭದ್ರತೆ ಜಿಲ್ಲಾ ನ್ಯಾಯಾಧೀಶರಿಗೂ ದೊರಕಬೇಕು ಎಂದು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹೇಳಿದರು.

ಜಿಕೆವಿಕೆ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ನ್ಯಾಯಾಂಗ ಅಧಿಕಾರಿಗಳ ದ್ವೈವಾರ್ಷಿಕ 21ನೇ ರಾಜ್ಯಮಟ್ಟದ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

‘ಜಿಲ್ಲಾ ನ್ಯಾಯಾಧೀಶರು ಈಚಿನ ದಿನಗಳಲ್ಲಿ ಬೆದರಿಕೆ, ವರ್ಗಾವಣೆ ಶಿಕ್ಷೆಯಂತಹ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸುಪ್ರೀಂಕೋರ್ಟ್, ಹೈಕೋರ್ಟ್ ಸಮಸ್ಯೆಗಳು ಹಾಗೂ ಜಿಲ್ಲಾ ನ್ಯಾಯಾಲಯಗಳ ಸಮಸ್ಯೆಗಳು ಭಿನ್ನವಾಗಿವೆ. ಎಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಾಗುತ್ತಿದೆ. ಅದಕ್ಕಾಗಿಯೇ ನಾಲ್ಕು ವಿಭಾಗಗಳಲ್ಲಿ ಅಧ್ಯಯನ ಮಾಡಲು ಅಧಿಕಾರಿಗಳು ಹಾಗೂ ವಕೀಲರನ್ನು ಒಳಗೊಂಡ ಸಮಿತಿ ರಚಿಸಲಾಗಿದೆ’ ಎಂದರು.

‘ನ್ಯಾಯದಾನದ ಮೂಲಕ ಸಾಮಾಜಿಕ ಬದಲಾವಣೆ ತರಲು ಜಿಲ್ಲಾ ಹಂತದ ಎಲ್ಲ ನ್ಯಾಯಾಧೀಶರು ಶ್ರಮಿಸಬೇಕು. ಜತೆಗೆ, ಒತ್ತಡ ನಿವಾರಣೆಗೂ ಗಮನಹರಿಸಬೇಕು. ಒತ್ತಡದಲ್ಲಿರುವ ನ್ಯಾಯಾಧೀಶರು ನ್ಯಾಯದಾನದಲ್ಲಿ ತಪ್ಪು ಮಾಡುವ ಸಾಧ್ಯತೆ ಇರುತ್ತದೆ. ಸರ್ಕಾರ ಇ-ಸೇವಾ ಕೇಂದ್ರಗಳಿಗೆ ₹ 10 ಕೋಟಿ ನೀಡಿದೆ. ಇಂತಹ ಸೌಲಭ್ಯ ಬಳಸಿಕೊಂಡು ಜನರನ್ನು ತಾಂತ್ರಿಕ ಸಾಕ್ಷರರನ್ನಾಗಿ ಮಾಡಬೇಕು. ಕಾನೂನಿನ ಪರಿಭಾಷೆ ಅರ್ಥ ಮಾಡಿಸಬೇಕು’ ಎಂದು ಹೇಳಿದರು.

‘ನ್ಯಾಯಾಂಗದಲ್ಲಿ ಮಹಿಳೆಯರ ಸಂಖ್ಯೆ ಶೇ 37ರಷ್ಟಿದೆ. ಕರ್ನಾಟಕದ 452 ನ್ಯಾಯಾಧೀಶರಲ್ಲಿ 200 ಮಹಿಳೆಯರು ಇದ್ದಾರೆ. ಇತಿಹಾಸದ ಲೋಪಗಳನ್ನು ನ್ಯಾಯಾಂಗ ಕ್ಷೇತ್ರದಲ್ಲೂ ಸರಿಪಡಿಸಲಾಗುತ್ತಿದೆ. ಆ ಮೂಲಕ ನ್ಯಾಯಾಂಗದ ದೃಷ್ಟಿಕೋನವೂ ಬದಲಾಗಿದೆ’ ಎಂದರು.

‘ಬಹುತೇಕ ಜನರು ವಸ್ತುಸ್ಥಿತಿ ಅರ್ಥಮಾಡಿಕೊಳ್ಳದೇ ಸಾಮಾಜಿಕ ಮಾಧ್ಯಮಗಳ ಮೂಲಕ ಎಲ್ಲದನ್ನೂ ಟೀಕೆ ಮಾಡುವ ಮನಸ್ಥಿತಿ ಬೆಳೆಸಿಕೊಂಡಿದ್ದಾರೆ. ಈಚೆಗೆ ನಡೆದ ಸಮ್ಮೇಳನವೊಂದರಲ್ಲಿ ನೋವಿನ ಕಾರಣಕ್ಕೆ ನಾನು ಕುರ್ಚಿಯ ಮೇಲೆ ಕಾಲು ಇಟ್ಟಿದ್ದೂ ಟೀಕೆಗೆ ಒಳಪಡಿಸ ಲಾಯಿತು’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ, ಬಿ.ವಿ. ನಾಗರತ್ನ, ಅರವಿಂದ್ ಕುಮಾರ್, ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಉಪಸ್ಥಿತರಿದ್ದರು.

ಕನ್ನಡದಲ್ಲಿ ಮಾತು, ಕಾರಂತರ ನೆನಪು

ಕನ್ನಡದಲ್ಲೇ ಮಾತು ಆರಂಭಿಸಿದ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಅವರು, ನ್ಯಾಯಾಂಗದ ಅಧಿಕಾರಿಗಳು ತಮ್ಮ ಸಾಮರ್ಥ್ಯದ ಮೇಲೆ ನಂಬಿಕೆ ಇಟ್ಟು ಕೆಲಸ ಮಾಡಬೇಕು ಎಂದರು.

ಸಾಹಿತಿ ಶಿವರಾಮ ಕಾರಂತರ ಹೇಳಿಕೆಯನ್ನು ಉಲ್ಲೇಖಿಸಿದ ಅವರು, ‘ಹಕ್ಕಿ ರೆಂಬೆಯ ಮೇಲೆ ಕುಳಿತುಕೊಳ್ಳುವಾಗ ಅದಕ್ಕೆ ರೆಂಬೆ ಮುರಿಯುವ ಭಯ ಇರುವುದಿಲ್ಲ. ಏಕೆಂದರೆ ಅದು ತನ್ನ ರೆಕ್ಕೆಯ ಸಾಮರ್ಥ್ಯದ ಮೇಲೆ ನಂಬಿಕೆ ಇಟ್ಟುಕೊಂಡಿರುತ್ತದೆ’ ಎಂದರು. ಹಾಗೆಯೇ, ನಾಟಕಕಾರ ಶ್ರೀರಂಗ ಅವರ ಸಾಮಾಜಿಕ ಬದಲಾವಣೆಯ ಸಂದೇಶಗಳನ್ನೂ ನೆನಪು ಮಾಡಿಕೊಂಡರು.

ಬಿಜೆಪಿಗೆ ಬರಲು ಕಾದಿರುವ ಡಿ.ಕೆ. ಶಿವಕುಮಾರ್: ಮುನಿರತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್‌ನ 40 ಶಾಸಕರ ಜತೆ ಬಿಜೆಪಿಗೆ ಬರಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಾಯುತ್ತಿದ್ದಾರೆ’ ಎಂದು ಬಿಜೆಪಿ ಶಾಸಕ ಮುನಿರತ್ನ ಹೇಳಿದರು.

‘ಮುನಿರತ್ನ ಅವರು ಬಿಜೆಪಿಯವರನ್ನು ಕಾಂಗ್ರೆಸ್‌ಗೆ ಸೆಳೆಯುತ್ತಿದ್ದಾರೆ’ ಎಂಬ ಶಿವಕುಮಾರ್ ಹೇಳಿಕೆ ಕುರಿತು ಸುದ್ದಿಗಾರರಿಗೆ ಶನಿವಾರ ಪ್ರತಿಕ್ರಿಯಿಸಿದ ಅವರು, ‘ಕಾಂಗ್ರೆಸ್‌ನಲ್ಲಿ ನಾಲ್ಕರಿಂದ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂಬ ಬೇಡಿಕೆ ಇದೆ. ಅಲ್ಲಿ ಇರುವುದಕ್ಕಿಂತ ಬಿಜೆಪಿ ಸೇರುವುದು ಒಳ್ಳೆಯದು ಎಂದು ಶಿವಕುಮಾರ್ ನಿರ್ಧರಿಸಿದ್ದಾರೆ’ ಎಂದರು.

‘40 ಶಾಸಕರ ಜತೆ ಬಿಜೆಪಿ ಸೇರಲು ಅವರು ಬಾಗಿಲು ಕಾಯುತ್ತಿದ್ದಾರೆ. ನಾವು ಬಾಗಿಲು ತೆರೆಯುತ್ತಿಲ್ಲ. ಬಾಗಿಲು ತೆರೆದರೆ ತಕ್ಷಣ ಪಕ್ಷ ಸೇರಲು ಸಿದ್ಧರಾಗಿದ್ದಾರೆ. ಸದ್ಯಕ್ಕೆ ಅವರು ಅಲ್ಲಿಯೇ ‘ಇರಲಿ’ ಎಂದು ಹೇಳಿದರು.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಭಾರಿ ಪ್ರಮಾಣದ ಚುನಾವಣಾ ಅಕ್ರಮಗಳನ್ನು ಎಸಗುತ್ತಿದ್ದಾರೆ. ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆಯೊಬ್ಬರ ಮೇಲೆ ಕಾಂಗ್ರೆಸ್ ಮುಖಂಡರು ಹಲ್ಲೆ ನಡೆಸಿದ್ದಾರೆ. ತಕ್ಷಣವೇ ಕ್ಷೇತ್ರಕ್ಕೆ ಅರೆ ಸೇನಾಪಡೆ ನಿಯೋಜಿಸುವಂತೆ ಮುಖ್ಯ ಚುನಾವಣಾಧಿಕಾರಿಯವರಿಗೆ ಮನವಿ ಮಾಡಲಾಗಿದೆ ಎಂದರು.

‘ಜೈಲಿನಲ್ಲಿದ್ದ ರೌಡಿಗಳನ್ನು ಜಾಮೀನು ಕೊಡಿಸಿ, ಹೊರಗೆ ಕರೆತಂದು ಜನರನ್ನು ಬೆದರಿಸುವ ಕೆಲಸವನ್ನು ಕಾಂಗ್ರೆಸ್‌ನವರು ಮಾಡುತ್ತಿದ್ದಾರೆ. ಬಿಜೆಪಿ ಮುಖಂಡರ ಮೇಲೆ ಬೆದರಿಕೆ ಇದೆ. ಕನಕಪುರದಲ್ಲಿ ಪ್ರಕರಣ ದಾಖಲು ಮಾಡಿಸಿ ಜನರನ್ನು ಬೆದರಿಸುತ್ತಿದ್ದ ಶಿವಕುಮಾರ್ ಸಹೋದರರು ಇಲ್ಲಿಯೂ ಅದನ್ನೇ ಮಾಡುತ್ತಿದ್ದಾರೆ’ ಎಂದು ದೂರಿದರು.

ಕ್ಯಾಪ್‌ನಲ್ಲಿದ್ದ ತಲೆಕೂದಲು ಡಿಎನ್‌ಎಗೆ ಹೋಲಿಕೆ?

ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ • ಬಾಂಬ್ ಇಟ್ಟವನ ಗುರುತು ಪತ್ತೆ ? • ಸುದ್ದುಗುಂಟೆಪಾಳ್ಯದಲ್ಲಿ ಸ್ಫೋಟಕ ಸಂಗ್ರಹ

ಪ್ರಜಾವಾಣಿ ವಾರ್ತೆ

ಮುಸಾವೀರ್ ಹುಸೇನ್ ಶಾಜೀಬ್

ಬೆಂಗಳೂರು: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದ ತನಿಖೆ ನಡೆಸುತ್ತಿರುವ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು, ಬಾಂಬ್ ಇರಿಸಿದ್ದ ಎನ್ನಲಾದ ಶಂಕಿತನನ್ನು ಪತ್ತೆ ಮಾಡಿರುವುದಾಗಿ ಗೊತ್ತಾಗಿದೆ.

‘ಭಯೋತ್ಪಾದನಾ ಕೃತ್ಯಗಳಲ್ಲಿ ಭಾಗಿಯಾಗಿದ್ದ, ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯ ಮುಸಾವೀರ್ ಹುಸೇನ್ ಶಾಜೀಬ್ ಎಂಬಾತನೇ ಬಾಂಬ್ ಇರಿಸಿದ್ದನೆಂಬ ಅನುಮಾನಗಳು ದಟ್ಟವಾಗಿವೆ. ಆದರೆ, ಈತ ಹಲವು ವರ್ಷಗಳಿಂದ ತಲೆಮರೆಸಿಕೊಂಡಿದ್ದಾನೆ’ ಎಂದು ತನಿಖಾ ತಂಡದ ಮೂಲಗಳು ಹೇಳಿವೆ.

‘ಬ್ರೂಕ್‌ಫೀಲ್ಡ್‌ನಲ್ಲಿರುವ ಕೆಫೆಗೆ ಮಾರ್ಚ್ 1ರಂದು ಬಂದಿದ್ದ ಶಂಕಿತ, ಬಾಂಬ್ ಇರಿಸಿ ಸ್ಥಳದಿಂದ ಹೊರಟು ಹೋಗಿದ್ದ. ಕೆಫೆ ಹಾಗೂ ಅಕ್ಕ-ಪಕ್ಕದಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಶಂಕಿತನ ಚಹರೆ ಸೆರೆಯಾಗಿತ್ತು. ಶಂಕಿತ, ಕ್ಯಾಪ್ ಧರಿಸಿದ್ದು ಗೊತ್ತಾಗಿತ್ತು.’

‘ಶಂಕಿತನ ಬಗ್ಗೆ ಮಾಹಿತಿ ಕಲೆಹಾಕಿ, ಆತ ಸಂಚರಿಸಿದ್ದ ಕಡೆಗಳಲ್ಲಿ ಶೋಧ ನಡೆಸಲಾಗಿತ್ತು. ಶೌಚಾಲಯವೊಂದರಲ್ಲಿ ಕ್ಯಾಪ್ ಹಾಗೂ ಬಟ್ಟೆಗಳು ಪತ್ತೆಯಾಗಿದ್ದವು. ಕ್ಯಾಪ್‌ನಲ್ಲಿ ತಲೆ ಕೂದಲುಗಳಿದ್ದವು. ಅವುಗಳನ್ನು ಡಿಎನ್‌ಎ ಪರೀಕ್ಷೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಜೊತೆಗೆ, ಭಯೋತ್ಪಾದನಾ ಪ್ರಕರಣದ ಶಂಕಿತರು ಹಾಗೂ ಅವರ ಕುಟುಂಬಸ್ಥರ ಕೂದಲುಗಳನ್ನು ಸಂಗ್ರಹಿಸಿ ಪರೀಕ್ಷೆಗೆ ನೀಡಲಾಗಿತ್ತು.’

‘ತಲೆಗೂದಲು ಡಿಎನ್‌ಎ ಪರೀಕ್ಷೆ ವರದಿ ಬಂದಿದ್ದು, ಮುಸಾವೀರ್ ಹುಸೇನ್ ಶಾಜೀಬ್ ಅವರ ಕುಟುಂಬದವರ ತಲೆ ಕೂದಲು ಹೋಲಿಕೆ ಆಗಿದೆ. ಕ್ಯಾಪ್‌ನಲ್ಲಿದ್ದ ಕೂದಲು ಮುಸಾವೀರ್ ಅವರದ್ದು ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಹೀಗಾಗಿ, ಅವರೇ ಕ್ಯಾಪ್ ಧರಿಸಿ ರಾಮೇಶ್ವರಂ ಕೆಫೆಗೆ ಬಂದು ಬಾಂಬ್ ಇರಿಸಿ ಹೋಗಿರುವ ಅನುಮಾನ ಹೆಚ್ಚಾಗಿದೆ. ಬೇರೆಯವರೂ ಅದೇ ಕ್ಯಾಪ್ ಧರಿಸಿ ಕೃತ್ಯ ಎಸಗಿರುವ ಶಂಕೆಯೂ ಇದೆ’ ಎಂದು ಮೂಲಗಳು ತಿಳಿಸಿವೆ.

‘ಮುಸಾವೀರ್ ಹಲವು ವರ್ಷಗಳಿಂದ ತಲೆಮರೆಸಿಕೊಂಡಿದ್ದು, ಈತನ ಪತ್ತೆಗೆ ನೆರವಾದವರಿಗೆ ಬಹುಮಾನ ಸಹ ಘೋಷಿಸಲಾಗಿದೆ. ಈತನಿಗೆ ಇನ್ನೊಬ್ಬ ಶಂಕಿತ ತೀರ್ಥಹಳ್ಳಿಯ ಅಬ್ದುಲ್ ಮಥೀನ್ ಅಹ್ಮದ್ ತಾಹಾ ಕೂಡ ಸಹಕಾರ ನೀಡಿರುವ ಮಾಹಿತಿ ಇದೆ. ಅಬ್ದುಲ್ ಮಥೀನ್ ಸಹ ತಲೆಮರೆಸಿಕೊಂಡಿದ್ದು, ಈತನಿಗಾಗಿಯೂ ಶೋಧ ಮುಂದುವರಿಸಲಾಗಿದೆ’ ಎಂದು ಹೇಳಿವೆ.

ನಕಲಿ ದಾಖಲೆ ನೀಡಿ ಚೆನ್ನೈನಲ್ಲಿ ವಾಸ: ‘ನಕಲಿ ಆಧಾರ್ ಹಾಗೂ ಇತರೆ ನಕಲಿ ದಾಖಲೆ ಇಟ್ಟುಕೊಂಡಿದ್ದ ಶಂಕಿತರಿಬ್ಬರು, ಚೆನ್ನೈನಲ್ಲಿ ಕೆಲ ದಿನ ಉಳಿದುಕೊಂಡಿದ್ದರು. ಇದೇ ಸಂದರ್ಭದಲ್ಲಿ ಶಂಕಿತ, ಚೆನ್ನೈನ ಮೈಲಾಪುರದಲ್ಲಿರುವ ಶಾಪಿಂಗ್ ಮಾಲ್‌ವೊಂದರಲ್ಲಿ ಕ್ಯಾಪ್ ಖರೀದಿಸಿದ್ದ. ಈತನೇ ಮುಸಾವೀರ್ ಇರಬಹುದೆಂಬ ಅನುಮಾನ ಹೆಚ್ಚಿದೆ’ ಎಂದು ಮೂಲಗಳು ತಿಳಿಸಿವೆ.

‘ಐಎಸ್ (ಇಸ್ಲಾಮಿಕ್ ಸ್ಟೇಟ್) ಭಯೋತ್ಪಾದನಾ ಸಂಘಟನೆ ಜೊತೆ ನಂಟು ಹೊಂದಿದ್ದ ಆರೋಪದಡಿ ಅರೇಬಿಕ್ ಭಾಷಾ ಶಿಕ್ಷಕರಾಗಿದ್ದ ಚೆನ್ನೈನ ಜಮೀಲ್ ಬಾಷಾ ಉಮರಿ (55), ಕೊಯಮತ್ತೂರು ಮೌಲ್ವಿ ಎಂ. ಮೊಹಮ್ಮದ್ ಹುಸೇನ್ ಅಲಿಯಾಸ್ ಹುಸೇನ್ ಫೈಜಿ (38), ಐ. ಇರ್ಷಾತ್ (32) ಹಾಗೂ ಸೈಯದ್ ಅಬ್ದುರ್ ರಹಮಾನ್ ಉಮರಿಯನ್ನು(52) ಬಂಧಿಸಲಾಗಿತ್ತು. ಇವರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದ್ದು, ಶಂಕಿತನ ಬಗ್ಗೆಯೂ ಮಾಹಿತಿ ಕಲೆಹಾಕಲಾಗಿದೆ’ ಎಂದು ಹೇಳಿವೆ.

‘ತಮಿಳುನಾಡಿನ ಯಾವ ಸ್ಥಳಗಳಿಗೆ ಶಂಕಿತ ಭೇಟಿ ನೀಡಿದ್ದ? ಯಾರ ಜೊತೆ ಮಾತನಾಡಿದ್ದ ? ಎಂಬಿತ್ಯಾದಿ ಮಾಹಿತಿ ತಿಳಿಯಲು ತನಿಖೆ ಮುಂದುವರಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಶಿವಮೊಗ್ಗದಲ್ಲಿ ಐಇಡಿ ತರಬೇತಿ: ‘ಭಯೋತ್ಪಾದನಾ ಕೃತ್ಯ ಎಸಗಲು ಸಂಚು ರೂಪಿಸಿದ್ದ ಶಂಕಿತರು, ಕಚ್ಚಾ ಬಾಂಬ್ (ಐಇಡಿ) ತಯಾರಿಸುವುದು ಹೇಗೆ? ಎಂಬುದರ ತರಬೇತಿ ಪಡೆದಿದ್ದರು. ಶಿವಮೊಗ್ಗದ ಗುರುಪುರ–ಪುರಲೆ ಸಮೀಪದಲ್ಲಿರುವ ತುಂಗಾ ನದಿಯ ತೀರದಲ್ಲಿ ತಾವೇ ತಯಾರಿಸಿದ್ದ ಐಇಡಿ ಪರೀಕ್ಷಾರ್ಥ ಸ್ಫೋಟ ನಡೆಸುತ್ತಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಸದ್ಯ ಜೈಲಿನಲ್ಲಿರುವ ಮಾಝ್ ಮುನೀರ್ ಅಹ್ಮದ್ ಹಾಗೂ ಇತರರ ಜೊತೆಗೂ ಮುಸಾವೀರ್ ಒಡನಾಟವಿಟ್ಟುಕೊಂಡಿದ್ದ’ ಎಂದು ಮೂಲಗಳು ಹೇಳಿವೆ.

‘ಐಎಸ್ ಉಗ್ರರ ಜೊತೆ ಶಂಕಿತರ ನಂಟು’

‘ಶಂಕಿತ ಮುಸಾವೀರ್ ಸೇರಿ 17 ಶಂಕಿತರ ವಿರುದ್ಧ ಬೆಂಗಳೂರು ಸುದ್ದುಗುಂಟೆ ಪಾಳ್ಯ ಠಾಣೆಯಲ್ಲಿ 2020ರಲ್ಲಿ ಪ್ರಕರಣ ದಾಖಲಾಗಿತ್ತು. ಐಎಸ್ ಉಗ್ರರ ಜೊತೆ ಸಂಪರ್ಕ ಇಟ್ಟುಕೊಂಡಿದ್ದ ಶಂಕಿತರು, ತಮಿಳುನಾಡಿನ ಹಿಂದು ಸಂಘಟನೆಯೊಂದರ ಮುಖಂಡ ಸುರೇಶ್ ಹತ್ಯೆಯಲ್ಲೂ ಭಾಗಿಯಾಗಿದ್ದರು’ ಎಂದು ಮೂಲಗಳು ಹೇಳಿವೆ.

‘ಗುರಪ್ಪನಪಾಳ್ಯದಲ್ಲಿರುವ ಮನೆ ಮೇಲೆ ದಾಳಿ ಮಾಡಿದ್ದ ಸಿಸಿಬಿ ಪೊಲೀಸರು, ಹಲವರನ್ನು ಬಂಧಿಸಿದ್ದರು. ಪ್ರಕರಣದ 17ನೇ ಆರೋಪಿಯಾಗಿದ್ದ ಮುಸಾವೀರ್, ಅಂದಿನಿಂದಲೇ ತಲೆಮರೆಸಿಕೊಂಡಿದ್ದ. ಇದೇ ಪ್ರಕರಣದ ತನಿಖೆಯನ್ನು ಎನ್‌ಐಎಗೆ ವಹಿಸಲಾಗಿತ್ತು’ ಎಂದು ತಿಳಿಸಿವೆ.

ನಿಧನ ವಾರ್ತೆ

ನಿಧನ ವಾರ್ತೆ

ಮಾಜಿ ಸಂಸದ ಮೂಡಲಗಿರಿಯಪ್ಪ

ಶಿರಾ (ತುಮಕೂರು): ಚಿತ್ರದುರ್ಗದ ಮಾಜಿ ಸಂಸದ ಸಿ.ಪಿ. ಮೂಡಲಗಿರಿಯಪ್ಪ (84) ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಶನಿವಾರ ನಿಧನರಾದರು.

ಉಸಿರಾಟದ ತೊಂದರೆಯಿಂದಾಗಿ ಬುಧವಾರ ಅವರು ಬೆಂಗಳೂರಿನ ಆಸ್ಪತ್ರೆಗೆ ದಾಖಲಾಗಿದ್ದರು. ಮೃತರಿಗೆ ಪತ್ನಿ ಲಕ್ಷ್ಮಿದೇವಮ್ಮ, ಪುತ್ರ, ಮಾಜಿ ಶಾಸಕ ಡಾ.ಸಿ.ಎಂ.ರಾಜೇಶ್‌ಗೌಡ ಹಾಗೂ ಪುತ್ರಿ ಇದ್ದಾರೆ.

ಕಾಂಗ್ರೆಸ್ ಮೂಲಕ ರಾಜಕೀಯ ಜೀವನ ಪ್ರಾರಂಭಿಸಿದ ಸಿ.ಪಿ.ಮೂಡಲಗಿರಿಯಪ್ಪ 1985ರಲ್ಲಿ ಮೊದಲ ಪ್ರಯತ್ನದಲ್ಲೇ ಶಿರಾ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ವಿಧಾನಸಭೆ ಪ್ರವೇಶಿಸಿದ್ದರು.

ರಾಜ್ಯ ರಾಜಕಾರಣದಿಂದ ರಾಷ್ಟ್ರ ರಾಜಕಾರಣದ ಕಡೆ ಮುಖ ಮಾಡಿದ ಅವರು ಚಿತ್ರದುರ್ಗ ಲೋಕಸಭಾ ಕ್ಷೇತ್ರದಿಂದ 1989, 1991 ಮತ್ತು 1998ರಲ್ಲಿ ಜಯಗಳಿಸಿದ್ದರು. ಕಾಂಗ್ರೆಸ್ ಪಕ್ಷದಿಂದಲೇ ಮೂರು ಬಾರಿ ಲೋಕಸಭೆ ಪ್ರವೇಶಿಸಿದ್ದರು. ತಾಲ್ಲೂಕಿನ ಚಿರತಹಳ್ಳಿ ತೋಟದ ಮನೆ ‘ಗಣೇಶ ಗುಡಿ’ ಎಸ್ಟೇಟ್‌ನಲ್ಲಿ ಭಾನುವಾರ ಬೆಳಿಗ್ಗೆ 10 ಗಂಟೆಗೆ ಅಂತಿಮ ಸಂಸ್ಕಾರ ನೆರವೇರಲಿದೆ.

ಕರ್ನಾಟಕ ಸರ್ಕಾರದ ಸಚಿವಾಲಯ (ಭದ್ರತೆಗಳು)
ಆರ್ಥಿಕ ಇಲಾಖೆ
ವಿಧಾನಸೌಧ, ಬೆಂಗಳೂರು.

1. ಒಟ್ಟು ಮೊತ್ತ: ರೂ.3000 ಕೋಟಿ ((ರೂ.1000 ಕೋಟಿ (08 ವರ್ಷಗಳ ಅಧಿಕಾರಾವಧಿ) ಮತ್ತು (ರೂ.2000 ಕೋಟಿ (09 ವರ್ಷಗಳ ಅಧಿಕಾರಾವಧಿ)).
2. ವಿತರಿಸುವ ವಿಧಾನ: ಹರಾಜು PDO, RBI, ಮುಂಬೈ (ಕೋಟೆ) ಮೂಲಕ.
3. ಹರಾಜಿನ ದಿನಾಂಕ : ಮಾರ್ಚ್ 26, 2024.

ಕರ್ನಾಟಕ ಸರ್ಕಾರವು ಮೇಲಿನ ಭದ್ರತೆಗಳಿಗೆ ಚಂದಾದಾರಿಕೆಗಳನ್ನು ಆಹ್ವಾನಿಸುತ್ತದೆ. ಅಧಿಸೂಚನೆಯ ಪ್ರತಿಗಳು ಮತ್ತು ಅರ್ಜಿ ನಮೂನೆಗಳನ್ನು ಪಿಡಿಒ, ಆರ್‌ಬಿಐ, ಬೆಂಗಳೂರು ಇವರಿಂದ ಪಡೆಯಬಹುದು. ಚಿಲ್ಲರೆ ಹೂಡಿಕೆದಾರರ ಭಾಗವಹಿಸುವಿಕೆಯನ್ನು ಉತ್ತೇಜಿಸಲು RBI ನಿಂದ ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯವನ್ನು ಪರಿಚಯಿಸಲಾಗಿದೆ. ಮಾರಾಟದ ಅಧಿಸೂಚಿತ ಮೊತ್ತದ 10% ವರೆಗಿನ ಸರ್ಕಾರಿ ಸ್ಟಾಕ್ ಅನ್ನು ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಹಂಚಲಾಗುತ್ತದೆ. ಮಾದರಿ ಟೆಂಡರ್ ನಮೂನೆಗಳು ಮತ್ತು ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯದ ಪರಿಷ್ಕೃತ ಯೋಜನೆ www.rbi.org.in ವೆಬ್‌ಸೈಟ್ ನಲ್ಲಿ ಲಭ್ಯವಿದೆ.

ಸಹಿ/– (ಡಾ. ಪಿ. ಸಿ. ಜಾಫರ್)
ಸರ್ಕಾರದ ಕಾರ್ಯದರ್ಶಿ
(ಆಯವ್ಯಯ & ಸಂಪನ್ಮೂಲ), ಆರ್ಥಿಕ ಇಲಾಖೆ
DIPR/CP/RO/4397/2023-24

ಸೀರೆ ಖರೀದಿ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ಪಟ್ಟಣದಲ್ಲಿ ಚುನಾವಣಾ ಜಾಗೃತಿಗಾಗಿ ಶನಿವಾರ ಬೆಳಿಗ್ಗೆ ಪಥ ಸಂಚಲನ ನಡೆಸಿದ ಸಿಆರ್‌ಪಿಎಫ್ ಮಹಿಳಾ ಪಡೆಯ ಸಿಬ್ಬಂದಿ, ಕರ್ತವ್ಯ ಮುಗಿದ ಬಳಿಕ ಪ್ರಸಿದ್ಧ ‘ಮೊಳಕಾಲ್ಮುರು ರೇಷ್ಮೆ’ ಸೀರೆ ಅಂಗಡಿಗಳಿಗೆ ಭೇಟಿ ನೀಡಿ ಇಷ್ಟದ ಸೀರೆಗಳನ್ನು ಖರೀದಿಸಿದರು

ಜೆಡಿಎಸ್ ಟಿಕೆಟ್‌ಗೆ ಮುನಿಸ್ವಾಮಿ ಯತ್ನ

ಪ್ರಜಾವಾಣಿ ವಾರ್ತೆ

ಮುನಿಸ್ವಾಮಿ

ಕೋಲಾರ ಲೋಕಸಭಾ ಕ್ಷೇತ್ರ

ನವದೆಹಲಿ: ಕೋಲಾರದ ಬಿಜೆಪಿ ಸಂಸದ ಎಸ್.ಮುನಿಸ್ವಾಮಿ ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರನ್ನು ಇಲ್ಲಿ ಭೇಟಿ ಮಾಡಿ ಕೋಲಾರ ಕ್ಷೇತ್ರದಿಂದ ಬಿಜೆಪಿ ಅಥವಾ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಅವಕಾಶ ನೀಡುವಂತೆ ಮನವಿ ಮಾಡಿದ್ದಾರೆ.

ನಡ್ಡಾ ಅವರನ್ನು ಮುನಿಸ್ವಾಮಿ ಶುಕ್ರವಾರ ಭೇಟಿ ಮಾಡಿ ಕೋಲಾರ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡ ಬಾರದು ಎಂದು ಮನವಿ ಮಾಡಿದರು. ಈ ಬಗ್ಗೆ ಯಾವುದೇ ಭರವಸೆ ನೀಡಲು ನಡ್ಡಾ ನಿರಾಕರಿಸಿದರು ಎಂದು ಮೂಲಗಳು ತಿಳಿಸಿವೆ.

ಎಚ್.ಡಿ.ದೇವೇಗೌಡ ಅವರನ್ನು ಮುನಿಸ್ವಾಮಿ ಶನಿವಾರ ಭೇಟಿ ಮಾಡಿ ತಮ್ಮನ್ನೇ ಅಭ್ಯರ್ಥಿಯನ್ನಾಗಿ ಪರಿಗಣಿಸುವಂತೆ ಕೋರಿದರು. ‘ನೀವು ಬಹಳ ತಡವಾಗಿ ಬಂದಿದ್ದೀರಿ. ಕ್ಷೇತ್ರಕ್ಕೆ ಅಭ್ಯರ್ಥಿಯನ್ನು ಅಂತಿಮಗೊಳಿಸಲಾಗಿದೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಚರ್ಚಿಸಿ’ ಎಂದು ದೇವೇಗೌಡರು ಸಲಹೆ ನೀಡಿದರು ಎಂದು ಮೂಲಗಳು ಹೇಳಿವೆ.

‘ಟಿಕೆಟ್ ವಿಚಾರವಾಗಿ ಚರ್ಚೆ ನಡೆಸಿಲ್ಲ. ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಲು ರಣತಂತ್ರ ರೂಪಿಸುವ ಬಗ್ಗೆ ಚರ್ಚಿಸಿದ್ದೇವೆ’ ಎಂದು ಮುನಿಸ್ವಾಮಿ ಸುದ್ದಿಗಾರರಿಗೆ ತಿಳಿಸಿದರು.

ಕೋಲಾರ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡಲು ಬಿಜೆಪಿ ತೀರ್ಮಾನಿಸಿದೆ. ಹೀಗಾಗಿ, ಮುನಿಸ್ವಾಮಿ ಅವರಿಗೆ ಟಿಕೆಟ್ ಕೈತಪ್ಪಲಿದೆ.

IHM BANGALORE
INSTITUTE OF HOTEL MANAGEMENT CATERING TECHNOLOGY AND APPLIED NUTRITION
“An Autonomous Body under Ministry of Tourism, Govt. of India”
S.J.P. Campus, Seshadri Road, Bangalore 560 001.
www.ihmbangalore.ac.in, E-mail: ihmbengaluru@gmail.com
Ph. 080-22262960 / 22268562

ADMISSION NOTICE
APPLICATIONS ARE INVITED FOR ADMISSION TO THE 1½ YR. DIPLOMA /CRAFT COURSES IN FOOD PRODUCTION/ BAKERY/ FOOD & BEVERAGE SERVICE/ FOR THE ACADEMIC SESSION 2024-25

1. Application form along with other details is available on payment of Rs.300/- (Rs.150/- for SC/ST) inclusive of Registration fee payable by cash or D.D. in person. By post Rs.350/- (Rs.175/- for SC/ST & P.H.)
2. Issue of application form from: **25.03.2024**
3. Last date for receipt of filled in Application Form by the Institute: **19.07.2024**
4. Limited Hostel facility available.
5. **For details of courses/fee etc., please visit:** https://ihmbangalore.ac.in

Sd/-PRINCIPAL

‘ಬ್ರಹ್ಮ ಹೇಳಿದರೂ ಕಣದಿಂದ ಹಿಂದೆ ಸರಿಯಲ್ಲ’

ಪ್ರಜಾವಾಣಿ ವಾರ್ತೆ

ಕೆ.ಎಸ್.ಈಶ್ವರಪ್ಪ

ಶಿವಮೊಗ್ಗ: ‘ಬ್ರಹ್ಮ ಬಂದು ಹೇಳಿದರೂ ಚುನಾವಣಾ ಕಣದಿಂದ ಹಿಂದೆ ಸರಿಯಲ್ಲ’ ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಸ್ಪಷ್ಟಪಡಿಸಿದರು.

‘ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ನನ್ನೊಂದಿಗೆ ಮಾತನಾಡಿ ಮನವೊಲಿಸಿದ್ದಾರೆ. ನಾನು ಸ್ಪರ್ಧೆಯಿಂದ ಹಿಂದೆ ಸರಿಯಲು ಒಪ್ಪಿಕೊಂಡಿರುವುದಾಗಿ ಕೆಲ ಮಾಧ್ಯಮಗಳು ಅಪಪ್ರಚಾರ ನಡೆಸುತ್ತಿವೆ. ಆ ಮೂಲಕ ಬೆಂಬಲಿಗರಲ್ಲಿ ಗೊಂದಲ ಮೂಡಿಸುತ್ತಿವೆ’ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಕಿಡಿಕಾರಿದರು. ಸ್ಥಳದಲ್ಲಿದ್ದ ಸುದ್ದಿ ವಾಹಿನಿಯೊಂದರ ಪ್ರತಿನಿಧಿ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

‘ನನ್ನೊಂದಿಗೆ ಯಾರೂ ಮಾತನಾಡಿಲ್ಲ. ಮಾತುಕತೆಗೆ ನಾನು ಸಿದ್ಧವೂ ಇಲ್ಲ. ಕೆಲವೇ ದಿನಗಳಲ್ಲಿ ರಾಜ್ಯ ರಾಜಕಾರಣದಲ್ಲಿ ಮಹತ್ವದ ಬದಲಾವಣೆಗಳು ಆಗಲಿವೆ. ಕಾದು ನೋಡಿ’ ಎಂದರು.

‘ಮಗನಿಗೆ ಟಿಕೆಟ್ ಸಿಗದ್ದಕ್ಕೆ ಯಡಿಯೂರಪ್ಪ ಕುಟುಂಬದ ವಿರುದ್ಧ ಮಾತನಾಡುತ್ತಿರುವುದಾಗಿ ಬಿಜೆಪಿಯ ಕೆಲವರು ಆರೋಪಿಸುತ್ತಿದ್ದಾರೆ. ನಾನು ಚುನಾವಣಾ ರಾಜಕೀಯದಿಂದ ನಿವೃತ್ತನಾದ ನಂತರ ಪುತ್ರನಿಗೆ ಅವಕಾಶ ಕೇಳಿದ್ದೆ. ಒಂದು ಕುಟುಂಬಕ್ಕೆ ಒಂದೇ ಟಿಕೆಟ್ ಎಂಬುದು ಪ್ರಧಾನಿ ಮೋದಿ ಅವರ ಆಶಯ. ಹೀಗಾಗಿ ಯಡಿಯೂರಪ್ಪ ಅವರ ಕುಟುಂಬ ರಾಜಕಾರಣದ ವಿರುದ್ಧ ಧ್ವನಿ ಎತ್ತಿದ್ದೇನೆ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ಪುತ್ರ ಕೆ.ಈ.ಕಾಂತೇಶಗೆ ಟಿಕೆಟ್ ಕೊಡುವುದಾಗಿ ಹೇಳಿ ಪಕ್ಷದ ವೇದಿಕೆಯಲ್ಲಿಯೇ ಯಡಿಯೂರಪ್ಪ ನನಗೆ ಚಾಕು ಹಾಕಿದ್ದಾರೆ. ಹಾಗೆಂದು ನಾನು ಬರೀ ಅಲ್ಲಿಯೇ (ಪಕ್ಷದ ವೇದಿಕೆ) ಮಾತನಾಡಲು, ನಾನೂ ಹಾಗೆಯೇ ಮಾಡುತ್ತಾ ಕೂರಲು ಆಗುವುದಿಲ್ಲ. ಪುತ್ರನಿಗೆ ಟಿಕೆಟ್ ಕೊಟ್ಟಿದ್ದರೂ ಯಡಿಯೂರಪ್ಪ ಅವರ ಕುಟುಂಬ ರಾಜಕಾರಣದ ಬಗ್ಗೆ ಎಲ್ಲಿ ಹೇಳಬೇಕೋ ಅಲ್ಲಿ ಹೇಳುತ್ತಿದ್ದೆನು. ಪಕ್ಷ ಶುದ್ಧೀಕರಣ ಮಾತ್ರ ನನ್ನ ಉದ್ದೇಶ’ ಎಂದು ಹೇಳಿದರು.

‘ಸಿದ್ಧಾಂತದ ಪರವಾಗಿ ಹೋರಾಟ ಮಾಡುತ್ತಿರುವ ಸಂದರ್ಭದಲ್ಲಿ ಮಗನ ರಾಜಕೀಯ ಭವಿಷ್ಯ ಹಾಗೂ ಮುಂದಿನ ರಾಜಕಾರಣದ ಬಗ್ಗೆ ಈಗಲೇ ಚರ್ಚೆ ಮಾಡಲು ಹೋಗೊಲ್ಲ. ಕಾಂತೇಶನಿಗೂ ಅದನ್ನು ಸ್ಪಷ್ಟಪಡಿಸಿದ್ದೇನೆ. ನನ್ನ ನಿಲುವನ್ನು ಪುತ್ರ ಕೂಡ ಬೆಂಬಲಿಸಿದ್ದಾನೆ’ ಎಂದು ಪ್ರಶ್ನೆಯೊಂದಕ್ಕೆ ಈಶ್ವರಪ್ಪ ಪ್ರತಿಕ್ರಿಯಿಸಿದರು.

> **ಕುಟುಂಬ ರಾಜಕಾರಣವು ಕಾಂಗ್ರೆಸ್‌ನ ವ್ಯವಸ್ಥೆಯೇ ಹೊರತು ನಮ್ಮದಲ್ಲ. ನಾನು ಸಂಸದ, ವಿಜಯೇಂದ್ರಣ್ಣ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ. ಯಡಿಯೂರಪ್ಪ ಪಕ್ಷಕ್ಕೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಇದು ಕುಟುಂಬ ರಾಜಕಾರಣ ಅಲ್ಲ**
> **ಬಿ.ವೈ.ರಾಘವೇಂದ್ರ,** ಬಿಜೆಪಿ ಅಭ್ಯರ್ಥಿ

‘ಕಡಿಮೆ ಸ್ಥಾನ ಗೆದ್ದರೆ ಸಿ.ಎಂ ರಾಜೀನಾಮೆ ನೀಡಬೇಕಾಗುತ್ತೆ’

ಪ್ರಜಾವಾಣಿ ವಾರ್ತೆ

ಶ್ರೀನಿವಾಸ್

ತುಮಕೂರು: ಲೋಕಸಭೆ ಚುನಾವಣೆಯಲ್ಲಿ ರಾಜ್ಯದಿಂದ ಹೆಚ್ಚು ಸ್ಥಾನ ಗೆಲ್ಲಿಸದಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೈತಿಕ ಹೊಣೆ ಹೊತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗುತ್ತದೆ ಎಂದು ಕೆಎಸ್‌ಆರ್‌ಟಿಸಿ ನಿಗಮದ ಅಧ್ಯಕ್ಷ ಎಸ್.ಆರ್.ಶ್ರೀನಿವಾಸ್ ಹೇಳಿದ್ದಾರೆ.

ತಿಪಟೂರಿನಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ್ದ ವಿಡಿಯೊ ಈಗ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಸಿದ್ದರಾಮಯ್ಯ ಅವರು ಅಲ್ಪ ಅವಧಿಗೆ ಅಧಿಕಾರ ಕಳೆದುಕೊಳ್ಳಬೇಕಾಗುತ್ತದೆ. ಬಡವರ ಪರವಾಗಿ ಕೆಲಸ ಮಾಡುತ್ತಿರುವ ಅವರು ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿಯಬೇಕಾದರೆ ಕಾಂಗ್ರೆಸ್ ಬೆಂಬಲಿಸಬೇಕು. ಯಾವ ಪಕ್ಷ ಜನಪರ ಆಡಳಿತ ನೀಡುತ್ತಿದೆ ಎಂಬುದನ್ನು ಯೋಚಿಸಿ ಮತ ಚಲಾಯಿಸಿ ಎಂದು ಅವರು ಇದೇ ವೇಳೆ ಮನವಿ ಮಾಡಿದ್ದಾರೆ.

‘ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ ಇರುವುದರಿಂದ ಲೋಕಸಭೆ ಚುನಾವಣೆಯಲ್ಲಿ ಪಕ್ಷ ಹೆಚ್ಚು ಸ್ಥಾನಗಳಲ್ಲಿ ಗೆಲುವು ಸಾಧಿಸಬೇಕು. ಕಡಿಮೆ ಸ್ಥಾನ ಗೆದ್ದರೆ ಸರ್ಕಾರ ನಡೆಸಲು ನಮಗೆ ಯಾವುದೇ ನೈತಿಕತೆ ಇರುವುದಿಲ್ಲ’ ಎಂದು ಸಚಿವರಾದ ಜಿ.ಪರಮೇಶ್ವರ, ಕೆ.ಎನ್.ರಾಜಣ್ಣ ಹಾಗೂ ಜಿಲ್ಲೆಯ ಕಾಂಗ್ರೆಸ್ ಶಾಸಕರು ಈ ಹಿಂದೆಯೂ ಅನೇಕ ಬಾರಿ ಹೇಳಿದ್ದರು.

> **ಶ್ರೀನಿವಾಸ್ ಅವರು ಯಾವ ಅರ್ಥದಲ್ಲಿ ಮಾತನಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಅವರು ಏನು ಹೇಳಿದ್ದಾರೆ ಎಂಬುದನ್ನು ತಿಳಿದುಕೊಂಡ ಬಳಿಕ ಮಾತನಾಡುತ್ತೇನೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸುವವರು ಕಾಂಗ್ರೆಸ್ ಪಕ್ಷದಲ್ಲೇ ಇದ್ದಾರೆ. ಅಲ್ಲಿ ಐವರು ಛಾಯಾ ಮುಖ್ಯಮಂತ್ರಿಗಳಿದ್ದಾರೆ**
> **ಆರ್. ಅಶೋಕ,** ವಿಪಕ್ಷ ನಾಯಕ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ: ಎಸ್/03/01/1504 ದಿನಾಂಕ: 20–03–2024

ಸಾರ್ವಜನಿಕ ವಿಚಾರಣೆ ಬಗ್ಗೆ ಪ್ರಕಟಣೆ

ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಬ್ಲಾಕ್ ಚೈನ್ ಆಧಾರಿತ ಪ್ಲಾಟ್‌ಫಾರ್ಮ್ ಮುಖಾಂತರ ಪೀರ್–ಟು–ಪೀರ್ ಸೌರ ವಿದ್ಯುತ್ ವ್ಯವಹರಣೆ ಅನುಷ್ಠಾನ) ವಿನಿಯಮಗಳು, 2024 ಸಾರ್ವಜನಿಕ ವಿಚಾರಣೆ –ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮೇಲಿನ ವಿಷಯದ ಬಗ್ಗೆ ಕರಡು ವಿನಿಯಮಗಳನ್ನು ಹೊರಡಿಸಿದ್ದು, ಅದು ಆಯೋಗದ ಅಂತರ್ಜಾಲ ತಾಣ: https://kerc.karnataka.gov.in ಯಲ್ಲಿ ಲಭ್ಯವಿರುತ್ತದೆ.

ಆಯೋಗವು ಈ ವಿಷಯದ ಬಗ್ಗೆ ಭಾಗೀದಾರರ ಅಭಿಪ್ರಾಯ ಪಡೆಯಲು **ಗುರುವಾರ ದಿನಾಂಕ: 28–03–2024 ರಂದು ಬೆಳಿಗ್ಗೆ 11.00 ಗಂಟೆಗೆ, ಆಯೋಗದ ಕೋರ್ಟ್ ಹಾಲ್‌ನ, ಒಂದನೆಯ ಮಹಡಿ, ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560052** ಇಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿದೆ.

ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ / ಅಭಿಪ್ರಾಯ / ಸಲಹೆಗಳನ್ನು ಆಯೋಗದ ಮುಂದೆ ಸಲ್ಲಿಸಲು ಕೋರಲಾಗಿದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
ವಾಸಾಸಂಇ/ವಾ.ಪ್ರ/4402/2023–24

ನೇಮಕದಲ್ಲಿ ಜಾತಿ, ಪ್ರದೇಶವಾರು ಸಮತೋಲನ ಕಾಯ್ದುಕೊಳ್ಳಲು ಯತ್ನ

ಕಾಂಗ್ರೆಸ್‌ಗೆ ಕಾರ್ಯಾಧ್ಯಕ್ಷರ ನೇಮಕ

ಪ್ರಜಾವಾಣಿ ವಾರ್ತೆ

ನಿರ್ಗಮಿತ ಕಾರ್ಯಾಧ್ಯಕ್ಷರು

ಸತೀಶ್ ಜಾರಕಿಹೊಳಿ
ರಾಮಲಿಂಗಾ ರೆಡ್ಡಿ
ಈಶ್ವರ ಖಂಡ್ರೆ (ಸಚಿವರಾಗಿರುವುದರಿಂದ),
ಬಿ.ಎನ್.ಚಂದ್ರಪ್ಪ (ಲೋಕಸಭಾ ಅಭ್ಯರ್ಥಿ)
ಹಾಗೂ ಸಲೀಂ ಅಹ್ಮದ್.

ನೂತನ ಕಾರ್ಯಾಧ್ಯಕ್ಷರು

ತನ್ವೀರ್ ಸೇಠ್ (ಶಾಸಕ, ಮುಸ್ಲಿಂ)
ಜಿ.ಸಿ.ಚಂದ್ರಶೇಖರ್ (ರಾಜ್ಯಸಭಾ ಸದಸ್ಯ, ಒಕ್ಕಲಿಗ)
ವಿನಯ್ ಕುಲಕರ್ಣಿ (ಶಾಸಕ, ಲಿಂಗಾಯತ)
ಮಂಜುನಾಥ ಭಂಡಾರಿ (ವಿಧಾನ ಪರಿಷತ್ ಸದಸ್ಯ, ಬಂಟ)
ವಸಂತ ಕುಮಾರ್ (ರಾಯಚೂರು ಜಿಲ್ಲಾ ಮುಖಂಡ, ಪರಿಶಿಷ್ಟ ಜಾತಿ ಬಲಗೈ)

ಚುನಾವಣಾ ಪ್ರಚಾರ ಸಮಿತಿ

ಅಧ್ಯಕ್ಷ–ವಿನಯಕುಮಾರ್ ಸೊರಕೆ (ಮಾಜಿ ಸಚಿವ, ಬಿಲ್ಲವ)
ಸಹ ಅಧ್ಯಕ್ಷ– ಎಲ್.ಹನುಮಂತಯ್ಯ (ರಾಜ್ಯಸಭಾ ಮಾಜಿ ಸದಸ್ಯ, ಪರಿಶಿಷ್ಟ ಜಾತಿ ಎಡಗೈ)
ಉಪಾಧ್ಯಕ್ಷ– ರಿಜ್ವಾನ್ ಅರ್ಷದ್ (ಶಾಸಕ, ಮುಸ್ಲಿಂ)

ನವದೆಹಲಿ: ಕೆಪಿಸಿಸಿಗೆ ಐವರು ನೂತನ ಕಾರ್ಯಾಧ್ಯಕ್ಷರನ್ನು ಕಾಂಗ್ರೆಸ್ ಶನಿವಾರ ನೇಮಕ ಮಾಡಿದೆ. ಲೋಕಸಭಾ ಚುನಾವಣಾ ಪ್ರಚಾರ ಸಮಿತಿಗೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ನೇಮಿಸಲಾಗಿದೆ. ಈ ನೇಮಕದಲ್ಲಿ ಜಾತಿ ಹಾಗೂ ಪ್ರದೇಶವಾರು ಸಮತೋಲನ ಕಾಯ್ದುಕೊಳ್ಳಲು ಪ್ರಯತ್ನಿಸಿದೆ.

ರಾಜ್ಯದಲ್ಲಿ ಲೋಕಸಭಾ ಚುನಾವಣೆಯ ಟಿಕೆಟ್ ಹಂಚಿಕೆಯ ಕಗ್ಗಂಟನ್ನು ಕೈ ಪಾಳಯ ಬಹುತೇಕ ಬಗೆಹರಿಸಿದೆ. ಅದರ ಬೆನ್ನಲ್ಲೇ, ಪಕ್ಷದ ಸಂಘಟನಾತ್ಮಕ ಬದಲಾವಣೆ ಮಾಡಿದೆ.

ಒಬ್ಬ ವ್ಯಕ್ತಿಗೆ ಒಂದೇ ಹುದ್ದೆ ಎಂಬುದು ಕಾಂಗ್ರೆಸ್‌ನಲ್ಲಿರುವ ನಿಯಮ. ಅನುಕೂಲಕ್ಕೆ ತಕ್ಕಂತೆ ಈ ನಿಯಮದಲ್ಲಿ ಕೆಲವು ನಾಯಕರಿಗೆ ವಿನಾಯಿತಿ ಸಿಕ್ಕಿದ್ದು ಉಂಟು. ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿರುವ ರಾಮಲಿಂಗಾ ರೆಡ್ಡಿ, ಸತೀಶ ಜಾರಕಿಹೊಳಿ ಹಾಗೂ ಈಶ್ವರ ಖಂಡ್ರೆ ಅವರು ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗಿದ್ದಾರೆ. ಕಾರ್ಯಾಧ್ಯಕ್ಷರ ಜವಾಬ್ದಾರಿಯಿಂದ ಮುಕ್ತಗೊಳಿಸುವಂತೆ ಅವರು ಈ ಹಿಂದೆಯೇ ಕೋರಿಕೊಂಡಿದ್ದರು.

ತನ್ವೀರ್ ಸೇಠ್, ವಿನಯ್ ಕುಮಾರ್ ಸೊರಕೆ, ಜಿ.ಸಿ.ಚಂದ್ರಶೇಖರ್, ವಸಂತ ಕುಮಾರ್ ಹಾಗೂ ವಿನಯ್ ಕುಲಕರ್ಣಿ ಅವರನ್ನು ಕಾರ್ಯಾಧ್ಯಕ್ಷರನ್ನಾಗಿ ನೇಮಿಸಲಾಗುತ್ತಿದೆ ಎಂಬ ಸುದ್ದಿಗಳು ಈ ಹಿಂದೆ ಹರಿದಾಡಿದ್ದವು. ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಮಾಲೋಚನೆ ನಡೆಸಿ ಐವರ ಹೆಸರನ್ನು ಹೈಕಮಾಂಡ್‌ಗೆ ಆರು ತಿಂಗಳ ಹಿಂದೆಯೇ ಶಿಫಾರಸು ಮಾಡಿದ್ದರು. ಆದರೆ, ಹೈಕಮಾಂಡ್ ಒಪ್ಪಿಗೆ ನೀಡಿರಲಿಲ್ಲ.

ಕಾರ್ಯಾಧ್ಯಕ್ಷರಾಗಿ ನೇಮಕಗೊಂಡಿರುವ ಮಂಜುನಾಥ ಭಂಡಾರಿ ಹಾಗೂ ವಸಂತ ಕುಮಾರ್ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಆಪ್ತರು. ತನ್ವೀರ್ ಸೇಠ್ ಹಾಗೂ ವಿನಯ್ ಕುಲಕರ್ಣಿ ಅವರು ಸಚಿವ ಸ್ಥಾನದ ಆಕಾಂಕ್ಷಿಗಳಾಗಿದ್ದರು. ಕಾರ್ಯಾಧ್ಯಕ್ಷ ಸ್ಥಾನ ನೀಡಿ ಅವರನ್ನು ಸಮಾಧಾನಪಡಿಸಲಾಗಿದೆ.

ಪ್ರಚಾರ ಸಮಿತಿಯ ಅಧ್ಯಕ್ಷರಾಗಿ ನೇಮಕಗೊಂಡಿರುವ ವಿನಯಕುಮಾರ್ ಸೊರಕೆ ಅವರು ಕಾರ್ಯಾಧ್ಯಕ್ಷ ಸ್ಥಾನಕ್ಕೆ ಲಾಬಿ ನಡೆಸಿದ್ದರು. ಅವರು ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದರು. ಸಹ ಅಧ್ಯಕ್ಷರಾಗಿ ನೇಮಕಗೊಂಡಿರುವ ಎಲ್. ಹನುಮಂತಯ್ಯ ಅವರು ಕೋಲಾರ ಕ್ಷೇತ್ರದ ಟಿಕೆಟ್ ಮೇಲೆ ಕಣ್ಣಿಟ್ಟಿದ್ದಾರೆ. ಪ್ರಚಾರ ಸಮಿತಿಯ ಸಹ ಅಧ್ಯಕ್ಷರಾಗಿ ನೇಮಕ ಮಾಡಿರುವುದರಿಂದ ಅವರಿಗೆ ಟಿಕೆಟ್ ಸಿಗುವ ಸಾಧ್ಯತೆ ಕಡಿಮೆ ಎಂದು ಮೂಲಗಳು ಹೇಳಿವೆ.

ಹಿರಿಯೂರು: ₹1.44 ಕೋಟಿ ಜಪ್ತಿ

ಹಿರಿಯೂರು (ಚಿತ್ರದುರ್ಗ): ತಾಲ್ಲೂಕಿನ ಜವನಗೊಂಡನಹಳ್ಳಿ ಗಡಿ ಸಮೀಪ ದಾಖಲೆ ಇಲ್ಲದೇ ಸಾಗಿಸುತ್ತಿದ್ದ ₹1.44 ಕೋಟಿ ನಗದನ್ನು ಸಂಚಾರಿ ಜಾರಿ ದಳದ ಅಧಿಕಾರಿಗಳು ಶನಿವಾರ ವಶಪಡಿಸಿಕೊಂಡಿದ್ದಾರೆ.

ಹಣ ಸಾಗಿಸುತ್ತಿದ್ದ ವಾಹನ ಸಿಎಂಎಸ್ ಕಂಪನಿಗೆ ಸೇರಿದ್ದು ಎನ್ನಲಾಗಿದೆ. ಈ ಕಂಪನಿಯು ತುಮಕೂರಿನಿಂದ ಶಿರಾ ತಾಲ್ಲೂಕು ವ್ಯಾಪ್ತಿಯ ಎಟಿಎಂಗಳಿಗೆ ಹಣ ತುಂಬಲಷ್ಟೇ ಅನುಮತಿ ಪಡೆದಿತ್ತು. ಹಿರಿಯೂರು ತಾಲ್ಲೂಕಿನ ಗಡಿ ಪ್ರವೇಶಿಸಿದ ವಾಹನವನ್ನು ಅಧಿಕಾರಿಗಳು ತಪಾಸಣೆಗೆ ಒಳಪಡಿಸಿದ್ದರು.

‘ಹಣವನ್ನು ಜಿಲ್ಲಾ ಪಂಚಾಯಿತಿ ಸಿಇಒ ನೇತೃತ್ವದಲ್ಲಿ ನಗದು ಜಪ್ತಿ ಸಮಿತಿಗೆ ಒಪ್ಪಿಸಲಾಗುವುದು’ ಎಂದು ತಹಶೀಲ್ದಾರ್ ರಾಜೇಶ್ ಕುಮಾರ್ ತಿಳಿಸಿದ್ದಾರೆ.

ಬೈಕ್‌ನಲ್ಲಿ ಸಾಗಿಸುತ್ತಿದ್ದ ₹10 ಲಕ್ಷ ವಶ- (ಕುಣಿಗಲ್- ತುಮಕೂರು ವರದಿ): ಬೈಕ್‌ನಲ್ಲಿ ಸಾಗಿಸುತ್ತಿದ್ದ, ಸೂಕ್ತ ದಾಖಲೆ ಇಲ್ಲದ ₹10 ಲಕ್ಷವನ್ನು ಚುನಾವಣಾ ಅಧಿಕಾರಿ ಮತ್ತು ಅಮೃತೂರು ಪೊಲೀಸರು ಶನಿವಾರ ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ. ಬೀರಾಗಾನಹಳ್ಳಿಯ ನಿವಾಸಿಯೊಬ್ಬರು ಬೈಕ್‌ನಲ್ಲಿ ₹10 ಲಕ್ಷ ಸಾಗಿಸುತ್ತಿದ್ದ ಬಗ್ಗೆ ಚುನಾವಣಾ ಅಧಿಕಾರಿ ಮಹೇಶ್ ಅವರಿಗೆ ಸುಳಿವು ದೊರೆತಿತ್ತು.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ: ಎಸ್/03/01/1499 ದಿನಾಂಕ: 19–03–2024

ಪ್ರಕಟಣೆ

ವಿಷಯ: ಸೌರ ವಿದ್ಯುತ್ ದರ ನಿರ್ಧರಣೆಯ ಚರ್ಚಾಪತ್ರ ಕುರಿತಂತೆ ಸಾರ್ವಜನಿಕರಿಂದ ಸಲಹೆ, ಸೂಚನೆ, ಅಭಿಪ್ರಾಯಗಳನ್ನು ಆಹ್ವಾನಿಸುವ ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು “ಸೌರ ವಿದ್ಯುತ್ ಘಟಕಗಳ ಯೋಜನೆಗಳು (ಮೇಲ್ಛಾವಣಿ ಸೌರ ಘಟಕಗಳ ಯೋಜನೆಗಳು ಸೇರಿದಂತೆ) ಮುಂದಿನ ನಿಯಂತ್ರಿತ ಅವಧಿ ಆ.ವ 2024–2025 ರವರೆಗೆ ದರ ನಿರ್ಧರಣೆ ಮತ್ತು ಮಾನದಂಡಗಳ” ಬಗ್ಗೆ ಚರ್ಚಾಪತ್ರವನ್ನು ಹೊರಡಿಸಿದೆ ಹಾಗೂ ಈ ಚರ್ಚಾಪತ್ರ ಕುರಿತಂತೆ, ಸಾರ್ವಜನಿಕರು / ಆಸಕ್ತರಿಂದ ಆಕ್ಷೇಪಣೆ / ಅಭಿಪ್ರಾಯ ಹಾಗೂ ಸಲಹೆಗಳನ್ನು ಆಯೋಗವು ಆಹ್ವಾನಿಸುತ್ತದೆ.

ಸದರಿ ಚರ್ಚಾ ಪತ್ರವನ್ನು ಆಯೋಗದ ಅಂತರ್ಜಾಲ ತಾಣ: https://kerc.karnataka.gov.in ಯಲ್ಲಿ ಪ್ರಕಟಿಸಲಾಗಿದೆ. ಆಸಕ್ತರು / ಸಾರ್ವಜನಿಕರು ತಮ್ಮ ಆಕ್ಷೇಪಣೆ / ಅಭಿಪ್ರಾಯ ಹಾಗೂ ಸಲಹೆಗಳಿದ್ದಲ್ಲಿ ದಿನಾಂಕ: **05–04–2024 ರೊಳಗೆ ಅಥವಾ ಅದಕ್ಕೂ ಮುಂಚಿತವಾಗಿ ಲಿಖಿತ ರೂಪದಲ್ಲಿ ಆಯೋಗದ ಕಾರ್ಯದರ್ಶಿಯವರಿಗೆ ಸಲ್ಲಿಸಬಹುದಾಗಿದೆ.**

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
ವಾಸಾಸಂಇ/ವಾ.ಪ್ರ/4401/2023–24

ಭಾನುವಾರ ● ಮಾರ್ಚ್ 24, 2024 ಪ್ರಜಾವಾಣಿ

ಆಯೋಗಕ್ಕೆ ದೂರು ಸಲ್ಲಿಸಲಾಗುವುದು– ಸಚಿವೆ ಆತಿಶಿ ● ಎಎಪಿ ಕಚೇರಿಯನ್ನು 'ಸೀಲ್' ಮಾಡಿಲ್ಲ– ಪೊಲೀಸರು

ಕಚೇರಿ ಪ್ರವೇಶಕ್ಕೆ ನಿರ್ಬಂಧ: ಎಎಪಿ ಆರೋಪ

ನವದೆಹಲಿ (ಪಿಟಿಐ): 'ದೆಹಲಿಯಲ್ಲಿರುವ ಆಮ್ ಆದ್ಮಿ ಪಕ್ಷದ (ಎಎಪಿ) ಕಚೇರಿಯನ್ನು ಎಲ್ಲ ಕಡೆಯಿಂದಲೂ 'ಸೀಲ್' ಮಾಡಲಾಗಿದ್ದು, ಪ್ರವೇಶ ನಿರ್ಬಂಧಿಸಲಾಗಿದೆ. ಈ ವಿಷಯವನ್ನು ಚುನಾವಣಾ ಆಯೋಗದ ಗಮನಕ್ಕೆ ತರಲಾಗುವುದು' ಎಂದು ದೆಹಲಿ ಸಚಿವೆ ಆತಿಶಿ ಶನಿವಾರ ಹೇಳಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಲೋಕಸಭಾ ಚುನಾವಣೆ ಸಮಯದಲ್ಲಿ ರಾಷ್ಟ್ರೀಯ ಪಕ್ಷವೊಂದರ ಕಚೇರಿಯ ಪ್ರವೇಶವನ್ನು ಹೀಗೆ ತಡೆಯಬಹುದೇ? ಸಂವಿಧಾನವು ಎಲ್ಲರಿಗೂ ಚುನಾವಣೆಯಲ್ಲಿ ಸಮಾನ ಅವಕಾಶವನ್ನು ನೀಡುತ್ತದೆ. ಆದರೆ ಕಚೇರಿಯನ್ನು 'ಸೀಲ್' ಮಾಡಿರುವುದು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ' ಎಂದು ತಿಳಿಸಿದ್ದಾರೆ.

ಈ ಆರೋಪವನ್ನು ದೆಹಲಿ ಪೊಲೀಸರು ಅಲ್ಲಗಳೆದಿದ್ದಾರೆ. 'ಎಎಪಿ ಕಚೇರಿಯನ್ನು ಪೊಲೀಸರು ಸೀಲ್ ಮಾಡಿಲ್ಲ. ಡಿಡಿಯು ಮಾರ್ಗದಲ್ಲಿ ಸಿಆರ್‌ಪಿಸಿ ಸೆಕ್ಷನ್ 144 ವಿಧಿಸಿರುವುದರಿಂದ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಪಕ್ಷ ಕಚೇರಿಯನ್ನು ನಿಷೇಧಿಸಲಾಗಿಲ್ಲ' ಎಂದು ಡಿಸಿಪಿ (ಕೇಂದ್ರ) ಎಂ. ಹರ್ಷವರ್ಧನ ಹೇಳಿದ್ದಾರೆ.

'ಎಎಪಿಯ 500ಕ್ಕೂ ಹೆಚ್ಚು ಕಾರ್ಯಕರ್ತರು ಮತ್ತು ನಾಯಕರು ಶನಿವಾರ ಶಹೀದಿ ಪಾರ್ಕ್‌ನಲ್ಲಿ ಜಮಾಯಿಸಿದ್ದರು. ಸಭೆಗೆ ಅನುಮತಿ ಪಡೆಯದ ಅವರು ಮೆರವಣಿಗೆ ಪ್ರಾರಂಭಿಸಿದರು. ಈ ಮಾರ್ಗದಲ್ಲಿ ನ್ಯಾಯಾಲಯ, ಹಲವು ರಾಜಕೀಯ ಪಕ್ಷಗಳ ಕಚೇರಿಗಳು ಇವೆ. ಅಲ್ಲದೆ ನಿಷೇಧಾಜ್ಞೆ ಇದ್ದ ಕಾರಣ ಅವರನ್ನು ತಡೆಯಲಾಯಿತು. ಈ ವೇಳೆ 25 ಮಂದಿಯನ್ನು ಬಂಧಿಸಿ ನಂತರ ಬಿಡುಗಡೆ ಮಾಡಲಾಯಿತು' ಎಂದು ಅವರು ವಿವರಿಸಿದ್ದಾರೆ.

ಸಚಿವ ಸೌರಭ್ ಕಿಡಿ: 'ಮಾದರಿ ನೀತಿ ಸಂಹಿತೆ ಜಾರಿ ಇರುವಾಗ ಕೇಂದ್ರ ಸರ್ಕಾರವು ಎಎಪಿ ಕೇಂದ್ರ ಕಚೇರಿಯ ಎಲ್ಲ ಪ್ರವೇಶಗಳನ್ನು ಬಂದ್ ಮಾಡಿರುವುದು ಸರಿಯಲ್ಲ' ಎಂದು ದೆಹಲಿಯ ಮತ್ತೊಬ್ಬ ಸಚಿವ ಸೌರಭ್ ಭಾರದ್ವಾಜ್ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

'ಹಣದ ಜಾಡು ಪತ್ತೆಗೆ ಇ.ಡಿ ವಿಫಲ': ಶರದ್ ಪಿ ರೆಡ್ಡಿ ಎಂಬುವರ ಹೇಳಿಕೆಯನ್ನು ಆಧರಿಸಿ ಇ.ಡಿ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಬಂಧಿಸಿದೆ. ಅರಬಿಂದೋ ಫಾರ್ಮಾದ ರೆಡ್ಡಿ ಅವರನ್ನು ಅಬಕಾರಿ ನೀತಿ ಪ್ರಕರಣದಲ್ಲಿ ನವೆಂಬರ್‌ನಲ್ಲಿ ಇ.ಡಿ ಬಂಧಿಸಲಾಗಿತ್ತು. ಅವರು ಚುನಾವಣಾ ಬಾಂಡ್‌ಗಳ ಮೂಲಕ ಬಿಜೆಪಿಗೆ ಕೋಟ್ಯಂತರ ರೂಪಾಯಿ ಪಾವತಿಸಿದ್ದಾರೆ. ಹೀಗಾಗಿ ಇ.ಡಿ ನೈಜವಾಗಿ ಕೇಸರಿ ಪಕ್ಷದ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಎಂದು ದೆಹಲಿ ಸಚಿವೆ ಆತಿಶಿ ಆಗ್ರಹಿಸಿದ್ದಾರೆ.

'ನಡ್ಡಾ ಅವರನ್ನು ಬಂಧಿಸಿ': ಬಿಜೆಪಿಯು ತನ್ನ ಬ್ಯಾಂಕ್ ಖಾತೆಗಳಲ್ಲಿ 'ಅಪರಾಧದ ಆದಾಯ' ಪಡೆದಿದೆ ಎಂದು ಆರೋಪಿಸಿದ ಸಚಿವೆ, ಕೇಸರಿ ಪಕ್ಷದ ಮುಖ್ಯಸ್ಥ ಜೆ.ಪಿ.ನಡ್ಡಾ ಅವರನ್ನು ಜಾರಿ ನಿರ್ದೇಶನಾಲಯ ಬಂಧಿಸಬೇಕು ಎಂದು ಎಎಪಿ ಮುಖಂಡರು ಆಗ್ರಹಿಸಿದ್ದಾರೆ.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಬಂಧನ ವಿರೋಧಿಸಿ ದೆಹಲಿಯ ಶಹೀದಿ ಪಾರ್ಕ್‌ನಲ್ಲಿ ಶನಿವಾರ ಎಎಪಿ ನಾಯಕರು ಮತ್ತು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಬಂಧನ ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ತನ್ನನ್ನು ಬಂಧಿಸಿರುವುದನ್ನು ಪ್ರಶ್ನಿಸಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಶನಿವಾರ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಈ ವಿಷಯವನ್ನು ತುರ್ತಾಗಿ, ಭಾನುವಾರ ವಿಚಾರಣೆಗೆ ತೆಗೆದುಕೊಳ್ಳುವಂತೆ ಕೇಜ್ರಿವಾಲ್ ಅವರ ಕಾನೂನು ತಂಡ ಕೋರಿದೆ ಎಂದು ಎಎಪಿ ಮೂಲಗಳು ತಿಳಿಸಿವೆ.

'ತನ್ನ ಬಂಧನ ಕಾನೂನು ಬಾಹಿರವಾಗಿದೆ. ತಕ್ಷಣ ಬಂಧನದಿಂದ ಬಿಡುಗಡೆ ಮಾಡಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ. ಆದರೆ, ಹೋಳಿ ರಜೆಯ ಕಾರಣ ನ್ಯಾಯಾಲಯವು ಇದೇ 27ಕ್ಕೂ ಮೊದಲು ಈ ಅರ್ಜಿ ವಿಚಾರಣೆ ನಡೆಸುವ ಸಾಧ್ಯತೆ ಕಡಿಮೆ ಎಂದು ಮೂಲಗಳು ತಿಳಿಸಿವೆ.

ದೇಶ ಸೇವೆ ಮುಂದುವರಿಯಲಿದೆ: ಅರವಿಂದ ಕೇಜ್ರಿವಾಲ್

ನವದೆಹಲಿ (ಪಿಟಿಐ): 'ನನ್ನ ಪ್ರೀತಿಯ ದೇಶವಾಸಿಗಳೇ, ನಾನು ಜೈಲಿನಲ್ಲಿದ್ದರೂ ಹೊರಗಿದ್ದರೂ ದೇಶಕ್ಕಾಗಿ ಸೇವೆ ಮುಂದುವರಿಸುತ್ತೇನೆ' ಎಂದು ದೆಹಲಿಯ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಶನಿವಾರ ಸಂದೇಶ ಕಳುಹಿಸಿದ್ದಾರೆ.

ಜಾರಿ ನಿರ್ದೇಶನಾಲಯದ ವಶದಲ್ಲಿರುವ ಅವರು ಕಳುಹಿಸಿರುವ ಸಂದೇಶವನ್ನು ಅವರ ಪತ್ನಿ ಸುನಿತಾ ಕೇಜ್ರಿವಾಲ್ ಶನಿವಾರ ಓದಿದರು. ಅದರ ವಿಡಿಯೊವನ್ನು ಎಎಪಿ ಹಂಚಿಕೊಂಡಿದೆ. 'ನಿಮ್ಮ ಮಗ ಮತ್ತು ಸಹೋದರ ಕೇಜ್ರಿವಾಲ್ ಅವರು ಕಸ್ಟಡಿಯಿಂದ ಇದನ್ನು ಕಳುಹಿಸಿದ್ದಾರೆ' ಎಂದರು.

'ನನ್ನ ಬಂಧನಕ್ಕಾಗಿ ಬಿಜೆಪಿಯನ್ನು ದ್ವೇಷಿಸಬೇಡಿ. ಅವರೂ ನಮ್ಮ ಸಹೋದರ ಸಹೋದರಿಯರು' ಎಂದು ಹೇಳಿದ್ದಾರೆ.

'ನಾನು ಹಲವಾರು ಹೋರಾಟಗಳಲ್ಲಿ ಭಾಗಿಯಾಗಿದ್ದೇನೆ ಮತ್ತು ಅದು ಮುಂದುವರಿಯುತ್ತದೆ ಎಂಬುದು ಗೊತ್ತಿದೆ. ಈ ಬಂಧನ ಆಶ್ಚರ್ಯ ತಂದಿಲ್ಲ' ಎಂದು ಅವರು ಸಂದೇಶದಲ್ಲಿ ಉಲ್ಲೇಖಿಸಿದ್ದಾರೆ.

'ನಾನು ಇಲ್ಲಿಯವರೆಗೆ ನೀಡಿರುವ ಯಾವುದೇ ಭರವಸೆಯನ್ನು ಈಡೇರಿಸುವಲ್ಲಿ ವಿಫಲನಾಗಿಲ್ಲ' ಎಂದಿರುವ ಅವರು, 'ಬಜೆಟ್‌ನಲ್ಲಿ ಘೋಷಿಸಿರುವಂತೆ ಅರ್ಹ ಫಲಾನುಭವಿ ಮಹಿಳೆಯರಿಗೆ ಮಾಸಿಕ ₹ 1,000 ಗೌರವಧನ ನೀಡುವ ಯೋಜನೆ ಜಾರಿಗೊಳಿಸುವುದಾಗಿ' ಭರವಸೆ ನೀಡಿದ್ದಾರೆ.

ತಾನು ಕಬ್ಬಿಣದಷ್ಟು ಬಲಶಾಲಿಯಾದ ವ್ಯಕ್ತಿ ಎಂದು ಹೇಳಿರುವ ಅವರು, ಜನರಿಗೆ ದೇವಸ್ಥಾನಗಳಿಗೆ ಭೇಟಿ ನೀಡಿ ಆಶೀರ್ವಾದ ಪಡೆಯುವಂತೆ ಕೋರಿದ್ದಾರೆ.

ಬಿಜೆಪಿ ಟೀಕೆ: ಬಂಧನದಲ್ಲಿದ್ದರೂ ಅರವಿಂದ ಕೇಜ್ರಿವಾಲ್ ಅವರು ದೆಹಲಿ ಮುಖ್ಯಮಂತ್ರಿಯಾಗಿ ಮುಂದುವರಿದಿರುವುದನ್ನು ಕೇಂದ್ರ ಸಚಿವ ಅನುರಾಗ್ ಠಾಕೂರ್ ಕಟುವಾಗಿ ಟೀಕಿಸಿದ್ದಾರೆ. 'ಇದು ದೇಶದ ರಾಜಕೀಯ ಪ್ರಯಾಣದಲ್ಲಿ ಅತ್ಯಂತ ದುರದೃಷ್ಟಕರ ಕ್ಷಣ ಮತ್ತು ಕೆಟ್ಟ ರೀತಿಯ ರಾಜಕೀಯ' ಎಂದು ಅವರು ದೂರಿದ್ದಾರೆ.

ಎಎಪಿ ಶಾಸಕನ ವಿರುದ್ಧ ಐ.ಟಿ ದಾಳಿ

ನವದೆಹಲಿ (ಪಿಟಿಐ): ತೆರಿಗೆ ವಂಚನೆ ತನಿಖೆಯ ಭಾಗವಾಗಿ ಎಎಪಿ ಶಾಸಕ ಗುಲಾಬ್ ಸಿಂಗ್ ಯಾದವ್ ಮತ್ತು ಇತರ ಕೆಲವರಿಗೆ ಸೇರಿದ ಸ್ಥಳಗಳ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶನಿವಾರ ಶೋಧ ನಡೆಸಿದ್ದಾರೆ.

ಎರಡು ಬಾರಿ ಶಾಸಕರಾಗಿರುವ ಯಾದವ್ (45) ಅವರು, ದೆಹಲಿ ವಿಧಾನಸಭೆಯಲ್ಲಿ ಮಟಿಯಾಲಾ ಕ್ಷೇತ್ರದ ಪ್ರತಿನಿಧಿಯಾಗಿದ್ದಾರೆ.

ದೆಹಲಿಯ ಘುಮ್ಮನ್‌ಹೆಡಾ ಗ್ರಾಮ ಸೇರಿದಂತೆ ಇತರ ಸ್ಥಳಗಳಲ್ಲಿ ದಾಳಿ ನಡೆದಿದೆ. ದೆಹಲಿ ಪೊಲೀಸರ ಬೆಂಗಾವಲಿನಲ್ಲಿ ತೆರಿಗೆ ಅಧಿಕಾರಿಗಳು ಶೋಧ ಕಾರ್ಯ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ವೇಳೆ ಕೆಲವು ದಾಖಲೆಗಳನ್ನು ವಶಕ್ಕೆ ಪಡೆದಿರುವ ಅಧಿಕಾರಿಗಳು, ಕೆಲ ವ್ಯಕ್ತಿಗಳನ್ನು ವಿಚಾರಣೆಗೆ ಒಳಪಡಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಕವಿತಾ ಕಸ್ಟಡಿ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದ ಆರೋಪಿ ಬಿಆರ್‌ಎಸ್ ನಾಯಕಿ ಕೆ. ಕವಿತಾ ಅವರ ಜಾರಿ ನಿರ್ದೇಶನಾಲಯದ (ಇ.ಡಿ) ಕಸ್ಟಡಿ ಅವಧಿಯನ್ನು ನ್ಯಾಯಾಲಯವು ಮಾರ್ಚ್ 26ರವರೆಗೆ ವಿಸ್ತರಿಸಿ ಶನಿವಾರ ಆದೇಶಿಸಿತು.

ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಪುತ್ರಿ ಕವಿತಾ ಅವರು, ಅಬಕಾರಿ ನೀತಿ ಹಗರಣದ ಪ್ರಮುಖ ಆರೋಪಿಗಳಲ್ಲಿ ಒಬ್ಬರಾಗಿದ್ದಾರೆ. ಅಬಕಾರಿ ನೀತಿಯ ಅನುಕೂಲ ಪಡೆದುಕೊಳ್ಳಲು ದೆಹಲಿಯ ಆಡಳಿತಾರೂಢ ಆಮ್ ಆದ್ಮಿ ಪಕ್ಷಕ್ಕೆ ₹100 ಕೋಟಿ ನೀಡಿದ್ದಾರೆ ಎಂದು ಇ.ಡಿ ಆರೋಪಿಸಿದೆ.

ಕಸ್ಟಡಿ ಅವಧಿಯನ್ನು ಐದು ದಿನ ವಿಸ್ತರಿಸುವಂತೆ ಇ.ಡಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯವು ವಿಚಾರಣೆ ನಡೆಸಿತು.

ಕಸ್ಟಡಿ ಅವಧಿಯನ್ನು ಕೋರ್ಟ್ ವಿಸ್ತರಿಸಿತು.

ಕವಿತಾ ಅವರನ್ನು ಮಾರ್ಚ್ 15ರಂದು ಬಂಧಿಸಲಾಗಿತ್ತು.

ಕವಿತಾ ಸೋದರಳಿಯ ಭಾಗಿ ಜಾರಿ ನಿರ್ದೇಶನಾಲಯ ಆರೋಪ

ನವದೆಹಲಿ (ಪಿಟಿಐ): ಬಿಆರ್‌ಎಸ್ ನಾಯಕಿ ಕೆ. ಕವಿತಾ ಅವರ ಸೋದರಳಿಯ ಕೂಡ ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂದು ಇ.ಡಿ ಆರೋಪಿಸಿದೆ.

ಈ ಪ್ರಕರಣದಲ್ಲಿ ಕವಿತಾ ಅವರ ಹತ್ತಿರದ ಸಂಬಂಧಿ ಮೇಕಾ ಶ್ರೀ ಸರನ್ ಪಾತ್ರ ಇರುವುದು ಕಂಡುಬಂದಿದ್ದರಿಂದ ಶನಿವಾರ ಸರನ್ ಅವರಿಗೆ ಸೇರಿದ ಹಲವು ಸ್ಥಳಗಳಲ್ಲಿ ಶೋಧ ನಡೆಸಿರುವುದಾಗಿ ದೆಹಲಿಯ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ನ್ಯಾಯಾಲಯದ ವಿಶೇಷ ನ್ಯಾಯಾಧೀಶ ಕಾವೇರಿ ಬವೇಜಾ ಅವರಿಗೆ ಇ.ಡಿ. ತಿಳಿಸಿದೆ.

ಮಾರ್ಚ್ 15 ರಂದು ಇ.ಡಿ ದಾಳಿ ನಡೆಸಿದಾಗ ಕವಿತಾ ಅವರ ಮನೆಯಲ್ಲಿ ಸರನ್ ಇದ್ದರು. ಸರನ್ ಅವರನ್ನು ಎರಡು ಬಾರಿ ವಿಚಾರಣೆಗೆ ಕರೆದರೂ ಹಾಜರಾಗಿಲ್ಲ. ವಿಚಾರಣೆಗೆ ಸಹಕರಿಸುತ್ತಿಲ್ಲ. ತನಿಖೆಗೆ ಬೇಕಾದ ಹಲವು ಮಾಹಿತಿಗಳು ಸರನ್ ಬಳಿ ಇದೆ ಎಂದೂ ಇ.ಡಿ ನ್ಯಾಯಾಲಯಕ್ಕೆ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಕಾಂಗ್ರೆಸ್ ಬಳಿ ಹಲವು ಬ್ಯಾಂಕ್ ಖಾತೆಗಳಿವೆ: ಬಿಜೆಪಿ

ನವದೆಹಲಿ (ಪಿಟಿಐ): ಕಾಂಗ್ರೆಸ್ ಹಲವು ಬ್ಯಾಂಕ್ ಖಾತೆ ಹೊಂದಿದೆ. ಆದಾಯ ತೆರಿಗೆ ಬಾಕಿ ಕಾರಣದಿಂದ ಈ ಪೈಕಿ ಮೂರರಿಂದ ನಾಲ್ಕು ಖಾತೆಗಳನ್ನು ಮಾತ್ರ ಜಪ್ತಿ ಮಾಡಲಾಗಿದೆ ಎಂದು ಬಿಜೆಪಿ ಶನಿವಾರ ಹೇಳಿದೆ.

ಲೋಕಸಭಾ ಚುನಾವಣೆಯಲ್ಲಿ ಸೋಲುವ ಭೀತಿಯಿಂದ ಕಾಂಗ್ರೆಸ್ ದಾರಿತಪ್ಪಿಸುವ ಹೇಳಿಕೆ ನೀಡುತ್ತಿದೆ ಎಂದು ಆರೋಪಿಸಿದೆ.

'ಖಾತೆಯಲ್ಲಿರುವ ₹125 ಕೋಟಿಯನ್ನು ಮಾತ್ರ ಆದಾಯ ತೆರಿಗೆ ಇಲಾಖೆ ಜಪ್ತಿ ಮಾಡಿದೆ. ಇದರ ಹೊರತಾಗಿ ಬೇರೆ ಹಣವನ್ನು ಠೇವಣಿ ಇಡಬಹುದು ಅಥವಾ ತೆಗೆಯಲೂಬಹುದು' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರಾ ತಿಳಿಸಿದರು.

'ಕಾಂಗ್ರೆಸ್ ವಿವಿಧ ಪ್ಯಾನ್ ಸಂಖ್ಯೆಯ ಮೂಲಕ ಹಲವು ಬ್ಯಾಂಕ್ ಖಾತೆ ತೆರೆದು ಅವುಗಳಲ್ಲಿ ಸುಮಾರು ₹1,000 ಕೋಟಿ ಇಟ್ಟಿದೆ. ಅಲ್ಲದೆ ಪಕ್ಷವು ₹500 ಕೋಟಿ ನಿಶ್ಚಿತ ಠೇವಣಿ ಹೊಂದಿದೆ' ಎಂದು ಮಾಧ್ಯಮ ವರದಿ ಉಲ್ಲೇಖಿಸಿ ಹೇಳಿದರು.

'ಪಕ್ಷದ ಬಳಿ ರೈಲು ಟಿಕೆಟ್ ಖರೀದಿಸಲೂ ಹಣವಿಲ್ಲ ಎನ್ನುತ್ತಾರೆ ರಾಹುಲ್. ಆದರೆ ಖಾಸಗಿ ವಿಮಾನಗಳಲ್ಲಿ ನಿತ್ಯವೂ ಸಂಚರಿಸುತ್ತಾರೆ' ಎಂದು ಅಣಕಿಸಿದರು.

ಮಹುವಾ ಮನೆ ಮೇಲೆ ಸಿಬಿಐ ದಾಳಿ

ನವದೆಹಲಿ (ಪಿಟಿಐ): ಸಂಸತ್‌ನಲ್ಲಿ ಪ್ರಶ್ನೆ ಕೇಳಲು ಲಂಚ ಪಡೆಯಲಾಗಿದೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ತೃಣಮೂಲ ಕಾಂಗ್ರೆಸ್‌ನ ಮಾಜಿ ಸಂಸದೆ ಮಹುವಾ ಮೊಯಿತ್ರಾ ಅವರ ನಿವಾಸ ಹಾಗೂ ಅವರಿಗೆ ಸೇರಿದ ಹಲವು ಸ್ಥಳಗಳಲ್ಲಿ ಸಿಬಿಐ ಶನಿವಾರ ಶೋಧ ಕಾರ್ಯಾಚರಣೆ ನಡೆಸಿದೆ.

ಕೋಲ್ಕತ್ತದಲ್ಲಿರುವ ಮಹುವಾ ನಿವಾಸ ಹಾಗೂ ಪಶ್ಚಿಮ ಬಂಗಾಳದ ನಾಡಿಯಾ ಜಿಲ್ಲೆಯ ಕೃಷ್ಣನಗರದಲ್ಲಿರುವ ಅವರ ಅಪಾರ್ಟ್‌ಮೆಂಟ್ ಸೇರಿದಂತೆ ಇತರ ನಗರಗಳಲ್ಲಿರುವ ಮನೆಗಳಲ್ಲಿ ಸಿಬಿಐ ಅಧಿಕಾರಿಗಳ ತಂಡಗಳು ಶೋಧ ನಡೆಸಿವೆ.

ಲೋಕಪಾಲ್ ನಿರ್ದೇಶನದಂತೆ ಪ್ರಕರಣದಲ್ಲಿ ಮಹುವಾ ವಿರುದ್ಧ ಸಿಬಿಐ ಗುರುವಾರ ಎಫ್‌ಐಆರ್ ದಾಖಲಿಸಿತ್ತು. ಪ್ರಕರಣದ ಕುರಿತು ಆರು ತಿಂಗಳೊಳಗಾಗಿ ವರದಿ ಸಲ್ಲಿಸುವಂತೆ ಸಿಬಿಐಗೆ ಲೋಕಪಾಲ್ ನಿರ್ದೇಶಿಸಿದೆ.

ಟಿ.ಎಂ. ಕೃಷ್ಣಗೆ ಸ್ಟಾಲಿನ್ ಬೆಂಬಲ

ಚೆನ್ನೈ (ಪಿಟಿಐ): ಕರ್ನಾಟಕ ಶಾಸ್ತ್ರೀಯ ಸಂಗೀತ ಪ್ರಕಾರದ ಖ್ಯಾತ ಗಾಯಕ ಟಿ.ಎಂ. ಕೃಷ್ಣ ಅವರು ಪ್ರಗತಿಪರ ಸಿದ್ಧಾಂತವನ್ನು ಹೊಂದಿದ್ದಕ್ಕಾಗಿಯೇ ಒಂದು ವರ್ಗದವರು ಅವರನ್ನು ದ್ವೇಷಿಸುತ್ತಾರೆ ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಶನಿವಾರ ಹೇಳಿದರು.

'ಕೆಲವು ಜನರು ದ್ವೇಷ ಮತ್ತು ಇತರ ಬಾಹ್ಯ ಕಾರಣಗಳಿಂದ ಕೃಷ್ಣ ಅವರನ್ನು ಟೀಕಿಸುತ್ತಿರುವುದು ವಿಷಾದದ ಸಂಗತಿ. ಆದರೆ ಕೃಷ್ಣ ಅವರು ನಿರಂತರವಾಗಿ ಜನಸಾಮಾನ್ಯರ ಬಗ್ಗೆ ಧ್ವನಿ ಎತ್ತುತ್ತಿದ್ದಾರೆ' ಎಂದು ಸಾಮಾಜಿಕ ಮಾಧ್ಯಮ ದಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.

3ರಿಂದ 6ನೇ ತರಗತಿವರೆಗೆ ಹೊಸ ಪಠ್ಯಕ್ರಮ

ನವದೆಹಲಿ (ಪಿಟಿಐ): ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯು (ಎನ್‌ಸಿಇಆರ್‌ಟಿ) 3ರಿಂದ 6ನೇ ತರಗತಿಯವರೆಗೆ ಹೊಸ ಪಠ್ಯಕ್ರಮವನ್ನು ಪ್ರಕಟಿಸಲಿದೆ.

'2024–25ನೇ ಶೈಕ್ಷಣಿಕ ಸಾಲಿನ ಏಪ್ರಿಲ್ 1ರಿಂದಲೇ ಈ ಹೊಸ ಪಠ್ಯಕ್ರಮ ಜಾರಿಯಾಗಲಿದೆ. ಉಳಿದ ತರಗತಿಗಳಿಗೆ ಬದಲಾವಣೆಯಿಲ್ಲ' ಎಂದು ಸಿಬಿಎಸ್‌ಇ ಅಧಿಕಾರಿಗಳು ತಿಳಿಸಿದ್ದಾರೆ.

'ಹೊಸ ಪಠ್ಯಕ್ರಮದ ಪುಸ್ತಕಗಳನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು ಎಂದು ಎನ್‌ಸಿಇಆರ್‌ಟಿಯು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಗೆ (ಸಿಬಿಎಸ್‌ಇ) ತಿಳಿಸಿದೆ' ಎಂದು ಸಿಬಿಎಸ್‌ಇಯು ತನ್ನ ಅಧೀನದಲ್ಲಿ ಬರುವ ಶಾಲೆಗಳಿಗೆ ಮಾಹಿತಿ ನೀಡಿದೆ.

'ಎನ್‌ಸಿಇಆರ್‌ಟಿ ಪ್ರಕಟಿಸುವ ಹೊಸ ಪಠ್ಯಕ್ರಮವನ್ನೇ ಶಾಲೆಗಳಲ್ಲಿ ಬೋಧಿಸಿ' ಎಂದು ಸಿಬಿಎಸ್‌ಇಯ ನಿರ್ದೇಶಕ (ಅಕಾಡೆಮಿಕ್ಸ್) ಜೋಸೆಫ್ ಇಮ್ಯಾನುಯೆಲ್ ಸೂಚಿಸಿದ್ದಾರೆ.

18 ವರ್ಷದ ನಂತರ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನ (ಎನ್‌ಸಿಎಫ್) ಪರಿಷ್ಕರಣೆ ನಡೆಸುವಂತೆ ಶಿಕ್ಷಣ ಸಚಿವಾಲಯವು ಕಳೆದ ವರ್ಷ ಸೂಚಿಸಿತ್ತು. 1975, 1988, 2000 ಹಾಗೂ 2005ರಲ್ಲಿ ಪರಿಷ್ಕರಣೆ ನಡೆದಿತ್ತು.

ಹಿಂದಿನ ವರ್ಷ ಪಠ್ಯದಿಂದ ಮೊಘಲ್ ಸಾಮ್ರಾಜ್ಯ, ಮೊಘಲ್ ನ್ಯಾಯಾಲಯ, 2022ರ ಗುಜ ರಾತ್ ಗಲಭೆ, ಶೀತರ ಸಮರಕ್ಕೆ ಸಂಬಂಧಿಸಿದ ಅಧ್ಯಾಯಗಳನ್ನು ಕೈಬಿಡಲಾಗಿತ್ತು. ಇದು ವಿವಾದಕ್ಕೂ ಕಾರಣವಾಗಿತ್ತು. ವಿರೋಧ ಪಕ್ಷಗಳಿಂದ 'ಇತಿಹಾಸ ಅಳಿಸುವ' ಪ್ರಕ್ರಿಯೆ ಎಂಬ ಟೀಕೆಯೂ ವ್ಯಕ್ತವಾಗಿತ್ತು.

ಮುನ್ನೆಚ್ಚರಿಕೆಯ ಬಂಧನ: ಸಂಯಮಕ್ಕೆ ಸೂಚನೆ

ನವದೆಹಲಿ (ಪಿಟಿಐ): 'ಮುನ್ನೆಚ್ಚರಿಕೆಯ ಕಾರಣಕ್ಕೆ ವ್ಯಕ್ತಿಯನ್ನು ಬಂಧಿಸುವುದು ತೀರಾ ಕಠಿಣವಾದ ಕ್ರಮ. ಈ ಅಧಿಕಾರವನ್ನು ಮನಸ್ಸಿಗೆ ಬಂದ ಬಗೆಯಲ್ಲಿ ಬಳಸುವುದನ್ನು ಅಥವಾ ತೀರಾ ಸಹಜವಾಗಿ ಬಳಕೆ ಮಾಡುವ ಪ್ರವೃತ್ತಿಯನ್ನು ಮೊಳಕೆಯಲ್ಲಿಯೇ ಚಿವುಟಿಹಾಕಬೇಕು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಬಂಧಿತ ವ್ಯಕ್ತಿಯೊಬ್ಬ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿದ ತೆಲಂಗಾಣ ಹೈಕೋರ್ಟ್ ಕ್ರಮವನ್ನು ಸುಪ್ರೀಂ ಕೋರ್ಟ್ ಅಸಿಂಧುಗೊಳಿಸಿದೆ. 'ಮುನ್ನೆಚ್ಚರಿಕೆಯ ಬಂಧನದ ಉದ್ದೇಶವು, ವ್ಯಕ್ತಿಯೊಬ್ಬ ಎಸಗಿದ ಕೃತ್ಯಕ್ಕೆ ಆತನನ್ನು ಶಿಕ್ಷಿಸುವುದಲ್ಲ; ಬದಲಿಗೆ, ಆತ ತಪ್ಪು ಮಾಡುವುದನ್ನು ತಡೆಯುವುದ' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠವು ಹೇಳಿದೆ.

'ರಾಜ್ಯದ ಪೊಲೀಸ್ ವ್ಯವಸ್ಥೆಗೆ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ಪರಿಸ್ಥಿತಿಯನ್ನು ನಿರ್ವಹಿಸಲು ಆಗುವುದಿಲ್ಲ ಎನ್ನುವುದು ಮುನ್ನೆಚ್ಚರಿಕೆಯ ಬಂಧನಕ್ಕೆ ಮುಂದಾಗುವುದಕ್ಕೆ ನೆಪ ಆಗಬಾರದು' ಎಂದು ಪೀಠವು ಹೇಳಿದೆ. ಈ ಪೀಠದಲ್ಲಿ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರೂ ಇದ್ದರು.

'ಮುನ್ನೆಚ್ಚರಿಕೆಯ ಬಂಧನ ಎಂಬುದು ತೀರಾ ನಿರ್ದಯವಾದ ಕ್ರಮ. ಹೀಗಾಗಿ, ಅಧಿಕಾರವನ್ನು ಮನಸ್ಸಿಗೆ ಬಂದ ಬಗೆಯಲ್ಲಿ ಬಳಸಿ ಅಥವಾ ತೀರಾ ಸಹಜವಾಗಿ ಬಳಸಿ ಬಂಧನಕ್ಕೆ ಆದೇಶಿಸುವುದುನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕಬೇಕು' ಎಂದು ಪೀಠವು ಹೇಳಿದೆ.

ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದ ವ್ಯಕ್ತಿಯನ್ನು 'ತೆಲಂಗಾಣ ಅಪಾಯಕಾರಿ ಕೃತ್ಯಗಳ ನಿಯಂತ್ರಣ ಕಾಯ್ದೆ–1986' ಅಡಿಯಲ್ಲಿ, ರಾಚಕೊಂಡ ಪೊಲೀಸ್ ಆಯುಕ್ತರ ಆದೇಶದ ಅನುಸಾರ ತೆಲಂಗಾಣದಲ್ಲಿ 2023ರ ಸೆ.12ರಂದು ಬಂಧಿಸಲಾಗಿತ್ತು. ಬಂಧನ ಆದೇಶವನ್ನು ರದ್ದು ಮಾಡಬೇಕು ಎಂಬ ಕೋರಿಕೆಯನ್ನು ತೆಲಂಗಾಣ ಹೈಕೋರ್ಟ್ ತಿರಸ್ಕರಿಸಿತ್ತು.

ಯಾವುದೇ ಕಾಯ್ದೆಯ ಅಡಿಯಲ್ಲಿನ 'ಮುನ್ನೆಚ್ಚರಿಕೆಯ ಬಂಧನ' ಆದೇಶವನ್ನು ಅತ್ಯಂತ ಜಾಗರೂಕತೆಯಿಂದ, ಸಂಯಮದಿಂದ ಬಳಕೆ ಮಾಡಬೇಕು ಎಂಬುದು ಈಗಾಗಲೇ ಒಪ್ಪಿತವಾಗಿರುವ ಸಂಗತಿ ಎಂದು ಪೀಠವು ಹೇಳಿದೆ.

'ದರೋಡೆಯಂತಹ ಆರೋಪಗಳಿಗೆ ಸಂಬಂಧಿಸಿದಂತೆ ಎರಡು ಎಫ್‌ಐಆರ್‌ಗಳು ದಾಖಲಾಗಿವೆ ಎಂಬುದು, ಆ ವ್ಯಕ್ತಿಯು ಗೂಂಡಾ ಎಂದು ಭಾವಿಸಿ 1986ರ ಕಾಯ್ದೆಯನ್ನು ಬಳಸಿ ಮುನ್ನೆಚ್ಚರಿಕೆಯ ಕ್ರಮವಾಗಿ ವ್ಯಕ್ತಿಯನ್ನು ಬಂಧಿಸುವುದಕ್ಕೆ ಆಧಾರ ಆಗಬೇಕಿರಲಿಲ್ಲ ಎಂಬುದು ನಮ್ಮ ಅಭಿಪ್ರಾಯ' ಎಂದು ಪೀಠವು ಈಚೆಗೆ ನೀಡಿದ ತೀರ್ಪಿನಲ್ಲಿ ಹೇಳಿದೆ.

ರಾಷ್ಟ್ರಪತಿ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಕೇರಳ ಅರ್ಜಿ

ನವದೆಹಲಿ (ಪಿಟಿಐ): ಕೇರಳ ವಿಧಾನಸಭೆಯು ಅಂಗೀಕಾರ ನೀಡಿರುವ ನಾಲ್ಕು ಮಸೂದೆಗಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂಕಿತ ಹಾಕುತ್ತಿಲ್ಲ ಎಂದು ದೂರಿ ಕೇರಳ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ರಾಷ್ಟ್ರಪತಿ ವಿರುದ್ಧ ಕೋರ್ಟ್‌ಗೆ ಅರ್ಜಿ ಸಲ್ಲಿಸಿರುವುದು ಅಸಾಮಾನ್ಯ ನಡೆ ಎಂದು ವಿಶ್ಲೇಷಿಸಲಾಗಿದೆ.

ವಿಶ್ವವಿದ್ಯಾಲಯ ಕಾನೂನುಗಳ (ತಿದ್ದುಪಡಿ) (ನಂ. 2) ಮಸೂದೆ –2021, ಕೇರಳ ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆ – 2022, ವಿಶ್ವವಿದ್ಯಾಲಯ ಕಾನೂನುಗಳ (ತಿದ್ದುಪಡಿ) ಮಸೂದೆ – 2022 ಹಾಗೂ ವಿಶ್ವವಿದ್ಯಾಲಯ ಕಾನೂನುಗಳ (ತಿದ್ದುಪಡಿ) (ನಂ. 3) ಮಸೂದೆ – 2022ಕ್ಕೆ ರಾಷ್ಟ್ರಪತಿ ಯಾವುದೇ ಕಾರಣ ಉಲ್ಲೇಖಿಸದೆ ಅಂಕಿತ ಹಾಕದೆ ಇರುವುದನ್ನು ಅಸಾಂವಿಧಾನಿಕ ಎಂದು ಘೋಷಿಸುವಂತೆ ಕೇರಳ ಸರ್ಕಾರ ಕೋರಿದೆ.

ಕೇಂದ್ರ ಸರ್ಕಾರ, ರಾಷ್ಟ್ರಪತಿಯವರ ಕಾರ್ಯದರ್ಶಿ, ಕೇರಳ ರಾಜ್ಯಪಾಲ ಆಸಿಫ್ ಮೊಹಮ್ಮದ್ ಖಾನ್ ಮತ್ತು ಅವರ ಹೆಚ್ಚುವರಿ ಕಾರ್ಯದರ್ಶಿಯನ್ನು ಪ್ರತಿವಾದಿಗಳು ಎಂದು ಅರ್ಜಿಯಲ್ಲಿ ಹೆಸರಿಸಲಾಗಿದೆ.

ರಾಜ್ಯಪಾಲರು ಈ ನಾಲ್ಕು ಮಸೂದೆಗಳು ಸೇರಿ ಒಟ್ಟು ಏಳು ಮಸೂದೆಗಳನ್ನು ರಾಷ್ಟ್ರಪತಿಯವರ ಪರಿಶೀಲನೆಗೆ ಇರಿಸಿಕೊಂಡ ಕ್ರಮವನ್ನು ಅಸಾಂವಿಧಾನಿಕ ಎಂದು ಘೋಷಿಸಬೇಕು ಎಂಬ ಕೋರಿಕೆಯನ್ನು ಕೂಡ ಸರ್ಕಾರವು ಕೋರ್ಟ್ ಮುಂದೆ ಇರಿಸಿದೆ. ರಾಜ್ಯದ ವ್ಯಾಪ್ತಿಯ ವಿಷಯಗಳಿಗೆ ಸಂಬಂಧಿಸಿದ ಈ ನಾಲ್ಕು ಮಸೂದೆಗಳಿಗೆ, ಯಾವ ನಿರ್ದಿಷ್ಟ ಕಾರಣವೂ ಇಲ್ಲದೆ, ಅಂಕಿತ ತಡೆಹಿಡಿಯುವಂತೆ ಕೇಂದ್ರ ಸರ್ಕಾರವು ರಾಷ್ಟ್ರಪತಿಗೆ ನೀಡಿರುವ ಸಲಹೆಯು ಸಂವಿಧಾನದ 14ನೆಯ ವಿಧಿಯ ಉಲ್ಲಂಘನೆ ಇದೆ ಎಂದು ಕೇರಳ ಸರ್ಕಾರವು ಅರ್ಜಿಯಲ್ಲಿ ಹೇಳಿದೆ.

ಹಿಂದೂ ಮಹಾಸಾಗರದಲ್ಲಿ ಮಿಲಿಟರಿ ಚಟುವಟಿಕೆ ಹೆಚ್ಚಿದ ಹೊತ್ತಿನಲ್ಲಿ ಕ್ರಮ

35 ಯುದ್ಧನೌಕೆಗಳ ನಿಯೋಜನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತೀಯ ನೌಕಾಪಡೆಯು ಹಿಂದೂ ಮಹಾಸಾಗರ ಪ್ರದೇಶದಲ್ಲಿ ಬೃಹತ್ ಪ್ರಮಾಣದಲ್ಲಿ ನೌಕೆಗಳ ನಿಯೋಜನೆಯಲ್ಲಿ ತೊಡಗಿದೆ. 11 ಜಲಾಂತರ್ಗಾಮಿ ನೌಕೆಗಳು, 35 ಯುದ್ಧನೌಕೆಗಳು ಈ ಪ್ರದೇಶದಲ್ಲಿ ನಿಯೋಜನೆಗೊಂಡಿವೆ.

ವಾಣಿಜ್ಯ ಹಡಗುಗಳಿಗೆ ದೇಶದ ಪಶ್ಚಿಮ ಸಮುದ್ರದಲ್ಲಿ ರಕ್ಷಣೆ ಒದಗಿಸುವುದು ಮಾತ್ರವೇ ಅಲ್ಲದೆ, ಹಿಂದೂ ಮಹಾಸಾಗರದಲ್ಲಿ ಚೀನಾದ ಅಸ್ತಿತ್ವವು ಹೆಚ್ಚು ಬಲಗೊಳ್ಳುತ್ತಿರುವ ಸಂದರ್ಭದಲ್ಲಿ ಇತರ ಕೆಲವು ಉದ್ದೇಶಗಳಾಗಿಯೂ ಈ ನಿಯೋಜನೆ ನಡೆದಿದೆ.

ಅರಬ್ಬಿ ಸಮುದ್ರದ ಉತ್ತರ ಭಾಗದಲ್ಲಿ, ಕೆಂಪು ಸಮುದ್ರ, ಏಡನ್ ಕೊಲ್ಲಿ ಮತ್ತು ಸೊಮಾಲಿಯಾದ ಪೂರ್ವ ಭಾಗದ ಸಮುದ್ರ ಪ್ರದೇಶದಲ್ಲಿ ನೌಕಾಪಡೆಯು 10 ಯುದ್ಧನೌಕೆಗಳನ್ನು ನಿಯೋಜಿಸಿದೆ. ಕಡಲ್ಗಳ್ಳರ ವಿರುದ್ಧ ಕಾರ್ಯಾಚರಣೆಗೆ ಹಾಗೂ ಕ್ಷಿಪಣಿಗಳು ಮತ್ತು ಡ್ರೋನ್ ದಾಳಿಗೆ ತುತ್ತಾದ ನೌಕೆಗಳಿಗೆ ನೆರವು ನೀಡುವ ಉದ್ದೇಶ ಈ ನಿಯೋಜನೆಗೆ ಇದೆ. ಇನ್ನುಳಿದ ಯುದ್ಧನೌಕೆಗಳು ಬಂಗಾಳ ಕೊಲ್ಲಿ ಹಾಗೂ ಹಿಂದೂ ಮಹಾಸಾಗರದ ದಕ್ಷಿಣ ಭಾಗದಲ್ಲಿ ನಿಯೋಜನೆಗೊಂಡಿವೆ.

'11 ಜಲಾಂತರ್ಗಾಮಿ ನೌಕೆಗಳು, 35 ಯುದ್ಧ ನೌಕೆಗಳು ಮಾತ್ರವೇ ಅಲ್ಲದೆ ಐದು ವಿಮಾನಗಳು ಕೂಡ ಸಮುದ್ರ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತ ಇವೆ. ಈ ಪೈಕಿ 10 ಯುದ್ಧನೌಕೆಗಳು ಪಶ್ಚಿಮದ ಸಮುದ್ರದಲ್ಲಿ ಇವೆ. ಈ ಪ್ರದೇಶವು ವಾಣಿಜ್ಯ ಉದ್ದೇಶದ ಹಡಗುಗಳಿಗೆ ಸುರಕ್ಷಿತವಾಗುವವರೆಗೂ ಇಲ್ಲಿ ನಿಯೋಜನೆ ಮುಂದುವರಿಯಲಿದೆ' ಎಂದು ನೌಕಾಪಡೆಯ ಮುಖ್ಯಸ್ಥ, ಅಡ್ಮಿರಲ್ ಆರ್. ಹರಿ ಕುಮಾರ್ ಅವರು ಶನಿವಾರ ಹೇಳಿದ್ದಾರೆ.

ಹರಿ ಕುಮಾರ್ ಈಚೆಗೆ ವಿಶಾಖಪಟ್ಟಣದಲ್ಲಿ 3 ದಿನ ಇದ್ದು, ಅಲ್ಲಿಯ ಕಾರ್ಯಾಚರಣೆಗಳ ಪರಿಶೀಲನೆ ನಡೆಸಿದ್ದರು. ಈಗ ನಡೆದಿರುವುದು ಜಲಾಂತರ್ಗಾಮಿ ನೌಕೆಗಳ ಅತಿದೊಡ್ಡ ನಿಯೋಜನೆ ಆಗಿರಬಹುದು ಎಂದು ಹಿರಿಯ ಅಧಿಕಾರಿಗಳು ಹೇಳಿದ್ದಾರೆ.

ಹಿಂದೂ ಮಹಾಸಾಗರದಲ್ಲಿ ಚೀನಾದ 13 ಹಡುಗಳು ಸಾಗುತ್ತಿರುವ ಹೊತ್ತಿನಲ್ಲಿ ಭಾರತೀಯ ನೌಕಾಪಡೆಯ ಯುದ್ಧನೌಕೆಗಳು ಹಾಗೂ ಜಲಾಂತರ್ಗಾಮಿ ನೌಕೆಗಳು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಿಯೋಜನೆಗೊಂಡಿವೆ. ಚೀನಾದ 13 ನೌಕೆಗಳಲ್ಲಿ ಆರು ನೌಕೆಗಳು ಮಿಲಿಟರಿಯವು. ಚೀನಾ ಪೀಪಲ್ಸ್ ಲಿಬರೇಷನ್ ಆರ್ಮಿಯ ಆರರಿಂದ ಎಂಟು ಹಡಗುಗಳು ಈ ಪ್ರದೇಶದಲ್ಲಿ ಇರುತ್ತವೆ. ಅಲ್ಲದೆ, ಚೀನಾದ ಜಲಾಂತರ್ಗಾಮಿ ನೌಕೆಗಳು ಕಾಲಕಾಲಕ್ಕೆ ಇಲ್ಲಿಗೆ ಬಂದುಹೋಗುತ್ತಿರುತ್ತವೆ.

35 ಕಡಲುಗಳ್ಳರಿದ್ದ ನೌಕೆ ಮುಂಬೈಗೆ

ಮುಂಬೈ (ಪಿಟಿಐ): ಸೋಮಾಲಿಯಾದ ಕರಾವಳಿ ಬಳಿ ಕೈಗೊಂಡ ಕಾರ್ಯಾಚರಣೆಯಲ್ಲಿ ವಶಕ್ಕೆ ತೆಗೆದುಕೊಳ್ಳಲಾದ 35 ಕಡಲುಗಳ್ಳರನ್ನು ಹೊತ್ತುತಂದ ಭಾರತೀಯ ಯುದ್ಧನೌಕೆ 'ಐಎನ್ಎಸ್ ಕೋಲ್ಕತ್ತ'ವು ಶನಿವಾರ ಬೆಳಿಗ್ಗೆ ಮುಂಬೈ ತಲುಪಿದೆ. ಕಡಲುಗಳ್ಳರನ್ನು ಮುಂಬೈ ಪೊಲೀಸರ ವಶಕ್ಕೆ ನೀಡಲಾಗಿದೆ ಎಂದು ನೌಕಾಪಡೆ ತಿಳಿಸಿದೆ.

ಹಡಗುಗಳು ಮತ್ತು ಅವುಗಳ ಸಿಬ್ಬಂದಿಯ ಸುರಕ್ಷತೆಗಾಗಿ ಕೈಗೊಂಡಿರುವ 'ಸಂಕಲ್ಪ ಕಾರ್ಯಾಚರಣೆ'ಯ ಭಾಗವಾಗಿ ಭಾರತೀಯ ನೌಕಾಪಡೆಯು ಅರಬ್ಬಿ ಸಮುದ್ರ ಮತ್ತು ಅಡೆನ್ ಖಾರಿಯಲ್ಲಿ ಯುದ್ಧನೌಕೆಗಳನ್ನು ನಿಯೋಜಿಸಿದೆ. ಈ ಕಾರ್ಯಾಚರಣೆ ವೇಳೆ 35 ಕಡಲುಗಳ್ಳರನ್ನು ವಶಕ್ಕೆ ತೆಗೆದುಕೊಳ್ಳಲಾಗಿತ್ತು. ಭಾರತೀಯ ಕಾನೂನು, ಅದರಲ್ಲೂ ವಿಶೇಷವಾಗಿ ಕಡಲುಗಳ್ಳತನ ಕಾಯ್ದೆ– 2022ರ ಅನ್ವಯ ಅವರ ವಿರುದ್ಧ ಸ್ಥಳೀಯ ಪೊಲೀಸರು ಕ್ರಮ ಕೈಗೊಳ್ಳಲಿದ್ದಾರೆ ಎಂದು ನೌಕಾಪಡೆ ಹೇಳಿದೆ.

ನಕಲಿ ಮದ್ಯ ಸೇವನೆ: ಮೃತರ ಸಂಖ್ಯೆ 20ಕ್ಕೆ ಏರಿಕೆ

ಚಂಡೀಗಢ (ಪಿಟಿಐ): ಪಂಜಾಬಿನ ಸಂಗ್ರೂರ್ ಜಿಲ್ಲೆಯಲ್ಲಿ ಶಂಕಿತ ನಕಲಿ ಮದ್ಯ ಸೇವನೆಯಿಂದ ಸಂಭವಿಸಿದ್ದ ದುರಂತದಿಂದಾಗಿ ಚಿಕಿತ್ಸೆ ಪಡೆಯುತ್ತಿದ್ದ ಆರು ಮಂದಿ ಅಸುನೀಗಿದ್ದು, ಒಟ್ಟಾರೆ ಮೃತರ ಸಂಖ್ಯೆ 20ಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ. ಇನ್ನೂ 17 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಕಲಿ ಮದ್ಯ ದುರಂತಕ್ಕೆ ಸಂಬಂಧಿಸಿದಂತೆ ಪಂಜಾಬ್‌ನ ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾ ನಿರ್ದೇಶಕರಿಗೆ ವರದಿ ಸಲ್ಲಿಸುವಂತೆ ಭಾರತೀಯ ಚುನಾವಣಾ ಆಯೋಗ ಶನಿವಾರ ಸೂಚಿಸಿದೆ.

ಘಟನೆಗೆ ಸಂಬಂಧಿಸಿದಂತೆ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಶ್ರೇಣಿಯ ಅಧಿಕಾರಿ ನೇತೃತ್ವದಲ್ಲಿ ನಾಲ್ವರು ಸದಸ್ಯರ ವಿಶೇಷ ತನಿಖಾ ತಂಡ ರಚಿಸಲಾಗಿದ್ದು, ಇಲ್ಲಿಯವರೆಗೂ ಎಂಟು ಮಂದಿಯನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ಈ ಹಿಂದೆ ತಿಳಿಸಿದ್ದರು.

ಜರ್ಮನಿ ನಿಲುವಿಗೆ ಭಾರತದ ಆಕ್ಷೇಪ

ಒಂದನೇ ಪುಟದಿಂದ...

'ಈ ರೀತಿಯ ಹೇಳಿಕೆಗಳನ್ನು ನೀಡುವುದನ್ನು ನಮ್ಮ ನ್ಯಾಯಾಂಗ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡುವ ಮತ್ತು ನಮ್ಮ ನ್ಯಾಯಾಂಗದ ಸ್ವಾತಂತ್ರ್ಯವನ್ನು ದುರ್ಬಲಗೊಳಿಸುವ ಪ್ರಯತ್ನದಂತೆ ಕಾಣುತ್ತೇವೆ' ಎಂದು ಜೈಸ್ವಾಲ್ ಅವರು ಹೇಳಿದ್ದಾರೆ.

'ಭಾರತದಲ್ಲಿ ಲಿಖಿತ ಕಾನೂನಿಗೆ ಅನುಗುಣವಾಗಿ ಆಡಳಿತ ನಡೆಸುವ ವ್ಯವಸ್ಥೆ ಹಾಗೂ ಬಲಿಷ್ಠವಾದ ಪ್ರಜಾಪ್ರಭುತ್ವ ಇದೆ. ದೇಶದ ಇತರ ಯಾವುದೇ ಪ್ರಕರಣಗಳಲ್ಲಿ ಆಗುವಂತೆ, ಪ್ರಜಾತಂತ್ರ ವ್ಯವಸ್ಥೆ ಇರುವ ಯಾವುದೇ ದೇಶದಲ್ಲಿ ಆಗುವಂತೆ ಕಾನೂನು ಇಲ್ಲಿ ತನ್ನ ಕಾರ್ಯವನ್ನು ಮಾಡುತ್ತದೆ. ಈ ವಿಷಯವಾಗಿ ಪೂರ್ವಗ್ರಹಪೀಡಿತವಾಗಿ ಹೊಂದಿರುವ ನಂಬಿಕೆಗಳು ತೀರಾ ಅನಗತ್ಯ' ಎಂದು ತಿಳಿಸಿದ್ದಾರೆ.

ಭೋಪಾಲ್‌ನಲ್ಲಿ ವಿದ್ಯಾರ್ಥಿಗಳು ಶನಿವಾರ ಹೋಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು —ಪಿಟಿಐ ಚಿತ್ರ

ಮುಂಬೈನ ಕ್ರೈಂ ಬ್ರಾಂಚ್‌ನ ಸುಲಿಗೆ ನಿಗ್ರಹ ತಂಡದ ವಶಕ್ಕೆ

ಚೀನಾ: ಭೂಗತಪಾತಕಿ ಗಡೀಪಾರು

ಪ್ರಜಾವಾಣಿ ವಾರ್ತೆ

ಮುಂಬೈ: ಭಾರತ ಮೂಲದ ಭೂಗತ ಪಾತಕಿ ಒಬ್ಬನನ್ನು ಚೀನಾ ಗಡೀಪಾರು ಮಾಡಿದೆ. ಆತನನ್ನು ಶುಕ್ರವಾರ ಮಧ್ಯರಾತ್ರಿ ಮುಂಬೈಗೆ ಕರೆತರಲಾಗಿದೆ.

ಇದೇ ಮೊದಲ ಬಾರಿ ಚೀನಾದಿಂದ ಗಡೀಪಾರು ಮಾಡಿದ ಪ್ರಕರಣ ನಡೆದಿದೆ.

ಭೂಗತಪಾತಕಿ ಪ್ರಸಾದ್ ಪೂಜಾರಿ ಅಲಿಯಾಸ್ ಸುಭಾಷ್ ವಿಠಲ್ ಪೂಜಾರಿ ಅಲಿಯಾಸ್ ಸಿದ್ಧಾರ್ಥ್ ಶೆಟ್ಟಿ ಮೂಲತಃ ಮುಂಬೈನ ವಿಕ್ರೋಲಿ ಉಪನಗರದ ನಿವಾಸಿ. ಹಲವು ವರ್ಷಗಳ ಹಿಂದೆಯೇ ಆತ ಭಾರತ ತೊರೆದು ಚೀನಾಕ್ಕೆ ಹೋಗಿದ್ದ. ಚೀನಾ ಮತ್ತು ಹಾಂಗ್‌ಕಾಂಗ್‌ನಲ್ಲಿ ಬಹುಕಾಲ ನೆಲೆಸಿದ್ದ ಆತ, ಪ್ರಮುಖ ಭೂಗತಪಾತಕಿಗಳಾದ ಕುಮಾರ್ ಪಿಳ್ಳೈ ಮತ್ತು ಛೋಟಾ ರಾಜನ್ ಅವರ ತಂಡಗಳ ಸದಸ್ಯನಾಗಿದ್ದ. ಅಂತರರಾಷ್ಟ್ರೀಯ ಸಿಮ್‌ಕಾರ್ಡ್‌ಗಳನ್ನು ಬಳಸಿ ಭಾರತದ ಉದ್ಯಮಿಗಳು ಮತ್ತು ಚಿತ್ರತಾರೆಗಳನ್ನು ಬೆದರಿಸಿ ಸುಲಿಗೆ ಮಾಡುತ್ತಿದ್ದ.

ಮುಂಬೈ ಪೊಲೀಸರ ವಶದಲ್ಲಿರುವ ಭೂಗತಪಾತಕಿ ಪ್ರಸಾದ್ ಪೂಜಾರಿ

ಅಂತರರಾಷ್ಟ್ರೀಯ ಕ್ರಿಮಿನಲ್ ಪೊಲೀಸ್ ಸಂಘಟನೆ (ಇಂಟರ್‌ಪೋಲ್) ನೀಡಿದ ಮಾಹಿತಿ ಆಧರಿಸಿ, ನಕಲಿ ಪಾಸ್‌ಪೋರ್ಟ್ ಹೊಂದಿರುವ ಆರೋಪದ ಮೇಲೆ ಹಾಂಗ್‌ಕಾಂಗ್‌ನ ವಿಮಾನ ನಿಲ್ದಾಣದಲ್ಲಿ ಕಳೆದವರ್ಷ ಮಾರ್ಚ್‌ನಲ್ಲಿ ಆತನನ್ನು ಬಂಧಿಸಲಾಗಿತ್ತು. ಬಂಧನದ ಬಳಿಕ ಮುಂಬೈ ಪೊಲೀಸರು ಆತನ ಗಡೀಪಾರು ಪ್ರಕ್ರಿಯೆಗೆ ಚಾಲನೆ ನೀಡಿದ್ದರು. ಮುಂಬೈನ ಛತ್ರಪತಿ ಶಿವಾಜಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ಮಧ್ಯರಾತ್ರಿ ಬಂದಿಳಿದ ಆತನನ್ನು, ಸದ್ಯಕ್ಕೆ ಕ್ರೈಂ ಬ್ರಾಂಚ್‌ನ ಸುಲಿಗೆ ನಿಗ್ರಹ ತಂಡದ ವಶಕ್ಕೆ ನೀಡಲಾಗಿದೆ.

ಗುಂಡುಹಾರಿಸಿದ, ವಂಚನೆ, ಕೊಲೆಗೆ ಸಂಬಂಧಿಸಿದ ಎಂಟು ಪ್ರಕರಣಗಳಲ್ಲಿ ಪೂಜಾರಿಯ ಪಾತ್ರವಿದೆ ಎನ್ನಲಾಗಿದೆ. ವಂಚನೆ ಪ್ರಕರಣಕ್ಕೆ ಸಂಬಂಧಿಸಿ ಪೂಜಾರಿ ತಾಯಿ ಇಂದಿರಾ ಪೂಜಾರಿಯನ್ನು ಮುಂಬೈ ಪೊಲೀಸರು 2020ರಲ್ಲಿ ಬಂಧಿಸಿದ್ದರು. ಶಿವಸೇನಾ ಕಾರ್ಯಕರ್ತ ಚಂದ್ರಕಾಂತ್ ಜಾಧವ್ ಅವರ ಮೇಲೆ ಗುಂಡುಹಾರಿಸಿದ್ದ ಪ್ರಕರಣದಲ್ಲೂ ಪೂಜಾರಿ ಹೆಸರು ಕೇಳಿಬಂದಿತ್ತು.

ಪೂಜಾರಿಯು ಚೀನಾ ಪ್ರಜೆಯನ್ನು ಮದುವೆಯಾಗಿದ್ದು, ದಂಪತಿಗೆ ಒಂದು ಮಗು ಇದೆ.

ವಿಚಾರ ಸಂಕಿರಣ ರದ್ದುಪಡಿಸಿದ ಸೇನೆ

ಯುಸಿಸಿ: ಆಕ್ಷೇಪ ವ್ಯಕ್ತಪಡಿಸಿದ್ದ ರಾಜಕೀಯ ಪಕ್ಷಗಳು

ಶ್ರೀನಗರ (ಪಿಟಿಐ): ಭಾರತೀಯ ದಂಡ ಸಂಹಿತೆ ಮತ್ತು ಏಕ ರೂಪ ನಾಗರಿಕ ಸಂಹಿತೆ (ಯುಸಿಸಿ) ಕುರಿತು ಜನರಿಗೆ ಅರಿವು ಮೂಡಿಸಲು ಭಾರತೀಯ ಸೇನೆ ಆಯೋಜಿಸಿದ್ದ ವಿಚಾರ ಸಂಕಿರಣವನ್ನು ರಾಜಕೀಯ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದ ಬೆನ್ನಲ್ಲೇ ರದ್ದುಪಡಿಸಲಾಗಿದೆ.

ವಿಚಾರ ಸಂಕಿರಣವನ್ನು ಇದೇ 26ರಂದು ಕಾಶ್ಮೀರ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಿಗದಿಪಡಿಸಲಾಗಿತ್ತು. ಶುಕ್ರವಾರ ತಡರಾತ್ರಿ ಮಾಧ್ಯಮಗಳಿಗೆ ಆಹ್ವಾನ ಪತ್ರಿಕೆಯನ್ನು ಸೇನೆ ಕಳುಹಿಸಿತ್ತು.

ಸೇನೆ ಆಯೋಜಿಸಿದ್ದ ಈ ಕಾರ್ಯಕ್ರಮಕ್ಕೆ ನ್ಯಾಷನಲ್ ಕಾನ್ಫರೆನ್ಸ್, ಪಿಡಿಪಿ ಪಕ್ಷಗಳ ನಾಯಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿ, ಇದಕ್ಕೆ ಲೋಕಸಭಾ ಚುನಾವಣೆ ಮಾದರಿ ನೀತಿ ಸಂಹಿತೆಯು ಅನ್ವಯಿಸುವುದಿಲ್ಲವೇ ಎಂದು ಪ್ರಶ್ನಿಸಿ, ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಹಂಚಿಕೊಂಡಿದ್ದರು.

ಇದರ ಬೆನ್ನಲ್ಲೇ, 'ಕಾಶ್ಮೀರ ವಿಶ್ವವಿದ್ಯಾನಿಲಯದಲ್ಲಿ ಮಾರ್ಚ್ 26ರಂದು ಕಾಶ್ಮೀರ ಕಾನೂನು ತಜ್ಞರಿಂದ ಕಾನೂನು ಅರಿವು ಮೂಡಿಸಲು ಆಯೋಜಿಸಿದ್ದ ವಿಚಾರ ಸಂಕಿರಣವನ್ನು ಮಾದರಿ ನೀತಿ ಸಂಹಿತೆ ಜಾರಿಯಿಂದಾಗಿ ರದ್ದುಗೊಳಿಸಲಾಗಿದೆ' ಎಂದು ಶ್ರೀನಗರದ ರಕ್ಷಣಾ ವಕ್ತಾರ ಲೆಫ್ಟಿನೆಂಟ್ ಕರ್ನಲ್ ಮನೋಜ್ ಸಾಹು ಹೇಳಿದ್ದಾರೆ.

ಕಾಶ್ಮೀರದಂತಹ ಸೂಕ್ಷ್ಮ ಸ್ಥಳದಲ್ಲಿ, ಏಕರೂಪ ನಾಗರಿಕ ಸಂಹಿತೆಯಂತಹ 'ವಿಭಜಕ' ವಿಷಯದಲ್ಲಿ ಸೇನೆಯ ಒಳಗೊಳ್ಳುವಿಕೆ ಎಷ್ಟು ಸಮಂಜಸ ಎಂದು ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಪ್ರಶ್ನಿಸಿದ್ದರು.

ನೀತಿ ಸಂಹಿತೆ ಜಾರಿಯಲ್ಲಿರುವಾಗ ಬಿಜೆಪಿ ಪ್ರಣಾಳಿಕೆಯ ವಿಷಯ ಕುರಿತು ಸೇನೆ ನಡೆಸಲಿರುವ ವಿಚಾರ ಸಂಕಿರಣದ ಔಚಿತ್ಯವನ್ನು ಆಯೋಗವೇ ನಿರ್ಣಯಿಸಬೇಕು

ತನ್ವಿರ್ ಸಾದಿಕ್, ಮುಖ್ಯ ವಕ್ತಾರ, ನ್ಯಾಷನಲ್ ಕಾನ್ಫರೆನ್ಸ್

ಇದು ಅಪಾಯಕಾರಿ ಪ್ರವೃತ್ತಿ. ಸಂವಿಧಾನವನ್ನು ವ್ಯವಸ್ಥಿತವಾಗಿ ಶಿಥಿಲಗೊಳಿಸುತ್ತಿರುವುದರ ಪ್ರತಿಬಿಂಬವಿದು. ಸೇನೆಯು ಕಾಶ್ಮೀರದ ರಾಜಕೀಯ ವ್ಯವಹಾರಗಳಲ್ಲಿ ನೇರ ಹಸ್ತಕ್ಷೇಪ ಮಾಡುತ್ತಿದೆ

ನಜ್ಮುಸ್ ಸಾಕಿಬ್, ಪಿಡಿಪಿ ವಕ್ತಾರ

ಇಂತಹ ವಿಚಾರ ಸಂಕಿರಣ ನಡೆಸುವ ಸೇನೆ ನಡೆ ಧಾರ್ಮಿಕ ವಿಷಯಗಳಲ್ಲಿ ಮಧ್ಯಪ್ರವೇಶಿಸುವಿಕೆ ಜೊತೆಗೆ ಕೆಟ್ಟ ರಾಜಕಾರಣದಲ್ಲಿ ತೊಡಗಿಸಿಕೊಳ್ಳುವ ಅಪಾಯಕ್ಕೆ ನಾಂದಿ

ಒಮರ್ ಅಬ್ದುಲ್ಲಾ, ನ್ಯಾಷನಲ್ ಕಾನ್ಫರೆನ್ಸ್ ಮುಖ್ಯಸ್ಥ

ಲೋಹಿಯಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಶಾಸಕ ಬಿ.ಆರ್.ಪಾಟೀಲ ಬೇಸರ

‘ವ್ಯವಸ್ಥೆ ಬದಲಿಸದೇ ಅದರ ಭಾಗವಾದೆವು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವ್ಯವಸ್ಥೆಯನ್ನು ಬದಲಿಸಲು ನಾವು ರಾಜಕೀಯಕ್ಕೆ ಬಂದಿದ್ದೆವು. ಆದರೆ, ಅದರಲ್ಲಿ ವಿಫಲವಾಗಿ ಅದರ ಭಾಗವಾಗಿರುವುದು ದುರಂತ’ ಎಂದು ಮುಖ್ಯಮಂತ್ರಿಯವರ ಸಲಹೆಗಾರ, ಶಾಸಕ ಬಿ.ಆರ್.ಪಾಟೀಲ ಬೇಸರ ವ್ಯಕ್ತಪಡಿಸಿದರು.

ಭಾರತ ಯಾತ್ರಾ ಕೇಂದ್ರ, ಎಂ.ಪಿ. ಪ್ರಕಾಶ್ ಸಮಾಜಮುಖಿ ಟ್ರಸ್ಟ್, ಲೋಕನಾಯಕ ಜಯಪ್ರಕಾಶ ನಾರಾಯಣ ವಿಚಾರ ವೇದಿಕೆಯ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ‘ಡಾ.ರಾಮಮನೋಹರ ಲೋಹಿಯಾ ಜನ್ಮದಿನಾಚರಣೆ ಹಾಗೂ ಡಾ. ರಾಮಮನೋಹರ ಲೋಹಿಯಾ ಪ್ರಶಸ್ತಿ ಪ್ರದಾನ’ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಆಂತರಿಕ ಪ್ರಜಾಪ್ರಭುತ್ವಕ್ಕೆ ಸಮಾಜವಾದ ಒತ್ತು ನೀಡಿದೆ. ಇಂದಿನ ಯಾವುದಾದರೂ ಪಕ್ಷಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ ಇದೆಯೇ? ನಾವು ಆಯಾ ಪಕ್ಷಗಳಲ್ಲಿ ಗುಲಾಮರಂತೆ ಕೆಲಸ ಮಾಡುತ್ತಿದ್ದೇವೆ’ ಎಂದು ಹೇಳಿದರು.

‘ಜಾತಿ ಮತ್ತು ವರ್ಗಗಳ ಮಧ್ಯೆ ಸಮಾನಾಂತರ ಸಂಘರ್ಷ ನಡೆದರೆ ಸಮಾಜವಾದ ಬರುತ್ತದೆ ಎಂದು ಲೋಹಿಯಾ ಹೇಳಿದ್ದರು. ಅವರ ದೃಷ್ಟಿಕೋನ ವಿಶಾಲವಾಗಿತ್ತು. ಇಂದು ಶಾಸನಸಭೆಗಳಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಯ ಬಗ್ಗೆ ಧ್ವನಿ ಎತ್ತುವವರ ಸಂಖ್ಯೆ ಕ್ಷೀಣಿಸುತ್ತಿದೆ’ ಎಂದು ಹೇಳಿದರು.

‘ಬ್ರಾಹ್ಮಣರು, ಲಿಂಗಾಯತರು ಸೇರಿ ಎಲ್ಲರೂ ಮೀಸಲಾತಿ ಸೌಲಭ್ಯ ಕೇಳುತ್ತಿದ್ದಾರೆ. ಮೀಸಲಾತಿ ಎಂಬ ಭ್ರಮೆಯಲ್ಲಿ ನಾವು ಮುಳುಗಿದ್ದೇವೆ. ಇದರಿಂದ, ಅಭಿವೃದ್ಧಿ ಸಾಧ್ಯವಿಲ್ಲ. ಆದರೆ, ಸಮಾನ ಅವಕಾಶಗಳು ಪಡೆದುಕೊಳ್ಳಬಹುದು. ಆದರೆ, ಮೀಸಲಾತಿಯಿಂದ ಎಲ್ಲ ಸಮಸ್ಯೆಗಳು ಬಗೆಹರಿಯುತ್ತವೆ ಎಂಬುದು ಭ್ರಮೆ’ ಎಂದರು.

> ಶಾಸನಸಭೆಗಳಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಯ ಬಗ್ಗೆ ಧ್ವನಿ ಎತ್ತುವವರ ಸಂಖ್ಯೆ ಕ್ಷೀಣಿಸುತ್ತಿದೆ
> **ಬಿ.ಆರ್ ಪಾಟೀಲ,** ಮುಖ್ಯಮಂತ್ರಿಯವರ ಸಲಹೆಗಾರ

‘ಸಮಾಜವಾದಿಗಳು ಇಂದು ಭಿನ್ನ ಪಕ್ಷದಲ್ಲಿದ್ದರೂ ತತ್ವ-ಸಿದ್ಧಾಂತಗಳಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ರೈತ, ದಲಿತ, ಮಹಿಳಾ ಚಳವಳಿಗಳನ್ನು ಸಮಾಜವಾದದ ನೆಲೆಯಲ್ಲಿ ಗಟ್ಟಿಗೊಳಿಸುವ ಕೆಲಸ ಮಾಡಬೇಕು’ ಎಂದರು.

ಹೋರಾಟಗಾರ್ತಿ ಇಂದಿರಾ ಕೃಷ್ಣಪ್ಪ ಅವರಿಗೆ ಡಾ.ರಾಮಮನೋಹರ್ ಲೋಹಿಯಾ ಪ್ರಶಸ್ತಿ ಪ್ರದಾನ ಮಾಡಲಾಯಿತು.ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಸಂಚಾಲಕ ಮಾವಳ್ಳಿ ಶಂಕರ್, ಮಾಜಿ ಸಭಾಪತಿ ವಿ.ಆರ್.ಸುದರ್ಶನ, ಲೇಖಕಿ ವಿಜಯಾ, ಎಂ.ಪಿ.ಪ್ರಕಾಶ್ ಸಮಾಜಮುಖಿ ಟ್ರಸ್ಟ್‌ನ ಸುಮಾ ವಿಜಯ್, ಲೋಕನಾಯಕ ಜಯಪ್ರಕಾಶ ನಾರಾಯಣ ವಿಚಾರ ವೇದಿಕೆಯ ಕೆ.ವಿ. ನಾಗರಾಜ ಮೂರ್ತಿ ಭಾಗವಹಿಸಿದ್ದರು.

‘ಡಾ.ರಾಮಮನೋಹರ ಲೋಹಿಯಾ’ ಪ್ರಶಸ್ತಿಯನ್ನು ಸಾಮಾಜಿಕ ಹೋರಾಟಗಾರ್ತಿ ಇಂದಿರಾ ಕೃಷ್ಣಪ್ಪ ಅವರಿಗೆ ಶನಿವಾರ ಪ್ರದಾನ ಮಾಡಲಾಯಿತು. (ಎಡದಿಂದ) ಮಾವಳ್ಳಿ ಶಂಕರ್, ಬಿ.ಆರ್.ಪಾಟೀಲ, ಕೆ.ವಿ.ನಾಗರಾಜಮೂರ್ತಿ, ವಿ.ಆರ್.ಸುದರ್ಶನ, ವಿಜಯಾ, ಸುಮಾ ವಿಜಯ್ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

ವಿದ್ಯಾರ್ಥಿ ನಿಲಯಕ್ಕೆ ಬೆಂಕಿ ಪಾರಾದ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ವೈ.ಎನ್.ಹೊಸಕೋಟೆ (ತುಮಕೂರು): ಇಲ್ಲಿಯ ಎಂ.ಜಿ. ರಸ್ತೆಯಲ್ಲಿರುವ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಶುಕ್ರವಾರ ತಡರಾತ್ರಿ ಬೆಂಕಿ ಬಿದ್ದಿದೆ.

ವಿದ್ಯಾರ್ಥಿಗಳ ಪುಸ್ತಕ, ಬಟ್ಟೆ ಬೆಂಕಿಯಲ್ಲಿ ಸುಟ್ಟು ಕರಕಲಾಗಿದ್ದು, ಹೊರಗೆ ಮಲಗಿದ್ದ ವಿದ್ಯಾರ್ಥಿಗಳು ಅಪಾಯದಿಂದ ಪಾರಾಗಿದ್ದಾರೆ.

ಬೇಸಿಗೆ ಧಗೆ ಕಾರಣ ಇಬ್ಬರು ವಿದ್ಯಾರ್ಥಿಗಳ ಹೊರತಾಗಿ ಉಳಿದ ವಿದ್ಯಾರ್ಥಿಗಳು ಕೊಠಡಿ ಮುಂಭಾಗದ ವರಾಂಡದಲ್ಲಿ ಮಲಗಿದ್ದರು. ಬೆಂಕಿ ಕಾಣಿಸಿಕೊಂಡ ತಕ್ಷಣ ಒಳಗೆ ಮಲಗಿದ್ದ ಇಬ್ಬರು ವಿದ್ಯಾರ್ಥಿಗಳು ಎದ್ದು ಹೊರಗೆ ಓಡಿ ಬಂದಿದ್ದಾರೆ.

ಅಡುಗೆ ಸಿಬ್ಬಂದಿ, ಕಾವಲುಗಾರ ಹಾಗೂ ವಿದ್ಯಾರ್ಥಿಗಳು ಸೇರಿ ಬೆಂಕಿ ನಂದಿಸಲು ಪ್ರಯತ್ನಿಸಿದರೂ ಕೊಠಡಿಗೆ ಬೆಂಕಿ ಆವರಿಸಿದೆ. ವಿದ್ಯಾರ್ಥಿಗಳ ಬಟ್ಟೆ, ಪುಸ್ತಕ, ಹಾಸಿಗೆ ಸೇರಿದಂತೆ ಬಾಗಿಲು, ಕಿಟಕಿ ಸಂಪೂರ್ಣ ಸುಟ್ಟು ಭಸ್ಮವಾಗಿವೆ.

ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ವಿದ್ಯುತ್ ಶಾರ್ಟ್ ಸರ್ಕೀಟ್‌ನಿಂದ ಬೆಂಕಿ ಹೊತ್ತಿರಬಹುದು ಎಂದು ಶಂಕಿಸಲಾಗಿದೆ.

‘ವಿದ್ಯಾರ್ಥಿಗಳು ಮತ್ತು ಹಾಸ್ಟೆಲ್ ಸಿಬ್ಬಂದಿಗೆ ಯಾವುದೇ ತೊಂದರೆ ಆಗಿಲ್ಲ’ ಎಂದು ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ ಮಲ್ಲಿಕಾರ್ಜುನ ತಿಳಿಸಿದ್ದಾರೆ.

ಬೆಂಕಿಯಿಂದ ಸುಟ್ಟು ಕರಕಲಾದ ತುಮಕೂರು ಜಿಲ್ಲೆಯ ವೈ.ಎನ್ ಹೊಸಕೋಟೆಯಲ್ಲಿನ ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ

ಬ್ರಹ್ಮರಥೋತ್ಸವ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ ಹೊರಕೆರೆ ದೇವರಪುರದಲ್ಲಿ ಶನಿವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಲಕ್ಷ್ಮೀ ನರಸಿಂಹಸ್ವಾಮಿಯ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು

ಚೆಕ್‌ಪೋಸ್ಟ್ ಸಿಬ್ಬಂದಿಗೆ ಆಹಾರವಿಲ್ಲ!

ಶೌಚಕ್ಕೆ ಹತ್ತಿರದ ಅಂಗಡಿ, ಹೋಟೆಲ್‌ಗಳೇ ಗತಿ • ಮಿತಿಮೀರಿದ ವಾಹನಗಳ ಸಂಖ್ಯೆ

• ಶಿವಪ್ರಸಾದ್ ರೈ

ಮುಖ್ಯಾಂಶಗಳು
- ಶಂಕಿತ ವಾಹನಗಳ ತಪಾಸಣೆ
- ಸಿಬ್ಬಂದಿ ಹೆಚ್ಚಳಕ್ಕೆ ಬೇಡಿಕೆ

ಮೈಸೂರು: ಲೋಕಸಭೆ ಚುನಾವಣೆಯ ನೀತಿ ಸಂಹಿತೆ ಶುರುವಾಗಿ ವಾರ ಕಳೆದರೂ ಜಿಲ್ಲೆಯ ಚೆಕ್‌ಪೋಸ್ಟ್‌ಗಳ ಸಿಬ್ಬಂದಿಗೆ ಆಹಾರ ಪೂರೈಕೆಯಾಗುತ್ತಿಲ್ಲ.

ಬೆಳಿಗ್ಗೆ 6 ರಿಂದ ಮಧ್ಯಾಹ್ನ 2, ಮಧ್ಯಾಹ್ನ 2 ರಿಂದ ರಾತ್ರಿ 10, ರಾತ್ರಿ 10 ರಿಂದ ಬೆಳಿಗ್ಗೆ 6 ರವರೆಗೆ ಮೂರು ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ, ಮನೆಯಿಂದ ಬರುವಾಗ ಹಾಗೂ ಮನೆಗೆ ತಲುಪಿದ ನಂತರ ಊಟ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ನಗರಸಭೆಯು ಆಹಾರ ಒದಗಿಸುತ್ತಿತ್ತು. ಈ ಬಾರಿ ಒದಗಿಸಿಲ್ಲ. ಸಿಬ್ಬಂದಿ ಕೊರತೆಯಿಂದಾಗಿ ಕೆಲಸದ ಸಮಯದಲ್ಲಿ ಆಹಾರ ಸೇವಿಸಲು ಸಮೀಪದ ಹೋಟೆಲ್‌ಗಳಿಗೆ ತೆರಳಲೂ ಆಗುತ್ತಿಲ್ಲ.

ಕೆಲವೆಡೆ ತಾತ್ಕಾಲಿಕ ಶೌಚಾಲಯಗಳನ್ನು ತೆರೆಯಲಾಗಿದ್ದು, ಹಲವೆಡೆ ಹತ್ತಿರದ ಅಂಗಡಿ, ಹೋಟೆಲ್‌ಗಳ ಶೌಚಾಲಯ ಬಳಸುವಂತೆ ಸಿಬ್ಬಂದಿಗೆ ಸೂಚಿಸಲಾಗಿದೆ. ಸಿ.ಸಿ ಟಿವಿ ಅಳವಡಿಸಲಾಗಿದ್ದು, ಕುಡಿಯುವ ನೀರು, ಶಾಮಿಯಾನ, ಲೈಟು, ರಿಫ್ಲೆಕ್ಟರ್ ಸೇಫ್ಟಿ ಜಾಕೆಟ್‌ಗಳನ್ನು ಒದಗಿಸಲಾಗಿದೆ.

ಜಿಲ್ಲೆಯ ಚೆಕ್‌ಪೋಸ್ಟ್‌ಗಳಲ್ಲಿ ವಾಹನಗಳ ತಪಾಸಣೆಗೆ ಇಬ್ಬರು ಮತ್ತು ಬಂದೋಬಸ್ತ್‌ಗೆ ಇಬ್ಬರು ಪೊಲೀಸರನ್ನು ನಿಯೋಜಿಸಲಾಗಿದೆ. ಗ್ರಾಮಾಂತರ ಭಾಗದಲ್ಲಿ ಈ ವ್ಯವಸ್ಥೆ ತಕ್ಕಮಟ್ಟಿಗೆ ಹೊಂದಾಣಿಕೆ ಸೂತ್ರದಲ್ಲಿ ಮುಂದುವರಿಯುತ್ತಿದೆ.

ಆದರೆ, ಮೈಸೂರು ನಗರಕ್ಕೆ ಪ್ರವೇಶಿಸುವ ಸ್ಥಳದಲ್ಲಿರುವ ಚೆಕ್‌ಪೋಸ್ಟ್‌ಗಳ ಸಿಬ್ಬಂದಿ ನರಕಯಾತನೆ ಅನುಭವಿಸುತ್ತಿದ್ದಾರೆ. ಅತಿಯಾದ ವಾಹನ ದಟ್ಟಣೆಯಿಂದ, ಅಂತರರಾಜ್ಯ ವಾಹನ ಹಾಗೂ ಟ್ಯಾಕ್ಸಿಗಳನ್ನಷ್ಟೇ ಪರಿಶೀಲಿಸುತ್ತಿದ್ದು, ದ್ವಿಚಕ್ರ ವಾಹನಗಳ ತಪಾಸಣೆ ದೂರದ ಮಾತಾಗಿದೆ.

ನಂಜನಗೂಡಿನ ಬಂಡಿಪಾಳ್ಯ, ತಿ.ನರಸೀಪುರ ರಸ್ತೆಯ ಚಿಕ್ಕಳ್ಳಿ, ಎಚ್.ಡಿ ಕೋಟೆ ರಸ್ತೆಯಲ್ಲಿರುವ ಬೋಗಾದಿ, ಬನ್ನೂರು ರಸ್ತೆಯಲ್ಲಿರುವ ಚೆಕ್ ಪೋಸ್ಟ್‌ಗಳಲ್ಲಿ ನಿತ್ಯ ವಾಹನ ಸಂಚಾರ ಹೆಚ್ಚುತ್ತಿದೆ. ಬೆಳಿಗ್ಗೆ ಹಾಗೂ ಸಂಜೆ ಶಾಲಾ, ಕಾಲೇಜು ಮತ್ತು ಕರ್ತವ್ಯಕ್ಕೆ ತೆರಳುವವರ ಕಾರಣದಿಂದ ರಸ್ತೆಯು ವಾಹನಗಳಿಂದ ತುಂಬಿರುತ್ತದೆ. ಪ್ರತಿ ಪಾಳಿಯ ಸಿಬ್ಬಂದಿ ಅಂದಾಜು 700 ರಿಂದ 1,200 ವಾಹನಗಳನ್ನು ತಪಾಸಣೆ ಮಾಡುತ್ತಿದ್ದಾರೆ.

‘ಶಂಕಿತ ವಾಹನಗಳನ್ನು ಮಾತ್ರ ತಪಾಸಣೆ ಮಾಡುತ್ತಿದ್ದೇವೆ. ತಪಾಸಣೆಗೆ ನಾಲ್ವರು ಸಿಬ್ಬಂದಿಯಾದರೂ ಬೇಕು. ಈ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತಂದಿದ್ದೇವೆ’ ಎಂದು ಸಿಬ್ಬಂದಿಯೊಬ್ಬರು ‘ಪ್ರಜಾವಾಣಿ’ ಗೆ ತಿಳಿಸಿದರು.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಕರೆ ಮಾಡಿದಾಗ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ. ವಿ.ರಾಜೇಂದ್ರ ಅವರು ಕರೆ ಸ್ವೀಕರಿಸಲಿಲ್ಲ.

ಹಾಸನ ಡಿ.ಸಿಗೆ ವಿವರಣೆ ಕೇಳಿದ ಆಯೋಗ

ಹಾಸನ: ರಾಜ್ಯಸಭಾ ಸದಸ್ಯ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ದೂರನ್ನು ಆಧರಿಸಿ, ರಾಜ್ಯ ಚುನಾವಣಾ ಆಯೋಗವು ಇಲ್ಲಿನ ಜಿಲ್ಲಾ ಚುನಾವಣಾಧಿಕಾರಿ ಸಿ. ಸತ್ಯಭಾಮಾ ಅವರಿಗೆ ವಿವರಣೆ ಕೇಳಿದೆ.

ಮಾರ್ಚ್ 20ರಂದು ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ನೀಡಿರುವ ಎಚ್.ಡಿ.ದೇವೇಗೌಡರು, ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯನ್ನು ವರ್ಗಾಯಿಸುವಂತೆ ಆಗ್ರಹಿಸಿದ್ದಾರೆ.

ಮೀಟರ್ ಬಡ್ಡಿ ಕಿರುಕುಳ: ವಿದ್ಯಾರ್ಥಿನಿ ಆತ್ಮಹತ್ಯೆ

ಕುಣಿಗಲ್ (ತುಮಕೂರು): ಮೀಟರ್ ಬಡ್ಡಿ ದಂಧೆಯವರ ಕಿರುಕುಳ ಮತ್ತು ಅವಮಾನ ತಾಳಲಾಗದೆ ಕಾನೂನು ವಿದ್ಯಾರ್ಥಿನಿ ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕೊತ್ತಗೆರೆ ಹೋಬಳಿ ಕೋಡಿಹಳ್ಳಿ ಪಾಳ್ಯದ ಚೈತ್ರಾ (21) ನೇಣು ಹಾಕಿಕೊಂಡಿದ್ದಾರೆ. ತುಮಕೂರಿನಲ್ಲಿ ಎರಡನೇ ವರ್ಷದ ಕಾನೂನು ಪದವಿ ಓದುತ್ತಿದ್ದರು.

‘ನನ್ನ ಮಗಳ ಸಾವಿಗೆ ಮೀಟರ್ ಬಡ್ಡಿಯವರ ಕಿರುಕುಳ ಕಾರಣ’ ಎಂದು ಮೃತ ಯುವತಿ ತಾಯಿ ಲಲಿತಮ್ಮ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

‘ಗ್ರಾಮದ ಶಾಂತಮ್ಮ ಎಂಬುವರಿಂದ ಮೂರು ತಿಂಗಳ ಹಿಂದೆ ವಾರದ ಬಡ್ಡಿ ಲೆಕ್ಕದಲ್ಲಿ ಕೈಸಾಲ ಪಡೆದಿದ್ದೆ. ಮೂರು ತಿಂಗಳು ಬಡ್ಡಿಯನ್ನು ಸಕಾಲಕ್ಕೆ ಪಾವತಿಸಿದ್ದೆ. ಈ ವಾರ ಊರಿನ ಹಬ್ಬವಿದ್ದ ಕಾರಣ ಬಡ್ಡಿ ಕಟ್ಟಲು ಸಾಧ್ಯವಾಗಿರಲಿಲ್ಲ. ಶಾಂತಮ್ಮ ಶನಿವಾರ ಮನೆಗೆ ಬಂದು ಬಡ್ಡಿ ಹಣ ನೀಡುವಂತೆ ತಗಾದೆ ತೆಗೆದರು. ಮನೆಯವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಗಲಾಟೆ ಮಾಡಿದರು. ಅಕ್ಕಪಕ್ಕದವರು ಬಂದು ರಾಜಿ ಮಾಡಿ ಎರಡು ದಿನದಲ್ಲಿ ಬಡ್ಡಿ ನೀಡುವುದಾಗಿ ಮನವರಿಕೆ ಮಾಡಿ ಕಳುಹಿಸಿದ್ದರು’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ಈ ಘಟನೆಯಿಂದ ಮನನೊಂದು ಮಗಳು ಅವಮಾನದಿಂದ ಮನೆ ಮುಂಭಾಗದ ಸ್ನಾನದ ಮನೆಗೆ ತೆರಳಿ ನೇಣು ಹಾಕಿಕೊಂಡಿದ್ದಳು. ತಕ್ಷಣ ನೋಡಿ ಆಸ್ಪತ್ರೆಗೆ ಸಾಗಿಸಲಾಯಿತು. ಅಷ್ಟರಲ್ಲಿ ಅಕೆ ಮೃತಪಟ್ಟಿದ್ದಳು’ ಎಂದು ಲಲಿತಮ್ಮ ದೂರಿನಲ್ಲಿ ತಿಳಿಸಿದ್ದಾರೆ. ಕುಣಿಗಲ್ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಾಳೆಯಿಂದ ಆರಂಭ

ಅಂಕಿ ಅಂಶಗಳು

4.41 ಲಕ್ಷ ಬಾಲಕರು	4.28 ಲಕ್ಷ ಬಾಲಕಿಯರು	8.69 ಲಕ್ಷ ಒಟ್ಟು ವಿದ್ಯಾರ್ಥಿಗಳು
18,225 ಖಾಸಗಿ ವಿದ್ಯಾರ್ಥಿಗಳು	41,375 ಪುನರಾವರ್ತಿತರು	5,424 ವಿಭಿನ್ನ ಸಾಮರ್ಥ್ಯದ ವಿದ್ಯಾರ್ಥಿಗಳು

ಎಸ್‌ಎಸ್‌ಎಲ್‌ಸಿ ಪರೀಕ್ಷಾ ವೇಳಾಪಟ್ಟಿ

ಮಾರ್ಚ್ 25–ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ (ಎನ್‌ಸಿಇ ಆರ್‌ಟಿ), ಸಂಸ್ಕೃತ, 27–ಸಮಾಜ ವಿಜ್ಞಾನ, 30–ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ತಾನಿ, ಕರ್ನಾಟಕ ಸಂಗೀತ, ಏಪ್ರಿಲ್–2 ಗಣಿತ, 3–ಅರ್ಥಶಾಸ್ತ್ರ, ಎಂಜಿನಿಯರಿಂಗ್ ವಿಷಯಗಳು, 4–ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು, ಎನ್‌ಎಸ್‌ಕ್ಯೂಎಫ್ ವಿಷಯಗಳು, 6–ದ್ವಿತೀಯ ಭಾಷೆಗಳಾದ ಇಂಗ್ಲಿಷ್, ಕನ್ನಡ.

ಒಂದನೇ ಪುಟದಿಂದ...

ಪರೀಕ್ಷೆಯ ಪ್ರಾರಂಭವಾದ 30 ನಿಮಿಷಗಳ ಒಳಗೆ ಬಂದರಷ್ಟೇ ಪರೀಕ್ಷಾ ಕೊಠಡಿಗೆ ಪ್ರವೇಶ ದೊರೆಯಲಿದೆ.

ಆಯಾ ಜಿಲ್ಲೆಗಳ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರನ್ನು ಜಿಲ್ಲಾ ವೀಕ್ಷಕರಾಗಿ, ಉಪನ್ಯಾಸಕರನ್ನು ವಿಚಕ್ಷಣ ದಳದ ಅಧಿಕಾರಿಗಳಾಗಿ ನೇಮಿಸಲಾಗಿದೆ. ನಿರ್ದೇಶಕರು ಹಾಗೂ ಸಹ ನಿರ್ದೇಶಕ ವೃಂದದ ಅಧಿಕಾರಿಗಳು ಜಿಲ್ಲಾ ಉಸ್ತುವಾರಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಲಿದ್ದಾರೆ. ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕಾರ್ಯಕ್ಕೆ ಪ್ರೌಢಶಾಲಾ ಸಹಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ. ಆದರೆ, ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿರುವ ಕ್ಲಸ್ಟರ್ ಹೊರತಾದ ಕೇಂದ್ರಗಳಿಗೆ ಮಾತ್ರ ಕೊಠಡಿ ಮೇಲ್ವಿಚಾರಕರಾಗಿ ನಿಯೋಜಿಸಲಾಗಿದೆ. ಆಯಾ ವಿಷಯಗಳ ಶಿಕ್ಷಕರನ್ನು ಅದೇ ವಿಷಯದ ದಿನ ಪರೀಕ್ಷಾ ಕಾರ್ಯದಿಂದ ಹೊರಗಿಡಲಾಗಿದೆ. ಪರೀಕ್ಷೆಗಳು ಏಪ್ರಿಲ್ 6ಕ್ಕೆ ಮುಕ್ತಾಯವಾಗಲಿವೆ.

ಏಳು ಮಾಧ್ಯಮಗಳಲ್ಲಿ ಪರೀಕ್ಷೆ

ವಿದ್ಯಾರ್ಥಿಗಳು ಕನ್ನಡ, ಇಂಗ್ಲಿಷ್, ಹಿಂದಿ, ತೆಲುಗು, ತಮಿಳು, ಉರ್ದು, ಮರಾಠಿ ಸೇರಿ ಏಳು ಮಾಧ್ಯಮಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ. ಖಾಸಗಿಯಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಈ ಬಾರಿ ಪ್ರತ್ಯೇಕ ಪರೀಕ್ಷಾ ಕೇಂದ್ರಗಳು ಹಾಗೂ ಪ್ರತ್ಯೇಕ ಪ್ರಶ್ನೆ ಪತ್ರಿಕೆ ಇರುವುದಿಲ್ಲ. ಇತರೆ ವಿದ್ಯಾರ್ಥಿಗಳಿಗೆ ಸಿದ್ಧಪಡಿಸುವ ಪ್ರಶ್ನೆಪತ್ರಿಕೆಗಳನ್ನೇ ಅವರಿಗೆ ನೀಡಲಾಗುತ್ತಿದೆ.

ಕೇಂದ್ರದ ವಿರುದ್ಧ ‘ಸುಪ್ರೀಂ’ಗೆ ದೂರು ನೀಡಿದ ಕಾಂಗ್ರೆಸ್

ಒಂದನೇ ಪುಟದಿಂದ...

‘ಸಂವಿಧಾನದ ವಿಧಿ 32ರ ಅಡಿಯಲ್ಲಿ ನಾವು ನಮ್ಮ ಕಾನೂನುಬದ್ಧ ಹಕ್ಕು ಚಲಾಯಿಸಿದ್ದೇವೆ’ ಎಂದು ಹೇಳಿದರು. ‘ರಾಜ್ಯದ 223 ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸಿದ್ದೇವೆ. 48 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆ ನಷ್ಟ ಆಗಿದೆ. ಮೂರು ಬಾರಿ ಸತತವಾಗಿ ಕೇಂದ್ರಕ್ಕೆ ಮನವಿ ಪತ್ರ ಸಲ್ಲಿಸಿದ್ದೇವೆ. ಆದರೆ, ಕಾನೂನು ಬದ್ಧವಾಗಿ ನಮಗೆ ಬರಬೇಕಾದ ಹಣದಲ್ಲಿ ನಯಾ ಪೈಸೆಯನ್ನೂ ಕೇಂದ್ರ ಕೊಟ್ಟಿಲ್ಲ’ ಎಂದು ದೂರಿದರು.

‘ನಿಯಮಾವಳಿ ಪ್ರಕಾರ ರಾಜ್ಯ ಸರ್ಕಾರ ಮನವಿ ಮಾಡಿದ ವಾರದಲ್ಲಿ ಕೇಂದ್ರದ ತಂಡ ಬರಬೇಕು. ಆದರೆ, ಕಳೆದ ಅಕ್ಟೋಬರ್‌ನಲ್ಲಿ ಕೇಂದ್ರ ತಂಡ ರಾಜ್ಯದಲ್ಲಿ ಪರಿಶೀಲನೆ ನಡೆಸಿ ಕೇಂದ್ರಕ್ಕೆ ವರದಿ ನೀಡಿದೆ. ಈ ವರದಿ ನೀಡಿದ ಒಂದು ತಿಂಗಳಲ್ಲಿ ಬರ ಪರಿಹಾರ ಕೊಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು ಎನ್ನುವುದು ನಿಯಮ. ಆದರೆ, ಇದುವರೆಗೂ ಕೇಂದ್ರ ರಾಜ್ಯದ ಜನರಿಗೆ ಸ್ಪಂದಿಸಿಲ್ಲ’ ಎಂದು ಆರೋಪಿಸಿದ ಮುಖ್ಯಮಂತ್ರಿ, ಎನ್‌ಡಿಆರ್‌ಎಫ್ ನಿಯಮಾವಳಿಗಳನ್ನು ವಿವರಿಸಿದರು.

‘ಕೇಂದ್ರ ತಂಡ ವರದಿ ನೀಡಿದ ನಂತರವೂ ಕೇಂದ್ರ ಸರ್ಕಾರ ಸ್ಪಂದಿಸದೇ ಇದ್ದಾಗ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ದೆಹಲಿಗೆ ಹೋಗಿದ್ದರು. ಆದರೆ, ಕೇಂದ್ರ ಸಚಿವರ ಭೇಟಿಗೆ ಅವಕಾಶವನ್ನೇ ಕೊಡಲಿಲ್ಲ. ಡಿ. 19ರಂದು ನಾನು ಮತ್ತು ಕೃಷ್ಣ ಬೈರೇಗೌಡ ದೆಹಲಿಗೆ ತೆರಳಿ ಪ್ರಧಾನ ಮಂತ್ರಿಯವರನ್ನು, ಮರುದಿನ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ ಮನವಿ ಮಾಡಿದೆವು. ಬೆಂಗಳೂರಿಗೆ ಬಂದಿದ್ದ ಪ್ರಧಾನಿಯನ್ನು ನಾನು ಖುದ್ದು ಭೇಟಿ ಮಾಡಿ ಮನವಿ ಮಾಡಿದ್ದೇನೆ. ಆದರೂ ನಮಗೆ ಪರಿಹಾರ ಸಿಗಲಿಲ್ಲ’ ಎಂದರು.

ಎನ್‌ಡಿಆರ್‌ಎಫ್ ಪಡೆಯಲು ರಾಜ್ಯ ಸರ್ಕಾರ ಇದುವರೆಗೆ ಮಾಡಿದ ಪ್ರಯತ್ನಗಳ ಕುರಿತು ಕಂದಾಯ ಸಚಿವ ಕೃಷ್ಣ ಬೈರೇಗೌಡ ವಿವರಿಸಿದರು.

ಚುನಾವಣಾ ಬಾಂಡ್: ‘ಸುಪ್ರೀಂ’ ಮೇಲ್ವಿಚಾರಣೆಯ ತನಿಖೆಗೆ ಆಗ್ರಹ

ನವದೆಹಲಿ (ಪಿಟಿಐ): ಚುನಾವಣಾ ಬಾಂಡ್ ವಿಚಾರವಾಗಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಶನಿವಾರವೂ ವಾಗ್ದಾಳಿ ಮುಂದುವರಿಸಿದ್ದು, ‘ಅಪಾರದರ್ಶಕ ಯೋಜನೆ’ಯಡಿ ಬ್ಯಾಂಕ್‌ಗಳ ಮೂಲಕ ‘ಪ್ರೀಪೈಡ್’, ‘ಪೋಸ್ಟ್‌ಪೈಡ್’ ಮತ್ತು ‘ಪೋಸ್ಟ್–ರೈಡ್’ ಲಂಚ ಪಡೆಯಲಾಗಿದೆ ಎಂದು ಆರೋಪಿಸಿದೆ.

ಪ್ರಕರಣದ ಬಗ್ಗೆ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ವಿಶೇಷ ತನಿಖಾ ತಂಡದಿಂದ (ಎಸ್‌ಐಟಿ) ತನಿಖೆಯಾಗಬೇಕು ಎಂದು ಪಕ್ಷವು ಪುನಃ ಆಗ್ರಹಿಸಿದೆ.

ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ‘ಕಪ್ಪು ಹಣವನ್ನು ವಾಪಸ್ ತರುವುದಾಗಿ ಭರವಸೆ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ಭ್ರಷ್ಟಾಚಾರವನ್ನು ಕಾನೂನಾತ್ಮಕಗೊಳಿಸಿದ್ದಾರೆ’ ಎಂದು ಟೀಕಿಸಿದರು.

ಚುನಾವಣಾ ಬಾಂಡ್ ಮೂಲಕ ನಾಲ್ಕು ರೀತಿಯಲ್ಲಿ ಭ್ರಷ್ಟಾಚಾರ ನಡೆದಿದೆ. ‘ದೇಣಿಗೆ ನೀಡಿ, ವ್ಯವಹಾರ ಮಾಡಿ’ (ಪ್ರೀಪೈಡ್) ಎನ್ನುವುದು ಒಂದು ಬಗೆ. ‘ಲಂಚ ನೀಡಿ ಗುತ್ತಿಗೆ ಪಡೆಯಿರಿ’ (ಪೋಸ್ಟ್‌ಪೈಡ್) ಇನ್ನೊಂದು ರೀತಿ. ‘ಹಫ್ತಾ ವಸೂಲಿ’ (ಪೋಸ್ಟ್–ರೈಡ್) ಹಾಗೂ ‘ಶೆಲ್ ಕಂಪನಿ’ಗಳ ಮೂಲಕ ಮತ್ತೊಂದು ಬಗೆ’ ಎಂದು ಅವರು ವಾಗ್ದಾಳಿ ಮಾಡಿದರು.

ಅಮೆಜಾನ್: ಏಪ್ರಿಲ್ 7ರಿಂದ ಪರಿಷ್ಕೃತ ಮಾರಾಟ ಶುಲ್ಕ ಜಾರಿ

ನವದೆಹಲಿ (ಪಿಟಿಐ): ಇ-ಕಾಮರ್ಸ್ ವೇದಿಕೆಯಾದ ಅಮೆಜಾನ್‌ನಲ್ಲಿ ಉತ್ಪನ್ನಗಳ ಮಾರಾಟಕ್ಕೆ ವಿಧಿಸುವ ಶುಲ್ಕದ ಪರಿಷ್ಕರಣೆಗೆ ಅಮೆಜಾನ್ ಇಂಡಿಯಾ ನಿರ್ಧರಿಸಿದೆ.

ಅಮೆಜಾನ್‌ನಲ್ಲಿ ಮಾರಾಟ ಮಾಡುವ ಪ್ರತಿ ಉತ್ಪನ್ನಕ್ಕೂ ಮಾರಾಟಗಾರರಿಗೆ ಶುಲ್ಕ ವಿಧಿಸಲಾಗುತ್ತದೆ. ಈ ಶುಲ್ಕವೇ ಕಂಪನಿಯ ಆದಾಯದ ಮೂಲಗಳಾಗಿವೆ. ಇದರಿಂದ ಕೆಲವು ನಿರ್ದಿಷ್ಟ ಉತ್ಪನ್ನಗಳ ಬೆಲೆ ಏರಿಕೆಯಾಗುವ ಸಾಧ್ಯತೆಯಿದೆ. ಹಾಗಾಗಿ, ಅಮೆಜಾನ್‌ನಲ್ಲಿ ಉತ್ಪನ್ನಗಳನ್ನು ಖರೀದಿಸುವ ಗ್ರಾಹಕರ ಜೇಬಿಗೆ ಕತ್ತರಿ ಬೀಳುವ ಸಾಧ್ಯತೆಯಿದೆ.

ಹಣದುಬ್ಬರ, ಬಿಡ್ಡಿಂಗ್, ಸಾಗಣೆ ವೆಚ್ಚ ಹೆಚ್ಚಿದೆ. ಇದಕ್ಕೆ ಅನುಗುಣವಾಗಿ ಕೈಗಾರಿಕಾ ಚಾಲ್ತಿ ಶುಲ್ಕವನ್ನು ಸರಿದೂಗಿಸುವ ನಿಟ್ಟಿನಲ್ಲಿ ಮಾರಾಟ ಶುಲ್ಕವನ್ನು ಪರಿಷ್ಕರಿಸಲಾಗುತ್ತಿದೆ. ಜೊತೆಗೆ, ಉತ್ಪನ್ನಗಳ ನಿರ್ವಹಣೆಗೆ ಶುಲ್ಕ ಏರಿಕೆಯು ಅನಿವಾರ್ಯವಾಗಿದೆ ಎಂದು ಕಂಪನಿಯು ಶನಿವಾರ ತಿಳಿಸಿದೆ.

ಅಮೆಜಾನ್‌ನಲ್ಲಿ ಏಪ್ರಿಲ್ 7ರಿಂದ ಈ ಪರಿಷ್ಕೃತ ಶುಲ್ಕ ಜಾರಿಗೆ ಬರಲಿದೆ. ರೆಫರಲ್ ಶುಲ್ಕ, ಮುಕ್ತಾಯ ಶುಲ್ಕ, ತೂಕ ನಿರ್ವಹಣೆ ಶುಲ್ಕದಲ್ಲಿ ಏರಿಕೆಯಾಗಲಿದೆ.

ಉಡುಪು, ಬೆಡ್‌ಶೀಟ್, ಕುಷನ್ ಕವರ್, ಡಿನ್ನರ್‌ವೇರ್ ವಿಭಾಗದಲ್ಲಿ ರೆಫರಲ್ ಶುಲ್ಕ ಕಡಿತಗೊಳ್ಳಲಿದೆ. ವ್ಯಾಪಾರ ಮತ್ತು ವೈಜ್ಞಾನಿಕ ಪರಿಕರಗಳು, ಚಿಮಣಿ, ಲ್ಯಾಪ್‌ಟಾಪ್ ಬ್ಯಾಗ್‌ಗಳ ವಿಭಾಗದಲ್ಲಿ ಶುಲ್ಕ ಏರಿಕೆಯಾಗಲಿದೆ ಎಂದು ತಿಳಿಸಿದೆ.

₹1 ಸಾವಿರಕ್ಕಿಂತ ಹೆಚ್ಚು ಮೌಲ್ಯದ ವಸ್ತುಗಳ ಮಾರಾಟಕ್ಕೆ ₹3 ಮುಕ್ತಾಯ ಶುಲ್ಕ ಹೆಚ್ಚಿಸಲಾಗಿದೆ. ತೂಕ ನಿರ್ವಹಣೆಗೆ ₹2 ಶುಲ್ಕ ವಿಧಿಸಲಾಗುತ್ತದೆ. ಅಲ್ಲದೆ, ಉತ್ಪನ್ನಗಳ ಸಾಗಣೆ ವೆಚ್ಚದ ಶುಲ್ಕವನ್ನೂ ಹೆಚ್ಚಿಸಲಾಗುವುದು ಎಂದು ತಿಳಿಸಿದೆ.

'ಉತ್ಪನ್ನಗಳ ಮಾರಾಟಕ್ಕೆ ಅಮೆಜಾನ್ ಸೂಕ್ತ ವೇದಿಕೆಯಾಗಿದ್ದು, ಮಾರಾಟಗಾರರ ಬೆಳವಣಿಗೆಗೂ ಪೂರಕವಾಗಿದೆ' ಎಂದು ಕಂಪನಿಯ ವಕ್ತಾರರು ತಿಳಿಸಿದ್ದಾರೆ.

ಹೊಸ ಸರಕು ಮಾರುಕಟ್ಟೆಗೆ ಪೂರೈಕೆ; ಪ್ರತಿ ಕ್ವಿಂಟಲ್‌ಗೆ ₹1,200 ಧಾರಣೆ

ಈರುಳ್ಳಿ ರಫ್ತು: ನಿಷೇಧ ವಿಸ್ತರಣೆ

ನವದೆಹಲಿ (ಪಿಟಿಐ/ ರಾಯಿಟರ್ಸ್): ಕೇಂದ್ರ ಸರ್ಕಾರವು ಈರುಳ್ಳಿ ರಫ್ತು ನಿಷೇಧವನ್ನು ಅನಿರ್ದಿಷ್ಟಾವಧಿಗೆ ವಿಸ್ತರಿಸಿದೆ.

ದೇಶೀಯ ಮಾರುಕಟ್ಟೆಯಲ್ಲಿ ಈರುಳ್ಳಿಯ ಲಭ್ಯತೆ ಹಾಗೂ ಬೆಲೆ ಏರಿಕೆ ನಿಯಂತ್ರಿಸಲು ಮಾರ್ಚ್ 31ರ ವರೆಗೂ ರಫ್ತಿಗೆ ನಿಷೇಧ ಹೇರಿತ್ತು. ಲೋಕಸಭಾ ಚುನಾವಣೆ ಘೋಷಣೆಯಾಗಿರುವ ಬೆನ್ನಲ್ಲೇ ಸರ್ಕಾರದ ಈ ನಿರ್ಧಾರವು ವರ್ತಕರಲ್ಲಿ ಅಚ್ಚರಿ ಮೂಡಿಸಿದೆ. ಇದರಿಂದ ಕೆಲವು ಸಾಗರೋತ್ತರ ಮಾರುಕಟ್ಟೆಗಳಲ್ಲಿ ಈರುಳ್ಳಿ ಧಾರಣೆ ಏರಿಕೆಗೆ ಕಾರಣವಾಗಬಹುದು ಎಂದು ಹೇಳಲಾಗಿದೆ.

ಭಾರತವು ಅತಿಹೆಚ್ಚಿನ ಪ್ರಮಾಣದಲ್ಲಿ ಈರುಳ್ಳಿ ರಫ್ತು ಮಾಡುವ ದೇಶಗಳ ಪೈಕಿ ಒಂದಾಗಿದೆ. ಕಳೆದ ವರ್ಷದ ಡಿಸೆಂಬರ್ 8ರಂದು ರಫ್ತು ನಿಷೇಧದ ಆದೇಶ ಹೊರಡಿಸಿತ್ತು.

ಸ್ಥಳೀಯ ಮಾರುಕಟ್ಟೆಯಲ್ಲಿ ಬೆಲೆಯು ಅರ್ಧದಷ್ಟು ಇಳಿಕೆ ಕಡಿಮೆಯಾಗುವವರೆಗೆ ಹಾಗೂ ಹೊಸ ಸರಕು ಮಾರುಕಟ್ಟೆಗೆ ಪೂರೈಕೆಯಾಗುವ ತನಕ ಈ ಆದೇಶ ಜಾರಿಯಲ್ಲಿ ಇರಲಿದೆ ಎಂದು ವರ್ತಕರು ನಿರೀಕ್ಷಿಸಿದ್ದರು.

ಆದರೆ, ಮುಂದಿನ ಸೂಚನೆವರೆಗೂ ರಫ್ತು ನಿಷೇಧ ಆದೇಶ ಜಾರಿಯಲ್ಲಿರುತ್ತದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಅಧೀನದಲ್ಲಿ ಬರುವ ವಿದೇಶಿ ವ್ಯಾಪಾರದ ಮಹಾನಿರ್ದೇಶನಾಲಯ (ಡಿಜಿಎಫ್‌ಟಿ) ತಿಳಿಸಿದೆ.

ಆದರೆ, ಮಿತ್ರ ರಾಷ್ಟ್ರಗಳಾದ ಬಾಂಗ್ಲಾದೇಶ, ಮಲೇಷ್ಯಾ, ನೇಪಾಳ ಹಾಗೂ ಯುಎಇಗೆ ರಫ್ತು ನಿಷೇಧ ಆದೇಶವು ಅನ್ವಯಿಸುವುದಿಲ್ಲ.

'ಸದ್ಯ ಹೊಸ ಸರಕು ಮಾರುಕಟ್ಟೆಗೆ ಬರುತ್ತಿದೆ. ಈ ನಡುವೆಯೇ ಧಾರಣೆ ಕೂಡ ಕುಸಿದಿದೆ. ಇಂತಹ ಸಂದಿಗ್ಧತೆಯಲ್ಲಿ ಸರ್ಕಾರ ಕೈಗೊಂಡಿರುವ ನಿರ್ಧಾರವು ಸೋಜಿಗ ತಂದಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಮುಂಬೈನ ಈರುಳ್ಳಿ ರಫ್ತು ಕಂಪನಿಯೊಂದರ ಕಾರ್ಯ ನಿರ್ವಾಹಕರೊಬ್ಬರು ಅಸಮಾಧಾನ ತೋಡಿಕೊಂಡಿದ್ದಾರೆ.

ಮಹಾರಾಷ್ಟ್ರದಲ್ಲಿ ಅತಿಹೆಚ್ಚು ಈರುಳ್ಳಿ ಬೆಳೆಯಲಾಗುತ್ತದೆ. ಡಿಸೆಂಬರ್‌ನಲ್ಲಿ ಒಂದು ಕ್ವಿಂಟಲ್‌ಗೆ ₹4,500 ಇದ್ದ ಧಾರಣೆಯು, ಈಗ ₹1,200ಕ್ಕೆ ಕುಸಿದಿದೆ ಎಂದು ತಿಳಿಸಿದ್ದಾರೆ.

'ಚೀನಾ ಮತ್ತು ಈಜಿಪ್ಟ್‌ನಿಂದ ಏಷ್ಯಾದ ಇತರೆ ದೇಶಗಳು ಈರುಳ್ಳಿಯನ್ನು ಆಮದು ಮಾಡಿಕೊಳ್ಳುತ್ತವೆ. ಪ್ರಸ್ತುತ ಭಾರತದ ನಡೆಯಿಂದಾಗಿ ಈರುಳ್ಳಿ ಆಮದಿಗೆ ಹೆಚ್ಚಿನ ದರ ನಿಗದಿಪಡಿಸುವ ಸಾಧ್ಯತೆಯಿದೆ. ಹಾಗಾಗಿ, ಚೀನಾ, ಈಜಿಪ್ಟ್‌ನಿಂದ ಖರೀದಿಸುವ ದೇಶಗಳಿಗೆ ಈಗ ಬೇರೆ ಆಯ್ಕೆ ಇಲ್ಲದಂತಾಗಿದೆ' ಎಂದು ಹೇಳಿದ್ದಾರೆ.

ಅಂಕಿ ಅಂಶ

2.5 ದಶಲಕ್ಷ ಟನ್ — 2022–23ರಲ್ಲಿ ಭಾರತದಿಂದ ರಫ್ತಾದ ಈರುಳ್ಳಿ ಪ್ರಮಾಣ

22.7 ದಶಲಕ್ಷ ಟನ್ — 2023ರ ರಾಬಿ ಅವಧಿಯಲ್ಲಿನ ಈರುಳ್ಳಿ ಉತ್ಪಾದನೆಯ ಅಂದಾಜು

64,400 ಟನ್ — ಯುಎಇ ಮತ್ತು ಬಾಂಗ್ಲಾದೇಶಕ್ಕೆ ಈರುಳ್ಳಿ ರಫ್ತಿಗೆ ಅನುಮತಿ

ಬೆಲೆ ನಿಯಂತ್ರಣಕ್ಕೆ ಹಲವು ಕ್ರಮ

ಕೇಂದ್ರ ಸರ್ಕಾರವು ದೇಶೀಯ ಮಾರುಕಟ್ಟೆಯಲ್ಲಿ ಈರುಳ್ಳಿ ಬೆಲೆ ನಿಯಂತ್ರಣಕ್ಕೆ ಹಲವು ಕ್ರಮಗಳನ್ನು ಕೈಗೊಂಡಿತ್ತು.

2023ರ ಅಕ್ಟೋಬರ್ ವೇಳೆ ದೇಶದಲ್ಲಿ ಈರುಳ್ಳಿ ಬೆಲೆ ಏರಿಕೆಯಾಗಿತ್ತು. ಆಗ ಕಾಪು ದಾಸ್ತಾನಿಟ್ಟಿದ್ದ ಈರುಳ್ಳಿಯನ್ನು ಪ್ರತಿ ಕೆ.ಜಿಗೆ ₹25ರಂತೆ ಚಿಲ್ಲರೆ ಮಾರುಕಟ್ಟೆಯಲ್ಲಿ ಮಾರಾಟ ಮಾಡಿತ್ತು.

ಅಕ್ಟೋಬರ್ 28ರಿಂದ ಡಿಸೆಂಬರ್ 31ರ ವರೆಗೆ ಈರುಳ್ಳಿ ರಫ್ತು ದರವನ್ನು ಪ್ರತಿ ಟನ್‌ಗೆ ₹66,875 (800 ಡಾಲರ್) ನಿಗದಿಪಡಿಸಿತ್ತು. ಡಿಸೆಂಬರ್ ಅಂತ್ಯದವರೆಗೆ ರಫ್ತಿನ ಮೇಲೆ ಶೇ 40ರಷ್ಟು ಸುಂಕ ವಿಧಿಸಿತ್ತು.

ಸುದ್ದಿ 2 ನಿಮಿಷ

'ಚೀನಾ ಹೇಳಿಕೆ ಹಾಸ್ಯಾಸ್ಪದ'

ಸಿಂಗಪುರ (ಪಿಟಿಐ): ಅರುಣಾಚಲ ಪ್ರದೇಶ ತನಗೆ ಸೇರಿದ್ದು ಎಂಬ ಚೀನಾ ಹೇಳಿಕೆ ಹಾಸ್ಯಾಸ್ಪದ. ಅರುಣಾಚಲ ಪ್ರದೇಶ ಎಂದಿಗೂ ಭಾರತದ ಅವಿಭಾಜ್ಯ ಅಂಗ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಹೇಳಿದ್ದಾರೆ.

ಮೂರು ದಿನಗಳ ಕಾಲ ಸಿಂಗಪುರ ಪ್ರವಾಸದಲ್ಲಿರುವ ಅವರು ಎನ್‌ಯುಎಸ್ ಇನ್‌ಸ್ಟಿಟ್ಯೂಟ್ ಆಫ್ ಸೌತ್ ಏಷ್ಯನ್ ಸ್ಟಡೀಸ್‌ನಲ್ಲಿ ಶನಿವಾರ ಉಪನ್ಯಾಸ ನೀಡಿದರು.

ಬಳಿಕ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಇದೇನು ಹೊಸ ವಿಚಾರ ಅಲ್ಲ. ಈ ಕುರಿತಂತೆ ಚೀನಾ ಹೇಳಿಕೆ ಎಂದೆಂದಿಗೂ ಹಾಸ್ಯಾಸ್ಪದವಾಗಿಯೇ ಇರುತ್ತದೆ' ಎಂದರು.

ಇದಕ್ಕೂ ಮುನ್ನ ಅವರು, ಇಲ್ಲಿನ ಯುದ್ಧ ಸ್ಮಾರಕದಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಮತ್ತು ಇಂಡಿಯನ್ ನ್ಯಾಷನಲ್ ಆರ್ಮಿಯ (ಐಎನ್‌ಎ) ಹುತಾತ್ಮ ಸೈನಿಕರಿಗೆ ಗೌರವ ನಮನ ಸಲ್ಲಿಸಿದರು.

ಸಿಂಗಪುರ ಭೇಟಿ ವೇಳೆ ಅವರು, ಪ್ರಧಾನಮಂತ್ರಿ ಲೀ ಸಿಯೆನ್ ಲೂಂಗ್ ಸೇರಿದಂತೆ ಪ್ರಮುಖ ನಾಯಕರೊಂದಿಗೆ ಅವರು ಮಾತುಕತೆ ನಡೆಸಲಿದ್ದಾರೆ.

ಭೂತಾನ್: ತಾಯಿ–ಮಕ್ಕಳ ಆಸ್ಪತ್ರೆ ಉದ್ಘಾಟಿಸಿದ ಮೋದಿ

ಥಿಂಪು (ಪಿಟಿಐ): ಭಾರತದ ನೆರವಿನೊಂದಿಗೆ ಇಲ್ಲಿ ನಿರ್ಮಿಸಲಾಗಿರುವ ಜಿ.ಜೆ. ಪೆಮಾ ವಾಂಗ್‌ಚುಕ್ ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ಭಾರತ ಹಾಗೂ ಭೂತಾನ್‌ನ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿ ಮತ್ತು ಶೆರಿಂಗ್ ಟೋಬಗೇ ಶನಿವಾರ ಉದ್ಘಾಟಿಸಿದರು.

'ಈ ಅತ್ಯಾಧುನಿಕ ಆಸ್ಪತ್ರೆಯು ಗುಣಮಟ್ಟದ ಆರೋಗ್ಯ ಸೇವೆ ಒದಗಿಸಲಿದೆ' ಎಂದು ಮೋದಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರೆ, ವಿದೇಶಾಂಗ ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್, 'ಇದು ಭಾರತ-ಭೂತಾನ್ ನಡುವಿನ ಅಭಿವೃದ್ಧಿಯ ಸಹಕಾರಕ್ಕೆ ಉಜ್ವಲ ಉದಾಹರಣೆಯಾಗಿದೆ' ಎಂದಿದ್ದಾರೆ.

'ಈ ಆಸ್ಪತ್ರೆಯ ನಿರ್ಮಾಣಕ್ಕೆ ಭಾರತ ಎರಡು ಹಂತದಲ್ಲಿ ಸಹಕಾರ ನೀಡಿದೆ. ಮೊದಲ ಹಂತದಲ್ಲಿ ₹ 22 ಕೋಟಿ ವೆಚ್ಚದಲ್ಲಿ ಆಸ್ಪತ್ರೆ ನಿರ್ಮಿಸಲಾಗಿತ್ತು. ಇದು 2019ರಿಂದ ಕಾರ್ಯಾಚರಿಸುತ್ತಿದೆ. 12ನೇ ಪಂಚವಾರ್ಷಿಕ ಯೋಜನೆಯಡಿ 2019ರಲ್ಲೇ ಎರಡನೇ ಹಂತವನ್ನು ಕೈಗೆತ್ತಿಕೊಳ್ಳಲಾಗಿದ್ದು, ₹ 119 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಆಸ್ಪತ್ರೆ ನಿರ್ಮಿಸಲಾಗಿದೆ' ಎಂದು ವಿದೇಶಾಂಗ ಇಲಾಖೆಯ ಪ್ರಕಟಣೆ ತಿಳಿಸಿದೆ.

ಭರವಸೆ: ಭೂತಾನ್‌ನ ರಾಜ ಜಿಗ್ಮೆ ಖೇಸರ್ ನಾಮ್‌ಗ್ಯೆಲ್ ವಾಂಗ್‌ಚುಕ್ ಹಾಗೂ ಪ್ರಧಾನಮಂತ್ರಿ ಟೋಬಗೇ ಅವರನ್ನು ಶುಕ್ರವಾರ ಭೇಟಿ ಮಾಡಿ ಮಾತುಕತೆ ನಡೆಸಿದ ಭಾರತದ ಪ್ರಧಾನಿ ನರೇಂದ್ರ ಮೋದಿ, ಮುಂದಿನ ಐದು ವರ್ಷಗಳಲ್ಲಿ ₹ 10 ಸಾವಿರ ಕೋಟಿ ನೆರವು ನೀಡುವ ಭರವಸೆ ನೀಡಿದರು.

30 ಟ್ಯೂಷನ್ ಕೇಂದ್ರ ಮುಚ್ಚಿದ ಬೈಜುಸ್

ನವದೆಹಲಿ (ಪಿಟಿಐ): ಬೈಜುಸ್ ಕಂಪನಿಯ ಮಾತೃಸಂಸ್ಥೆಯಾದ ಥಿಂಕ್ ಆ್ಯಂಡ್ ಲರ್ನ್, ದೇಶದಲ್ಲಿ ತೆರೆದಿದ್ದ ಒಟ್ಟು 292 ಟ್ಯೂಷನ್ ಕೇಂದ್ರಗಳ ಪೈಕಿ 30 ಕೇಂದ್ರಗಳನ್ನು ಮುಚ್ಚಿದೆ.

ಈ ಕೇಂದ್ರಗಳನ್ನು ಸ್ಥಾಪಿಸಿ ಮೂರು ವರ್ಷಗಳಾಗಿದ್ದು, ಉತ್ತಮ ಫಲಿತಾಂಶವನ್ನೂ ನೀಡುತ್ತಿವೆ. ವೆಚ್ಚದ ಪ್ರಮಾಣ ತಗ್ಗಿಸುವ ಮೂಲಕ ಕೇಂದ್ರಗಳನ್ನು ಲಾಭದಾಯಕ ಹಾದಿಯತ್ತ ಕೊಂಡೊಯ್ಯಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಕಂಪನಿ ತಿಳಿಸಿದೆ.

ಕೇಂದ್ರಗಳ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಬದ್ಧತೆ ಶ್ಲಾಘನೀಯವಾದುದು. ದಕ್ಷತೆಯ ಮೂಲಕ ಗುಣಮಟ್ಟದ ಬೋಧನೆಗೆ ಒತ್ತು ನೀಡಲಾಗುವುದು. ಇದು ಕೇಂದ್ರಗಳ ಆದಾಯ ಹೆಚ್ಚಳಕ್ಕೆ ನೆರವಾಗಲಿದೆ ಎಂದು ತಿಳಿಸಿದೆ.

'2024–25ನೇ ಶೈಕ್ಷಣಿಕ ಸಾಲಿಗೆ ಈಗಾಗಲೇ ವಿದ್ಯಾರ್ಥಿಗಳು ಹೆಸರು ನೋಂದಾಯಿಸಿದ್ದಾರೆ. ಕೇಂದ್ರಗಳ ಮೇಲೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಇಟ್ಟಿರುವ ನಂಬಿಕೆ, ಆತ್ಮವಿಶ್ವಾಸ ಹಾಗೂ ಬೆಂಬಲಕ್ಕೆ ಆಭಾರಿಯಾಗಿದ್ದೇವೆ' ಎಂದು ತಿಳಿಸಿದೆ.

ಏರ್ ಇಂಡಿಯಾಗೆ ₹80 ಲಕ್ಷ ದಂಡ

ನವದೆಹಲಿ (ಪಿಟಿಐ): ವಿಮಾನ ಕಾರ್ಯಾಚರಣೆ ಅವಧಿ ಹಾಗೂ ಪೈಲಟ್‌ಗಳ ವಿಶ್ರಾಂತಿಗೆ ಸಂಬಂಧಿಸಿದಂತೆ ರೂಪಿಸಿರುವ ನಿಯಮಾವಳಿಗಳನ್ನು ಉಲ್ಲಂಘಿಸಿದ ಆರೋಪದ ಮೇರೆಗೆ ಏರ್ ಇಂಡಿಯಾ ಕಂಪನಿಗೆ, ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯವು (ಡಿಜಿಸಿಎ) ₹80 ಲಕ್ಷ ದಂಡ ವಿಧಿಸಿದೆ.

ಕಳೆದ ಎರಡು ತಿಂಗಳ ಅವಧಿಯಲ್ಲಿ ಟಾಟಾ ಗ್ರೂಪ್ ಒಡೆತನದ ಏರ್ ಇಂಡಿಯಾಗೆ ದಂಡ ವಿಧಿಸಿದ ಮೂರನೇ ಪ್ರಕರಣ ಇದಾಗಿದೆ. ದೀರ್ಘಾವಧಿವರೆಗೆ ವಿಮಾನ ಹಾರಾಟ ನಡೆಸಿದ ಪೈಲಟ್‌ಗಳಿಗೆ ವಿಶ್ರಾಂತಿ ನೀಡುವಲ್ಲಿ ನಿಯಮಾವಳಿ ಉಲ್ಲಂಘಿಸಲಾಗಿದೆ ಎಂದು ಡಿಜಿಸಿಎ ಹೇಳಿದೆ.

ಪೈಲಟ್‌ಗಳ ಕರ್ತವ್ಯ ಮತ್ತು ವಿಶ್ರಾಂತಿ ಅವಧಿಗೆ ಸಂಬಂಧಿಸಿದಂತೆ ಜನವರಿಯಲ್ಲಿ ಡಿಜಿಸಿಎ ಅಧಿಕಾರಿಗಳು, ಖುದ್ದಾಗಿ ಪರಿಶೀಲನೆ ನಡೆಸಿದ್ದರು. ಈ ವೇಳೆ 60 ವರ್ಷ ಮೇಲ್ಪಟ್ಟ ಇಬ್ಬರು ಪೈಲಟ್‌ಗಳು ಏರ್ ಇಂಡಿಯಾದ ವಿಮಾನವನ್ನು ಹಾರಾಟ ನಡೆಸಿರುವ ಸಂಗತಿ ಬೆಳಕಿಗೆ ಬಂದಿತ್ತು. 16 ಗಂಟೆಗೂ ಹೆಚ್ಚು ಕಾಲ ಕರ್ತವ್ಯ ನಿರ್ವಹಿಸಿದ ಈ ಇಬ್ಬರಿಗೂ ವಿಶ್ರಾಂತಿ ನೀಡದಿರುವುದು ಕಂಡುಬಂದಿತ್ತು.

ಈ ಕುರಿತು ಮಾರ್ಚ್ 1ರಂದು ನೋಟಿಸ್ ನೀಡಲಾಗಿತ್ತು. ಇದಕ್ಕೆ ಏರ್ ಇಂಡಿಯಾವು ನೀಡಿರುವ ಉತ್ತರವು ಸಮರ್ಪಕವಾಗಿಲ್ಲ. ಲೋಪ ಎಸಗಿರುವುದು ಕಂಡುಬಂದಿದೆ. ಹಾಗಾಗಿ, ದಂಡ ವಿಧಿಸಲಾಗಿದೆ ಎಂದು ಡಿಜಿಸಿಎ ತಿಳಿಸಿದೆ.

ಪೈಲಟ್‌ಗಳ ಕರ್ತವ್ಯ ಹಾಗೂ ವಿಶ್ರಾಂತಿ ಸಂಬಂಧ ಡಿಜಿಸಿಎ ಪರಿಷ್ಕೃತ ನಿಯಮಾವಳಿಗಳನ್ನು ರೂಪಿಸಿದೆ. ವಿಮಾನಯಾನ ಕಂಪನಿಗಳು ಜೂನ್ 1ರಿಂದ ಕಡ್ಡಾಯವಾಗಿ ಇವುಗಳನ್ನು ಜಾರಿಗೊಳಿಸಬೇಕು ಎಂದು ಕಟ್ಟುನಿಟ್ಟಾಗಿ ಸೂಚಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹450
12 ಕ್ಕೆ	₹62
ಮೈಸೂರು	
100ಕ್ಕೆ	₹450

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹179
ಆರ್‌ಎಸ್‌ಎಸ್-5	₹172
ಗುಡ್ ಲಾಟ್	₹162

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹200-442
ದ್ವಿತಳಿ (ಬಿ.ವಿ)	₹299-548

ಬಳ್ಳಾರಿ ಎಪಿಎಂಸಿ : ಸಭೆ ನಾಳೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ (ಎಪಿಎಂಸಿ) ನಾಲ್ಕು ದಿನಗಳಿಂದ ಸ್ಥಗಿತಗೊಂಡ ವಹಿವಾಟಿನ ಸಮಸ್ಯೆ ಬಗೆಹರಿಸಲು ಸೋಮವಾರ (ಮಾರ್ಚ್ 25) ದಲ್ಲಾಳಿಗಳು ಮತ್ತು ವರ್ತಕರ ಸಭೆ ಕರೆಯುವಂತೆ ದಲ್ಲಾಳಿಗಳ ಸಂಘವು ಎಪಿಎಂಸಿ ಕಾರ್ಯದರ್ಶಿಗೆ ಮನವಿ ಮಾಡಿದೆ.

'ರೈತರ ಹಿತದೃಷ್ಟಿಯಿಂದ ಸಮಸ್ಯೆಯನ್ನು ಶೀಘ್ರ ಬಗೆಹರಿಸಲು ಕಾರ್ಯದರ್ಶಿಗೆ ಕೋರಿದ್ದೇವೆ. ಸಭೆಯಲ್ಲಿ ನಮ್ಮ ಬೇಡಿಕೆಗೆ ಮನ್ನಣೆ ಸಿಗದಿದ್ದರೆ, ಸೋಮವಾರವೂ ವಹಿವಾಟು ನಡೆಸುವುದಿಲ್ಲ' ಎಂದು ದಲ್ಲಾಳಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಮೇಕಲ ಗುರುಸ್ವಾಮಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಸೋಮವಾರದ ಸಭೆಗೆ ನಮ್ಮನ್ನು ಆಹ್ವಾನಿಸಿಲ್ಲ' ಎಂದು ವರ್ತಕರ ಸಂಘದ ಅಧ್ಯಕ್ಷ ರಮೇಶ್ ಅವರು ತಿಳಿಸಿದರು.

ಮುಂದುವರಿದ ಕೆಂಪು ಸಮುದ್ರ ಬಿಕ್ಕಟ್ಟು

ಆರ್ಥಿಕತೆ ಬೆಳವಣಿಗೆಗೆ ಅಡ್ಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೆಂಪು ಸಮುದ್ರದ ಬಿಕ್ಕಟ್ಟಿನಿಂದಾಗಿ ಸರಕು ಸಾಗಣೆ ಹಡಗುಗಳ ಸಂಚಾರಕ್ಕೆ ಅಡ್ಡಿಯಾಗಿದೆ. ಇದು ಭಾರತದಲ್ಲಿ ಹಣದುಬ್ಬರ ಏರಿಕೆ ಹಾಗೂ ಆರ್ಥಿಕತೆಯ ಬೆಳವಣಿಗೆಗೆ ಅಡ್ಡಿ ಉಂಟು ಮಾಡುವ ಸಾಧ್ಯತೆಯಿದೆ ಎಂದು ಕೇಂದ್ರ ಆರ್ಥಿಕ ಸಚಿವಾಲಯದ ಮಾಸಿಕ ವರದಿ ಹೇಳಿದೆ.

ಯೂರೋಪ್ ದೇಶಗಳಿಗೆ ಭಾರತದ ರಫ್ತು ಹಾಗೂ ಆಮದು ವಹಿವಾಟು ಕೆಂಪು ಸಮುದ್ರದ ಮೂಲಕವೇ ನಡೆಯುತ್ತದೆ. ಆದರೆ, ಬಿಕ್ಕಟ್ಟು ಇನ್ನೂ ನಿಯಂತ್ರಣಕ್ಕೆ ಬಂದಿಲ್ಲ. ಹಾಗಾಗಿ ಕಚ್ಚಾತೈಲ, ಆಟೊಮೊಬೈಲ್, ರಸಗೊಬ್ಬರ, ಜವಳಿ, ಕಬ್ಬಿಣ ಮತ್ತು ಉಕ್ಕು ಪೂರೈಕೆ ಮೇಲೆ ಪರಿಣಾಮ ಬೀರಿದೆ ಎಂದು ಹೇಳಿದೆ.

ಸಾಗಣೆ ಹಾಗೂ ವಿಮಾ ವೆಚ್ಚವು ಏರಿಕೆಯಾಗಿದೆ. ಅಲ್ಲದೆ, ಸಾಗಣೆಯ ಅವಧಿ ಹೆಚ್ಚುತ್ತಿದೆ. ಇದರಿಂದ ಆಮದು ಉತ್ಪನ್ನಗಳ ಬೆಲೆ ದುಬಾರಿಯಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದೆ.

ಭಾರತವು ಜೋರ್ಡಾನ್ ಹಾಗೂ ಇಸ್ರೇಲ್‌ನಿಂದ ಎಂಒಪಿ (ಮ್ಯೂರೇಟ್ ಆಫ್ ಪೊಟ್ಯಾಷ್) ರಸಗೊಬ್ಬರವನ್ನು ಆಮದು ಮಾಡಿಕೊಳ್ಳುತ್ತದೆ. ಮಧ್ಯಪ್ರಾಚ್ಯ ಹಾಗೂ ಕೆಂಪು ಸಮುದ್ರದ ಬಿಕ್ಕಟ್ಟು ರಸಗೊಬ್ಬರದ ಪೂರೈಕೆ ಮೇಲೆ ಪರಿಣಾಮ ಬೀರಿದೆ ಎಂದು ಹೇಳಿದೆ.

ಚೀನಾ, ಜಪಾನ್, ಭಾರತ ಹಾಗೂ ದಕ್ಷಿಣ ಕೊರಿಯಾ ದೇಶಗಳು ಅತಿಹೆಚ್ಚಿನ ಪ್ರಮಾಣದಲ್ಲಿ ಕಚ್ಚಾತೈಲವನ್ನು ಆಮದುಕೊಳ್ಳುತ್ತವೆ. ಹಡಗುಗಳ ಸಂಚಾರದಲ್ಲಿ ಆಗಿರುವ ಅಡಚಣೆಯು ಈ ರಾಷ್ಟ್ರಗಳ ಆರ್ಥಿಕತೆ ಬೆಳವಣಿಗೆಗೆ ಧಕ್ಕೆ ತರುವ ಸಾಧ್ಯತೆಯಿದೆ. ಇಂಧನ ಬೆಲೆ ಏರಿಕೆಯಾಗಲಿದ್ದು, ಇದು ಹಣದುಬ್ಬರಕ್ಕೆ ದಾರಿಯಾಗಲಿದೆ ಎಂದು ತಿಳಿಸಿದೆ.

ಕೆಂಪು ಸಮುದ್ರದಲ್ಲಿ ವಾಣಿಜ್ಯ ಹಡಗುಗಳ ಮೇಲೆ ಯೆಮನ್‌ನ ಹುಥಿ ಬಂಡುಕೋರರು ನಡೆಸುತ್ತಿರುವ ದಾಳಿಯಿಂದಾಗಿ ಬಿಕ್ಕಟ್ಟು ತಲೆದೋರಿದೆ.

ಪಾಕಿಸ್ತಾನದ ನೀತಿ ವಿರುದ್ಧ ಟೀಕಾಪ್ರಹಾರ

'ಪಿಒಕೆ: ಅಲ್ಪಸಂಖ್ಯಾತರು ಅತಂತ್ರ'

ಜಿನೀವಾ (ಪಿಟಿಐ): ದಕ್ಷಿಣ ಏಷ್ಯಾದಲ್ಲಿ ವಿಶೇಷವಾಗಿ ಪಾಕ್ ಆಕ್ರಮಿತ ಕಾಶ್ಮೀರ ಮತ್ತು ಗಿಲ್ಗಿಟ್-ಬಾಲ್ಟಿಸ್ತಾನ್‌ನಲ್ಲಿ ಅಲ್ಪಸಂಖ್ಯಾತರ ಪರಿಸ್ಥಿತಿ ತೀರಾ ಹದಗೆಟ್ಟಿದೆ ಎಂದು ಇಲ್ಲಿ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾನವ ಹಕ್ಕುಗಳ ಹೋರಾಟಗಾರರು ಧ್ವನಿ ಎತ್ತಿದ್ದಾರೆ. ಅಲ್ಪಸಂಖ್ಯಾತರ ವಿಚಾರದಲ್ಲಿ ಪಾಕಿಸ್ತಾನ ಸರ್ಕಾರ ಅನುಸರಿಸುತ್ತಿರುವ ನೀತಿಗಳನ್ನು ತೀವ್ರವಾಗಿ ಟೀಕಿಸಿದ್ದಾರೆ.

ಎನ್‌ಇಪಿ-ಜೆಕೆಜಿಬಿಎಲ್ (ನ್ಯಾಷನಲ್ ಇಕ್ವಾಲಿಟಿ ಪಾರ್ಟಿ ಜಮ್ಮು-ಕಾಶ್ಮೀರ, ಗಿಲ್ಗಿಟ್ ಬಾಲ್ಟಿಸ್ತಾನ್ ಆ್ಯಂಡ್ ಲಡಾಖ್) ಇಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ದೇಶಗಳ ಮಾನವ ಹಕ್ಕುಗಳ ಹೋರಾಟಗಾರರು ಪಾಲ್ಗೊಂಡಿದ್ದರು.

ಅಲ್ಪಸಂಖ್ಯಾತರ ಸಮಸ್ಯೆಗಳ ವಿಷಯ ತಜ್ಞರಾದ ಪ್ರೊ. ನಿಕೊಲಸ್ ಲೆವ್ರತ್, ಪತ್ರಕರ್ತ ಮತ್ತು ಗ್ರೀಸ್ ಮಾಜಿ ಸಂಸದ ಕಾನ್‌ಸ್ಟ್ಯಾಂಟಿನ್ ಬೊಗ್ದಾನೊಸ್, ಬ್ರಿಟನ್ ಪತ್ರಕರ್ತ ಹಾಗೂ ಲೇಖಕ ಹಂಫ್ರೆ ಹಾಕ್‌ಸ್ಲೆ, ಎನ್‌ಇಪಿ -ಜೆಕೆಜಿಬಿಎಲ್ ಸಂಸ್ಥಾಪಕ ಅಧ್ಯಕ್ಷ ಸಜ್ಜದ್ ರಾಜಾ, ಗಿಲ್ಗಿಟ್- ಬಾಲ್ಟಿಸ್ತಾನ್ ನಿವಾಸಿ ಸೆಂಗೆ ಸೆರಿಂಗ್ ಅವರಿದ್ದ ಸಮಿತಿಯು ಈ ಕುರಿತು ಹೇಳಿಕೆ ಬಿಡುಗಡೆ ಮಾಡಿದೆ.

ಪಾಕಿಸ್ತಾನದಲ್ಲಿ ಅದರಲ್ಲೂ ವಿಶೇಷವಾಗಿ ಪಾಕ್ ಆಕ್ರಮಿತ ಕಾಶ್ಮೀರ ಹಾಗೂ ಗಿಲ್ಗಿಟ್-ಬಾಲ್ಟಿಸ್ತಾನ್‌ನಲ್ಲಿ ಅಲ್ಪಸಂಖ್ಯಾತರು ಅನುಭವಿಸುತ್ತಿರುವ ಸಮಸ್ಯೆಗಳ ಬಗ್ಗೆ ಈ ಸಮಿತಿ ಬೆಳಕು ಚೆಲ್ಲಿದೆ.

ಪಾಕ್ ನೀತಿಗೆ ತೀವ್ರ ಖಂಡನೆ: ಅಲ್ಪಸಂಖ್ಯಾತರ ಬಗ್ಗೆ ಪಾಕಿಸ್ತಾನದ ಸರ್ಕಾರ ಅನುಸರಿಸಿದ ನೀತಿಗಳು ಮತ್ತು ಈ ಭೂಪ್ರದೇಶದಲ್ಲಿ ಸಶಸ್ತ್ರೀಕರಣ ಮಾಡಿ, ಸಮೃದ್ಧ ಪ್ರದೇಶಗಳನ್ನು ಪ್ರತಿಕೂಲ ಸ್ಥಳಗಳಾಗಿ ಪರಿವರ್ತಿಸಲಾಗಿದೆ ಎಂದು ಗ್ರೀಸ್ ಮಾಜಿ ಸಂಸದ ಕಾನ್‌ಸ್ಟ್ಯಾಂಟಿನ್ ಬೊಗ್ದಾನೊಸ್ ತೀವ್ರ ಟೀಕಾಪ್ರಹಾರ ಮಾಡಿದ್ದಾರೆ.

ತಮ್ಮ ದೇಶದಲ್ಲಿನ ಉತ್ತರ ಸೈಪ್ರಸ್‌ನ ಪರಿಸ್ಥಿತಿ ಉಲ್ಲೇಖಿಸಿದ ಅವರು, ದಬ್ಬಾಳಿಕೆಯ ವಿರುದ್ಧ ಅಲ್ಲಿನ ಜನರು ಹೋರಾಡುತ್ತಿದ್ದಾರೆ. ಪಿಒಕೆಯಲ್ಲಿ ಅಲ್ಪಸಂಖ್ಯಾತರ ಸಮಸ್ಯೆಗಳ ಬಗ್ಗೆ ರಾಜಕಾರಣಿಗಳು ಗಮನ ಹರಿಸುವ ಅಗತ್ಯವಿದೆ. ಭೌಗೋಳಿಕವಾಗಿ ತಮ್ಮ ದೇಶಗಳ ಗಡಿಗಳಿಗೆ ದೂರವಿದ್ದರೂ ಯುರೋಪಿನ ನಾಗರಿಕರು ಇಲ್ಲಿನವರ ಸಮಸ್ಯೆಗಳತ್ತ ಕಳಕಳಿ ತೋರಬೇಕು ಎಂದು ಹೇಳಿದ್ದಾರೆ.

ಈ ಭಾಗದಲ್ಲಿ ದಬ್ಬಾಳಿಕೆಯ ವಿರುದ್ಧ ಶಾಂತಿಯುತ ಪ್ರತಿರೋಧ ತೋರುತ್ತಿರುವುದನ್ನು ಸಮರ್ಥಿಸಿಕೊಂಡ ಲೇಖಕ ಹಂಫ್ರೆ ಹಾಕ್‌ಸ್ಲೆ, ದುರಂತ ತಪ್ಪಿಸುವ ಏಕೈಕ ತಂತ್ರವೆಂದರೆ ಈ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದಾಗಿದೆ ಎಂದು ಪ್ರತಿಪಾದಿಸಿದರು.

ಉಕ್ರೇನ್: ಯುದ್ಧ ಉಲ್ಬಣಿಸುವ ಭೀತಿ

ಕೀವ್ (ಎಪಿ): ಉಕ್ರೇನ್‌ನ ವಿದ್ಯುತ್ ಸ್ಥಾವರಗಳು ಮತ್ತು ಇಂಧನ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ರಷ್ಯಾ ವ್ಯಾಪಕ ದಾಳಿ ಪ್ರಾರಂಭಿಸಿದೆ. ಇದು ಉಭಯ ದೇಶಗಳ ನಡುವಿನ ಕದನವು ಮತ್ತಷ್ಟು ಉಲ್ಬಣಿಸುವ ಸೂಚನೆಯನ್ನು ನೀಡಿದೆ.

ರಷ್ಯಾ ಅಧ್ಯಕ್ಷರಾಗಿ ವ್ಲಾಡಿಮಿರ್ ಪುಟಿನ್ ಪುನರಾಯ್ಕೆಯಾದ ಮರು ದಿನವೇ ಉಕ್ರೇನ್ ಮೇಲೆ ರಷ್ಯಾ ಸೇನೆ ಶುಕ್ರವಾರ ಅತ್ಯಂತ ವಿನಾಶಕಾರಿ ದಾಳಿಯನ್ನು ನಡೆಸಿದೆ. ಈ ದಾಳಿ ಬಹುತೇಕ ಉಕ್ರೇನ್‌ನ ಇಂಧನ ವಲಯದ ಮೇಲೆ ಕೇಂದ್ರೀಕೃತವಾಗಿತ್ತು. ಉಕ್ರೇನ್ ಸೇನೆಯು ತನ್ನ ಗಡಿಪ್ರದೇಶಗಳ ಮೇಲೆ ಶೆಲ್ ದಾಳಿ ಮತ್ತು ತೈಲ ಸಂಗ್ರಹಾಗಾರಗಳ ಮೇಲೆ ನಡೆಸಿದ ಡ್ರೋನ್ ದಾಳಿಗೆ ಇದು ಪ್ರತೀಕಾರದ ದಾಳಿ ಎಂದು ರಷ್ಯಾ ತನ್ನ ವೈಮಾನಿಕ ದಾಳಿಯನ್ನು ಬಣ್ಣಿಸಿದೆ.

ವಿದ್ಯುತ್ ಸ್ಥಾವರಗಳು ಕ್ಷಿಪಣಿ ದಾಳಿಗೆ ತುತ್ತಾಗಿರುವುದರಿಂದ ಉಕ್ರೇನ್‌ನ ಹಲವಾರು ನಗರಗಳು ಕತ್ತಲೆಯಲ್ಲಿ ಮುಳುಗಿವೆ. ದಾಳಿಯಲ್ಲಿ ಐದು ಜನರು ಹತರಾಗಿದ್ದು, ಹಲವು ಮಂದಿ ಗಾಯಗೊಂಡಿದ್ದಾರೆ. ನಿಪ್ರೊದಲ್ಲಿರುವ ದೇಶದ ಅತಿದೊಡ್ಡ ಜಲವಿದ್ಯುತ್ ಸ್ಥಾವರಕ್ಕೆ ತೀವ್ರ ಹಾನಿಯಾಗಿದೆ. ಇದರಿಂದಾಗಿ, ಯುದ್ಧದ ಆರಂಭದಿಂದಲೂ ಅಸುರಕ್ಷತೆಯಲ್ಲಿರುವ ಝಪೊರಿಝಿಯಾ ಅಣು ವಿದ್ಯುತ್ ಸ್ಥಾವರಕ್ಕೆ ವಿದ್ಯುತ್ ಸಂಪರ್ಕದಲ್ಲೂ ಸಮಸ್ಯೆ ಎದುರಾಗಿದೆ.

ಶುಕ್ರವಾರ ನಡೆಸಿದ ದಾಳಿಗೆ ರಷ್ಯಾ 60ಕ್ಕೂ ಹೆಚ್ಚು ಸ್ಫೋಟಕ ಡ್ರೋನ್ ಮತ್ತು 90 ಕ್ಷಿಪಣಿಗಳನ್ನು ಬಳಸಿದೆ. 2022ರಿಂದ ನಡೆಸುತ್ತಿರುವ ಪೂರ್ಣ ಪ್ರಮಾಣದ ಆಕ್ರಮಣದಲ್ಲಿ ಇಂಧನ ಮೂಲಸೌಕರ್ಯಗಳ ಮೇಲೆ ಇಷ್ಟೊಂದು ಭೀಕರ ದಾಳಿ ನಡೆಸಿರುವುದು ಇದೇ ಮೊದಲು ಎನಿಸುತ್ತದೆ ಎಂದು ಉಕ್ರೇನ್ ಅಧಿಕಾರಿಗಳು ಹೇಳಿದ್ದಾರೆ.

ಕೀವ್ ಮೇಲೆ ಸುಮಾರು 31 ಕ್ಷಿಪಣಿಗಳನ್ನು ರಷ್ಯಾ ಸೇನೆ ಉಡಾಯಿಸಿದೆ. ಅಲ್ಲದೆ, ದೇಶದ ಎರಡನೇ ಅತ್ಯಂತ ದೊಡ್ಡ ನಗರ ಹಾರ್ಕಿವ್‌ನಲ್ಲಿ ಈ ದಾಳಿಯಿಂದ ಭಾರಿ ಹಾನಿ ಸಂಭವಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಶುಕ್ರವಾರದ ದಾಳಿಯನ್ನು 'ಪ್ರತೀಕಾರದ ದಾಳಿ' ಎಂದು ರಷ್ಯಾದ ರಕ್ಷಣಾ ಸಚಿವಾಲಯ ಹೇಳಿಕೊಂಡಿದೆ.

ಮಾಸ್ಕೊದಲ್ಲಿ ದಾಳಿ: 133 ಸಾವು

ಒಂದನೇ ಪುಟದಿಂದ...

ಪುಟಿನ್ ಅವರು ಅಧ್ಯಕ್ಷರಾಗಿ ಪುನರಾಯ್ಕೆ ಆದ ಕೆಲವೇ ದಿನಗಳಲ್ಲಿ ಈ ದಾಳಿ ನಡೆದಿದೆ. ಇದು ಈಚಿನ ವರ್ಷಗಳಲ್ಲಿ ರಷ್ಯಾದಲ್ಲಿ ನಡೆದಿರುವ ಅತ್ಯಂತ ಭೀಕರ ದಾಳಿಗಳಲ್ಲಿ ಒಂದು.

ದಾಳಿ ನಡೆದ ಕೆಲವೇ ಹೊತ್ತಿನಲ್ಲಿ ರಷ್ಯಾದ ಕೆಲವು ಪ್ರಮುಖ ನಾಯಕರು ಉಕ್ರೇನ್‌ನತ್ತ ಬೊಟ್ಟು ಮಾಡಿದರು. ಆದರೆ ಈ ದಾಳಿಯಲ್ಲಿ ತನ್ನ ಪಾತ್ರ ಇಲ್ಲ ಎಂದು ಉಕ್ರೇನ್ ಸ್ಪಷ್ಟನೆ ನೀಡಿದೆ. 'ಉಕ್ರೇನ್ ಭಯೋತ್ಪಾದನೆಯ ಮಾರ್ಗವನ್ನು ಯಾವತ್ತೂ ಆಯ್ಕೆ ಮಾಡಿಕೊಂಡಿಲ್ಲ' ಎಂದು ಅಲ್ಲಿನ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ದಾಳಿ ನಡೆಸಿದವರ ಪೈಕಿ ಬಂದೂಕುಧಾರಿಯೊಬ್ಬ ನಾಗರಿಕರ ಮೇಲೆ ತೀರಾ ಹತ್ತಿರದಿಂದ ಗುಂಡು ಹಾರಿಸುತ್ತಿದ್ದ ದೃಶ್ಯಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ಹಲವರು ಹಂಚಿಕೊಂಡಿದ್ದಾರೆ.

ರಷ್ಯಾದ ರಾಕ್‌ಬ್ಯಾಂಡ್ 'ಪಿಕ್‌ನಿಕ್'ನ ಕಾರ್ಯಕ್ರಮವೊಂದರ ವೀಕ್ಷಣೆಗೆ ಈ ಸಭಾಂಗಣದಲ್ಲಿ ಜನ ಸೇರಿದ್ದರು. ದಾಳಿ ಸಂದರ್ಭದಲ್ಲಿ ಇಲ್ಲಿ ಹೊತ್ತಿಕೊಂಡ ಬೆಂಕಿಯನ್ನು ಆರಿಸಲು ಅಗ್ನಿಶಾಮಕ ಸಿಬ್ಬಂದಿ ಗಂಟೆಗಳ ಕಾಲ ಶ್ರಮಿಸಿದರು. ಸಭಾಂಗಣದ ಚಾವಣಿಯು ಕುಸಿದು ಬಿದ್ದಿದೆ.

ಅಮಾಕ್ ಸುದ್ದಿಸಂಸ್ಥೆಯ ಮೂಲಕ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ಇಸ್ಲಾಮಿಕ್ ಸ್ಟೇಟ್ ಸಂಘಟನೆಯ ಅಫ್ಗಾನಿಸ್ತಾನದ ಘಟಕವು 'ಕ್ರೈಸ್ತರು' ಒಟ್ಟು ಸೇರಿದ್ದ ಸ್ಥಳದಲ್ಲಿ ತಾನು ದಾಳಿ ನಡೆಸಿರುವುದಾಗಿ ಹೇಳಿದೆ. ಆದರೆ ಈ ಹೇಳಿಕೆಯ ಸತ್ಯಾಸತ್ಯತೆಯನ್ನು ತಕ್ಷಣಕ್ಕೆ ಪರಿಶೀಲಿಸಲು ಆಗಿಲ್ಲ.

ಇಸ್ಲಾಮಿಕ್ ಸ್ಟೇಟ್‌ನ ಶಾಖೆಯೊಂದು ಮಾಸ್ಕೊ ಮೇಲೆ ದಾಳಿ ನಡೆಸಲು ಯೋಜನೆ ರೂಪಿಸಿದೆ ಎಂಬ ಮಾಹಿತಿಯನ್ನು ಅಮೆರಿಕದ ಗುಪ್ತಚರ ಸಂಸ್ಥೆಗಳು ಈಚೆಗೆ ಕಲೆಹಾಕಿದ್ದವು ಎಂದು ಅಮೆರಿಕದ ಗುಪ್ತದಳದ ಅಧಿಕಾರಿಯೊಬ್ಬರು 'ಎಪಿ' ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಈ ಮಾಹಿತಿಯನ್ನು ಈ ತಿಂಗಳ ಆರಂಭದಲ್ಲಿ ರಷ್ಯಾದ ಅಧಿಕಾರಿಗಳ ಜೊತೆ ಖಾಸಗಿಯಾಗಿ ಹಂಚಿಕೊಳ್ಳಲಾಗಿತ್ತು ಎಂದು ಅವರು ಹೇಳಿದ್ದಾರೆ.

ದಾಳಿಯನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಖಂಡಿಸಿದೆ. ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಅವರೂ ಈ ದಾಳಿಯನ್ನು ಕಟುವಾಗಿ ಖಂಡಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ದ್ವಿತೀಯ ಪುಣ್ಯಸ್ಮರಣೆ



ಶ್ರೀ ಬಿ.ಕೆ.ಗೋಪಾಲಯ್ಯ
(ನಿವೃತ್ತ ಸಿ.ಜಿ.ಎಂ, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಬೆಂಗಳೂರು)
(22.Jun.1953 - 24.Mar.2022)
ನಿಮ್ಮ ನೆನಪುಗಳು ನಿಮ್ಮನ್ನು ಪ್ರೀತಿಸುವ ನಮ್ಮೆಲ್ಲರ ಹೃದಯದಲ್ಲಿ ಸದಾ ಜೀವಂತವಾಗಿರುತ್ತದೆ.
ಚಿರಶಾಂತಿ ಕೋರುವ ನಿಮ್ಮ ಕುಟುಂಬದವರು.

NAME CHANGE ANNOUNCEMENT
Log on to :
dhclassifieds.com

10ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಕೆ.ಪ್ರಭಾಕರ ರೆಡ್ಡಿ

ಶ್ರೀ ಕೆ.ಪ್ರಭಾಕರ ರೆಡ್ಡಿ
(ಮಾಜಿ ಶಾಸಕರು ಹಾಗೂ ಕನ್ನಡ ಚಳುವಳಿ ಹೋರಾಟಗಾರರು)
ಹೃದಯಪೂರ್ವಕ ಸ್ಮರಣೆಯೊದಿಗೆ
ಇಂತಿ :
ಶ್ರೀಮತಿ ಸುಮಿತ್ರ ಪ್ರಭಾಕರ ರೆಡ್ಡಿ, ಮಕ್ಕಳು, ಮೊಮ್ಮಕ್ಕಳು, ಕುಟುಂಬದವರು ಹಾಗೂ ಬಂಧು-ಮಿತ್ರರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook
ಅಡಿಗೆಯವರು ಬೇಕಾಗಿದ್ದಾರೆ. ಹೆಂಗಸರಿಗೆ ಮಾತ್ರ. No. 986, 6th Cross, 9th Main, 2nd Stage, West of Chord Road, Bengaluru-86. Phone: 7204730244, 7022647653

Drivers
ಚಾಲಕರು ಬೇಕಾಗಿದ್ದಾರೆ. ಬ್ಯಾಂಕ್ ಕಾರ್ಯಾಚರಣೆಗಳಿಗಾಗಿ. ಸ್ಥಳ - ಮೈಸೂರು; ಬೆಂಗಳೂರು. ಹೆವಿ ಮೋಟಾರು ವಾಹನ ಪರವಾನಗಿ ಹೊಂದಿರುವ, 20 ಅಡಿಯಿಂದ 40 ಅಡಿ ಕಂಟೈನರ್ ಟ್ರಕ್ ಚಾಲನೆಯ ಅನುಭವ ಇರುವ, ಊಟ ಮತ್ತು ವಸತಿ ಒದಗಿಸಲಾಗಿದೆ. ಸಂಪರ್ಕಿಸಿರಿ - +91 9343553301, +91 9535147273, +91 9442211509

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಿಂದಲೇ ಕುಳಿತು ಪುಸ್ತಕ ಬರೆಯುವ, ಫಾರಂ ತುಂಬುವ ಮೂಲಕ, ತಿಂಗಳಿಗೆ, 18,000-20,000.ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8050064327, 8050064328.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Security & Detectives
ಭದ್ರತಾ ಏಜೆನ್ಸಿಗೆ ತಕ್ಷಣದ ಸಿಬ್ಬಂದಿ ಅಗತ್ಯವಿದೆ: 10 ಭದ್ರತಾ ಸಿಬ್ಬಂದಿ, 4 ಸಹಾಯಕ ಭದ್ರತಾ ಅಧಿಕಾರಿಗಳು. ವಯಸ್ಸಿನ ಮಿತಿ: 40 ವರ್ಷಗಳು. ಸ್ಥಳ: ಬೆಂಗಳೂರು. ಸಂದರ್ಶನದ ವಿಚಾರಣೆಗಳಿಗಾಗಿ, ದಯವಿಟ್ಟು G5S ಭದ್ರತಾ ನಿರ್ವಹಣಾ ಸೇವೆಗಳು, 9482517645 ನಂತರ ಸಂಪರ್ಕಿಸಿ. ಸೋಮವಾರದಿಂದ ಶುಕ್ರವಾರ.

ಭವಿಷ್ಯ

Astrology
★ಓಂದುರ್ಗ ಆಂಜನಂ★ ನಿಮ್ಮ ಯಾವುದೇ ಧೀರ್ಘಕಾಲದ ಎಲ್ಲೂ ಪರಿಹಾರವಾಗದ ಸ್ತ್ರೀಪುರುಷ ಸಂಬಂಧಿತ ಸರ್ವಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರ. ಶ್ರೀ.ದೇವಾನಂದನ್. 9845005009

ಪ್ರವಾಸ

Travel
9 ದಿನಗಳ ಅಯೋಧ್ಯ ಕಾಶಿ, ಚಿತ್ರಕೂಟ ಮತ್ತು 7 ದಿನಗಳ ಅಮರನಾಥಯಾತ್ರೆ 13 ದಿನಗಳ ಚಾರ್‌ಧಾಮ್‌ಯಾತ್ರೆ . ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್. 9980270467 9740228186

ಬಿಲ್ಡರ್ ಎಸೆನ್ಷಿಯಲ್

Water Proofing
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Jayanagar

Flat
2BHK APT. SALE Jayanagar, Floor 1, behind Lalbagh, lift, Balcony, car park, security, brokers excuse, Buyers only, 65 lakhs, Whatsapp: +91-9284538248

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
*Conditions apply
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಸ್ಯಾಮ್–ಲಿಯಾಮ್ ಅಬ್ಬರದ ಬ್ಯಾಟಿಂಗ್ • ಶಿಖರ್ ಪಡೆ ಶುಭಾರಂಭ • ರಿಷಭ್ ಬಳಗಕ್ಕೆ ನಿರಾಶೆ

ಕಿಂಗ್ಸ್‌ಗೆ ಶರಣಾದ ಡೆಲ್ಲಿ ಕ್ಯಾಪಿಟಲ್ಸ್

ಚಂಡೀಗಡ (ಪಿಟಿಐ): ದೀರ್ಘ ಸಮಯದ ನಂತರ ಕ್ರಿಕೆಟ್ ಅಂಗಳಕ್ಕೆ ಮರಳಿದ ರಿಷಭ್ ಪಂತ್ ಬ್ಯಾಟಿಂಗ್ ಮತ್ತು ವಿಕೆಟ್‌ಕೀಪಿಂಗ್ ಹೊಣೆ ನಿಭಾಯಿಸಿದರು. ನಾಯಕರಾಗಿ ತಂಡವನ್ನೂ ಮುನ್ನಡೆಸಿದರು. ಆದರೆ ಗೆಲುವು ಮಾತ್ರ ಒಲಿಯಲಿಲ್ಲ.

ಮುಲ್ಲನಪುರದಲ್ಲಿರುವ ಎಂ.ವೈ. ಎಸ್.ಐ.ಸಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ರಿಷಭ್ ನಾಯಕತ್ವದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಪಂಜಾಬ್ ಕಿಂಗ್ಸ್ ತಂಡವು 4 ವಿಕೆಟ್‌ಗಳಿಂದ ಮಣಿಸಿತು. ಆಲ್‌ರೌಂಡರ್ ಸ್ಯಾಮ್ ಕರನ್ (63; 47ಎ, 4X6, 6X1) ಹಾಗೂ ಲಿಯಾಮ್ ಲಿವಿಂಗ್‌ಸ್ಟೋನ್ (ಅಜೇಯ 38; 21ಎ, 4X2, 6X3) ಅವರ ಸ್ಫೋಟಕ ಶೈಲಿಯ ಬ್ಯಾಟಿಂಗ್‌ನಿಂದ ಕಿಂಗ್ಸ್ ಜಯಿಸಿತು.

ಟಾಸ್ ಗೆದ್ದ ಪಂಜಾಬ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಡೆಲ್ಲಿ ತಂಡದ ಶಾಯ್ ಹೋಪ್ (33; 25ಎ, 4X2, 6X2) ಹಾಗೂ ಅಭಿಷೇಕ್ ಪೊರೆಲ್ (ಅಜೇಯ 32, 10ಎ, 4X4, 6X2) ಅವರ ಆಟದಿಂದ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 174 ರನ್ ಗಳಿಸಿತು. ಪಂಜಾಬ್ ತಂಡದ ಅರ್ಷದೀಪ್ ಸಿಂಗ್ (28ಕ್ಕೆ2) ಮತ್ತು ಹರ್ಷಲ್ ಪಟೇಲ್ (47ಕ್ಕೆ2) ಉತ್ತಮ ದಾಳಿ ನಡೆಸಿದರು.

ಗುರಿ ಬೆನ್ನಟ್ಟಿದ ಪಂಜಾಬ್ ತಂಡವು 6 ವಿಕೆಟ್ ಕಳೆದುಕೊಂಡು 177 ರನ್ ಗಳಿಸಿತು. ಇನಿಂಗ್ಸ್‌ನಲ್ಲಿ ಇನ್ನೂ ನಾಲ್ಕು ಎಸೆತಗಳು ಬಾಕಿ ಇದ್ದಾಗಲೇ ತಂಡ ಗೆಲುವಿನ ಗುರಿ ಮುಟ್ಟಿತು. ಆದರೆ ಇದಕ್ಕೂ ಮುನ್ನ ತುಸು ಆತಂಕ ಎದುರಿಸಿತ್ತು. ಗೆಲುವಿಗೆ ಎಂಟು ರನ್‌ಗಳ ಅಗತ್ಯವಿದ್ದಾಗಲೇ ಡೆಲ್ಲಿಯ ಎಡಗೈ ವೇಗಿ ಖಲೀಲ್ ಅಹಮದ್ 19ನೇ ಓವರ್‌ನಲ್ಲಿ ಸ್ಯಾಮ್ ಕರನ್ ಮತ್ತು ಶಶಾಂಕ್ ಸಿಂಗ್ ಅವರ ವಿಕೆಟ್‌ಗಳನ್ನು ಕಬಳಿಸಿದರು. ಕೇವಲ ನಾಲ್ಕು ರನ್ ಮಾತ್ರ ನೀಡಿದರು.

ಇದರಿಂದಾಗಿ ಕೊನೆಯ ಓವರ್ ರೋಚಕತೆ ಕೆರಳಿಸಿತ್ತು. ಆ ಓವರ್ ಬೌಲಿಂಗ್ ಮಾಡಿದ ಸುಮಿತ್ ಕುಮಾರ್ ಮೊದಲೆರಡು ವೈಡ್ ಹಾಕಿದರು. ನಂತರದ ಎಸೆತವನ್ನು ಡಾಟ್ ಮಾಡುವಲ್ಲಿ ಯಶಸ್ವಿಯಾದರು. ಆದರೆ ಎರಡನೇ ಎಸೆತವನ್ನು ಲಿವಿಂಗ್‌ಸ್ಟೋನ್ ಸಿಕ್ಸ್‌ರ್‌ಗೆತ್ತುವ ಮೂಲಕ ತಂಡಕ್ಕೆ ಗೆಲುವಿನ ಗಡಿ ದಾಟಿಸಿದರು.

ಡಗ್‌ಔಟ್‌ನಲ್ಲಿದ್ದ ತಂಡದ ಸಹಮಾಲೀಕರಾದ ಬಾಲಿವುಡ್ ನಟಿ ಪ್ರೀತಿ ಜಿಂಟಾ ಸಂಭ್ರಮಿಸಿದರು.

ಮಿಂಚಿದ ಇಶಾಂತ್: ಪಂಜಾಬ್ ತಂಡದ ಅಗ್ರಕ್ರಮಾಂಕದ ಬ್ಯಾಟರ್‌ಗಳು ದೊಡ್ಡ ಇನಿಂಗ್ಸ್ ಆಡುವಲ್ಲಿ ಎಡವಿದರು. ಆಟಕ್ಕೆ ಕುದುರಿಕೊಂಡಿದ್ದ ನಾಯಕ ಶಿಖರ್ ಧವನ್ (22; 16ಎ) ಅವರನ್ನು ವೇಗಿ ಇಶಾಂತ್ ಶರ್ಮಾ ಕ್ಲೀನ್‌ಬೌಲ್ಡ್ ಮಾಡಿದರು.

ಅದೇ ಓವರ್‌ನಲ್ಲಿ ಜಾನಿ ಬೆಸ್ಟೊ ಅವರನ್ನು ರನ್‌ಔಟ್ ಮಾಡುವಲ್ಲಿಯೂ ಇಶಾಂತ್ ಚುರುಕುತನ ತೋರಿದರು.

ಪ್ರಭಸಿಮ್ರನ್ ಸಿಂಗ್ (26; 17ಎ) ಉತ್ತಮವಾಗಿ ಆಡುತ್ತಿದ್ದ ಸಂದರ್ಭದಲ್ಲಿ ಕುಲದೀಪ್ ಯಾದವ್ ಸ್ಪಿನ್ ಎಸೆತದಲ್ಲಿ ಔಟಾದರು. ಜಿತೇಶ್ ಶರ್ಮಾ (9 ರನ್) ವಿಕೆಟ್ ಕೂಡ ಕುಲದೀಪ್ ವಶವಾಯಿತು.

ಸ್ಯಾಮ್ ಕರನ್ ಬ್ಯಾಟಿಂಗ್ ಶೈಲಿ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್: 9 ವಿಕೆಟ್‌ಗೆ 174 (20 ಓವರುಗಳಲ್ಲಿ)
ವಾರ್ನರ್ ಸಿ ಶರ್ಮಾ ಬಿ ಪಟೇಲ್ 29 (21ಎ, 4x3, 6x2)
ಮಾರ್ಷ್ ಸಿ ಚಾಹರ್ ಬಿ ಅರ್ಷದೀಪ್ 20 (12ಎ, 4x2, 6x2)
ಹೋಪ್ ಸಿ ಬ್ರಾರ್ ಬಿ ರಬಾಡ 33 (25ಎ, 4x2, 6x2)
ಪಂತ್ ಸಿ ಬೇಸ್ಟೊ ಬಿ ಪಟೇಲ್ 18 (13ಎ, 4x2)
ಭುಯಿ ಸಿ ಶರ್ಮಾ ಇ ಬ್ರಾರ್ 3 (7ಎ)
ಸ್ಟಬ್ಸ್ ಸಿ ಶಶಾಂಕ್ ಬಿ ಚಾಹರ್ 5 (8ಎ)
ಅಕ್ಷರ್ ರನೌಟ್ (ತ್ಯಾಗರಾಜನ್/ ಶರ್ಮಾ) 21 (13ಎ, 4x2, 6x1)
ಸುಮಿತ್ ಸಿ ಶರ್ಮಾ ಬಿ ಅರ್ಷದೀಪ್ 2 (9ಎ)
ಅಭಿಷೇಕ್ ಔಟಾಗದೇ 32 (10ಎ, 4x4, 6x2)
ಕುಲದೀಪ್ ರನೌಟ್ (ಶಶಾಂಕ್/ ಪಟೇಲ್) 1 (2ಎ)
ಇತರೆ: 10 (ಲೆಗ್‌ಬೈ 6, ವೈಡ್ 4)
ವಿಕೆಟ್ ಪತನ: 1–39 (ಮಿಚೆಲ್ ಮಾರ್ಷ್, 3.2), 2–74 (ಡೇವಿಡ್ ವಾರ್ನರ್, 7.6), 3–94 (ಶಾಯ ಹೋಪ್, 10.4), 5–111 (ರಿಷಭ್ ಪಂತ್, 12.4), 5–111 (ರಿಕಿ ಭುಯಿ, 13.2), 6–128 (ಟ್ರಿಸ್ಟನ್ ಸ್ಟಬ್ಸ್, 15.4), 7–138 (ಅಕ್ಷರ್ ಪಟೇಲ್, 17.1), 8–147 (ಸುಮಿತ್ ಕುಮಾರ್, 18.3), 9–174 (ಕುಲದೀಪ್ ಯಾದವ್, 19.6).
ಬೌಲಿಂಗ್: ಸ್ಯಾಮ್ ಕರನ್ 1–0–10–0; ಅರ್ಷದೀಪ್ ಸಿಂಗ್ 4–0–28–2; ಕಗಿಸೊ ರಬಾಡ 4–0–36–1; ಹರ್‌ಪ್ರೀತ್ ಬ್ರಾರ್ 3–0–14–1; ರಾಹುಲ್ ಚಾಹರ್ 4–0–33–1; ಹರ್ಷಲ್ ಪಟೇಲ್ 4–0–47–2.

ಪಂಜಾಬ್ ಕಿಂಗ್ಸ್: 6 ವಿಕೆಟ್‌ಗೆ 177 (19.2 ಓವರುಗಳಲ್ಲಿ)
ಧವನ್ ಬಿ ಶರ್ಮಾ 22 (16ಎ, 4x4)
ಬೇಸ್ಟೊ ರನೌಟ್ (ಶರ್ಮಾ) 9 (3ಎ, 4x2)
ಪ್ರಭಸಿಮ್ರನ್ ಸಿ ವಾರ್ನರ್ ಬಿ ಕುಲದೀಪ್ 27 (17ಎ, 4x5)
ಕರನ್ ಬಿ ಅಹ್ಮದ್ 63 (47ಎ, 4x6, 6x1)
ಜಿತೇಶ್ ಸ್ಟಂ ಪಂತ್ ಬಿ ಕುಲದೀಪ್ 9 (9ಎ, 4x1)
ಲಿವಿಂಗ್‌ಸ್ಟೋನ್ ಔಟಾಗದೇ 38 (21ಎ, 4x2, 6x3)
ಶಶಾಂಕ್ ಸಿ ಪಂತ್ ಬಿ ಅಹ್ಮದ್ 0 (1ಎ)
ಹರ್‌ಪ್ರೀತ್ ಔಟಾಗದೇ 2 (2ಎ)
ಇತರೆ: 8 (ಲೆಗ್‌ಬೈ 2, ವೈಡ್ 6)
ವಿಕೆಟ್ ಪತನ: 1–34 (ಶಿಖರ್ ಧವನ್, 3.1), 2–42 (ಜಾನಿ ಬೇಸ್ಟೊ, 3.4), 3–84 (ಪ್ರಭಸಿಮ್ರನ್ ಸಿಂಗ್, 9.2), 4–100 (ಜಿತೇಶ್ ಶರ್ಮಾ, 11.3), 5–167 (ಸ್ಯಾಮ್ ಕರನ್, 18.3), 6–167 (ಶಶಾಂಕ್ ಸಿಂಗ್, 18.4).
ಬೌಲಿಂಗ್: ಖಲೀಲ್ ಅಹ್ಮದ್ 4–0–43–2; ಇಶಾಂತ್ ಶರ್ಮಾ 2–0–16–0; ಮಿಚೆಲ್ ಮಾರ್ಷ್ 4–0–52–0; ಅಕ್ಷರ್ ಪಟೇಲ್ 4–0–25–0; ಕುಲದೀಪ್ ಯಾದವ್ 4–0–20–2; ಸುಮಿತ್ ಕುಮಾರ್ 1.2–0–19–0.
ಪಂದ್ಯದ ಆಟಗಾರ: ಸ್ಯಾಮ್ ಕರನ್

ಗಮನ ಸೆಳೆದ ಪಂತ್

14 ತಿಂಗಳುಗಳ ನಂತರ ಕ್ರಿಕೆಟ್‌ಗೆ ಮರಳಿದ ರಿಷಭ್ ಪಂತ್ ಅವರು ಗಮನ ಸೆಳೆದರು.

ಬ್ಯಾಟಿಂಗ್, ವಿಕೆಟ್‌ಕೀಪಿಂಗ್ ಮತ್ತು ನಾಯಕತ್ವವನ್ನು ನಿಭಾಯಿಸಿದರು. ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ಪಂತ್ 13 ಎಸೆತಗಳಲ್ಲಿ 18 ರನ್ ಗಳಿಸಿದರು. ಅದರಲ್ಲಿ ಎರಡು ಚೆಂದದ ಬೌಂಡರಿಗಳಿದ್ದವು.

12ನೇ ಓವರ್‌ನಲ್ಲಿ ರಾಹುಲ್ ಚಾಹರ್ ಎಸೆತವನ್ನು ಎತ್ತರಕ್ಕೆ ಹೊಡೆದ ಅವರ ಕ್ಯಾಚ್ ಪಡೆಯುವಲ್ಲಿ ಫೀಲ್ಡರ್ ಹರ್ಷಲ್ ಪಟೇಲ್ ವಿಫಲರಾದರು.

ಆದರೆ ನಂತರದ ಓವರ್‌ನಲ್ಲಿಯೇ ಅವರು ಹರ್ಷಲ್ ಎಸೆತವನ್ನು ಆಡಿ ಜಾನಿ ಬೆಸ್ಟೊಗೆ ಕ್ಯಾಚಿತ್ತರು. ಕಿಂಪಿಂಗ್‌ನಲ್ಲಿಯೂ ಕೆಲವು ಉತ್ತಮ ಕೌಶಲಗಳನ್ನು ತೋರಿದರು. ಅವರು ಜಿತೇಶ್ ಶರ್ಮಾ ಅವರನ್ನು ಚುರುಕಾಗಿ ಸ್ಟಂಪಿಂಗ್ ಮಾಡಿದರು. ಅಲ್ಲದೇ ಶಶಾಂಕ್ ಸಿಂಗ್ ಅವರ ಕ್ಯಾಚ್ ಕೂಡ ಪಡೆದರು.

2022ರ ಡಿಸೆಂಬರ್‌ನಲ್ಲಿ ಅವರು ಕಾರು ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದರು. ನಂತರ ಚಿಕಿತ್ಸೆ, ಆರೈಕೆಗಾಗಿ ದೀರ್ಘ ಅವಧಿ ಕ್ರಿಕೆಟ್‌ನಿಂದ ದೂರವಿದ್ದರು.

'ಬ್ಯಾಟಿಂಗ್ ಮಾಡುವಾಗ ಸ್ವಲ್ಪ ಒತ್ತಡದಲ್ಲಿದ್ದೆ. ಬಹಳ ದಿನಗಳ ನಂತರ ಕ್ರೀಡಾಂಗಣ ಪ್ರವೇಶಿಸಿದಾಗ ಇಂತಹ ಸ್ಥಿತಿಯನ್ನು ಅನುಭವಿಸುವುದು ಅನಿವಾರ್ಯ. ಇದೇನೂ ನನಗೆ ಹೊಸದಲ್ಲ. ಆದರೆ ಕಣಕ್ಕೆ ಮರಳಿರುವುದು ಸಂತಸವಾಗಿದೆ' ಎಂದು ಪಂತ್ ಪಂದ್ಯದ ನಂತರದ ಸುದ್ದಿಗೋಷ್ಠಿಯಲ್ಲಿ ಹೇಳಿದರು.



ಡೆಲ್ಲಿ ಕ್ಯಾಪಿಟಲ್ಸ್ ತಂಡದ ರಿಷಭ್ ಪಂತ್ ಮತ್ತು ಇಶಾಂತ್ ಶರ್ಮಾ –ಪಿಟಿಐ ಚಿತ್ರ

ರಾಹುಲ್ ಪಡೆಗೆ ರಾಯಲ್ಸ್ ಸವಾಲು

ಲಖನೌ ಸೂಪರ್ ಜೈಂಟ್ಸ್–ರಾಜಸ್ಥಾನ ರಾಯಲ್ಸ್ ಸೆಣಸು

ಜೈಪುರ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ಸೂಪರ್ ಜೈಂಟ್ಸ್ ತಂಡವು ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ತನ್ನ ಅಭಿಯಾನವನ್ನು ಭಾನುವಾರ ಆರಂಭಿಸಲಿದೆ.

ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ರಾಹುಲ್ ಬಳಗವು ಆತಿಥೇಯ ರಾಜಸ್ಥಾನ ರಾಯಲ್ಸ್ ತಂಡವನ್ನು ಎದುರಿಸಲಿದೆ. ತೊಡೆಯ ಸ್ನಾಯುವಿನ ನೋವಿನಿಂದ ಬಳಲಿದ್ದ ರಾಹುಲ್ ಅವರು ಈಚೆಗೆ ನಡೆದಿದ್ದ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯ ಕೊನೆಯ ನಾಲ್ಕು ಪಂದ್ಯಗಳಲ್ಲಿ ಆಡಿರಲಿಲ್ಲ. ಹೋದ ವರ್ಷವೂ ಅವರು ತೊಡೆಯ ಸ್ನಾಯುವಿನ ಶಸ್ತ್ರಚಿಕಿತ್ಸೆಯಿಂದಾಗಿ ನಾಲ್ಕು ತಿಂಗಳು ಕ್ರಿಕೆಟ್‌ನಿಂದ ದೂರವಿದ್ದರು.

ನಂತರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ವಿಕೆಟ್‌ಕೀಪಿಂಗ್ ಹೊಣೆ ನಿಭಾಯಿಸಿದ್ದರು. ಇದೀಗ ಟೂರ್ನಿಯ ಮೊದಲ ಪಂದ್ಯದಿಂದಲೇ ಗೆಲುವಿನ ಓಟ ಆರಂಭಿಸುವ ಛಲದಲ್ಲಿದ್ದಾರೆ. ಮುಂಬರಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ಭಾರತ ತಂಡದಲ್ಲಿ ಸ್ಥಾನ ಪಡೆಯಲು ಕೂಡ ಇಲ್ಲಿ ಉತ್ತಮವಾಗಿ ಆಡುವ ಸವಾಲು ಅವರ ಮುಂದಿದೆ. ಲಖನೌ ತಂಡವು ಎರಡು ಬಾರಿ ಪ್ಲೇಆಫ್ ಪ್ರವೇಶಿಸಿತ್ತು. ಈ ಬಾರಿ ಪ್ರಶಸ್ತಿಯತ್ತ ರಾಹುಲ್ ಬಳಗವು ಚಿತ್ತ ನೆಟ್ಟಿದೆ.

ಆದರೆ ಲಖನೌ ತಂಡಕ್ಕೆ ಸಂಜು ಸ್ಯಾಮ್ಸನ್ ಬಳಗವನ್ನು ಮಣಿಸುವುದು ಅಷ್ಟೇನೂ ಸುಲಭವಲ್ಲ. ಎರಡು ವರ್ಷಗಳ ಹಿಂದೆ ರಾಜಸ್ಥಾನ ತಂಡವು ಫೈನಲ್ ತಲುಪಿತ್ತು. ಆದರೆ, ಗುಜರಾತ್ ಟೈಟನ್ಸ್ ಎದುರು ನಿರಾಶೆ ಅನುಭವಿಸಿತ್ತು.

ಈಚೆಗೆ ಟೆಸ್ಟ್ ಸರಣಿಯಲ್ಲಿ ಮಿಂಚಿದ್ದ ಯಶಸ್ವಿ ಜೈಸ್ವಾಲ್, ಆಲ್‌ರೌಂಡರ್ ಆರ್.ಅಶ್ವಿನ್ , ವಿಕೆಟ್‌ಕೀಪರ್ ಧ್ರುವ ಜುರೇಲ್ ತಂಡದ ಶಕ್ತಿಯಾಗಿದ್ದಾರೆ. ಅಲ್ಲದೇ ರಿಯಾನ್ ಪರಾಗ್, ಲೆಗ್‌ಸ್ಪಿನ್ನರ್ ಯಜುವೇಂದ್ರ ಚಾಹಲ್, ರಣಜಿ ಟೂರ್ನಿಯಲ್ಲಿ ಮಿಂಚಿದ್ದ ಮುಂಬೈ ಹುಡುಗ ತನುಷ್ ಕೋಟ್ಯಾನ್ ಅವರ ಮೇಲೆಯೂ ನಾಯಕ ಸಂಜು ವಿಶ್ವಾಸವಿಟ್ಟಿದ್ದಾರೆ. ಉಭಯ ತಂಡಗಳಲ್ಲಿಯೂ ಉತ್ತಮ ಆಟಗಾರರು ಇರುವುದರಿಂದ ರೋಚಕ ಹಣಾಹಣಿಯ ನಿರೀಕ್ಷೆ ಗರಿಗೆದರಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್



ಕೆ.ಎಲ್‌.ರಾಹುಲ್

ಸಂಜು ಸ್ಯಾಮ್ಸನ್

ಗುಜರಾತ್ ಟೈಟನ್ಸ್– ಮುಂಬೈ ಇಂಡಿಯನ್ಸ್ ಪಂದ್ಯ ಇಂದು

ಗಿಲ್–ಹಾರ್ದಿಕ್‌ಗೆ ಜಯದ ನಿರೀಕ್ಷೆ

ಅಹಮದಾಬಾದ್ (ಪಿಟಿಐ): ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಭಾನುವಾರದಿಂದ ಹೊಸ ಇನಿಂಗ್ಸ್ ಆರಂಭಿಸಲಿದ್ದಾರೆ.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಗುಜರಾತ್ ಟೈಟನ್ಸ್ ಎದುರು ನಡೆಯಲಿರುವ ಪಂದ್ಯದಲ್ಲಿ ಅವರು ಮುಂಬೈ ಇಂಡಿಯನ್ಸ್ ತಂಡದ ನಾಯಕರಾಗಿ ಕಣಕ್ಕಿಳಿಯಲಿದ್ದಾರೆ. ಐದು ಬಾರಿ ಪ್ರಶಸ್ತಿ ಗೆದ್ದ ರೋಹಿತ್ ಶರ್ಮಾ ಅವರ ಪರಂಪರೆಯನ್ನು ಮುಂದುವರಿಸುವ ಸವಾಲು ಹಾರ್ದಿಕ್ ಅವರಿಗೆ ಇದೆ. ಈ ಮೊದಲು ಕೆಲವು ವರ್ಷಗಳ ಕಾಲ ಅವರು ರೋಹಿತ್ ನಾಯಕತ್ವದಲ್ಲಿ ಮುಂಬೈ ತಂಡದಲ್ಲಿ ಆಡಿದ್ದರು.

ಆದರೆ ಕಳೆದ ಎರಡು ವರ್ಷಗಳಲ್ಲಿ ತಾವು ನಾಯಕತ್ವ ವಹಿಸಿದ ಗುಜರಾತ್ ತಂಡವನ್ನೇ ಈ ಪಂದ್ಯದಲ್ಲಿ ಎದುರಿಸಲಿರುವುದು ವಿಶೇಷ. ಹಾರ್ದಿಕ್ ನಾಯಕತ್ವದಲ್ಲಿ ಟೈಟನ್ಸ್ ತಂಡವು ಒಂದು ಸಲ ಚಾಂಪಿಯನ್ ಮತ್ತೊಮ್ಮೆ ರನ್ನರ್ಸ್ ಅಪ್ ಆಗಿತ್ತು. ಹಾರ್ದಿಕ್ ಮುಂಬೈ ತಂಡಕ್ಕೆ ಸೇರ್ಪಡೆಯಾದ ಮೇಲೆ ಗುಜರಾತ್ ತಂಡದ ನಾಯಕತ್ವವನ್ನು ಶುಭಮನ್ ಗಿಲ್ ಅವರಿಗೆ ವಹಿಸಲಾಗಿದೆ.

ಹೋದ ವರ್ಷ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಸಂದರ್ಭದಲ್ಲಿ ಪಾದದ ಗಾಯದಿಂದ ಬಳಲಿದ್ದ ಹಾರ್ದಿಕ್ ಕ್ರಿಕೆಟ್‌ನಿಂದ ದೂರವುಳಿದಿದ್ದರು. ಇತ್ತೀಚೆಗಷ್ಟೇ ಅವರು ಕ್ರಿಕೆಟ್ ಕಣಕ್ಕೆ ಮರಳಿದ್ದರು.

ಆದರೆ ಮುಂಬೈ ತಂಡಕ್ಕೆ ಈ ಪಂದ್ಯದಲ್ಲಿ ಸೂರ್ಯಕುಮಾರ್ ಯಾದವ್ ಅವರ ಗೈರು ಕಾಡುವ ಸಾಧ್ಯತೆ ಇದೆ. ಅವರಿಗೆ ಇನ್ನೂ ಎನ್‌ಸಿಎಯಿಂದ ಫಿಟ್‌ನೆಸ್ ಪ್ರಮಾಣಪತ್ರ ಲಭಿಸಿಲ್ಲ. ಆದ್ದರಿಂದ ಅನುಭವಿ ರೋಹಿತ್, ಇಶಾನ್ ಕಿಶನ್ ಮತ್ತು ಟಿಮ್ ಡೇವಿಡ್ ಅವರ ಮೇಲೆ ಹೊಣೆ ಹೆಚ್ಚಲಿದೆ. ಅದರಲ್ಲೂ ಬಿಸಿಸಿಐ ಕೇಂದ್ರ ಗುತ್ತಿಗೆ ಕಳೆದುಕೊಂಡಿರುವ ಇಶಾನ್ ಮೇಲೆ ಈಗ ಎಲ್ಲರ ಕಣ್ಣು ನೆಟ್ಟಿದೆ.

ವೇಗಿಗಳಾದ ಜೇಸನ್ ಬೆಹ್ರನ್‌ಡಾರ್ಫ್ ಮತ್ತು ದಿಲ್ಶಾನ್ ಮಧುಶಂಕ ಅವರು ಈ ಟೂರ್ನಿಯಿಂದ ಹೊರಬಿದ್ದಿದ್ದಾರೆ. ಗೆರಾಲ್ಡ್ ಕೋಯಿಜಿ ಗಾಯಗೊಂಡಿದ್ದಾರೆ. ಜಸ್‌ಪ್ರೀತ್ ಬೂಮ್ರಾ ಮೇಲೆ ಹೆಚ್ಚಿನ ಹೊಣೆ ಬೀಳುವುದು ಖಚಿತ.

ಗುಜರಾತ್ ತಂಡವು ಸತತ ಮೂರನೇ ವರ್ಷವೂ ಫೈನಲ್ ಪ್ರವೇಶಿಸುವತ್ತ ಚಿತ್ತ ನೆಟ್ಟಿದೆ. ನಾಯಕತ್ವದೊಂದಿಗೆ ಬ್ಯಾಟಿಂಗ್‌ನಲ್ಲಿಯೂ ಮಿಂಚುವ ಸವಾಲು ಗಿಲ್ ಮುಂದಿದೆ. ಹೋದ ಬಾರಿ ಅವರು ರನ್‌ಗಳ ಹೊಳೆ ಹರಿಸಿದ್ದರು. ತಂಡಕ್ಕೆ ಮೊಹಮ್ಮದ್ ಶಮಿ ಅವರ ಗೈರು ಕಾಡಬಹುದು. ಸ್ಪಿನ್ನರ್ ರಶೀದ್ ಖಾನ್ ಗಾಯದಿಂದ ಚೇತರಿಸಿಕೊಂಡು ಮರಳಿದ್ದಾರೆ. ಹೋದ ವಾರ ಐರ್ಲೆಂಡ್ ಎದುರು ಅವರು ಆಡಿದ್ದರು. ಇದು ತಂಡಕ್ಕೆ ಸಮಾಧಾನದ ಸಂಗತಿ.

ಪಂದ್ಯ ಆರಂಭ: ರಾತ್ರಿ 7.30



ಗುಜರಾತ್ ಟೈಟನ್ಸ್ ತಂಡದ ನಾಯಕ ಶುಭಮನ್ ಗಿಲ್ –ಪಿಟಿಐ ಚಿತ್ರ

ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ –ಪಿಟಿಐ ಚಿತ್ರ

ಕೋಲ್ಕತ್ತ ತಂಡಕ್ಕೆ ರೋಚಕ ಜಯ

ಆಂಡ್ರೆ ರಸೆಲ್ ಸಿಡಿಲಬ್ಬರದ ಆಟ • ಹೆನ್ರಿಕ್ ಕ್ಲಾಸೆನ್ ವೀರೋಚಿತ ಹೋರಾಟ

ಕೋಲ್ಕತ್ತ (ಪಿಟಿಐ): ಹೆನ್ರಿಕ್ ಕ್ಲಾಸೆನ್ (63, 29 ಎಸೆತ, 6x8) ಅವರು ಮೈನವಿರೇಳಿಸಿದ ಅರ್ಧ ಶತಕದ ಆಟವಾಡಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಗೆಲುವಿನ ಅಂಚಿಗೆ ತಂದಿದ್ದರು. ಆದರೆ ಕೊನೆಯ ಓವರ್‌ನಲ್ಲಿ 22ರ ಯುವಕ ಹರ್ಷಿತ್ ರಾಣಾ ಎದುರಾಳಿಗೆ ಬೇಕಾಗಿದ್ದ 13 ರನ್ ಗಳಿಸಲು ಬಿಡಲಿಲ್ಲ. ಕೋಲ್ಕತ್ತ ನೈಟ್ ರೈಡರ್ಸ್ ತಂಡ, ಈಡನ್‌ಗಾರ್ಡನ್ಸ್‌ನಲ್ಲಿ ಕೊನೆಯ ಎಸೆತದವರೆಗೆ ಬೆಳೆದ ಐಪಿಎಲ್‌ನ ರೋಚಕ ಪಂದ್ಯದಲ್ಲಿ ಶನಿವಾರ ನಾಲ್ಕು ರನ್‌ಗಳಿಂದ ಜಯಗಳಿಸಿತು.

ಅಂತಿಮ ಓವರ್‌ನ ಮೊದಲ ಎಸೆತವನ್ನು ಕ್ಲಾಸೆನ್ ಪುಲ್ ಮಾಡಿ ಸ್ಕ್ವೇರ್‌ಲೆಗ್‌ಗೆ ಸಿಕ್ಸರ್ ಎತ್ತಿದಾಗ ಗೆಲುವು ಖಚಿತವಾದಂತೆ ಕಂಡಿತು. ನಂತರ ರಾಣಾ ಕೇವಲ ಎರಡು ರನ್‌ಗಳನ್ನಷ್ಟೇ ಕೊಟ್ಟು ಎರಡು ವಿಕೆಟ್ ಪಡೆದರು. ಕ್ಲಾಸೆನ್ ಮತ್ತು ಶಾಬಾಜ್ ಅಹ್ಮದ್ ನಡುವಣ ಆರನೇ ವಿಕೆಟ್‌ಗೆ 59 ರನ್ ಜೊತೆಯಾಟ, ಪಂದ್ಯದ ಗತಿ ಬದಲಾಯಿಸುವಂತೆ ಕಂಡಿತು. ಮಿಚೆಲ್ ಸ್ಟಾರ್ಕ್ ಮಾಡಿದ್ದ 19ನೇ ಓವರ್‌ನಲ್ಲಿ ಕ್ಲಾಸೆನ್ ಮೂರು ಸಿಕ್ಸರ್ ಬಾರಿಸಿದ್ದರು. ಕೊನೆಯ ಎಸೆತವನ್ನು ಶಾಬಾಜ್ ಸಿಕ್ಸರ್‌ಗಟ್ಟಿದರು.

ಮೊದಲು ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಕೋಲ್ಕತ್ತ ನೈಟ್ ರೈಡರ್ಸ್ ತಂಡ, ಅನುಭವಿ ಆ್ಯಂಡ್ರೆ ರಸೆಲ್ ಅವರ ಸಿಡಿಲಬ್ಬರದ ಅರ್ಧ ಶತಕ (ಅಜೇಯ 64, 25ಎ, 4x3, 6x7) ಮತ್ತು ಫಿಲ್ ಫಿಲ್ ಸಾಲ್ಟ್ (40 ಎಸೆತಗಳಲ್ಲಿ 54) ಅವರ ವೇಗದ ಅರ್ಧಶತಕದಿಂದ 7 ವಿಕೆಟ್‌ಗೆ 208 ರನ್‌ಗಳ ದೊಡ್ಡ ಮೊತ್ತ ಗಳಿಸಿತ್ತು.

ಇದಕ್ಕೆ ಉತ್ತರವಾಗಿ ಪ್ಯಾಟ್ ಕಮಿನ್ಸ್ ನೇತೃತ್ವದ ಸನ್‌ರೈಸರ್ಸ್ ತಂಡ 7 ವಿಕೆಟ್‌ಗೆ 204 ರನ್ ಗಳಿಸಿ ನಿರಾಸೆ ಅನುಭವಿಸಿತು. ರಸೆಲ್ ಬೌಲಿಂಗ್‌ನಲ್ಲೂ ಕೊಡುಗೆ ನೀಡಿ ಎರಡು ವಿಕೆಟ್ ಪಡೆದರು.

ಕಳೆದ ವರ್ಷ ನಡೆದ ಐಪಿಎಲ್ ಹರಾಜಿನಲ್ಲಿ ಇಂಗ್ಲೆಂಡ್ ಆಟಗಾರ ಸಾಲ್ಟ್ ಅವರು 'ಅನ್‌ಸೋಲ್ಡ್' ಆಗಿದ್ದರು. ಆದರೆ ಜೇಸನ್ ರಾಯ್‌ಗೆ ಬದಲಿಯಾಗಿ ಕೆಕೆಆರ್ ತಂಡ ಸೇರಿಕೊಂಡ ಅವರು ಐಪಿಎಲ್‌ನಲ್ಲಿ ಮೂರನೇ ಅರ್ಧ ಶತಕ ಬಾರಿಸಿ ತಂಡಕ್ಕೆ ಆರಂಭದಲ್ಲಿ ಆಸರೆಯಾದರು. ರನ್ ವೇಗ ಹೆಚ್ಚಿಸುವ ಭರದಲ್ಲಿ ಮಯಂಕ್ ಮಾರ್ಕಂಡೆ (39ಕ್ಕೆ2) ಅವರಿಗೆ ವಿಕೆಟ್ ನೀಡಿದರು.

ಆದರೆ ರಸೆಲ್, ಲೆಗ್ ಬ್ರೇಕ್ ಬೌಲರ್ ಮಾರ್ಕಂಡೆ ಅವರ ಐದು ಎಸೆತಗಳಲ್ಲಿ ಮೂರು ಸಿಕ್ಸರ್ ಸಿಡಿಸಿ ನೈಟ್ ರೈಡರ್ಸ್ ತಂಡದ ಮೊತ್ತ ಹೆಚ್ಚಿಸಿದರು. ಭುವನೇಶ್ವರ ಕುಮಾರ್ ಮಾಡಿದ 19ನೇ ಓವರ್‌ನಲ್ಲಿ 26 ರನ್‌ಗಳು ಬಂದವು.

ಇನ್ನೊಂದೆಡೆ ರಿಂಕು ಸಿಂಗ್ 15 ಎಸೆತಗಳಿಂದ 23 ರನ್ ಗಳಿಸಿದರು. ಇವರಿಬ್ಬರು ಕೇವಲ 33 ಎಸೆತಗಳಲ್ಲಿ 81 ರನ್ ಸೇರಿಸಿ ಹೈದರಾಬಾದ್ ದಾಳಿ ದಂಡಿಸಿದರು. ಕೊನೆಯ ಐದು ಓವರ್‌ಗಳಲ್ಲಿ 85 ರನ್‌ಗಳು ಹರಿದುಬಂದವು.

ಎಡಗೈ ವೇಗಿ ನಟರಾಜನ್ ಇದಕ್ಕೆ ಮೊದಲು ವೆಂಕಟೇಶ ಅಯ್ಯರ್ ಮತ್ತು ನಾಯಕ ಶ್ರೇಯಸ್ ಅಯ್ಯರ್ ವಿಕೆಟ್‌ಗಳನ್ನು ಬೇಗನೇ ಪಡೆದಿದ್ದರು. ಭುವನೇಶ್ವರ್ ಕೂಡ ಮೊದಲ ಸ್ಪೆಲ್‌ನಲ್ಲಿ ಬಿಗಿಯಾಗಿದ್ದು, ಪವರ್‌ಪ್ಲೇ ಅವಧಿಯಲ್ಲಿ ಕೋಲ್ಕತ್ತ ತಂಡವನ್ನು ಕಟ್ಟಿಹಾಕಿದ್ದರು.

ದೊಡ್ಡ ಮೊತ್ತ ಬೆನ್ನಟ್ಟಿದ ಸನ್‌ರೈಸರ್ಸ್‌ಗೆ ಮಯಂಕ್ ಅಗರವಾಲ್ (32, 21ಎ) ಮತ್ತು ಅಭಿಷೇಕ್ ಶರ್ಮಾ (32, 19ಎ) ಕೇವಲ 5.3 ಓವರುಗಳಲ್ಲಿ 60 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದ್ದರು.

ಅವರ ನಿರ್ಗಮನದ ನಂತರ ಏಡನ್ ಮರ್ಕರಂ ಮತ್ತು ರಾಹುಲ್ ತ್ರಿಪಾಠಿ ಹೆಚ್ಚು ಹೊತ್ತು ನಿಲ್ಲಲಿಲ್ಲ. ಆದರೆ, ಕ್ಲಾಸೆನ್ ಮತ್ತು ಶಾಬಾಜ್ (16, 5 ಎಸೆತ) ಹೋರಾಟ ತೋರಿದರು.

ಸ್ಕೋರುಗಳು: ಕೋಲ್ಕತ್ತ ನೈಟ್ ರೈಡರ್ಸ್: 20 ಓವರುಗಳಲ್ಲಿ 7 ವಿಕೆಟ್‌ಗೆ 208 (ಫಿಲ್ ಸಾಲ್ಟ್ 54, ರಮಣದೀಪ್ ಸಿಂಗ್ 35, ರಿಂಕು ಸಿಂಗ್ 23, ಆಂಡ್ರೆ ರಸೆಲ್ ಔಟಾಗದೇ 64; ನಟರಾಜನ್ 32ಕ್ಕೆ3, ಮಯಂಕ್ ಮಾರ್ಕಂಡೆ 39ಕ್ಕೆ2); ಸನ್‌ರೈಸರ್ಸ್ ಹೈದರಾಬಾದ್: 20 ಓವರುಗಳಲ್ಲಿ 7 ವಿಕೆಟ್‌ಗೆ 204 (ಮಯಂಕ್ ಅಗರವಾಲ್ 32, ಅಭಿಷೇಕ್ ಶರ್ಮಾ 32, ಹೆನ್ರಿಕ್ ಕ್ಲಾಸೆನ್ 63; ಹರ್ಷಿತ್ ರಾಣಾ 33ಕ್ಕೆ3, ಆಂಡ್ರೆ ರಸೆಲ್ 25ಕ್ಕೆ2).

ಪಂದ್ಯದ ಆಟಗಾರ: ಆಂಡ್ರೆ ರಸೆಲ್

ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಆಂಡ್ರೆ ರಸೆಲ್ ಬ್ಯಾಟಿಂಗ್ –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ರಾಯಲ್ಸ್‌ಗೆ ತನುಷ್ ಟೈಟನ್‌ಗೆ ಶರತ್

ನವದೆಹಲಿ (ಪಿಟಿಐ): ಇತ್ತೀಚಿನ ರಣಜಿ ಟ್ರೋಫಿಯಲ್ಲಿ ಮುಂಬೈ ತಂಡದ ಪ್ರಶಸ್ತಿ ಅಭಿಯಾನದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಆಫ್ ಸ್ಪಿನ್ ಆಲ್‌ರೌಂಡರ್ ತನುಷ್ ಕೋಟ್ಯಾನ್ ಅವರು ರಾಜಸ್ತಾನ ರಾಯಲ್ಸ್ ತಂಡಕ್ಕೆ ಸೇರ್ಪಡೆಗೊಂಡಿದ್ದಾರೆ. ಗಾಯಗೊಂಡ ಸ್ಪಿನ್ನರ್ ಆ್ಯಡಂ ಜಂಪಾ ಸ್ಥಾನದಲ್ಲಿ ಅವರಿಗೆ ಅವಕಾಶ ಲಭಿಸಿದೆ.

ಕೋಟ್ಯಾನ್ ಮೂಲಬೆಲೆ ₹20ಲಕ್ಷಕ್ಕೆ ರಾಯಲ್ಸ್ ತಂಡ ಸೇರಿಕೊಂಡಿದ್ದಾರೆ ಎಂದು ಐಪಿಎಲ್ ಪ್ರಕಟಿಸಿದೆ. ಆಫ್ ಸ್ಪಿನ್ನರ್ ಆಗಿರುವ ಅವರು ಒಂದು ಶತಕ ಸೇರಿದಂತೆ ಕೆಲವು ಅತ್ಯುಪಯುಕ್ತ ಇನಿಂಗ್ಸ್ ಆಡಿ ಟೂರ್ನಿಯ ಆಟಗಾರ (502 ರನ್, 29 ವಿಕೆಟ್) ಗೌರವಕ್ಕೆ ಪಾತ್ರರಾಗಿದ್ದರು.

ಕರ್ನಾಟಕದ ವಿಕೆಟ್ ಕೀಪರ್ – ಬ್ಯಾಟರ್ ಬಿ.ಆರ್.ಶರತ್ ಅವರು ₹20 ಲಕ್ಷ ಮೂಲಬೆಲೆಯಲ್ಲಿ ಗುಜರಾತ್ ಟೈಟನ್ ತಂಡ ಸೇರಿಕೊಳ್ಳಲಿದ್ದಾರೆ. ಇತ್ತೀಚೆಗೆ ಬೈಕ್ ಅಪಘಾತದಲ್ಲಿ ಗಾಯಾಳಾದ, ಜಾರ್ಖಂಡ್‌ನ ವಿಕೆಟ್ ಕೀಪರ್ ರಾಬಿನ್ ಮಿಂಜ್ ಟೂರ್ನಿಗೆ ಅಲಭ್ಯರಾದ ನಂತರ ಈ ಬದಲಾವಣೆ ಆಗಿದೆ. ಶರತ್ 43 ಲಿಸ್ಟ್ 'ಎ' ಪಂದ್ಯಗಳಲ್ಲಿ ಆಡಿದ್ದಾರೆ. 28 ಟಿ20 ಪಂದ್ಯಗಳನ್ನೂ ಆಡಿದ್ದು 328 ರನ್ ಗಳಿಸಿದ್ದಾರೆ.

ಹಾಫ್ ಮ್ಯಾರಥಾನ್ ಸ್ಪರ್ಧೆ ಇಂದು

ಬೆಂಗಳೂರು: ಬಿಡದಿ ಇಂಡಸ್ಟ್ರಿಯಲ್ ಅಸೋಸಿಯೇಷನ್ ಮತ್ತು ಟೊಯೊಟಾ ಕಿರ್ಲೋಸ್ಕರ್ ಮೋಟಾರ್ ಸಹಯೋಗದಲ್ಲಿ ಇದೇ 24ರಂದು (ಭಾನುವಾರ) ಬೆಳಗಿನ ಜಾವ ಟೊಯೊಟಾ ಗ್ರೇಟರ್ ಬೆಂಗಳೂರು ಬಿಡದಿ ಹಾಫ್ ಮ್ಯಾರಥಾನ್ ನಡೆಯಲಿದೆ.

ಬಿಡದಿಯ ಜಾವಿವುಡ್ ಸ್ಟುಡಿಯೊ ಮತ್ತು ಅಡ್ವೆಂಚರ್ಸ್ ಬಳಿಯಿಂದ ಬೆಳಿಗ್ಗೆ 5.30 ರಿಂದ ಸ್ಪರ್ಧೆ ಆರಂಭವಾಗಲಿದೆ. ಸುರಕ್ಷತೆ ಮತ್ತು ಸ್ಥಿರತೆ ಹೆಸರಿನಲ್ಲಿ ಒಟ್ಟು ಮೂರು ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ. 8.30ಕ್ಕೆ ಬಹುಮಾನ ವಿತರಣೆ ನಡೆಯಲಿದೆ.

ಮುಂಬೈ ಆಟಗಾರರಿಗೆ ಬಂಪರ್

ಮುಂಬೈ (ಪಿಟಿಐ): ಮುಂಬರುವ 2024–25 ಸಾಲಿನಿಂದ ಮುಂಬೈ ತಂಡದ ಸೀನಿಯರ್ ಆಟಗಾರರಿಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ನೀಡುವಷ್ಟೇ ಪಂದ್ಯ ಶುಲ್ಕವನ್ನು ಅಲ್ಲಿನ ಕ್ರಿಕೆಟ್ ಸಂಸ್ಥೆಯೂ ನೀಡಲಿದೆ. ಈ ವಿಷಯವನ್ನು ಮುಂಬೈ ಕ್ರಿಕೆಟ್ ಸಂಸ್ಥೆ (ಎಂಸಿಎ) ಅಧ್ಯಕ್ಷ ಅಮೋಲ್ ಕಾಳೆ ಶನಿವಾರ ತಿಳಿಸಿದ್ದಾರೆ.

ರಣಜಿ ಟ್ರೋಫಿ ಮಹತ್ವವನ್ನು ಉತ್ತೇಜಿಸುವ ಕ್ರಮವಾಗಿ ಮತ್ತು ಮುಂಬೈ ಕ್ರಿಕೆಟ್ ಸಂಸ್ಥೆ ವ್ಯಾಪ್ತಿಯಲ್ಲಿ ರೆಡ್ ಬಾಲ್ ಕ್ರಿಕೆಟ್ ಬೆಳವಣಿಗೆಗೆ ನೆರವಾಗುವುದು ಈ ಕ್ರಮದ ಉದ್ದೇಶ ಎಂದು ಅವರು ತಿಳಿಸಿದ್ದಾರೆ.

ಬಿಸಿಸಿಐ ನೀಡುವಷ್ಟೆ ಪಂದ್ಯ ಸಂಭಾವನೆಯನ್ನು ನೀಡುವ ಪ್ರಸ್ತಾವವನ್ನು ರಾಜ್ಯ ಸಂಸ್ಥೆಯ ಅಪೆಕ್ಸ್ ಕೌನ್ಸಿಲ್ ಸಭೆಯಲ್ಲಿ ಅಮೋಲ್ ಕಾಳೆ ಮುಂದಿಟ್ಟರು. ಇದಕ್ಕೆ ಸಭೆ ಸಮ್ಮತಿ ಸೂಚಿಸಿತು.

'ಆಟಗಾರರು ವಿಶೇಷವಾಗಿ ರಣಜಿ ಆಡುವವರು ಹೆಚ್ಚು ಸಂಪಾದಿಸಬೇಕು ಎನ್ನುವ ಉದ್ದೇಶದಿಂದ ಸಂಸ್ಥೆಯು ಈ ಹೆಚ್ಚುವರಿ ಹಣ ನೀಡಲು ಮುಂದಾಗಿರುವುದಾಗಿ' ಕಾಳೆ ಅವರು ತಿಳಿಸಿದ್ದಾರೆ.

ಮುಂಬೈ ಇತ್ತೀಚೆಗೆ 42ನೇ ಬಾರಿ ರಣಜಿ ಟ್ರೋಫಿ ಗೆದ್ದುಕೊಂಡಿತ್ತು. ವಿಜೇತ ತಂಡಕ್ಕೆ ಬಿಸಿಸಿಐ ನೀಡಿದಷ್ಟೇ (₹5 ಕೋಟಿ) ಬಹುಮಾನ ಮೊತ್ತವನ್ನು ಮುಂಬೈ ಕ್ರಿಕೆಟ್ ಸಂಸ್ಥೆ ಸಹ ಪ್ರಕಟಿಸಿತ್ತು.

ಬಿಸಿಸಿಐ 2021ರಲ್ಲಿ ಪಂದ್ಯ ಸಂಭಾವನೆ ಪರಿಷ್ಕರಿಸಿದ್ದು, 1 ರಿಂದ 20 ಪ್ರಥಮ ದರ್ಜೆ ಪಂದ್ಯ ಆಡುವ ಆಟಗಾರನಿಗೆ ಪಂದ್ಯ ನಡೆಯುವ ಪ್ರತಿ ದಿನ ₹40,000 ನಿಗದಿಪಡಿಸಿದೆ.

ಐದು ದಿನಗಳ ಪಂದ್ಯಕ್ಕೆ ₹2.40 ಲಕ್ಷ ಸಿಗುತ್ತಿದೆ. ಎಂಸಿಎ ನಿರ್ಧಾರದಿಂದ ಮುಂದಿನ ಋತುವಿನಿಂದ ಮುಂಬೈ ಆಟಗಾರರಿಗೆಪ್ರತಿಪಂದ್ಯಕ್ಕೆಸಿಗುವಮೊತ್ತ4.80ಲಕ್ಷಆಗಲಿದೆ.

21 ರಿಂದ 40 ಪಂದ್ಯ ಆಡುವ ಆಟಗಾರನಿಗೆ ನಿತ್ಯ ₹50,000 ನಿಗದಿಪಡಿಸಲಾಗಿದೆ. ಇದಕ್ಕಿಂತ ಹೆಚ್ಚು ಆಡುವ ಆಟಗಾರರಿಗೆ ನಿತ್ಯ ₹60,000 ವರೆಗೆ ಸಿಗುತ್ತದೆ.

ಚೆನ್ನೈನಲ್ಲಿ ಐಪಿಎಲ್ ಫೈನಲ್

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್‌ನ ಫೈನಲ್ ಪಂದ್ಯ ಚೆನ್ನೈನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಮೇ 26ರಂದು ನಡೆಯುವ ಸಾಧ್ಯತೆಯಿದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಒಂದು ಕ್ವಾಲಿಫೈರ್ ಪಂದ್ಯ ಮತ್ತು ಒಂದು ಎಲಿಮಿನೇಟರ್ ಪಂದ್ಯ ನಡೆಯಲಿದೆ. ಇನ್ನೊಂದು ಕ್ವಾಲಿಫೈರ್ ಪಂದ್ಯ ಚೆನ್ನೈನಲ್ಲಿ ನಡೆಯಲಿದೆ ಎಂದು ತಿಳಿದುಬಂದಿದೆ.

'ಐಪಿಎಲ್‌ನ ಉದ್ಘಾಟನಾ ಮತ್ತು ಫೈನಲ್ ಪಂದ್ಯ ಹಿಂದಿನ ವರ್ಷದ ಚಾಂಪಿಯನ್ ತಂಡದ ತವರಿನಲ್ಲಿ ನಡೆಯುವುದು ಸಂಪ್ರದಾಯದಂತೆ ಬೆಳೆದುಬಂದಿದೆ. ಈ ಬಾರಿ ಚೆನ್ನೈ ಸೂಪರ್ ಕಿಂಗ್ಸ್ ತವರಿಗೆ ಈ ಪಂದ್ಯಗಳ ಆತಿಥ್ಯದ ಅವಕಾಶ ಒಲಿದಿದೆ' ಎಂದು ಬಿಸಿಸಿಐನ ಹಿರಿಯ ಅಧಿಕಾರಿಯೊಬ್ಬರು ಪಿಟಿಐಗೆ ತಿಳಿಸಿದರು.

ಲೋಕಸಭಾ ಚುನಾವಣೆಯ ದಿನಾಂಕಗಳನ್ನು ಗಮನದಲ್ಲಿಟ್ಟುಕೊಂಡು ಬಿಸಿಸಿಐ, ಐಪಿಎಲ್‌ನ ಉಳಿದ ಪಂದ್ಯಗಳ ವೇಳಾಪಟ್ಟಿಯನ್ನು ಸಿದ್ಧಪಡಿಸುವ ಕಾರ್ಯದಲ್ಲಿ ತೊಡಗಿದ್ದು, ಶೀಘ್ರವೇ ಅಂತಿಮಗೊಳಿಸಲಿದೆ.

ನಿವೃತ್ತಿ ತೊರೆದ ಪಾಕ್‌ನ ಇಮದ್ ವಾಸಿಂ

ಲಾಹೋರ್ (ಪಿಟಿಐ): ಪಾಕಿಸ್ತಾನ ಕ್ರಿಕೆಟ್ ಮಂಡಳಿ ಅಧಿಕಾರಿಗಳನ್ನು ಭೇಟಿಯಾದ ಆಲ್‌ರೌಂಡರ್ ಇಮದ್ ವಾಸಿಂ ಅವರು ನಿವೃತ್ತಿಯಿಂದ ಹೊರಬಂದಿದ್ದು, ಜೂನ್‌ನಲ್ಲಿ ನಡೆಯಲಿರುವ ಐಸಿಸಿ ಟಿ20 ವಿಶ್ವಕಪ್ ತಂಡದ ಆಯ್ಕೆಗೆ ಲಭ್ಯವಿರುವುದಾಗಿ ಶನಿವಾರ ತಿಳಿಸಿದ್ದಾರೆ.

ಕಳೆದ ವರ್ಷದ ನವೆಂಬರ್‌ನಲ್ಲಿ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು. ಪಿಸಿಬಿ ಅಧಿಕಾರಿಗಳ ಮನವೊಲಿಕೆಯ ನಂತರ ನಿರ್ಧಾರ ಬದಲಿಸಿದ್ದಾರೆ.

ಟಿ20 ವಿಶ್ವಕಪ್ ಅಮೆರಿಕ ಮತ್ತು ವೆಸ್ಟ್ ಇಂಡೀಸ್‌ನಲ್ಲಿ ನಡೆಯಲಿದೆ. 35 ವರ್ಷದ ಇಮದ್ 66 ಟಿ20 ಪಂದ್ಯಗಳನ್ನು ಆಡಿದ್ದು 65 ವಿಕೆಟ್ ಪಡೆದಿದ್ದಾರೆ. 55 ಏಕದಿನ ಪಂದ್ಯಗಳಲ್ಲಿ 44 ವಿಕೆಟ್ ಗಳಿಸಿದ್ದಾರೆ.

ಲಂಕಾ ನೆರವಿಗೆ ಕರುಣಾರತ್ನೆ

ಸಿಲ್ಹೆಟ್ (ಬಾಂಗ್ಲಾದೇಶ), (ಎಎಫ್‌ಪಿ): ಆರಂಭ ಆಟಗಾರ ದಿಮುತ್ ಕರುಣಾರತ್ನೆ (52, 107 ಎಸೆತ) ಅವರು ತಾಳ್ಮೆಯ ಅರ್ಧ ಶತಕ ಗಳಿಸಿ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದ ಎರಡನೇ ದಿನವಾದ ಶನಿವಾರ ಶ್ರೀಲಂಕಾ ತಂಡ, ಬಾಂಗ್ಲಾದೇಶ ವಿರುದ್ಧ ಉತ್ತಮ ಸ್ಥಿತಿಗೆ ತಲುಪಲು ನೆರವಾದರು. ಮೊದಲ ಇನಿಂಗ್ಸ್‌ನಲ್ಲಿ 92 ರನ್‌ಗಳ ಮುನ್ನಡೆ ಪಡೆದಿದ್ದ ಶ್ರೀಲಂಕಾ ಎರಡನೇ ಸರದಿಯಲ್ಲಿ 5 ವಿಕೆಟ್‌ಗೆ 119 ರನ್ ಗಳಿಸಿ ದಿನದಾಟ ಮುಗಿಸಿದೆ. ಒಟ್ಟಾರೆ 211 ರನ್‌ಗಳ ಮುನ್ನಡೆ ಸಾಧಿಸಿದೆ. ಚೊಚ್ಚಲ ಪಂದ್ಯ ಆಡುತ್ತಿರುವ ನಹೀದ್ ರಾಣಾ ಈ ಎರಡೂ ವಿಕೆಟ್‌ಗಳನ್ನು ಗಳಿಸಿದರು. ಆದರೆ ಕರುಣಾರತ್ನೆ ಆತಿಥೇಯರ ಮೇಲುಗೈಗೆ ಅಡ್ಡಿಯಾದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಶ್ರೀಲಂಕಾ: 280; ಬಾಂಗ್ಲಾದೇಶ: 51.3 ಓವರುಗಳಲ್ಲಿ 188 (ತೈಜುಲ್ ಇಸ್ಲಾಂ 47, ಲಿಟ್ಟನ್ ದಾಸ್ 25; ವಿಶ್ವ ಫೆರ್ನಾಂಡೊ 48ಕ್ಕೆ4, ಕಸುನ್ ರೆಜಿತ 56ಕ್ಕೆ3, ಲಹಿರು ಕುಮಾರ 31ಕ್ಕೆ3); ಎರಡನೇ ಇನಿಂಗ್ಸ್: ಶ್ರೀಲಂಕಾ: 36 ಓವರುಗಳಲ್ಲಿ 5 ವಿಕೆಟ್‌ಗೆ 119 (ದಿಮುತ್ ಕರುಣಾರತ್ನೆ 52, ಧನಂಜಯ ಡಿಸಿಲ್ವ ಔಟಾಗದೇ 23; ನಹೀದ್ ರಾಣಾ 42ಕ್ಕೆ2).

ತಿದ್ದುಪಡಿ

ಚೆನ್ನೈನಲ್ಲಿ ಶುಕ್ರವಾರ ನಡೆದ ಐಪಿಎಲ್ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಚೆನ್ನೈ ತಂಡವು 6 ವಿಕೆಟ್‌ಗಳಿಂದ ಜಯಗಳಿಸಿತ್ತು. ಶನಿವಾರದ ಸಂಚಿಕೆಯ ವರದಿಯಲ್ಲಿ ಈ ಮಾಹಿತಿ ತಪ್ಪಾಗಿತ್ತು. –ಸಂ

ಚೆಟ್ರಿಗೆ 150ನೇ ಪಂದ್ಯ: ಎಐಎಫ್‌ಎಫ್ ಗೌರವ

ನವದೆಹಲಿ (ಪಿಟಿಐ): ಪಾಕಿಸ್ತಾನದ ವಿರುದ್ಧ ಪದಾರ್ಪಣೆ ಮಾಡಿದ ಸುಮಾರು ಎರಡು ದಶಕಗಳ ನಂತರ, ಭಾರತದ ನಾಯಕ ಸುನಿಲ್ ಚೆಟ್ರಿ ಅವರು ಮಂಗಳವಾರ ಗುವಾಹಟಿಯಲ್ಲಿ ಅಫ್ಗಾನಿಸ್ತಾನ ವಿರುದ್ಧದ ವಿಶ್ವಕಪ್ ಅರ್ಹತಾ ಟೂರ್ನಿಯಲ್ಲಿ ತಮ್ಮ 150 ನೇ ಅಂತರರಾಷ್ಟ್ರೀಯ ಪಂದ್ಯ ಆಡುತ್ತಿದ್ದಾರೆ.

ಫೀಫಾ ವಿಶ್ವ ಕಪ್ ಅರ್ಹತಾ ಟೂರ್ನಿ 'ಎ' ಗುಂಪಿನ ಪಂದ್ಯ ಗುರುವಾರ ತಡರಾತ್ರಿ ಗೋಲಿಲ್ಲದೇ 'ಡ್ರಾ' ಆಯಿತು. ಈ ಮೂಲಕ ಪೋರ್ಚುಗೀಸ್ ಸೂಪರ್ ಸ್ಟಾರ್ ಕ್ರಿಸ್ಟಿಯಾನೊ ರೊನಾಲ್ಡೊ (205) ಅಗ್ರಸ್ಥಾನದಲ್ಲಿದ್ದರೆ, 150 ಅಥವಾ ಅದಕ್ಕಿಂತ ಹೆಚ್ಚು ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ ವಿಶ್ವದ 40ನೇ ಆಟಗಾರ ಎಂಬ ಹೆಗ್ಗಳಿಕೆಗೆ ಚೆಟ್ರಿ ಅವರು ಪಾತ್ರರಾಗಲಿದ್ದಾರೆ. ಈ ಸಂದರ್ಭದಲ್ಲಿ ಚೆಟ್ರಿ ಅವರನ್ನು ಸನ್ಮಾನಿಸುವುದಾಗಿ ಎಐಎಫ್‌ಎಫ್ ಘೋಷಿಸಿದೆ. 2005ರ ಜೂನ್ 12ರಂದು ಕ್ವೆಟ್ಟಾದಲ್ಲಿ ನಡೆದ ಪಾಕಿಸ್ತಾನ ವಿರುದ್ಧದ ಸೌಹಾರ್ದ ಪಂದ್ಯದಲ್ಲಿ ಚೆಟ್ರಿ ಮೊದಲ ಬಾರಿಗೆ ರಾಷ್ಟ್ರೀಯ ತಂಡದ ಪರ ಆಡಿದ್ದರು. ಈವರೆಗೂ 149 ಪಂದ್ಯಗಳನ್ನು ಆಡಿ, ದಾಖಲೆಯ 93 ಗೋಲುಗಳನ್ನು ಗಳಿಸಿದ್ದಾರೆ.

ಸುನಿಲ್ ಚೆಟ್ರಿ

ಪ್ರಜಾವಾಣಿ
ಭಾನುವಾರ, 24 ಮಾರ್ಚ್ 2024
ಭಾನುವಾರದ
ಪುರವಣಿ

ಮನ್ಮಥನ ಆಕರ್ಷಕ ಮುಖವಾಡ

13 ನವರಂಗಿಯ ನೆಪದಲ್ಲಿ...

'ಬೆನಕ'ಗೆ ಸುವರ್ಣ ಸಂಭ್ರಮ

ಜನರಲ್ಲಿ ಇರುವ ಅಚಲ ನಂಬಿಕೆಯಿಂದ ಪರಂಪರೆಯೊಂದು ಹಲವಾರು ತಲೆಮಾರುಗಳಿಂದಲೂ ಕಳೆಗುಂದದೆ ಆಚರಣೆಗೆ ಒಳಗಾಗುತ್ತಿದೆ. ಹೀಗಾಗಿಯೇ ಓಣಿ ಓಣಿಗಳಲ್ಲಿ ರತಿ-ಮನ್ಮಥರನ್ನು ಪ್ರತಿಷ್ಠಾಪಿಸುವ ಪರಂಪರೆ ಕೆಲವು ಭಾಗಗಳಲ್ಲಿದೆ.

ಕಲಾವಿದ ನೀಲಕಂಠ ಕಾಂಬಳೆ ಕೈಚಳಕದಲ್ಲಿ ಜೀವತಳೆಯುತ್ತಿರುವ ರತಿ-ಮನ್ಮಥ ಚಿತ್ರ –ಗೋವಿಂದರಾಜ ಜವಳಿ

ಮನ್ಮಥನಿಗೆ ವರುಷಕೊಂದು ಹೊಸತು ಜನ್ಮ

ರಶ್ಮಿ ಎಸ್

'ನನಗ ಗೊತ್ತಿದ್ದಂಗ ಮುನ್ನೂರು ವರ್ಷದ ಸಂಪ್ರದಾಯ ನೋಡ್ರಿ ಇದು. ಈ ಕಾಮಣ್ಣನ ಮುಖೋಟ (ಮುಖವಾಡ) ಏನದ.. ಮುನ್ನೂರು ವರ್ಷ ಹಳತು. ಅದರ ಹಿಂದಕ್ಕೂ ಮಾಡಿರಬಹುದು. ನಮಗದು ಗೊತ್ತಿಲ್ಲ. ನಮ್ಮಜ್ಜ, ಮುತ್ತಜ್ಜನೂ ಈ ಹಬ್ಬ ಮಾಡ್ಯಾರ. ನನ್ನ ಮೊಮ್ಮಕ್ಕಳೂ ಮಾಡ್ತಾರ. ಈಗ ಪಿಚಕಾರಿ ಹಿಡಕೊಂಡು ಆಡುವ ಮೊಮ್ಮಗ, ಮುಂದ ಇದೇ ಕಾಮಣ್ಣನ ಪೂಜಾ ಮಾಡ್ತಾನ. ಆರು ತಲಿಮಾರಿನ ಲೆಕ್ಕ ನಾನೇ ಹೇಳ್ತೀನ್ರಿ '- ಹೀಗೆ ಬಸವರಾಜ ಕುಂದಗೋಳ ಅವರು ಮಾತು ಶುರು ಮಾಡಿದ್ರು.

ಹುಬ್ಬಳ್ಳಿಯ ಮೇದಾರ ಓಣಿಯ ಕರಿಯಮ್ಮ ದೇವಸ್ಥಾನದ ಟ್ರಸ್ಟ್‌ನ ಅಧ್ಯಕ್ಷರಾಗಿರುವ ಅವರು, ಕಾಮಣ್ಣನ ಪ್ರತಿಷ್ಠಾಪನೆ ಕತೆಯನ್ನು ಬಿಚ್ಚಿಟ್ಟರು....

ಶಿವರಾತ್ರಿಯ ನಂತರ ನೀಳ, ಸಬೂಳ ಬಂಬೂಗಳನ್ನು ಹುಡುಕಿ ತರಲಾಗುತ್ತದೆ. ನಂತರ ಎಳೆಎಳೆಗಳನ್ನು ಬಿಡಿಸಿದಂತೆ ಬಿಡಿಸಿ, ಮೊದಲು ದೊಡ್ಡ ಗಾತ್ರದ ಟೊಪ್ಪಿಗೆಯನ್ನು ಸಿದ್ಧಪಡಿಸಲಾಗುತ್ತದೆ. ಈ ಟೊಪ್ಪಿಗೆ ಹೆಣೆಯುವುದೇ ಒಂದು ಕಲೆ. ಮೇಲ್ನೋಟಕ್ಕೆ ಚಾಪೆಯಂತೆ ಕಂಡರೂ ಇದರ ಮಡಿಕೆಗಳು ಚಾಪೆಗಿಂತಲೂ ಸಪೂರವಾಗಿರುತ್ತವೆ.

ಸುಮಾರು 300 ವರ್ಷಗಳಷ್ಟು ಹಳೆಯದಾದ ಮನ್ಮಥನ ಮುಖೋಟ, ತಲೆಗೆ ಹೊಂದುವ ಟೋಪಿ ಸಿದ್ಧಪಡಿಸುತ್ತಾರೆ. ನಂತರದ ಕೆಲಸ ಮೂವತ್ತು ಅಡಿ ಎತ್ತರದ ಕಾಮಣ್ಣನ ಪ್ರತಿಷ್ಠಾಪನೆ. ಇದು ಹೋಳಿ ಹುಣ್ಣಿಮೆ ದಿವಸ ಆಗುತ್ತದೆ. ನಾಲ್ಕನೆಯ ದಿನದ ರಾತ್ರಿ ಮೇದಾರ ಓಣಿಯಲ್ಲಿ ಟ್ರಾಲಿಯಂಥ ಗಾಡಿ ಮೇಲೆ ಮೆರವಣಿಗೆ ಮಾಡಲಾಗುತ್ತದೆ. ಅಂದು ಮೆರವಣಿಗೆಯ ನಂತರ ಭವ್ಯಪೂಜೆಯನ್ನು ನೆರವೇರಿಸಲಾಗುತ್ತದೆ. ಅದಾದ ನಂತರ ಮುಖೋಟವನ್ನು ತೆಗೆದು ಪೆಟ್ಟಿಗೆಯಲ್ಲಿ ಮುಚ್ಚಿ, ಕರಿಯಮ್ಮನ ದೇಗುಲದ ಅಟ್ಟದಲ್ಲಿ ಮನ್ಮಥ ವಿಶ್ರಮಿಸುತ್ತಾನೆ. ಉಳಿದ ದಂಡವನ್ನು ದಹನ ಮಾಡಲಾಗುತ್ತದೆ. ರಂಗ ಪಂಚಮಿಯಂದು ಓಕುಳಿಯಾಡಿ ಸಂಭ್ರಮಿಸುತ್ತಾರೆ.

ನುಗ್ಗೆ ಗಿಡವೂ, ಹುಣಸೇಬೀಜವೂ

ರತಿ-ಮನ್ಮಥರ ಕಾಷ್ಠಶಿಲ್ಪಕ್ಕೆ ನುಗ್ಗೆಗಿಡದ ಕಟ್ಟಿಗೆಯನ್ನು ಬಳಸುತ್ತಾರೆ. ಜೊತೆಗೆ ಹೊಸ ಹುಣಸೆಹಣ್ಣು ತಂದು, ಬೀಜ ಬೇರ್ಪಡಿಸಿ, ಬೀಜವನ್ನು ನೆನೆಸಿಡುತ್ತಾರೆ. ಅವು ತಮ್ಮ ಗಾತ್ರಕ್ಕಿಂತ ಹೆಚ್ಚು ಹಿಗ್ಗುತ್ತವೆ. ಅವನ್ನು ನೆರಳಿನಲ್ಲಿ ಒಣಗಿಸಿ, ಪುಡಿಯಾಗುವಂತೆ ಬೀಸಲು ನೀಡುತ್ತಾರೆ. ಈ ಪುಡಿಯನ್ನು ಗಂಜಿಯಂತೆ ಬೇಯಿಸಿ, ಮೂರ್ತಿಗೆ ಲೇಪಿಸುತ್ತಾರೆ.

ಪ್ರತಿ ವರ್ಷವೂ ಬಿಳಿಯುಡುಗೆಯ ಮನ್ಮಥನಿಗೆ ಕೆಂಪು ಅಥವಾ ಹಳದಿ ಬಣ್ಣವನ್ನು ಮುಖಕ್ಕೆ ಬಳಿಯುತ್ತಾರೆ. ರತಿದೇವಿಯತ್ತ ಪ್ರೀತಿಯಿಂದ ನೋಡುವ ಮನ್ಮಥನಿಗೆ ದೊಡ್ಡ ಕಂಠೀಹಾರ ಹಾಕುತ್ತಾರೆ. ತೀಡಿದ ಕ್ರಾಪು, ಅರಳುಕಂಗಳು, ಚೂಪು ಗಡ್ಡ, ತುಂಬಿದ ಕೆನ್ನೆಯ ಮನ್ಮಥ ಸುರಸುಂದರಾಂಗನಂತೆ ತೀಡಿರುತ್ತಾರೆ. ಕಾಲಿಗೆ ರುಳಿ ಎಂಬ ಆಭರಣವನ್ನೂ, ಕೈಗೆ ಕಡಗವನ್ನೂ ಧರಿಸಿರುತ್ತಾನೆ. ಮನ್ಮಥನೊಂದಿಗೆ ಬಿಳಿ ಬಣ್ಣದ ಕುಬಸ ಧರಿಸಿದ ರತಿದೇವಿ ಬೋರಮಾಳ ಸರ, ಪದಕದ ಸರದೊಂದಿಗೆ ಮಿಂಚುತ್ತಿರುತ್ತಾಳೆ.

ಪುರಾಣ ಕತೆ

ವಸಂತ (ಮನ್ಮಥ) ನ ಆಗಮನದ ಹೊಸ್ತಿಲಿನಲ್ಲಿ ಬರುವ ಈ ಹಬ್ಬದ ಹಿಂದೆ ಪುರಾಣದ ಕತೆಯೂ ಇದೆ. ತಾರಕಾಸುರನ ಸಂಹರಿಸಲು, ಶಿವ-ಶಿವೆಯ ಸಮಾಗಮ ಆಗಬೇಕಿರುತ್ತದೆ. ಅವರ ಶಿಶುವಿನಿಂದಲೇ ತಾರಕಾಸುರನಿಗೆ ಮರಣ ಎಂಬ ಬ್ರಹ್ಮನ ವರದಾನವಿರುತ್ತದೆ. ಸಮಾಧಿ ಸ್ಥಿತಿಯಲ್ಲಿರುವ ಶಿವನನ್ನೂ, ತಪಸ್ಸಾಚರಿಸುತ್ತಿರುವ ಪಾರ್ವತಿಯ ಸಮಾಗಮಕ್ಕಾಗಿ ಮನ್ಮಥನ ಮನ ಒಲಿಸಲಾಗುತ್ತದೆ. ಮನ್ಮಥನ ಹೂ ಬಾಣದಿಂದಾಗಿ ಸಮಾಧಿಸ್ಥಿತಿಯಿಂದ ಎಚ್ಚರಗೊಳ್ಳುವ ಶಿವ, ಮೂರನೆ ಕಣ್ಣು ಬಿಟ್ಟು ಮನ್ಮಥನನ್ನು ಭಸ್ಮ ಮಾಡುತ್ತಾನೆ. ರತಿಯ ಪ್ರಾರ್ಥನೆಯಿಂದ, ಲೋಕಕ್ಕೆಲ್ಲ ಮೃತನಾದ ಮನ್ಮಥ, ಈ ಐದು ದಿನಗಳಲ್ಲಿ ರತಿಗೆ ಮಾತ್ರ ಸಶರೀರಿಯಾಗಿ ದಕ್ಕುತ್ತಾನೆ. ಉಳಿದವರಿಗೆಲ್ಲ ಅನಂಗನಾಗುತ್ತಾನೆ.

ಈ ಕತೆಯ ಜಾಡು ಹಿಡಿದು ಮನ್ಮಥನನ್ನು ಇಷ್ಟಾರ್ಥ ಸಿದ್ಧಿಸುವ ದೈವವಾಗಿ ಇಲ್ಲಿಯ ಜನ ಕಾಣುತ್ತಾರೆ. ಆದರೆ ಯಾವುದೂ ಶಾಶ್ವತವಲ್ಲ ಎಂಬ ಎಚ್ಚರಿಕೆಯೂ ಇರುವಂತೆ, ಈ ದೇವನಿಗೆ ಹರಕೆ ಹೊರುವವರು ಅಲ್ಲಲ್ಲೇ ಪ್ರಸಾದದ ವ್ಯವಸ್ಥೆ ಮಾಡುತ್ತಾರೆ. ಅನ್ನದಾನಕ್ಕೆ ಹೊರತಾಗಿ ಖರ್ಚುವೆಚ್ಚಗಳನ್ನು ಹೊರುವ ಜವಾಬ್ದಾರಿಯನ್ನೂ ಪಡೆಯುತ್ತಾರೆ. ಐದು ದಿನಕ್ಕೆ ಆಗುವ ದೀಪದ ಎಣ್ಣೆ ಪೂರೈಕೆ, ಪ್ರಸಾದದ ವೆಚ್ಚ, ಪ್ರಸಾದ ವಿತರಣೆ, ಅಲಂಕಾರ, ಅಲಂಕಾರಕ್ಕೆ ಬೇಕಾಗುವ ಸರಕುಗಳ ಪೂರೈಕೆ- ಹೀಗೆ ವಿವಿಧ ಬಗೆಯ ಹರಕೆಗಳನ್ನು ಹೊರುತ್ತಾರೆ.

ನವಲಗುಂದದ ರಾಮಲಿಂಗೇಶ್ವರ ದೇಗುಲದಲ್ಲಿ ಮಾತ್ರ ಹರಕೆ ಹೊತ್ತವರು, ತಮ್ಮ ಇಷ್ಟಾರ್ಥ ಸಿದ್ಧಿಸಿದಾಗ ಬೆಳ್ಳಿ ದ್ರವ್ಯಗಳನ್ನು ದೇಗುಲಕ್ಕೆ ಒಪ್ಪಿಸುವ ಸಂಪ್ರದಾಯವಿದೆ. ವಿದ್ಯಾಭ್ಯಾಸದಲ್ಲಿರುವವರಿಗೆ ಅಭಯ ಹಸ್ತ, ಕೋರ್ಟು ಕಚೇರಿ ಗಲಾಟೆಗಳಲ್ಲಿದ್ದರೆ ತಕ್ಕಡಿ, ಹೊಲ, ಜಮೀನು, ತಕರಾರಿದ್ದರೆ ಎತ್ತು, ಕುದುರೆ, ಮನೆಗಾಗಿ ಛತ್ರಿ, ಮಗುವಿಗಾಗಿ ತೊಟ್ಟಿಲು... ಹೀಗೆ ವಿವಿಧ ಬಗೆಯ ಹರಕೆಗಳನ್ನು ಹೊರುತ್ತಾರೆ. ಅವನ್ನು ಒಪ್ಪಿಸುತ್ತಾರೆ.

ರಾಮಲಿಂಗೇಶ್ವರ ದೇಗುಲದಲ್ಲಿರುವ ಮನ್ಮಥ ಸಶರೀರ ರೂಪದಲ್ಲಿದ್ದಾನೆ. ಮಳೆ ನಕ್ಷತ್ರಗಳ ಆಧಾರದ ಮೇಲೆ ಅಷ್ಟೂ ಬಗೆಯ ಕಾಷ್ಠಗಳಿಂದ ಇದನ್ನು ನೂರಾರು ವರ್ಷಗಳ ಹಿಂದೆಯೇ ತಯಾರಿಸಲಾಗಿದೆ. ಆದರೆ ತಲೆ ಹಿಂದಿರುವ ಎರಡು ರಂಧ್ರಗಳನ್ನು ಪೂರ್ಣಗೊಳಿಸುವಾಗಲೇ ಶಿಲ್ಪಿಯು ನಿಧನರಾಗುತ್ತಾರೆ. ಅವೆರಡು ಯಾವ ನಕ್ಷತ್ರಬಿಂದುಗಳು, ಯಾವ ಕಟ್ಟಿಗೆಯನ್ನು ಬಳಸಬೇಕು ಎಂಬುದು ತಿಳಿಯದೇ ಅಪೂರ್ಣವಾಗಿದೆ. ಪೂರ್ಣವಾಗಿದ್ದರೆ ಜೀವಕಳೆಯೇ ಬರುತ್ತಿತ್ತು ಎಂಬ ನಂಬಿಕೆ ಇಲ್ಲಿಯವರದ್ದು. ಈ ಪ್ರತಿಮೆಗೆ ಹಲವಾರು ಕಡೆ ರಂಧ್ರಗಳಿವೆ. ಗಾಳಿ ಸುಳಿಯುವ ಸದ್ದು ಕೇಳುತ್ತದೆ.

14ನೇ ಪುಟಕ್ಕೆ...

ಧಾರವಾಡದ ಲಕಮಾಪುರದಲ್ಲಿ ಚಿಣ್ಣರು ಹಲಗೆ ಬಾರಿಸಿ ಹೋಳಿ ಹಬ್ಬವನ್ನು ಸಂಭ್ರಮಿಸಿದರು ಚಿತ್ರ: ಬಿ.ಎಂ. ಕೇದಾರನಾಥ

ಟಿ.ಎಂ.ಕೃಷ್ಣ

ಕರ್ನಾಟಕ ಸಂಗೀತ ಲೋಕದ ಕನಸುಗಾರ

ಜಗದೀಶ್ ಕೊಪ್ಪ

ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ 'ಕಲಾನಿಧಿ' ಎಂಬ ಪ್ರತಿಷ್ಠಿತ ಪ್ರಶಸ್ತಿಯ ಗೌರವವನ್ನು ಪಡೆಯುವುದು ಪ್ರತಿಯೊಬ್ಬ ಕಲಾವಿದನ ಜೀವಮಾನದ ಆಸೆಯಾಗಿರುತ್ತದೆ. ಇದರ ಜೊತೆಗೆ ಈ ಪ್ರಶಸ್ತಿಯನ್ನು ನೀಡುವ ಮದ್ರಾಸ್ ಸಂಗೀತ ಅಕಾಡೆಮಿ ವತಿಯಿಂದ ನಡೆಯುವ ಮಾರ್ಗಳಿ ಸಂಗೀತೋತ್ಸವದಲ್ಲಿ ಹಾಡುವುದೂ ಎಲ್ಲರ ಕನಸಾಗಿರುತ್ತದೆ. ಪ್ರತಿವರ್ಷ ಡಿಸೆಂಬರ್ ಮತ್ತು ಜನವರಿ ತಿಂಗಳ ನಡುವೆ ಬರುವ ಮಾರ್ಗಶಿರ ಮಾಸದಲ್ಲಿ ಒಂದು ತಿಂಗಳು ಕಾಲ ಚೆನ್ನೈನಲ್ಲಿ ನಡೆಯುವ ಸಂಗೀತೋತ್ಸವದಲ್ಲಿ 'ಕಲಾನಿಧಿ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಗುತ್ತದೆ.

ಈ ವರ್ಷದ ಅಂದರೆ 2024ರ ಸಾಲಿನ 'ಕಲಾನಿಧಿ ಪ್ರಶಸ್ತಿ'ಯನ್ನು ಸಂಗೀತ ಕ್ಷೇತ್ರದ ಬಂಡಾಯಗಾರ ಮತ್ತು ಸಂತ ಎಂದು ಗುರುತಿಸಲಾಗಿರುವ ಹಾಗೂ ಅದ್ವಿತೀಯ ಸಂಗೀತಗಾರ ಟಿ.ಎಂ.ಕೃಷ್ಣ ಅವರಿಗೆ ಘೋಷಿಸಲಾಗಿದೆ. ತಾವು ನಂಬಿದ ತತ್ವ ಮತ್ತು ಸಿದ್ಧಾಂತಗಳಿಗೆ ಬದ್ಧರಾಗಿರುವ ಅವರು, ಎರಡು ದಶಕಗಳಿಂದ ಸಂಪ್ರದಾಯಸ್ಥ ಸಂಗೀತಗಾರರು ಮತ್ತು ಮದ್ರಾಸ್ ಸಂಗೀತ ಅಕಾಡೆಮಿ ವಿರುದ್ಧ ಸೈದ್ಧಾಂತಿಕವಾಗಿ ಗಟ್ಟಿಯಾಗಿ ನಿಂತಿದ್ದರು. 'ಕಲೆಯು ತನ್ನ ಸ್ವಭಾವದಿಂದ ಸಾಮಾಜಿಕ ಜೀವಿಯಾಗಿದೆ' ಎಂದು ನಂಬಿರುವ ಟಿ.ಎಂ. ಕೃಷ್ಣ ಅವರು ಸಂಗೀತಗಾರರಾಗಿ, ಬರಹಗಾರರಾಗಿ ಮತ್ತು ಸಂಶೋಧಕರಾಗಿ ನಿಖರವಾದ ಮಾನದಂಡಗಳನ್ನು ಕಾಯ್ದುಕೊಂಡು ಕರ್ನಾಟಕ ಸಂಗೀತದ ವ್ಯಾಪ್ತಿಯನ್ನು ವಿಸ್ತರಿಸಿದ್ದಾರೆ.

ಸಂಪ್ರದಾಯಸ್ಥ ಸಂಗೀತಗಾರರ ದೃಷ್ಟಿಯಲ್ಲಿ ತಳವರ್ಗದ ಶೂದ್ರ ಮತ್ತು ದಲಿತ ಮಕ್ಕಳಿಗೆ ಸಂಗೀತ ಕಲಿಸಿಕೊಡುವುದು ದೋಷಪೂರಿತ ಕ್ರಿಯೆ ಎಂಬ ಭಾವನೆ ಇತ್ತು. ಅಂತಹ ಸಂದರ್ಭದಲ್ಲಿ ಚೆನ್ನೈನ ಮದ್ರಾಸ್ ಸಂಗೀತ ಅಕಾಡೆಮಿ ಸಭಾಂಗಣದಲ್ಲಿ ಕಿಕ್ಕಿರಿದ ಮೇಲ್ವರ್ಗದ ಸಂಗೀತಾಸಕ್ತರ ಮುಂದೆ ಪ್ರತಿಷ್ಠಿತ ಕಲಾವಿದರು ಕಾರ್ಯಕ್ರಮ ನೀಡುತ್ತಿದ್ದರು. ಅದಕ್ಕೆ ತದ್ವಿರುದ್ಧವಾಗಿ ಕೃಷ್ಣ ಅವರು ಮಹಾಬಲಿಪುರಂ ಕಡಲತೀರದಲ್ಲಿ ಮೀನುಗಾರರ ಹಳ್ಳಿಯಲ್ಲಿ ಮರಳಿನ ಮೇಲೆ ಕುಳಿತು ಅಲ್ಲಿನ ಮಕ್ಕಳ ಎದುರು ಹಾಡುತ್ತಾ, ಅವರಿಗೆ ಸಂಗೀತ ಕಲಿಸುವ ಕ್ರಿಯೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು.

ಭಾರತದ ಇತಿಹಾಸದಲ್ಲಿ ಸಂಗೀತ ಮತ್ತು ನೃತ್ಯವನ್ನು ಶತ ಶತಮಾನಗಳಿಂದಲೂ ಕಾಪಿಟ್ಟುಕೊಂಡು ಬಂದವರು ದೇವದಾಸಿಯರು. ಅವರ ಪಾರಂಪರಿಕ ವೃತ್ತಿಯಾಗಿದ್ದ ನೃತ್ಯ ಮತ್ತು ಸಂಗೀತ ಇಪ್ಪತ್ತನೇ ಶತಮಾನದ ಆದಿಭಾಗದಲ್ಲಿ ತಮಿಳುನಾಡಿನಲ್ಲಿ ಬ್ರಾಹ್ಮಣರ ಹವ್ಯಾಸವಾಗಿ ಪರಿವರ್ತನೆಗೊಂಡವು. 1926ರಲ್ಲಿ ರುಕ್ಮಿಣಿ ಅರುಂಡೇಲ್ ಅವರು ಭರತನಾಟ್ಯಕ್ಕೆ, 1932ರಲ್ಲಿ ಡಿ.ಕೆ.ಪಟ್ಟಮ್ಮಾಳ್ ಕರ್ನಾಟಕ ಸಂಗೀತಲೋಕಕ್ಕೆ ಪ್ರವೇಶಿಸಿ ಹೊಸ ಅಧ್ಯಾಯ ಬರೆದರು. ಈ ಕಾರಣದಿಂದಾಗಿ ಕೃಷ್ಣ ಅವರು ಕಲಾವಿದರಿಗೆ ಗುರುತಿಸಲಾದ ದ್ವೇಷದ ಈ ಪರಿಕಲ್ಪನೆಯನ್ನು ತಿರಸ್ಕರಿಸಿ, ಮಾನವ ಸ್ಥಿತಿಯ ಎಲ್ಲಾ ಅಂಶಗಳೊಂದಿಗೆ ಸಂಪರ್ಕದಲ್ಲಿ ಉಳಿಯುವುದನ್ನು ನಂಬಿದ್ದಾರೆ.

ಚೆನ್ನೈನ ಪ್ರತಿಷ್ಠಿತ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಕೃಷ್ಣ ಅವರು ಖ್ಯಾತ ಗುರುಗಳಾದ ಬಿ. ಸೀತಾರಾಮ ಶರ್ಮ, ಚೆಂಗಲ್‌ಪೇಟ್ ರಂಗನಾಥನ್ ಮತ್ತು ಸೆಮ್ಮಂಗುಡಿ ಶ್ರೀನಿವಾಸ ಅಯ್ಯರ್ ಅವರಲ್ಲಿ ತರಬೇತಿ ಪಡೆದರು. ಸಂಗೀತ ಕಲಿಯುವಿಕೆಯ ಜೊತೆಗೆ ಅದರ ಇತಿಹಾಸವನ್ನು ಅಭ್ಯಾಸ ಮಾಡುತ್ತಾ ಬಂದವರು. ಹಾಗಾಗಿ ಸಂಗೀತವೆಂಬುದು ಕೇವಲ ವಿದ್ವಾಂಸರ ಸ್ವತ್ತಲ್ಲ, ಅದು ಈ ನೆಲದ ಎಲ್ಲರೆದೆಯ ಪಾಡುಗಳು ಹಾಡಾಗಿ ಹರಿದು ಬಂದುದರ ಪ್ರತಿಫಲ ಎಂಬುದನ್ನು ಗ್ರಹಿಸಿದರು. ಈ ಕಾರಣಕ್ಕಾಗಿ ತಮ್ಮ ಜೀವನದುದ್ದಕ್ಕೂ ಎಲ್ಲಾ ತಳವರ್ಗದ ಹಾಡುಗಾರರು, ವಾದ್ಯಗಾರರ ಜೊತೆ ಬೆರೆಯುತ್ತಾ ಹಾಡುಗಾರಿಕೆಯಲ್ಲಿ ಅನೇಕ ಹೊಸ ಪಟ್ಟುಗಳನ್ನು ಕಲಿತರು. ನಮ್ಮ ಕರ್ನಾಟಕದ ಸವದತ್ತಿ ಯಲ್ಲಮ್ಮನ ಜೋಗತಿಯರಿಂದ ಗೀಗಿ ಪದಗಳನ್ನು ಕಲಿಯುವುದರ ಜೊತೆಗೆ ಅವರ ಜೊತೆ ಬೆಂಗಳೂರಿನ ಪುರಭವನದ ಸಭಾಂಗಣದಲ್ಲಿ ಸಂಗೀತ ಕಾರ್ಯಕ್ರಮವನ್ನು ನೀಡಿದರು. ಇಷ್ಟು ಮಾತ್ರವಲ್ಲದೆ ಕೋಲೆ ಬಸವನ ಜೊತೆ ವಾಲಗ ನುಡಿಸುವ ಕಲಾವಿದರ ಜೊತೆ ಕುಳಿತು ವಾದ್ಯ ನುಡಿಸುವ ಅವರ ಕಲೆಗಾರಿಕೆ ಮತ್ತು ಅವರು ನುಡಿಸುವ ನಾಟಿ ರಾಗವನ್ನು ಅಭ್ಯಾಸ ಮಾಡಿದರು.

ವಾಸ್ತವ ಸತ್ಯಗಳನ್ನು ಅರ್ಥ ಮಾಡಿಕೊಂಡು, ತಮ್ಮ ಸಂಗೀತದ ಮೂಲಕ ಅನುಭವಗಳನ್ನು ಹಂಚಿಕೊಳ್ಳುವ ಹಾಗೂ ತಮ್ಮ ಸಂವೇದನೆಯನ್ನು ಹೆಚ್ಚಿಸಿಕೊಂಡಿರುವ ಕಲಾವಿದರಾಗಿ ಅವರು ಅಪರೂಪದ ಶಾಸ್ತ್ರೀಯ ಸಂಗೀತಗಾರ. ಭಾರತದ ಆಳವಾದ ಸಾಮಾಜಿಕ ವಿಭಾಗಗಳನ್ನು ಸರಿಪಡಿಸಲು ಕಲೆಯ ಅಭಿವೃದ್ಧಿಗಾಗಿ ಓರ್ವ ಕಲಾವಿದನಾಗಿ ಮತ್ತು ಸಂಗೀತದ ರಾಯಭಾರಿಯಾಗಿ ದುಡಿಯುತ್ತಿರುವ ಕೃಷ್ಣ ಅವರು 2016 ರಲ್ಲಿ ಏಷ್ಯಾದ ಪ್ರತಿಷ್ಠಿತ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿಗೆ ಪಾತ್ರರಾದರು.

13ನೇ ಪುಟಕ್ಕೆ...

ಶೋಭಾಯಮಾನ ಪಂಚಾಯಿತಿಗಳ ಕಥನ....

ಎಂ. ಮಹೇಶ

ಕ್ರಿಯಾಶೀಲ ಮನಸ್ಸು, ಬದ್ಧತೆ ಮತ್ತು ಕನಸುಗಳನ್ನು ಹೊಂದಿರುವ ಅಧಿಕಾರಿ ಹೇಗೆ ಬದಲಾವಣೆ ತರಬಲ್ಲರು ಎನ್ನುವುದಕ್ಕೆ ಶೋಭಾರಾಣಿ ಮಾದರಿಯಾಗಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಆಗಿ ಕಾರ್ಯನಿರ್ವಹಿಸುತ್ತಿರುವ ಇವರು, 14 ವರ್ಷಗಳಿಂದ ಕೆಲಸ ಮಾಡಿದ ಪಂಚಾಯಿತಿಗಳಲ್ಲಿ ತಮ್ಮದೇ ಹೆಜ್ಜೆಗುರುತುಗಳನ್ನು ಮೂಡಿಸಿದ್ದಾರೆ. ಸುಧಾರಣೆಗೆ ವಿನೂತನ ಕಾರ್ಯಕ್ರಮಗಳನ್ನು ಕೈಗೊಂಡು 'ಚೇಂಜ್ ಮೇಕರ್' ಆಗಿಯೂ ಹೊರಹೊಮ್ಮಿದ್ದಾರೆ.

ಮೊದಲು ನಿಯೋಜನೆಗೊಂಡಿದ್ದು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ಮಾಲಂಗಿ ಗ್ರಾಮ ಪಂಚಾಯಿತಿಗೆ. ಅದು ಕಾಡಂಚಿನ ಹಾಗೂ ಬುಡಕಟ್ಟು ಜನರು ಇರುವ ಊರುಗಳನ್ನು ಒಳಗೊಂಡ ಪಂಚಾಯಿತಿ. ಅಲ್ಲಿ ಕಚ್ಚಾಮನೆಗಳೇ ಹೆಚ್ಚು, ಶೌಚಾಲಯಗಳೂ ಇರಲಿಲ್ಲ. ಕುಡಿಯುವ ನೀರಿನ ಸಮಸ್ಯೆಯೂ ಇತ್ತು. ಕೊಡಗಿನ ಕಾಫಿತೋಟಗಳಿಗೆ ಕೂಲಿಗೆ ಹೋಗುವವರು ತಮ್ಮೊಂದಿಗೆ ಮಕ್ಕಳನ್ನೂ ಕರೆದೊಯ್ಯುತ್ತಾರೆ. ಈ ಸಮಸ್ಯೆಗಳನ್ನು ಅರಿತ ಶೋಭಾರಾಣಿ, ಮಕ್ಕಳನ್ನು ಆಕರ್ಷಿಸಲು ಆಶ್ರಮ ಶಾಲೆಗಳನ್ನು ಸ್ಮಾರ್ಟ್ ಮಾಡಿದರು. ಕ್ರೀಡೆಗೆ ಉತ್ತೇಜನ ನೀಡಿ, ಶಾಲೆ ಬಿಟ್ಟ ಮಕ್ಕಳನ್ನೆಲ್ಲ ಶಾಲೆಗೆ ಮರಳುವಂತೆ ಮೋಡಿ ಮಾಡಿದರು.

ಅಧಿಕಾರಿಗೆ ಕನಸುಗಳು ಇರಬಹುದು. ಆದರೆ, ಅನುಷ್ಠಾನಕ್ಕೆ ಪಂಚಾಯಿತಿಯಲ್ಲಿ ಹಣವೇ ಇರುವುದಿಲ್ಲ. ಇಂತಹ ಕೊರತೆಯನ್ನು ಸಮುದಾಯದ ಸಹಭಾಗಿತ್ವದಲ್ಲಿ ನೀಗಿಸಬಹುದು ಎನ್ನುವುದನ್ನು ಇವರು ತೋರಿಸಿಕೊಟ್ಟಿದ್ದಾರೆ. ಸ್ವಯಂ ಸೇವಾ ಸಂಸ್ಥೆಗಳು, ಕಾರ್ಪೊರೇಟ್ ಕಂಪನಿಗಳ ಸಹಾಯ ಪಡೆದು ತಮ್ಮ ವ್ಯಾಪ್ತಿಯ ಎಂಟು ಸರ್ಕಾರಿ ಶಾಲೆಗಳನ್ನು 'ಸ್ಮಾರ್ಟ್ ಕ್ಲಾಸ್'ಗಳನ್ನಾಗಿ ಮಾಡಿದರು. ಸ್ವೆಟರ್, ಶೂ-ಸಾಕ್ಸ್ ಕೊಡಿಸಿದರು. ಮಾಲಂಗಿ ಗ್ರಾಮವನ್ನು ಸೌರ ಗ್ರಾಮವನ್ನಾಗಿ ಮಾಡಿದರು. ಇದಕ್ಕಾಗಿ ಪಂಚಾಯಿತಿಯಿಂದ ನಯಾಪೈಸೆಯನ್ನೂ ಬಳಸಲಿಲ್ಲ. ಸಂಪನ್ಮೂಲವನ್ನು ಸಮುದಾಯದಿಂದಲೇ ಸಂಗ್ರಹಿಸಿದರು.

ಮಾಲಂಗಿಯಲ್ಲಿ ಒತ್ತುವರಿಯಾಗಿದ್ದ 22 ಎಕರೆ ಸರ್ಕಾರಿ ಭೂಮಿಯನ್ನು ಜೇನುಕುರುಬ ಸಮುದಾಯದ ಹೋರಾಟಗಾರ್ತಿ ಜಾನಕಮ್ಮ ಅವರ ನೆರವಿನೊಂದಿಗೆ ತೆರವುಗೊಳಿಸಿದರು. ಆ ಜಾಗದಲ್ಲಿ ಕಿತ್ತೂರು ರಾಣಿ ಮತ್ತು ಇಂದಿರಾಗಾಂಧಿ ವಸತಿ ಶಾಲೆ ಮೈದಳೆದಿವೆ. ಉಳಿದ ಜಾಗ ಸ್ಮಶಾನಕ್ಕೆ ಮೀಸಲಿಡಲಾಗಿದೆ. ಈ ಪಂಚಾಯಿತಿಗೆ ರಾಜ್ಯ ಸರ್ಕಾರದಿಂದ ಎರಡು ಬಾರಿ ಗಾಂಧಿ ಗ್ರಾಮ ಪುರಸ್ಕಾರ, ಬಯಲು ಶೌಚಮುಕ್ತ ಗ್ರಾಮ ಪಂಚಾಯಿತಿ ಪುರಸ್ಕಾರ ಸಿಕ್ಕಿವೆ. ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವಾಲಯದಿಂದ ನೀಡುವ ನಮ್ಮ ಗ್ರಾಮ ನಮ್ಮ ಯೋಜನೆ ಪುರಸ್ಕಾರ -2018ಕ್ಕೆ ಆಯ್ಕೆಯಾದ ರಾಜ್ಯದ ಏಕೈಕ ಪಂಚಾಯಿತಿ.

> ಜನರೊಂದಿಗೆ ಒಡನಾಡುತ್ತಾ ಸಮಸ್ಯೆಗಳನ್ನು ಅರಿತು ಪರಿಹಾರ ಕಂಡುಕೊಳ್ಳುವುದು ಉತ್ತಮ ಅಧಿಕಾರಿಯ ಗುಣ. ಅಂತಹ ಗುಣ ಹೊಂದಿರುವ ಶೋಭಾರಾಣಿ ತಮ್ಮ ಪರಿಧಿಯಲ್ಲಿ ತಂದ ಬದಲಾವಣೆಗಳು ಹತ್ತಾರು.

ಜಯಪುರ ಹೋಬಳಿಯ ಹಾರೋಹಳ್ಳಿ ಡಿಜಿಟಲ್ ಗ್ರಂಥಾಲಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಪುಸ್ತಕಗಳು ಲಭ್ಯವಿರುವಂತೆ ಮಾಡಿದರು. ಅದನ್ನು ಬಳಸಿಕೊಂಡ ಇಬ್ಬರು ಸರ್ಕಾರಿ ನೌಕರಿಯನ್ನು (ಎಫ್‌ಡಿಎ, ಎಸ್‌ಡಿಎ) ಪಡೆದಿದ್ದಾರೆ. ಅಂಗನವಾಡಿಗಳ ಉನ್ನತೀಕರಣ ಕಾರ್ಯವೂ ಅಲ್ಲಿ ನಡೆಯಿತು. ಮುಖ್ಯರಸ್ತೆಗೆ ಹೊಂದಿಕೊಂಡಂತೆ ಇದ್ದ ಬೆಲೆಬಾಳುವ 30 ಗುಂಟೆ ಜಾಗ ಅನ್ಯರ ಪಾಲಾಗಿತ್ತು. ಅದನ್ನು ವಶಪಡಿಸಿಕೊಂಡು ಎಂಟು ತಿಂಗಳಲ್ಲೇ ಗ್ರಾಮ ಪಂಚಾಯಿತಿ ಕಟ್ಟಡ ತಲೆ ಎತ್ತಿನಿಂತಿತು.

'ಆರು ವರ್ಷಗಳ ಹಿಂದೆ ನಾಗವಾಲ ಗ್ರಾಮ ಪಂಚಾಯಿತಿಗೆ ವರ್ಗಾವಣೆ ಮಾಡಿಸಿಕೊಂಡೆ. ಮೈಸೂರು ನಗರಕ್ಕೆ ಹೊಂದಿಕೊಂಡ, ಜನಸಂಖ್ಯೆ ಜಾಸ್ತಿ ಇರುವ ಪಂಚಾಯಿತಿ ಅದು. ತ್ಯಾಜ್ಯ ವಿಲೇವಾರಿಗೆ ಹೆಚ್ಚು ಒತ್ತು ನೀಡಿದೆ. ಹಸಿ-ಒಣ ಕಸವನ್ನು ಮೂಲದಲ್ಲೇ ವಿಂಗಡಿಸಿ ವಿಲೇವಾರಿ ಮಾಡಲಾಗುತ್ತಿದೆ. ಜಾಗೃತಿ ಮೂಡಿಸಿದ ಪರಿಣಾಮ ಅಲ್ಲಿನ ಮಹಿಳೆಯರೆಲ್ಲರೂ ಮುಟ್ಟಿನ ಕಪ್‌ಗಳನ್ನು ಬಳಸುತ್ತಿದ್ದಾರೆ' ಎಂದು ಶೋಭಾರಾಣಿ ಖುಷಿಪಟ್ಟರು.

ಶೋಭಾರಾಣಿ, ನಾಗವಾಲದ 29 ಸ್ತ್ರೀಶಕ್ತಿ ಸ್ವಸಹಾಯ ಸಂಘಗಳ ಸಬಲೀಕರಣಕ್ಕೂ ಒತ್ತು ನೀಡಿದರು. ಪಂಚಾಯಿತಿಗಳ ಏನೇ ಕೆಲಸವಿದ್ದರೂ ಈ ಸಂಘಗಳಿಂದ ಮಾಡಿಸಿದರು. ಪಂಚಾಯಿತಿ ಕಾರ್ಯಕ್ರಮಗಳಿಗೆ ಸಂಘಗಳಿಂದಲೇ ಊಟ ತರಿಸಲಾಗುತ್ತದೆ. ಇದನ್ನು ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳಿಗೂ ವಿಸ್ತರಿಸಿದ್ದು ವಿಶೇಷ.

'ಬದಲಾವಣೆ, ಬಲವರ್ಧನೆ ಹಳ್ಳಿಗಳ ಹಂತದಲ್ಲಿ ಮೊದಲು ಆಗಬೇಕು. ನಾಲ್ಕು ಗೋಡೆಗಳ ನಡುವೆಯೇ ಕುಳಿತಿದ್ದರೆ ಜನ ನನ್ನನ್ನು ಪ್ರೀತಿಸುತ್ತಿರಲಿಲ್ಲ; ನನ್ನ ಕೆಲಸಕ್ಕೆ ಸಹಕಾರ ಕೊಡುತ್ತಿರಲಿಲ್ಲ' ಎನ್ನುತ್ತಾರೆ ಶೋಭಾರಾಣಿ.

ಇವರು ಕೆಲವು ಕಾರಣಗಳಿಗಾಗಿ ರಾಜೀನಾಮೆ ನೀಡಲು ಮುಂದಾಗಿದ್ದರು. ಆಗ ಪಂಚಾಯಿತಿ ಸದಸ್ಯೆಯೊಬ್ಬರು 'ಕೊಟ್ಟ ಕುದುರೆಯನೇರಲರಿಯದೆ ಮತ್ತೊಂದು ಕುದುರೆಯನೇರ ಬಯಸುವರು ವೀರರೂ ಅಲ್ಲ, ಧೀರರೂ ಅಲ್ಲ. ನಿಮ್ಮ ಕೆಲಸವನ್ನು ಪ್ರೀತಿಸಿ ನೋಡಿ ಬದಲಾವಣೆ ತರಬಹುದು' ಎಂದು ಹೇಳಿದರು.

ಆ ಮಾತು ಮನಸ್ಸಿಗೆ ನಾಟಿತು. ರಾಜೀನಾಮೆ ಪತ್ರ ಕಸದ ಬುಟ್ಟಿ ಸೇರಿತು.

'ಹಳ್ಳಿಗಳು ಪ್ರಗತಿಯಾದರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಸೃಜನಾತ್ಮಕವಾಗಿ ಯೋಚಿಸಿದರೆ ಹೆಚ್ಚು ಅಭಿವೃದ್ಧಿ ಮಾಡಲು ಸಾಧ್ಯವಾಗುತ್ತದೆ. ಪಿ.ಎಚ್‌ಡಿ ಬಳಿಕ ವಿಜ್ಞಾನಿಯಾಗಿ ಕೆಲಸ ಮಾಡಬೇಕು ಎಂದುಕೊಂಡಿದ್ದೆ. ಇಷ್ಟಪಟ್ಟು ಈ ವೃತ್ತಿಗೆ ಬರಲಿಲ್ಲ. ಬಳಿಕ ಇಷ್ಟಪಡುತ್ತಾ ಹೋದೆ' ಎನ್ನುತ್ತಾರೆ ಶೋಭಾರಾಣಿ.

ಶೋಭಾರಾಣಿ ಕೈಗೊಂಡ ಕಾರ್ಯಕ್ರಮಗಳನ್ನು ಇಲಾಖೆಯ ಹಿರಿಯ ಅಧಿಕಾರಿಗಳು ಮುಕ್ತಕಂಠದಿಂದ ಪ್ರಶಂಸಿಸಿ ವಿಸ್ತರಣೆಗೆ ಹಾಗೂ ಹಲವೆಡೆ ಅನುಷ್ಠಾನಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಸಮುದಾಯದ ಸಹಭಾಗಿತ್ವವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿರುವುದು ಇವರ ಹೆಗ್ಗಳಿಕೆ. ಪಿಡಿಒ ಕೂಡ ವಿವಿಧ ರೀತಿಯಲ್ಲಿ ಸಂಪನ್ಮೂಲವನ್ನು ಕ್ರೋಢೀಕರಿಸಿ ಹಳ್ಳಿಗಳಲ್ಲಿ ರಚನಾತ್ಮಕ ಬದಲಾವಣೆ ತರಬಹುದು ಎನ್ನುವುದಕ್ಕೆ ಹಲವಾರು ಮಾದರಿಗಳನ್ನು ಕೊಟ್ಟಿದ್ದಾರೆ.

ಪಿಡಿಒ ಆದ ವಿಜ್ಞಾನಿ

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಹುಣಸೇಮರದದೊಡ್ಡಿಯ ಶೋಭಾರಾಣಿ ಓದಿದ್ದೆಲ್ಲವೂ ನಗರದಲ್ಲೇ. ವಿಜ್ಞಾನಿ ಆಗುವ ಕನಸು ಹೊತ್ತಿದ್ದ ಇವರು ಎಂ.ಎಸ್ಸಿ ಸ್ನಾತಕೋತ್ತರ ಪದವಿ ನಂತರ 'ರೇಷ್ಮೆ ಕೃಷಿಯಲ್ಲಿನ ಪ್ರೊಟೀನ್ ಅನಾಲಿಸಿಸ್' ವಿಷಯದಲ್ಲಿ ಪಿ.ಎಚ್‌ಡಿ ಪದವಿ ಪಡೆದರು. ಜಾರ್ಖಂಡ್ ವಿಶ್ವವಿದ್ಯಾಲಯದ ರಾಧೇಶ್ಯಾಮ್ ಪ್ರತಿಷ್ಠಾನದಿಂದ ಯುವ ವಿಜ್ಞಾನಿ ಪ್ರಶಸ್ತಿಗೂ ಭಾಜನರಾದರು.

ಜೀವವಿಜ್ಞಾನಿ ಆಗಬೇಕು ಎಂದುಕೊಂಡಿದ್ದ ಇವರು, ಬೆಂಗಳೂರಿನಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ರಿಸರ್ಚ್ ಸ್ಕಾಲರ್ ಆಗಿ ಕೆಲಸ ಮಾಡುತ್ತಿದ್ದರು. ಅದು ಅವರ ಆಸಕ್ತಿಯ ಕ್ಷೇತ್ರವೇ ಆಗಿತ್ತು. ಈ ನಡುವೆ ರಾಜ್ಯ ಸರ್ಕಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಅರ್ಜಿ ಆಹ್ವಾನಿಸಿತ್ತು. 'ಅನುಭವಕ್ಕಾಗಿ, ನಿಮ್ಮ ಸಾಮರ್ಥ್ಯ ಅರಿಯಲು ಪರೀಕ್ಷೆ ಎದುರಿಸಿ' ಎಂದು ಗೈಡ್ ಹೇಳಿದರು. ಪರೀಕ್ಷೆ ಬರೆದರು, ಪಾಸಾದರು, ಕೆಲಸವೂ ಸಿಕ್ಕಿತು.

ನವರಂಗಿಯ ನೆಪದಲ್ಲಿ...

ಅಖಿಲೇಶ್ ಚಿಪ್ಲಿ

ತಲೆ ಬಗ್ಗಿಸಿಕೊಂಡು ರೋಗಿಯ ಹೆಸರು ಬರೆದುಕೊಳ್ಳುತ್ತಿದ್ದ ಶುಶ್ರೂಕಿಗೆ 'ಪಡೀಲ್' ಎಂಬ ಶಬ್ಧ ಕೇಳಿಬಂತು. ವರ್ಣಮಯವಾದ ಹಕ್ಕಿಯೊಂದು ವೇಗವಾಗಿ ಬಂದು ಒಂದು ಇಂಚು ದಪ್ಪದ ಪಾರದರ್ಶಕ ಗಾಜಿಗೆ ಡಿಕ್ಕಿಯಾಗಿತ್ತು. ಅತಿವೇಗವಾಗಿ ಡಿಕ್ಕಿಯಾದ ಕಾರಣಕ್ಕೆ ಮೆದುಳಿನಲ್ಲಿ ರಕ್ತಸ್ರಾವವಾಗಿ ಒಂದು ನಿಮಿಷದಲ್ಲಿ ಸತ್ತೇ ಹೋಯಿತು. ಬಣ್ಣ ಬಣ್ಣದ ಹಕ್ಕಿಯೊಂದು ಗಾಜಿಗೆ ಬಡಿದು ಸತ್ತಿದ್ದು ಶುಶ್ರೂಕಿಯರಿಗೆ ಬೇಸರ ತರಿಸಿತು. ಸತ್ತು ಹೋದ ಹಕ್ಕಿಯು ಗುಬ್ಬಿಗಿಂತ ದೊಡ್ಡದಾದ ಮತ್ತು ಕಾಮನಬಿಲ್ಲಿಗಿಂತ ಹೆಚ್ಚಿನ ಬಣ್ಣವುಳ್ಳ ಹಕ್ಕಿಯಾಗಿತ್ತು. 'ಇಂಡಿಯನ್ ಪಿಟ್ಟಾ' ಹೆಸರಿನ ಈ ಪಕ್ಷಿಯನ್ನು ಕನ್ನಡದಲ್ಲಿ 'ನವರಂಗಿ' ಎಂದು ಕರೆಯುತ್ತಾರೆ. ಹಿಮಾಲಯ ತಪ್ಪಲಿನಲ್ಲಿ ವಾಸಿಸುವ ಹಕ್ಕಿಯಿದು. ಅಲ್ಲಿ ಚಳಿಗಾಲದಲ್ಲಿ ಹಿಮ ಬೀಳುತ್ತದೆ. ಹಾಗಾಗಿ ಸೂಕ್ತ ಪ್ರದೇಶವನ್ನರಸಿ ಪಶ್ಚಿಮಘಟ್ಟಕ್ಕೆ ವಲಸೆ ಬರುತ್ತವೆ. ಹೆಸರೇ ಹೇಳುವಂತೆ ಇದಕ್ಕೆ ಒಂಬತ್ತು ಬಣ್ಣ, ಹಾಗಾಗಿ ಇದು ನವರಂಗಿ!

ಈಗೀಗಂತೂ ಐಷಾರಾಮಿಯಾಗಿ ಕಾಣಬೇಕೆಂದು ಕಟ್ಟಡಗಳಿಗೆ ದಪ್ಪ ದಪ್ಪ ಪಾರದರ್ಶಕ ಗಾಜುಗಳನ್ನು ಅಳವಡಿಸುತ್ತಾರೆ. ವೇಗವಾಗಿ ಹಾರುವ ಪಕ್ಷಿಗಳಿಗೆ ಪಾರದರ್ಶಕ ಗಾಜನ್ನು ಗುರುತಿಸಲು ಆಗುವುದಿಲ್ಲ. ಗಾಜಿಗೆ ತಲೆ ಬಡಿದು, ತೀವ್ರ ಆಂತರಿಕ ರಕ್ತಸ್ರಾವ ಆಗಿ ಪ್ರಾಣ ಬಿಡುತ್ತವೆ. ಹಿಮಾಲಯದಿಂದ ಮೂರು ಚಿಲ್ಲರೆ ಸಾವಿರ ಕಿಲೊಮೀಟರ್ ದೂರವನ್ನು ಯಾವುದೇ ಅಪಾಯವಿಲ್ಲದೇ ದಾಟಿ ಬಂದ ಪಕ್ಷಿ ಮನುಷ್ಯ ಆವಾಸಸ್ಥಾನಕ್ಕೆ ಬಂದು ಅಪಘಾತಕ್ಕೆ ಜೀವ ಕಳೆದುಕೊಂಡಿತು. ಗಾಜಿಗೊಂದು ಗಾಢ ಬಣ್ಣವಿದ್ದಿದ್ದರೆ 'ನವರಂಗಿ' ಬದುಕಿಕೊಳ್ಳುತ್ತಿತ್ತು. ಶುಶ್ರೂಕಿಯರು ವಿಷಯ ತಿಳಿಸುವ ಹೊತ್ತಿಗಾಗಲೇ ಇರುವೆ ಪಡೆಗಳು ಹಕ್ಕಿಯನ್ನು ವಿಘಟಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದವು.

ಪ್ರತಿ ವರ್ಷ ಅಮೆರಿಕದಲ್ಲಿ ಒಂದು ಕೋಟಿ ಪಕ್ಷಿಗಳು ಮನೆ ಮತ್ತು ವಾಣಿಜ್ಯ ಕಟ್ಟಡಗಳಲ್ಲಿ ಅಳವಡಿಸಿದ ಗಾಜುಗಳಿಗೆ ಬಡಿದು ಸಾಯುತ್ತವೆ. ಕೆನಡಾದಲ್ಲಿ ಅರ್ಧಕೋಟಿ ಪಕ್ಷಿಗಳು ಹೀಗೆ ಸಾಯುತ್ತವೆ ಎಂದು ಅಧ್ಯಯನಗಳು ತಿಳಿಸುತ್ತವೆ. ಭಾರತದಲ್ಲಿ ಈ ತರಹದ ಅಪಾಯಗಳ ಕುರಿತಾಗಿ ಯಾರೂ ಗಂಭೀರವಾಗಿ ಚಿಂತಿಸುತ್ತಿಲ್ಲ.

ನಗರಗಳಲ್ಲಿ ಅಳಿದುಳಿದ ಹಸಿರು ಪ್ರದೇಶದಲ್ಲಿ ಬಹಳಷ್ಟು ಪಕ್ಷಿಗಳು ತಮ್ಮ ನೆಲೆಯನ್ನು ಕಂಡುಕೊಳ್ಳುತ್ತವೆ. ಅಲ್ಲಿಯ ವಾತಾವರಣಕ್ಕೆ ಹೊಂದಿಕೊಂಡು ಬದುಕಲು ಹರಸಾಹಸ ಪಡುತ್ತವೆ. ಸಾಮಾನ್ಯವಾಗಿ ನಗರಕ್ಕೆ ಹೋಲಿಸಿದರೆ, ಹಳ್ಳಿಗಳಲ್ಲಿ ನಿರ್ಮಿಸುವ ಆಧುನಿಕ ಕಟ್ಟಡಗಳ ಗಾಜುಗಳಿಗೆ ಪಕ್ಷಿಗಳು ಡಿಕ್ಕಿ ಹೊಡೆದು ಸಾಯುವುದು ಹೆಚ್ಚು. ಅಂದರೆ, ಪಕ್ಷಿಗಳ ಸಾಂದ್ರತೆ ಹೆಚ್ಚಿದ್ದಲ್ಲಿ, ಈ ತರಹದ ಅಪಘಾತಗಳು ಜಾಸ್ತಿಯಾಗಿರುತ್ತದೆ. ಪಾರದರ್ಶಕ ಗಾಜುಗಳನ್ನು ಪಕ್ಷಿಗಳು ಗುರುತಿಸಲು ಸಾಧ್ಯವಾಗದ ಕಾರಣಕ್ಕೆ ಈ ರೀತಿಯ ಅಪಘಾತ ಸಂಭವಿಸಿದರೆ, ತೀರಾ ಕನ್ನಡಿಯಂತೆ ಪ್ರತಿಫಲನ ನೀಡುವ ಗಾಜುಗಳಿಗೆ ಬಡಿದು ಸಾಯುವ ಪಕ್ಷಿಪ್ರಬೇಧಗಳು ಕಮ್ಮಿಯೇನಲ್ಲ. ಬೃಹತ್ ಗಾಜಿನಲ್ಲಿ ಎದುರುಭಾಗದಲ್ಲಿ ಇರುವ ಮರಗಳ ಪ್ರತಿಫಲನ ಕಾಣುತ್ತದೆ. ಪ್ರತಿಫಲನ ನೀಡುವ ಗಾಜುಗಳು ಮರಗಳೇ ಎಂದು ಭ್ರಮಿಸುವ ಪಕ್ಷಿಗಳೂ ಅಪಘಾತಕ್ಕೆ ಈಡಾಗುವುದನ್ನು ಪಕ್ಷಿತಜ್ಞರು ದಾಖಲಿಸಿದ್ದಾರೆ. ರಾಜ್ಯದ ಪಶ್ಚಿಮಘಟ್ಟದ ಕಾಡಲ್ಲಿ ಕಂಡು ಬರುವ ಮತ್ತು ವೇಗವಾಗಿ ಹಾರುವ ಹರಲುಚೋರೆ ಹಕ್ಕಿ, ಜೌಗು ಪ್ರದೇಶದಲ್ಲಿ ಕಂಡು ಬರುವ ಮಿಂಚುಳ್ಳಿ, ರಾಮಗಿಳಿ, ಚಿಟ್ಟುಗಿಳಿ ಮುಂತಾದ ಪಕ್ಷಿಗಳು, ಹೂವಿನ ಮಕರಂದ ಕುಡಿಯಲು ಬರುವ ಹೂ ಹಕ್ಕಿಗಳು ಈ ತರಹದ ಅಪಘಾತಕ್ಕೆ ಸಾಮಾನ್ಯವಾಗಿ ಬಲಿಯಾಗುತ್ತವೆ. ವಿವಿಧ ಕಾರಣಕ್ಕೆ ಬೇರೆಡೆಯಿಂದ ವಲಸೆ ಬರುವ ಪಕ್ಷಿಗಳ ಪಥದಲ್ಲಿ ದಿಢೀರೆಂದು ಅಡ್ಡವಾಗುವ ಹೊಸ ಕಟ್ಟಡಗಳೂ ಹಕ್ಕಿಗಳ ಸಾವಿಗೆ ಕಾರಣವಾಗುತ್ತಿವೆ.

ಮನುಷ್ಯನ ಐಷಾರಾಮಿತನ, ನೋಡುವವರಿಗೆ ಮನೆ ಸುಂದರವಾಗಿ ಕಾಣಬೇಕು, ಗಾಳಿ-ಬೆಳಕು ಯಥೇಚ್ಛವಾಗಿ ಲಭಿಸಬೇಕು ಎಂಬ ಕಾರಣಕ್ಕೆ ಗಾಜಿನ ಕಿಟಕಿ, ಬಾಗಿಲುಗಳನ್ನು ಅಳವಡಿಸುವುದರಿಂದ ವೈವಿಧ್ಯಮಯ ಪಕ್ಷಿಗಳು ಬಲಿಯಾಗುತ್ತಿವೆ. ವರ್ಷಂಪ್ರತಿ ಹಲವು ಕೋಟಿ ಹಕ್ಕಿಗಳು ಸಾಯುತ್ತಿವೆ. ಇದಕ್ಕೆ ಪರಿಹಾರವೇನು?

ಪಾರದರ್ಶಕವಾದ ಗಾಜುಗಳ ಒಳಭಾಗದಲ್ಲಿ ಬಿಳಿಬಣ್ಣದ ಟೇಪುಗಳನ್ನು ಹಚ್ಚಬಹುದು ಅಥವಾ ಬಿಳಿಬಣ್ಣವನ್ನು ಬಳಿಯಬಹುದು. ಪರಿಸರ, ಪಕ್ಷಿಸ್ನೇಹಿ ಗಾಜುಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ. ಚಿಕ್ಕ ಚಿಕ್ಕ ಬಣ್ಣದ ವಿನ್ಯಾಸವಿರುವ ಗಾಜುಗಳನ್ನೇ ಅಳವಡಿಸುವಂತೆ ಮನೆ ಕಟ್ಟುವ ಗುತ್ತಿಗೆದಾರನಿಗೆ ಸೂಚಿಸಬೇಕು.

ಅಮೆರಿಕ ಮತ್ತು ಕೆನಡಾಗಳಲ್ಲಿ ಅಪಾರ ಸಂಖ್ಯೆಯ ಪಕ್ಷಿಗಳು ಮನೆ ಮತ್ತು ವಾಣಿಜ್ಯ ಕಟ್ಟಡಗಳ ಗಾಜುಗಳಿಗೆ ಬಡಿದು ಸಾಯುವ ವಿದ್ಯಮಾನವನ್ನು ಗಂಭೀರವಾಗಿ ಪರಿಗಣಿಸಿ 2012ರಲ್ಲಿ ಪಕ್ಷಿಸ್ನೇಹಿ ಕಟ್ಟಡಗಳನ್ನು ನಿರ್ಮಿಸುವ ನಿಟ್ಟಿನಲ್ಲಿ ನಿಯಮಗಳನ್ನು ಜಾರಿಗೆ ತಂದಿವೆ. ಹಳೆ ಕಟ್ಟಡಗಳ ವಿನ್ಯಾಸಗಳನ್ನು ಬದಲಿಸಿ, ಹೊಸ ಪಕ್ಷಿಸ್ನೇಹಿ ವಿನ್ಯಾಸ ರೂಪಿಸುವ ನಿಟ್ಟಿನಲ್ಲಿ ತಕ್ಕ ನಿಯಮಗಳನ್ನು ಜಾರಿ ಮಾಡಿವೆ.

ಭಾರತದಲ್ಲಿ ವನ್ಯಜೀವಿ ಸಂರಕ್ಷಣಾ ಕಾಯ್ದೆ (1972) ರ ಪರಿಚ್ಛೇದಡಿಯಲ್ಲಿ ಬರುವ ಪಕ್ಷಿಗಳನ್ನು ಸಾಯಿಸುವುದು, ಸಾಕುವುದು, ವ್ಯಾಪಾರ ಮಾಡುವುದು ಇತ್ಯಾದಿಗಳನ್ನು ಅಪರಾಧವೆಂದು ಪರಿಗಣಿಸಿಲಾಗುತ್ತದೆ. ಅರಣ್ಯ ಇಲಾಖೆ ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಕಾನೂನು ಕ್ರಮವನ್ನು ಜರುಗಿಸಿದಲ್ಲಿ ಅಪರಾಧಿಗಳಿಗೆ ಶಿಕ್ಷೆಯೂ ಆಗಬಹುದು. ಆದರೆ, ಸಂರಕ್ಷಣಾ ಕಾನೂನಿನ ಪರಿಚ್ಛೇದ ಅಡಿಯಲ್ಲಿ ಬರುವ ಪಕ್ಷಿಗಳು ಗಾಜಿಗೆ ಬಡಿದು ಸತ್ತರೆ ಏನು ಕ್ರಮ ತೆಗೆದುಕೊಳ್ಳಬಹುದು ಎಂಬ ಕುರಿತು ಸ್ಪಷ್ಟತೆಯಿಲ್ಲ. ವಿದ್ಯುತ್ ತಂತಿ ಹರಿಸಿ, ಆನೆ, ಕಾಟಿಗಳನ್ನೇ ಕೊಂದು ಹಾಕುವ ಮತ್ತು ಕಾನೂನು ಕುಣಿಕೆಯಿಂದ ಸುಲಭವಾಗಿ ತಪ್ಪಿಸಿಕೊಳ್ಳುವ ದೇಶದಲ್ಲಿ ನಾವಿರುವಾಗ, ಪಕ್ಷಿಗಳ ಬಗ್ಗೆ ಅವುಗಳ ದುರಂತಗಳ ಕುರಿತು ಯೋಚಿಸುವ ಮನಃಸ್ಥಿತಿಯನ್ನು ಅಪೇಕ್ಷಿಸುವುದು ದುಬಾರಿ ಆದೀತು. ಸರ್ಕಾರಗಳೇ ಈ ನಿಟ್ಟಿನಲ್ಲಿ ನಿರ್ದಿಷ್ಟವಾದ ಬಿಗಿಯಾದ ಕಾನೂನು ರೂಪಿಸಿ ಜಾರಿಗೆ ತರುವುದೊಂದೇ ಪರಿಹಾರ.

ಹೀಗಿದ್ದಾಳೆ ನವರಂಗಿ!

ಬಲಿಷ್ಠವಾದ ಉದ್ದಕಾಲುಗಳು, ಗಿಡ್ಡವಾದ ಬಾಲ, ಗಟ್ಟಿಯಾದ ಕೊಕ್ಕು, ಕೊಕ್ಕಿನ ಬುಡದಿಂದ ತಲೆಯ ಹಿಂಭಾಗದವರೆಗೆ ತಿಳಿಕಪ್ಪು ಪಟ್ಟಿ, ಬಿಳಿಬಣ್ಣದ ಗಂಟಲು ಹಾಗೂ ಕತ್ತು, ರೆಕ್ಕೆಯ ಮೇಲ್ಭಾಗದಲ್ಲಿ ಗಾಢ ಹಸುರು ಬಣ್ಣ, ನೀಲಿ ಬಣ್ಣದ ಬಾಲ, ಕೆಳಭಾಗವು ಕಂದು ಹಾಗೂ ಹೊಟ್ಟೆಯಿಂದ ಬಾಲದವರೆಗೆ ಕಡುಗೆಂಪು ಬಣ್ಣ. ಜೂನ್ ತಿಂಗಳಿಂದ ಆಗಸ್ಟ್‌ವರೆಗೆ ಅವು ಮೊಟ್ಟೆಯಿಟ್ಟು ಮರಿ ಮಾಡುವ ಕಾಲವಾಗಿದ್ದು, ನೆಲದ ಮೇಲೆ ಅಥವಾ ಕೆಲವು ಬಾರಿ ನೆಲಮಟ್ಟದ ಗಿಡಗಳ ಮೇಲೆ ಒಣಗಿದ ಎಲೆ ಮತ್ತು ಹುಲ್ಲನ್ನು ಬಳಸಿಕೊಂಡು ಗೋಳಾಕಾರದ ಗೂಡನ್ನು ರಚಿಸುತ್ತದೆ. ನಾಲ್ಕರಿಂದ ಐದು ನೇರಳೆ ಚುಕ್ಕಿಯಿರುವ ಬಿಳಿಮೊಟ್ಟೆಗಳನ್ನು ಇಡುತ್ತದೆ. ದಟ್ಟಪೊದೆಗಳು, ಎಲೆಯುದುರುವ ಕಾಡು ಹಾಗೂ ನಿತ್ಯಹರಿದ್ವರಣ ಕಾಡುಗಳಲ್ಲಿ ವಾಸಿಸುವ 'ನವರಂಗಿ'ಗೆ ಉದುರಿದ ಎಲೆಗಳಡಿಯಲ್ಲಿ ಸಿಗುವ ಕೀಟಗಳೇ ಆಹಾರ.

'ಬೆನಕ'ಗೆ ಸುವರ್ಣ ಸಂಭ್ರಮ

ಮಂಜುಶ್ರೀ ಎಂ. ಕಡಕೋಳ

'ಬೆನಕ'...

ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ಹಲವು ಹೊಸತುಗಳಿಗೆ ನಾಂದಿ ಹಾಡಿದ ರಂಗತಂಡ. ರಂಗ ಜಂಗಮ ಬಿ.ವಿ. ಕಾರಂತ ಅವರ ಸಾರಥ್ಯದಲ್ಲಿ ಆರಂಭವಾದ ತಂಡ ಇಂದಿಗೂ ನಿರಂತರತೆ ಕಾಪಾಡಿಕೊಂಡ ಹೆಗ್ಗಳಿಕೆ ಹೊಂದಿದೆ. 1972ರಲ್ಲಿ ಬೆಂಗಳೂರಿನಲ್ಲಿ ನಡೆದ ಬಯಲು ರಂಗೋತ್ಸವ ಕನ್ನಡ ಹವ್ಯಾಸಿ ರಂಗಭೂಮಿಗೆ ಹೊಸದಿಕ್ಕು ನೀಡಿತು. ಈ ರಂಗೋತ್ಸವದ ಮೂಲಕ ಹವ್ಯಾಸಿ ರಂಗಕ್ಕೆ ಒಂರ್ಥದಲ್ಲಿ ವೃತ್ತಿಪರತೆಯೂ ದಕ್ಕಿತು. ಹೊಸ ಕಥಾವಸ್ತುಗಳ ಹುಡುಕಾಟ, ನಿರ್ದೇಶಕ, ಸಂಘಟಕ, ನೇಪಥ್ಯ ಕಲಾವಿದರನ್ನು ಮುಂಚೂಣಿಗೆ ತಂದ ಕಾಲಘಟ್ಟವಿದು.

ಆಗಷ್ಟೇ ರಾಜಧಾನಿಗೆ ಬಂದಿದ್ದ ಸಾಹಿತಿ ಚಂದ್ರಶೇಖರ ಕಂಬಾರರು, ಒಂದೆಡೆ ಪತ್ರಕರ್ತ ಪಿ.ಲಂಕೇಶ್, ಇನ್ನೊಂದೆಡೆ ರಂಗದಿಗ್ಗಜ ಬಿ.ವಿ. ಕಾರಂತ. ಬಯಲು ರಂಗೋತ್ಸವಕ್ಕಾಗಿ ಒಂದೇ ವರ್ಷದಲ್ಲಿ 'ಜೋಕುಮಾರಸ್ವಾಮಿ, ಈಡಿಪಸ್, ಸಂಕ್ರಾಂತಿ'-ಹೀಗೆ ಮೂರೂ ನಾಟಕಗಳನ್ನೂ ನಿರ್ದೇಶಿಸಿದವರು ಕಾರಂತರು. ಈ ಕಾಲಘಟ್ಟದಲ್ಲೇ 'ಬೆನಕ'ಕ್ಕೆ ಮುನ್ನುಡಿ ಬರೆಯಲಾಯಿತು. 'ಬೆಂಚಿನಾಕ' ಹೋಗಿ 'ಬೆನಕ'ವಾಯಿತು.

1972ರಲ್ಲಿ ಭ್ರೂಣಾವಸ್ಥೆಯಲ್ಲಿದ್ದ 'ಬೆನಕ'ಕ್ಕೆ ಪೂರ್ಣರೂಪ ದೊರೆತದ್ದು 1974ರಲ್ಲಿ. ಇದೀಗ 2024ರಲ್ಲಿ ಸುವರ್ಣ ಸಂಭ್ರಮದಲ್ಲಿರುವ 'ಬೆನಕ' ತಂಡವು ಪೂರ್ಣವಾಗಿ ರೂಪುಗೊಳ್ಳುವ ಮೊದಲೇ 'ಶಕಶೈಲೂಷರು', 'ಬೆಂಚಿನಾಕ' ಹೆಸರಲ್ಲಿ ನಾಟಕಗಳನ್ನು ಪ್ರದರ್ಶಿಸುತ್ತಿತ್ತು. ರಂಗಭೂಮಿ ಮತ್ತು ಸಿನಿಮಾ ಕಲಾವಿದರನ್ನು ಒಟ್ಟಿಗೆ ಬೆಸೆದಿದ್ದ ತಂಡಕ್ಕೆ ಮೊದಲು 'ಬೆಂಚಿನಾಕ' (ಬೆಂಗಳೂರು ಚಿತ್ರ-ನಾಟಕ ಕಲಾವಿದರು) ಎಂಬ ಹೆಸರಿತ್ತು. ತಕ್ಷಣ ಕೇಳಿದರೆ 'ಬೆಂಕಿಹಾಕ' ಎಂದಾಗುತ್ತದೆ ಎಂದು ತಮಾಷೆ ಮಾಡಿದ್ದ ಪತ್ರಕರ್ತ ವೈಎನ್ಕೆ ಅವರು ತಂಡಕ್ಕೆ 'ಬೆನಕ' (ಬೆಂಗಳೂರು ನಗರ ಕಲಾವಿದರು) ಎಂದು ನಾಮಕರಣ ಮಾಡಿದರು.

'ಹಯವದನ' ನಾಟಕದಲ್ಲಿ ಬಿ.ವಿ. ಕಾರಂತ ಮತ್ತು ಸುಂದರರಾಜ್

> 2024ರ ಜನವರಿಯಿಂದ 2025ರ ಜನವರಿವರೆಗೆ ಬೆನಕ ತಂಡವು 'ಸುವರ್ಣ ಸಂಭ್ರಮ'ವನ್ನು ಆಚರಿಸಲಿದೆ.

ಬಿ.ವಿ. ಕಾರಂತ

'ಜೋಕುಮಾರಸ್ವಾಮಿ' ನಾಟಕದಲ್ಲಿ ಬಿ.ವಿ. ಕಾರಂತ, ಚಂದ್ರಶೇಖರ ಕಂಬಾರ, ಸುಂದರರಾಜ್, ನಾಗಿಣಿ ಭರಣ ಮತ್ತಿತರರು

ತಿರುಗಾಟದ ಆರಂಭ

ರಂಗ ಚಳವಳಿ ಉಚ್ಛ್ರಾಯದ ಸ್ಥಿತಿಯಲ್ಲಿದ್ದ ಆ ಕಾಲಘಟ್ಟದಲ್ಲಿ ಆರ್. ನಾಗೇಶ್, ಸಿ.ಆರ್. ಸಿಂಹ, ಜೆ.ಲೋಕೇಶ್, ಎನ್.ಕೆ.ಮೋಹನ್‌ರಾಂ, ಟಿ.ಎಸ್. ನಾಗಾಭರಣ, ಸುಂದರರಾಜ್, ಶ್ರೀನಿವಾಸ ಕಪ್ಪಣ್ಣ ಸೇರಿದಂತೆ ಹಲವು ರಂಗಕರ್ಮಿಗಳು ಸಕ್ರಿಯರಾಗಿದ್ದರು. 1973ರ ನವೆಂಬರ್/ಡಿಸೆಂಬರ್‌ನಲ್ಲಿ ರಾಜ್ಯದಾದ್ಯಂತ ತಿರುಗಾಟ ಆರಂಭಿಸಿದ್ದ 'ಬೆನಕ', ಹವ್ಯಾಸಿ ರಂಗಭೂಮಿಯಲ್ಲಿ 'ತಿರುಗಾಟ'ಕ್ಕೆ ಚಾಲನೆ ನೀಡಿತು. ಬೆಂಗಳೂರಿನಲ್ಲಿ ಹೊಸ ನಾಟಕ ಆಗುತ್ತಿದೆಯೆಂದರೆ ಅದನ್ನು ವಿವಿಧ ಜಿಲ್ಲೆಗಳಲ್ಲಿ ತೆಗೆದುಕೊಂಡುಹೋಗುವ ಪರಿಪಾಟವಿತ್ತು. ಅಂದು ನಾಟಕವೊಂದು ಯಶಸ್ವಿ ಪ್ರದರ್ಶನ ಕಾಣುತ್ತಿದ್ದ ತಕ್ಷಣವೇ ರಾಜ್ಯದ ವಿವಿಧೆಡೆ ಪ್ರದರ್ಶನಕ್ಕೆ ಬುಕ್ ಆಗುತ್ತಿತ್ತು. 'ಬೆನಕ'ದ ಅನೇಕ ಪ್ರಯೋಗಗಳು ದೆಹಲಿ, ಚಂಡೀಗಢ, ಕೋಲ್ಕತ್ತ, ಭೋಪಾಲ್, ಹೈದರಾಬಾದ್, ಚೆನ್ನೈ, ತಿರುವನಂತಪುರ ಹಾಗೂ ರಾಜ್ಯದ ನಾನಾ ಜಿಲ್ಲೆಗಳಲ್ಲಿ ಪ್ರದರ್ಶನ ಕಂಡವು. ಹೊರ ರಾಜ್ಯ ಮತ್ತು ಹೊರ ಜಿಲ್ಲೆಗಳಲ್ಲಿ ತಿರುಗಾಟ ನಡೆಸಿದ್ದು ದಾಖಲೆ.

'ಆಗಷ್ಟೇ 'ನೀನಾಸಂ' ಶುರುವಾಗಿತ್ತು. ಇದರ ಜತೆಗೆ 'ಬೆನಕ'ದ ಮುಂಚೂಣಿಯಲ್ಲಿದ್ದ ರಂಗಕರ್ಮಿಗಳು ರಂಗಭೂಮಿ ಒಂದು ಶೈಕ್ಷಣಿಕ ವ್ಯವಸ್ಥೆಯಾಗಿ ರೂಪುಗೊಳ್ಳಲು ಅಡಿಪಾಯ ಹಾಕಿದರು. ರಂಗಶಿಕ್ಷಕರನ್ನು ಕಾಲೇಜಿನಲ್ಲಿ ಸೇರಿಸುವ ಚಳವಳಿ ಶುರುವಾಯಿತು. ಆಗ ಸುಮಾರು 200 ರಂಗಶಿಕ್ಷಕರ ನೇಮಕವೂ ಆಯಿತು. ಜೋಕುಮಾರಸ್ವಾಮಿ, ಹಯವದನ, ಸತ್ತವರ ನೆರಳು, ಗೋಕುಲ ನಿರ್ಗಮನ, ಕತ್ತಲೆ ಬೆಳಕು, ತಬರನ ಕಥೆ ಸೇರಿದಂತೆ 45ಕ್ಕೂ ಹೆಚ್ಚಿನ ಮುಖ್ಯ ನಾಟಕಗಳನ್ನು ರಂಗಕ್ಕೆ ತಂದ ಕೀರ್ತಿ 'ಬೆನಕ'ದ್ದು. ನಟರಂಗ, ರಂಗಸಂಪದ, ಕಲಾಗಂಗೋತ್ರಿ, ಸ್ಪಂದನ, ಸಮುದಾಯ-ಹೀಗೆ ಸಕ್ರಿಯವಾಗಿದ್ದ ಅನೇಕ ತಂಡಗಳ ನಡುವೆ ಆರೋಗ್ಯಕರ, ಸ್ಪರ್ಧಾತ್ಮಕ ಪೈಪೋಟಿ ಇತ್ತು. ತಂಡಗಳು ಬೇರೆಯಾದರೂ ಎಲ್ಲರೂ ಎಲ್ಲ ತಂಡಗಳಲ್ಲೂ ಕೆಲಸ ಮಾಡುತ್ತಿದ್ದೆವು. 'ಬೆನಕ'ದ ಆಶಯವೇ ಎಲ್ಲೆಡೆ ಇತ್ತು' ಎನ್ನುತ್ತಾರೆ ಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ.

'ಕಲಾಸಂಪದ'ದಲ್ಲಿ ನಡೆಯುತ್ತಿದ್ದ 'ಬೆನಕ' ನಾಟಕಗಳ ತಾಲೀಮುಗಳಲ್ಲಿ ಚಿತ್ರನಟರಾದ ಕಮಲ್ ಹಾಸನ್, ನಾಸಿರುದ್ದೀನ್ ಷಾ, ಓಂಪುರಿ ಬರುತ್ತಿದ್ದರು. ಬೆಂಗಳೂರಿನಲ್ಲಿ ತಮ್ಮ ಸಿನಿಮಾಗಳ ಶೂಟಿಂಗ್ ಇದ್ದರೆ ಕಮಲ್ ತಪ್ಪದೇ 'ಬೆನಕ'ಕ್ಕೆ ತಮ್ಮ ಹಾಜರಾತಿ ಹಾಕುತ್ತಿದ್ದರಂತೆ. ಒಮ್ಮೆ ರಜನೀಕಾಂತ್ ಕೂಡಾ ಬಂದಿದ್ದರು.

'ಬೆನಕ'ದ ಬೆನ್ನೆಲುಬು

74ರಿಂದ 24ರವರೆಗೆ ಯಶಸ್ವಿಯಾಗಿ ಮುನ್ನಡೆಯುತ್ತಿರುವ 'ಬೆನಕ'ದ ಬೆನ್ನೆಲುಬಾದವರು ಅನೇಕರು. ಟಿ.ಎಸ್. ರಂಗಾ (ಈಗಿಲ್ಲ), ಚಂದ್ರಕುಮಾರ್ ಸಿಂಗ್, ಟಿ.ಎಸ್. ನಾಗಾಭರಣ, ಸುಂದರ್‌ರಾಜ್ ಹಾಗೂ ಇತರರು ಇಂದಿಗೂ 'ಬೆನಕ'ದ ಜತೆಗಿದ್ದಾರೆ. ನಿರ್ದೇಶಕಿ ಪ್ರೇಮಾ ಕಾರಂತ ಅವರು 'ಬೆನಕ'ದಲ್ಲಿ ಮಕ್ಕಳ ವಿಭಾಗವನ್ನೂ ಹುಟ್ಟುಹಾಕಿದರು. ಅನೇಕ ಪ್ರಯೋಗಗಳ ಮೂಲಕ ಚಿಣ್ಣರನ್ನೂ 'ಬೆನಕ' ಸೆಳೆಯಿತು.

ಜಿ.ವಿ. ಅಯ್ಯರ್, ಜಿ.ವಿ. ಶಿವಾನಂದ, ಹಿರೇಮಠ್, ಬಿ. ಜಯಶ್ರೀ, ಕೋಕಿಲಾ ಮೋಹನ್, ಮಾನು, ಸುರೇಶ್ ಹೆಬ್ಳೀಕರ್, ಕಿಟ್ಟಿ, ವೈಶಾಲಿ ಕಾಸರವಳ್ಳಿ, ಗಿರೀಶ ಕಾಸರವಳ್ಳಿ, ನಾಗಿಣಿ ಭರಣ, ರಮೇಶ್ ಭಟ್, ಸಂಧ್ಯಾ, ಎಡಕಲ್ಲುಗುಡ್ಡದ ಮೇಲೆ ಚಂದ್ರಶೇಖರ್, ಎನ್.ಕೆ. ರಾಮಕೃಷ್ಣ, ಟಿ.ಆರ್.ಆರ್. ಚಂದ್ರು, ಅಶೋಕ ಬಾದರದಿನ್ನಿ, ಕೆ.ಜಿ. ಮಹಾಬಲೇಶ್ವರ, ರತ್ನಮಾಲಾ ಪ್ರಕಾಶ್, ಶ್ರೀನಿವಾಸ ಪ್ರಭು, ಶೋಭಾ ವೆಂಕಟೇಶ್, ವಿದ್ಯಾ ವೆಂಕಟರಾಮ್, ಮೈಕೋ ಮಂಜು, ಖ್ಯಾತನಟ ಯಶ್ (ನವೀನ್‌ಕುಮಾರ್ ಗೌಡ) ಸೇರಿದಂತೆ ತಂತ್ರಜ್ಞರು, ನೇಪಥ್ಯ ಕಲಾವಿದರು, ಗಾಯಕರು ಅನೇಕರು 'ಬೆನಕ'ದ ಗರಡಿಯಲ್ಲಿ ಪಳಗಿದವರು.

'ಸ್ನೇಹಿತ ಎಡಕಲ್ಲುಗುಡ್ಡದ ಮೇಲೆ ಚಂದ್ರಶೇಖರ್ ಮೂಲಕ ಕಾರಂತರ 'ಹಯವದನ' ನಾಟಕದ ಕಪಿಲನ ಪಾತ್ರಕ್ಕೆ ಆಯ್ಕೆಯಾದೆ. ಅಲ್ಲಿಂದ ಇಲ್ಲಿಯ ತನಕ 'ಬೆನಕ'ದೊಂದಿಗೆ ನಂಟು ಮುಂದುವರಿದಿದೆ. ನನ್ನನ್ನು ನಟ, ಗಾಯಕ, ರಂಗಕರ್ಮಿಯನ್ನಾಗಿ ರೂಪಿಸಿದ್ದು ಕಾರಂತರು. ನಾಟಕಕ್ಕೆ ನಮ್ಮ ದುಡ್ಡುಹಾಕಿ ಕೆಲಸ ಮಾಡಬೇಕು. ಬೇರೆಯವರಿಂದ ದುಡ್ಡ ಹಾಕಿಸಬಾರದು ಎಂದು ಕಾರಂತರು ಹೇಳಿದ್ದನ್ನು ಇಂದಿಗೂ ಪಾಲಿಸುತ್ತಿರುವೆ. ಆಗ ಟಿ.ಎಸ್. ರಂಗಾ (ಈಗಿಲ್ಲ) ಆಡಳಿತ, ಸಂಘಟನೆ ಮಾಡುತ್ತಿದ್ದರು. ನಾಗಾಭರಣ ನೇಪಥ್ಯ ನೋಡಿಕೊಳ್ಳುತ್ತಿದ್ದರು. ನಾನು ಫೈನಾನ್ಸ್ ಮಾಡುತ್ತಿದ್ದೆ. 'ಯಮ ರಂಜನೆ' ಎನ್ನುವ ನಾಟಕವನ್ನೂ ನಿರ್ದೇಶಿಸಿದ್ದೆ' ಎಂದು ನೆನಪಿಸಿಕೊಳ್ಳುತ್ತಾರೆ ಖ್ಯಾತ ನಟ ಸುಂದರ್‌ರಾಜ್.

'ಮೊದಲ ಸಿನಿಮಾಕ್ಕೇ ಸ್ವರ್ಣಕಮಲ ಪ್ರಶಸ್ತಿ ಪಡೆದ ಬಿ.ವಿ. ಕಾರಂತರು ನಿರ್ದಿಷ್ಟವಾಗಿ ಒಂದು ತಂಡ ಕಟ್ಟಲು ಬಯಸಿದವರಲ್ಲ. ರಂಗಭೂಮಿ ಸದಾ ಚಲನಶೀಲವಾಗಿರಬೇಕೆಂಬ ಬಯಕೆ ಅವರದ್ದಾಗಿತ್ತು. ಅವರ ಗರಡಿಯಲ್ಲಿ ಪಳಗಿದವರು ಕಾರಂತರ ಕನಸು ನನಸು ಮಾಡಲು 'ಬೆನಕ'ದ ಮೂಲಕ ಒಗ್ಗೂಡಿದರು. 1969ರಿಂದ ಕಾರಂತರ ಒಡನಾಟದಲ್ಲಿದ್ದೆ. ನೇಪಥ್ಯ ಕಲಾವಿದನಾಗಿ, ನಿರ್ದೇಶಕನಾಗಿ ಅವರಿಂದ ಕಲಿತದ್ದು ಅಪಾರ. ಸುಂದರ್‌ರಾಜ್, ಚಂದ್ರು, ರಾಮಕೃಷ್ಣ, ನಾಗಿಣಿ ಭರಣ ಅನೇಕರು ಐದು ಜನರೇಷನ್‌ನೊಂದಿಗೆ ಕೆಲಸ ಮಾಡಿದವರು. ಇಂದಿಗೂ ಕಾರ್ಯನಿರತರಾಗಿದ್ದೇವೆ. ನಟನೆ, ನಿರ್ದೇಶನ, ನೇಪಥ್ಯ, ಸಂಗೀತ-ಹೀಗೆ ಅನೇಕ ವಿಭಾಗಗಳಲ್ಲಿ 'ಬೆನಕ'ದ ಕೊಡುಗೆ ಅನನ್ಯ. ಇಲ್ಲಿದ್ದ ಬಹುತೇಕರು ರಂಗಭೂಮಿ ಸಿನಿಮಾಗಳಲ್ಲಿ ಪ್ರವರ್ಧನಮಾನಕ್ಕೆ ಬಂದರು' ಎಂದು ಟಿ.ಎಸ್. ನಾಗಾಭರಣ ಹೇಳುತ್ತಾರೆ.

ಕಾರಂತರ ರಂಗಸಂಗೀತವನ್ನು ಪ್ರಚುರಪಡಿಸಲು 'ಬೆನಕ ಬ್ಯಾಂಡ್' ಕಟ್ಟಲಾಗಿದೆ. ಕಲ್ಪನಾ ನಾಗನಾಥ್, ವಾಸುಕಿ ವೈಭವ್ ಅವರ ಮಾರ್ಗದರ್ಶನದಲ್ಲಿ ಹೊಸಪೀಳಿಗೆಯವರು ಕಾರಂತರ ರಂಗಗೀತೆಗಳನ್ನು ಕಲಿತು ಹಾಡುತ್ತಾರೆ.

'ಬೆನಕ' ಎಂಬ ಆಲದಮರದ ನೆರಳಲ್ಲಿ ಬೆಳೆದವರು ನೂರಾರು ಮಂದಿ. ಆ ರಂಗಪಯಣ ಇಂದಿಗೂ ಮುಂದುವರಿಯುತ್ತಿದೆ. ಈಗ ಅದಕ್ಕೆ ಐವತ್ತು, ಮುಂದೆ ನೂರು ಆಗಲಿ.

ಕರ್ನಾಟಕ ಸಂಗೀತ ಲೋಕದ ಕನಸುಗಾರ

12ನೇ ಪುಟದಿಂದ...

ಇಂತಹ ಆಳವಾದ ಸಂಶೋಧನೆ ಮತ್ತು ಅಭಿರುಚಿ ಇದ್ದ ಕಾರಣಕ್ಕಾಗಿ ಸಂಗೀತ ಕ್ಷೇತ್ರದಲ್ಲಿ ಎದೆಯ ಧ್ವನಿಗಿಂತ ಮಿಗಿಲಾದ ರಾಗವಿಲ್ಲ ಎಂದು ನಂಬಿಕೊಂಡು ಬಂದವರು. ಅವರ 'ಸದರನ್ ಮ್ಯೂಸಿಕ್' ಎಂಬ ಕೃತಿಯು ಅವರ ಸಂಗೀತದ ಚಿಂತನೆಗಳಿಗೆ ಸಾಕ್ಷಿಯಾಗಿದೆ. ಅವರೊಳಗಿನ ಸಂಗೀತ ಪ್ರಜ್ಞೆಯು ಪ್ರಜಾಪ್ರಭುತ್ವ, ಸಂಸ್ಕೃತಿ ಮತ್ತು ಕಲಿಕೆಯ ಬಾಹ್ಯರೇಖೆಗಳನ್ನು ಅನ್ವೇಷಿಸುವಾಗ ಸಮಾಜದೊಳಗಿನ ಜಾತಿ, ವರ್ಗ ಮತ್ತು ಲಿಂಗದ ನಿರ್ಣಾಯಕ ಸಮಸ್ಯೆಗಳನ್ನು ಪರಿಹರಿಸುವ ಕುರಿತು ಪ್ರಮುಖ ಪ್ರಶ್ನೆಗಳನ್ನು ಎತ್ತುತ್ತದೆ. ಸಂಗೀತ ಕಾರ್ಯಕ್ರಮದಲ್ಲಿ ಹಾಡುಗಾರನ ಜೊತೆ ಪಕ್ಕ ವಾದ್ಯ ನುಡಿಸುವ ಕಲಾವಿದ ಕೂಡಾ ಮುಖ್ಯ ಎಂದು ನಂಬಿರುವ ಕೃಷ್ಣ ಅವರು, ಕರ್ನಾಟಕ ಸಂಗೀತದಲ್ಲಿ ಪ್ರಮುಖ ಪಕ್ಕ ವಾದ್ಯವಾದ ಮೃದಂಗದ ಬಗ್ಗೆ ಅಧ್ಯಯನ ಮಾಡಿದರು.

ಚರ್ಮದಿಂದ ತಯಾರು ಮಾಡುವ ಈ ವಾದ್ಯ ಪರಿಕರದ ಬೆನ್ನುಹತ್ತಿ ಚರ್ಮ ಹದ ಮಾಡುವವರು ಹಾಗೂ ಮೃದಂಗ ತಯಾರಕರನ್ನು ಭೇಟಿ ಮಾಡಿ ಇತ್ತೀಚೆಗೆ 'ಸೆಬಾಸ್ಟಿಯನ್ ಅಂಡ್ ಸನ್ಸ್, ಎ, ಬ್ರೀಫ್ ಹಿಸ್ಟರಿ ಆಫ್ ಮೃದಂಗಂ ಮೇಕರ್ಸ್' ಎಂಬ ಕೃತಿಯನ್ನೂ ರಚಿಸಿದ್ದಾರೆ. ಕೃಷ್ಣ ಅವರು ತೊಂಬತ್ತರ ದಶಕದ ಆರಂಭದಿಂದಲೂ ತಮ್ಮ ಕಲಾತ್ಮಕ ಕಾಳಜಿಯನ್ನು ಏಕಕಾಲದಲ್ಲಿ ವಿಸ್ತರಿಸುತ್ತಾ ತಮ್ಮ ಸಂಗೀತಕ್ಕೆ ಹೊಸ ಆಯಾಮಗಳನ್ನು ಮತ್ತು ಜಾಣ್ಮೆಯನ್ನು ಸೇರಿಸುತ್ತಿದ್ದಾರೆ. ಅವರ ಈ ಸಾಮಾಜಿಕ ಸೇವೆಗೆ 'ಕಲಾನಿಧಿ ಪ್ರಶಸ್ತಿ' ದೊರಕಿದ್ದು ಅವರ ನಂಬಿಕೆಗಳಿಗೆ ದೊರೆತ ಗೌರವ ಎನ್ನಬಹುದು.

ಮುನ್ನೋಟ 24-03-2024 ರಿಂದ -30-03-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಧರ್ಮಶ್ರದ್ಧೆ ಮತ್ತು ಹಿರಿಯರ ಮೇಲೆ ಗೌರವ ಹೆಚ್ಚುತ್ತದೆ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ನಿಮ್ಮದೇ ಆದ ಕೆಲವೊಂದು ನಡವಳಿಕೆಗಳು ನಿಮಗೆ ಸಮಸ್ಯೆಯನ್ನು ತರಬಹುದು. ಇಷ್ಟಪಟ್ಟ ಆಸ್ತಿಯನ್ನು ಕೊಳ್ಳಲು ಸಕಾಲ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶವಿರುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ನಿಮ್ಮ ಮೈಯೆಲ್ಲಾ ಕಣ್ಣಾಗಿರಲಿ, ಇಲ್ಲವಾದಲ್ಲಿ ಲಾಭದಲ್ಲಿ ಮೋಸವಾಗುವ ಸಾಧ್ಯತೆಗಳಿವೆ.

ವೃಷಭರಾಶಿ — ಕೃತಿಕಾ2 3 4 ರೋಹಿಣಿ, ಮೃಗಶಿರಾ1 2

ನಿಮ್ಮ ಪ್ರತಿ ಕೆಲಸದ ಒಳಿತು ಕೆಡುಕುಗಳನ್ನು ಲೆಕ್ಕ ಹಾಕುವಿರಿ. ವಾಗ್ಮಿಗಳಿಗೆ, ಚಿಂತಕರಿಗೆ ಉತ್ತಮ ವೇದಿಕೆ ದೊರೆಯುತ್ತದೆ. ವ್ಯವಹಾರಗಳ ಬಗ್ಗೆ ತಿಳಿವಳಿಕೆ ಕೊಡುವವರಿಗೆ ಹೆಚ್ಚು ಬೇಡಿಕೆ ಬರುತ್ತದೆ. ನಿಮ್ಮ ನಡವಳಿಕೆಯಲ್ಲಿ ಚುರುಕುತನವನ್ನು ಕಾಣಬಹುದು. ಸಂಸಾರದಲ್ಲಿ ಸಾಕಷ್ಟು ಸುಖ, ಸಂತೋಷ ಇರುತ್ತದೆ. ಮೂತ್ರ ಸಂಬಂಧಿ ಕಾಯಿಲೆಗಳಿರುವವರು ಮತ್ತು ಗರ್ಭಿಣಿಯರು ಎಚ್ಚರವಹಿಸಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಬುದ್ಧಿವಂತಿಕೆಯಿಂದ ಹಿರಿಯರ ಒಲವು ಗಳಿಸುವಿರಿ. ಉತ್ತಮವಾಗಿ ಮಾತನಾಡಿ ಎಲ್ಲರ ಬೆಂಬಲವನ್ನು ಪಡೆಯುವಿರಿ. ಆಸ್ತಿ ಕೊಳ್ಳುವ ವಿಚಾರದಲ್ಲಿ ಹೆಚ್ಚು ಆತುರ ಬೇಡ. ವಿದ್ಯಾರ್ಥಿಗಳಿಗೆ ಮಧ್ಯಮಗತಿಯ ಫಲಿತಾಂಶವಿರುತ್ತದೆ. ಶಸ್ತ್ರಚಿಕಿತ್ಸಕ ವೈದ್ಯರಿಗೆ ಹೆಚ್ಚುಬೇಡಿಕೆ ಬರುತ್ತದೆ. ಉಷ್ಣಪ್ರಕೃತಿ ದೇಹ ಇರುವವರು ಹೆಚ್ಚು ಎಚ್ಚರ ವಹಿಸಿ. ಸಂಗಾತಿಯಿಂದ ನಿಮಗೆ ಹೆಚ್ಚು ಧನಲಾಭವಾಗುವ ಸಾಧ್ಯತೆಗಳಿವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ವಾರದ ಆರಂಭ ಸಂತೋಷದಾಯಕವಾಗಿರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪಬಹುದು. ಉತ್ತಮವಾಗಿ ಮಾತನಾಡಿ ಜನ ಬೆಂಬಲ ಪಡೆಯುವಿರಿ. ನಿಮ್ಮ ಆಲಸಿ ನಡವಳಿಕೆ ನಿಮ್ಮ ಪ್ರಯತ್ನಗಳಿಗೆ ಅಡ್ಡಿಯಾಗಬಹುದು. ಆಸ್ತಿಯ ಮೇಲೆ ಹಣಹೂಡುವ ಮುಂಚೆ ಅದರ ಬಗ್ಗೆ ಸರಿಯಾಗಿ ತಿಳಿಯಿರಿ. ವೃತ್ತಿಯಲ್ಲಿ ಸ್ವಲ್ಪ ಗೊಂದಲಗಳಾಗಬಹುದು. ಪಿತ್ತ ಸಮಸ್ಯೆಯಿರುವವರು ಹೆಚ್ಚು ಎಚ್ಚರ ವಹಿಸಿ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಅಲಂಕಾರದ ಕಡೆಗೆ ಹೆಚ್ಚು ಗಮನ ಕೊಡುವಿರಿ. ಮಾತನಾಡುವಾಗ ಆಡಿದ ಸಣ್ಣ ಮಾತುಗಳು ನಿಮ್ಮ ಗೌರವವನ್ನು ಹಾಳುಮಾಡುತ್ತವೆ. ಹಿರಿಯರ ಆಸ್ತಿಯ ದಾಖಲೆಗಳಲ್ಲಿ ಆಗಿದ್ದ ವ್ಯತ್ಯಾಸಗಳನ್ನು ಸರಿಪಡಿಸಿಕೊಳ್ಳಲು ಪ್ರಯತ್ನಪಡುವಿರಿ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಹಣ ಖರ್ಚಾಗುತ್ತದೆ. ಮೂಳೆತಜ್ಞರಿಗೆ ಹೆಚ್ಚು ಬೇಡಿಕೆ ಬರುತ್ತದೆ. ಉದ್ಯೋಗದಲ್ಲಿದ್ದ ಗೊಂದಲಗಳು ದೂರವಾಗುತ್ತವೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಮಾಡಿದ ಕೆಲವು ಕೆಲಸಗಳ ಬಗ್ಗೆ ನಿಮಗೆ ಪಶ್ಚಾತಾಪ ಉಂಟಾಗುತ್ತದೆ. ಆದಾಯವು ಮಂದಗತಿಯಲ್ಲಿರುತ್ತದೆ. ನೀವಾಡಿದ ಕೆಲವು ಮಾತುಗಳೇ ನಿಮಗೆ ಮುಳುವಾಗುತ್ತವೆ. ಸಂಗಾತಿ ಕಡೆಯವರ ತೀವ್ರ ವಿರೋಧವನ್ನು ಎದುರಿಸಬೇಕಾಗಬಹುದು. ಕೆಲವರಿಗೆ ಅನಿವಾರ್ಯವಾಗಿ ಶಸ್ತ್ರಚಿಕಿತ್ಸೆ ಆಗುವ ಪರಿಸ್ಥಿತಿ ಇದೆ. ಸಂಗಾತಿಗೆ ಅವರ ಹಿರಿಯರು ಸಹಾಯ ಮಾಡುವರು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಅತಿಯಾದ ಆತ್ಮ ಗೌರವ ನಿಮ್ಮಲ್ಲಿ ಇರುತ್ತದೆ. ಆದಾಯವು ಚೇತರಿಕೆಯ ಹಾದಿಯಲ್ಲಿರುತ್ತದೆ. ನಿಮ್ಮೆಲ್ಲಾ ಕೆಲಸಕಾರ್ಯಗಳಿಗೆ ಸಂಗಾತಿಯ ಸಹಕಾರ ದೊರೆಯುತ್ತದೆ. ಆಸ್ತಿ ಮಾಡುವ ವಿಚಾರದಲ್ಲಿ ಬಹಳ ದ್ವಂದ್ವ ನಿರ್ಧಾರಗಳಿರುತ್ತವೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಕಣ್ಣಿನ ತೊಂದರೆ ಅಥವಾ ಚರ್ಮ ರೋಗಗಳಿರುವವರು ಹೆಚ್ಚುಎಚ್ಚರ ವಹಿಸಬೇಕಾಗಿದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಧರ್ಮ ಮತ್ತು ಸಂಪ್ರದಾಯದ ಬಗ್ಗೆ ಸಾಕಷ್ಟು ಆಸಕ್ತಿ ವಹಿಸುವಿರಿ. ಆದಾಯವು ಮಂದಗತಿಯಲ್ಲಿರುತ್ತದೆ. ಶತ್ರುಗಳ ತಂತ್ರಗಳನ್ನು ಅರ್ಥಮಾಡಿಕೊಂಡು ಅದಕ್ಕೆ ತಕ್ಕನಾದ ಪ್ರತ್ಯುತ್ತರ ನೀಡುವಿರಿ. ಕೃಷಿಯಿಂದ ಲಾಭವಿರುತ್ತದೆ. ಭೂಮಿಯನ್ನು ವ್ಯಾಪಾರ ಮಾಡಿಸುವವರಿಗೆ ಆದಾಯ ಹೆಚ್ಚುತ್ತದೆ. ಸಂಗಾತಿಯಿಂದ ನಿಮಗೆ ಬಳುವಳಿ ದೊರೆಯುವ ಸಾಧ್ಯತೆ ಇದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿದ್ದರೂ ಹಣದ ನಿರ್ವಹಣೆಯನ್ನು ಸರಿಯಾಗಿ ಮಾಡುವಿರಿ. ಶತ್ರುಗಳ ತಂತ್ರಕ್ಕೆ ಪ್ರತಿ ತಂತ್ರ ಹೂಡಿ ಅವರಿಗೆ ಅಚ್ಚರಿ ಮೂಡಿಸುವಿರಿ. ವಿದೇಶದಲ್ಲಿರುವವರು ತಮ್ಮ ಪ್ರದೇಶದಲ್ಲಿ ಸ್ಥಿರಾಸ್ತಿಯನ್ನು ಮಾಡಿಕೊಳ್ಳಬಹುದು. ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿದ ಯಶಸ್ಸು ಇರುತ್ತದೆ. ಬಂಧುಗಳಿಗಾಗಿ ಹಣ ಖರ್ಚು ಮಾಡುವಿರಿ. ಬಂಧುಗಳಿಗೆ ಯಾವುದೇ ರೀತಿಯ ಸಾಲ ಕೊಟ್ಟಲ್ಲಿ ವಾಪಸ್ಸು ಬರುವುದಿಲ್ಲ. ಸಂಗಾತಿಯಿಂದ ಸಂಸಾರ ನಿರ್ವಹಣೆ ಸುಲಭವಾಗಿ ಆಗುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಬಹಳ ದೃಢ ಮನಸ್ಸಿನಿಂದ ಕೆಲಸ ಕಾರ್ಯಗಳನ್ನು ಆರಂಭ ಮಾಡುವಿರಿ. ಆದಾಯವು ಸ್ವಲ್ಪ ಏರಿಕೆಯ ಹಾದಿಯಲ್ಲಿರುತ್ತದೆ. ಬಂಧುಗಳಲ್ಲಿ ಕೆಲವರು ನಿಮ್ಮನ್ನು ಓಲೈಸಿದರೆ, ಕೆಲವರು ವಿರೋಧಿಸುವರು. ಆಸ್ತಿಯನ್ನು ಖರೀದಿ ಮಾಡಲುಬೇಕಾದ ಹಣ ಒಟ್ಟು ಮಾಡುವ ಮಾರ್ಗ ದೊರೆಯುತ್ತದೆ. ವಿದ್ಯಾರ್ಥಿಗಳು ಅತಿ ಹೆಚ್ಚು ಶ್ರಮಹಾಕಿ ಫಲಿತಾಂಶ ಪಡೆಯುವ ಯೋಗವಿದೆ. ಕಣ್ಣಿನ ತೊಂದರೆ ಇರುವವರು ಅಥವಾ ತಲೆ ನೋವಿನಿಂದ ನರಳುತ್ತಿರುವವರು ಅದರ ಬಗ್ಗೆ ಸರಿಯಾಗಿ ಗಮನ ಹರಿಸಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಬಹಳ ತಾಳ್ಮೆಯಿಂದ ಇರುವುದು ಒಳ್ಳೆಯದು. ಹಿರಿಯರನ್ನು ನಿಂದಿಸಿದವರು ಬಂದು ಕ್ಷಮೆಯನ್ನು ಕೇಳುವ ಸಾಧ್ಯತೆಗಳಿವೆ. ಯುವಕರು ಮಾತಿನಲ್ಲಿ ಸ್ವಲ್ಪ ಎಚ್ಚರವಾಗಿರುವುದು ಬಹಳ ಒಳ್ಳೆಯದು. ಸರ್ಕಾರಿ ಸಹಾಯಧನಗಳು ಬಂದರೂ ಸಲ್ಪ ಗೊಂದಲಗಳು ಉಂಟಾಗಿ ನಂತರ ಕೈ ಸೇರುತ್ತದೆ. ಹಿರಿಯರಿಗೆ ಅವರ ಸಮಾಜದಿಂದ ಗೌರವ ದೊರೆಯಬಹುದು. ಆಸ್ತಿ ಸಂಬಂಧಿಸಿದ ವಿಚಾರದಲ್ಲಿ ಪ್ರಯತ್ನಗಳು ಬಹಳ ಮುಂದುವರೆಯುತ್ತವೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಸರ್ಕಾರಿ ಮಟ್ಟದ ವ್ಯವಹಾರಗಳಲ್ಲಿ ಸಾಕಷ್ಟು ಪ್ರಭಾವ ಬೀರುವಿರಿ. ಆದಾಯು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ಬಂಧುಗಳಲ್ಲಿ ನಿಮ್ಮ ಬಗ್ಗೆ ವಿಭಿನ್ನ ರೀತಿ ಅಭಿಪ್ರಾಯಗಳಿರುತ್ತವೆ. ಕಡಿಮೆ ದುಡ್ಡಿಗೆ ಆಸ್ತಿ ವಶಪಡಿಸಿಕೊಳ್ಳಲು ಸಾಕಷ್ಟು ಪ್ರಯತ್ನ ಪಡುವಿರಿ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಅಷ್ಟು ಯಶಸ್ಸು ಇರುವುದಿಲ್ಲ. ಸಂಗಾತಿಯ ಅತಿಧರ್ಮ ಆಚರಣೆ ನಿಮಗೆ ಬೇಸರ ಹುಟ್ಟಿಸುತ್ತದೆ.

ಪದಬಂಧ 2834



ಮೇಲಿನಿಂದ ಕೆಳಕ್ಕೆ

1. ನೆತ್ತರ ಕೊರತೆಯನ್ನು ಪೂರೈಸುವ ಮಹಾ ಕೊಡುಗೆ 4
2. ಕಣ್ಣಗಲಕ್ಕೆ ನೀರು ಹರಿಯುವ ನದಿಬದಿಯ ಪ್ರದೇಶ 5
3. ಈ ಸೇವಕಿಯ ಸ್ಥಾನ ಪಾದದ ಬಳಿ 5
4. ಅತಿಯಾದ ಸಿಟ್ಟು 4
7. ಆಸ್ತಿ ಪಾಸ್ತಿಯಲ್ಲಿ ಹಕ್ಕು ಪಡೆಯುವ ಉತ್ತರಾಧಿಕಾರಿ 5
9. ದೈನ್ಯತೆಯ ಸ್ಥಿತಿಯಲ್ಲಿರುವ ಶೋಷಿತ 5
11. ಅವ್ಯವಸ್ಥೆ, ಕೊಳೆ, ವಾಸನೆ 3
12. ವಾದ್ಯದ ಜೊತೆ ಮಂತ್ರ ಹೇಳುವ ತಮಿಳು ಪುರೋಹಿತರು 3
13. ಕಣ್ಣು ಮುಚ್ಚಿಕೊಂಡಿರುವ ನಮ್ಮ ನ್ಯಾಯವಿಧಿ 5
14. ಪದ್ಯವನ್ನು ಪ್ರೀತಿಸುವವ 5
15. ಜೇನಿನ ಸವಿಯನ್ನು ಉಣಬಡಿಸುವ ಶೃಂಗಾರಮಯ ತಿಂಗಳು 4
17. ಪದ್ಮಪ್ರಿಯನ ಆತ್ಮೀಯ ರೂಪ 4

ಎಡದಿಂದ ಬಲಕ್ಕೆ

1. ಸೂರ್ಯನ ಪ್ರಕಾಶವನ್ನು ಹೊಂದಿರುವವ 4
3. ಗಾಲಿಯ ಜೋಡಿಹಕ್ಕಿಯ ರಾಗವೇ ಇದು 4
5. ಹೊಸದಾದ ಒಂಭತ್ತು ಸುತ್ತಿನ ಮಂಡಲ 5
6. ಹೊಸಮನೆ ಒಂಭತ್ತನೆಯ ಮನೆಯೂ ಆಗುತ್ತದೆ 4
8. ಹಾದಿಗೆ ಬೆಳಕು ನೀಡುವ ಹಣತೆ 4
10. ಪಟ್ಟಣದ ಮೇಲೆ ಪ್ರೀತಿಯಿಟ್ಟು ಅಲ್ಲೇ ಜೀವನ ನಡೆಸುವವ 5
13. ಹೆದರುವ ಹೇಡಿ 5
15. ವೃಕ್ಷದಿಂದ ತೇದು ತೆಗೆದ ಪರಿಮಳದ ಪೂಸು 4
16. ಋತುರಾಜನ ನಾಮಾಂಕಿತ ಪಡೆದವ 4
18. ಬಯಕೆಯನ್ನು ಬೆಂಕಿಯಲ್ಲಿ ಸುಡುವ ಹಬ್ಬ 5
19. ಸಿಹಿ ಮಧುರ ಹನಿ 4
20. ಕಾಲದೇವ ಹಿಡಿದು ಹಾಕಿ ಎಳೆಯುವ ಹಗ್ಗ 4

ಪದಬಂಧ ಉತ್ತರ -2833

ಮೇಲಿಂದ ಕೆಳಕ್ಕೆ

1.ತೋಲಕ 2.ಪರಾಯ 3.ಕತ್ತಿಕಾಯಿ 4.ನವಭಾವ 7.ನೀರಾನೆ 8.ಬಳಸುಹಾದಿ 9.ಜೀವನಡೆ 10.ಮತದಾನ 12.ಹೆಗ್ಗಡೆ 13.ಮಾತೃಪ್ರೇಮ 14.ವರದಾನ 15.ಕರ್ಣಜ 16.ತುಳುವ

ಎಡದಿಂದ ಬಲಕ್ಕೆ

1.ತೋರುದೀಪ 3.ಕದನ 5.ರಾಕ್ಷಸಪ್ರವೃತ್ತಿ 6.ಕಮನೀಯ 8.ಬಡಪಾಯಿಜೀವ 10.ಮನೆಯಂಗಳ 11.ಹಾವಿನಹೆಡೆ 13.ಮಾನವತಾವಾದಿ 15.ಕಡೆಮಾತು 17.ದಾನಶೂರಕರ್ಣ 18.ಮನನ 19.ಜಯದೇವ

ಬಿಂಬಗಳ ಧ್ಯಾನ, ಮಾತಾಯಿತು ಮೌನ

ರಘುನಾಥ ಚ.ಹ.

ಗಿರೀಶ ಕಾಸರವಳ್ಳಿ

ಕನ್ನಡ ಸಿನಿಮಾ ಕಂಡ ಬಹುದೊಡ್ಡ ವಯ್ಯಾಕರಣಿ ಗಿರೀಶ ಕಾಸರವಳ್ಳಿ ಅವರ ಸಿನಿಮಾ ಜೀವನಕ್ಕೀಗ ಐವತ್ತು ವರ್ಷ. ಗಿರೀಶರ ಚೊಚ್ಚಿಲ ನಿರ್ದೇಶನದ 'ಘಟಶ್ರಾದ್ಧ' (1977) ಚಿತ್ರ ಐವತ್ತರ ಕ್ಲಬ್ ಪ್ರವೇಶಿಸಲು ಇನ್ನೂ ಎರಡು ವರ್ಷ ಬೇಕು. ಆದರೆ, 1975ರಲ್ಲಿ ತೆರೆಕಂಡ ಬಿ.ವಿ. ಕಾರಂತರ ನಿರ್ದೇಶನದ 'ಚೋಮನ ದುಡಿ' ಸಿನಿಮಾದಲ್ಲಿ, ಸಹ ನಿರ್ದೇಶಕರಾಗಿ ಕೆಲಸ ಮಾಡಿದ್ದನ್ನು ಲೆಕ್ಕಕ್ಕೆ ಹಿಡಿದರೆ, ಗಿರೀಶರ ಸಿನಿಮಾ ಜೀವನಚೈತ್ರಕ್ಕೀಗ ಐವತ್ತರ ಸಂಭ್ರಮ.

'ಚೋಮನ ದುಡಿ' ಸ್ವರ್ಣಕಮಲ ಪಡೆದ ಕಲಾಕೃತಿ. ಆ ಸ್ವರ್ಣ ಸಂಭ್ರಮ 'ಘಟಶ್ರಾದ್ಧ'ದಲ್ಲಿ, ನಂತರದ 'ತಬರನ ಕಥೆ', 'ತಾಯಿಸಾಹೇಬ', 'ದ್ವೀಪ' ಸಿನಿಮಾಗಳಲ್ಲಿ ಮುಂದುವರೆದುದು, ನಿರ್ದೇಶಕರಾಗಿ ಗಿರೀಶರ ಐವತ್ತು ವರ್ಷಗಳ ಸಾಧನೆಗೆ ಎಳೆದಿರುವ ಚಿನ್ನದ ಅಡಿಗೆರೆಯಂತಿದೆ.

ಗಿರೀಶರ ಸಿನಿಮಾಗಳ ವಿಶೇಷಗಳನ್ನು ಮೂರು ರೀತಿಗಳಲ್ಲಿ ಗುರ್ತಿಸಬಹುದು. ಮೊದಲನೆಯದು, ಕನ್ನಡ ಸಾಹಿತ್ಯದೊಂದಿಗೆ ಅವರು ನಡೆಸಿರುವ ಅನುಸಂಧಾನ. ಎರಡನೆಯದು, ಬಿಂಬವ್ಯಾಕರಣದೊಂದಿಗಿನ ಅನುಸಂಧಾನ. ಮೂರನೆಯದು, ಪರ್ಯಾಯ ಸಿನಿಮಾಸಕ್ತರಿಗೆ ಮೇಷ್ಟ್ರ ರೀತಿ ಒದಗಿಬಂದಿರುವಂತಹದ್ದು. 'ಬಣ್ಣದ ವೇಷ' ಹೊರತುಪಡಿಸಿದರೆ ಗಿರೀಶರ ಎಲ್ಲ ಸಿನಿಮಾಗಳು ಸಾಹಿತ್ಯಕೃತಿಗಳನ್ನು ಆಧರಿಸಿವೆ. ಇದರಿಂದಾಗಿ ಅವರ ಸಿನಿಮಾಗಳಿಗೆ ತಂತಾನೇ ಒಂದು ಪ್ರಾದೇಶಿಕ–ಕನ್ನಡ– ಆವರಣ ಒದಗಿದೆ. ಗಿರೀಶರ ಸಿನಿಮಾಗಳ ವಿಶೇಷ ಇರುವುದು, ಸಾಹಿತ್ಯಕೃತಿಗಳನ್ನು ಆಧರಿಸಿದ್ದರೂ ಕಥೆಯಲ್ಲಿ ನಿರ್ದೇಶಕರ ದೃಷ್ಟಿಕೋನವೂ ಮಿಳಿತಗೊಂಡಿರುವುದರಲ್ಲಿ. ನಿರ್ದೇಶಕರಾಗಿ ಗಿರೀಶರು ಕಥೆಗಳಲ್ಲಿ ನೆಚ್ಚಿಕೊಂಡಿರುವುದು ಘಟನೆಗಳನ್ನಲ್ಲ, ವಿವರಗಳನ್ನಲ್ಲ, ಹೊಳಹುಗಳನ್ನು. ಆ ಕಾರಣದಿಂದಾಗಿಯೇ ಅವರ ಸಿನಿಮಾಗಳು ಸಾಹಿತ್ಯಕೃತಿಗಳ ಪ್ರತಿಬಿಂಬಗಳಾಗದೆ ಗತಿಬಿಂಬಗಳಾಗಿವೆ; ಅವುಗಳನ್ನು ಸ್ವತಂತ್ರ ಕಥನಗಳ ರೂಪದಲ್ಲೂ ನೋಡಲಿಕ್ಕೆ ಸಾಧ್ಯವಿದೆ. ಮೂಲ ಕಥೆಗೆ ಸಿನಿಮಾ ನಿಷ್ಠವಾಗಿರಬೇಕು ಎನ್ನುವ ನಂಬಿಕೆಯನ್ನು ಗಿರೀಶರಂತೆ ಮುರಿದ, ಕಥೆಯನ್ನು ಪುನರ್ ರೂಪಿಸಿದ ಉದಾಹರಣೆಗಳು ಕನ್ನಡದಲ್ಲಿ ಇಲ್ಲವೇ ಇಲ್ಲವೆನ್ನುವಷ್ಟು ವಿರಳ.

ಸಂಭ್ರಮ

ಪರ್ಯಾಯ ಸಿನಿಮಾಗಳ ಹೆಸರಿನಲ್ಲಿ ತೆರೆಕಂಡಿರುವ ಕನ್ನಡದ ಬಹುತೇಕ ಸಿನಿಮಾಗಳು ಆಶಯಪ್ರಧಾನವಾದವು. ಸಾಹಿತ್ಯದಲ್ಲಿನ ಧ್ವನಿಯನ್ನು ಬಿಂಬವಾಗಿಯೂ ದಕ್ಕಿಸಿಕೊಂಡಿರುವ ಉದಾಹರಣೆಗಳು ವಿರಳ. ಗಿರೀಶರು ಭಿನ್ನವೆನ್ನಿಸುವುದು ಇಲ್ಲಿಯೇ. 'ಘಟಶ್ರಾದ್ಧ' ಸಿನಿಮಾದಲ್ಲೇ ಬಿಂಬಗಳನ್ನು ಕಾವ್ಯದ ತೀವ್ರತೆಯಲ್ಲಿ ಕಟ್ಟುವ ಕಸುಬುದಾರಿಕೆಯನ್ನು ಪ್ರಕಟಪಡಿಸಿದ ಅವರು, ನಂತರದ ಪ್ರತಿ ಸಿನಿಮಾಗಳಲ್ಲೂ ದೃಶ್ಯದ ಧ್ವನಿಶಕ್ತಿಯ ಸಾಧ್ಯತೆಗಳನ್ನು ಹುಡುಕುತ್ತಲೇ ಇದ್ದಾರೆ. ಗಿರೀಶರ ವೃತ್ತಿಜೀವನದ ಉತ್ತರಾರ್ಧದ 'ತಾಯಿಸಾಹೇಬ', 'ದ್ವೀಪ', 'ಹಸೀನಾ', 'ಗುಲಾಬಿ ಟಾಕೀಸ್', 'ಕನಸೆಂಬೊ ಕುದುರೆಯನೇರಿ', 'ಕೂರ್ಮಾವತಾರ' – ಪ್ರತಿ ಚಿತ್ರವೂ ಬಿಂಬಗಳ ಕಾಣ್ಕೆಯಲ್ಲಿ ಭಿನ್ನ ಪ್ರಯೋಗಗಳೇ ಆಗಿವೆ.

ಗಿರೀಶ ಕಾಸರವಳ್ಳಿಯವರ ಮತ್ತೊಂದು ವಿಶೇಷ, ಅವರಲ್ಲಿನ ಮೇಷ್ಟ್ರುತನ. ಸಿನಿಮಾ ತಜ್ಞರೊಂದಿಗೆ ಮಾತನಾಡುವಷ್ಟೇ ತೀವ್ರತೆಯಿಂದ ಸಿನಿಮಾ ವ್ಯಾಕರಣ ಗೊತ್ತಿಲ್ಲದ ಎಳೆಯರೊಂದಿಗೂ ಅವರು ಮಾತನಾಡಬಲ್ಲರು, ತಮ್ಮ ಯೋಚನೆಗಳನ್ನು ಹಂಚಿಕೊಳ್ಳಬಲ್ಲರು. ಕನ್ನಡ ಮಾತ್ರವಲ್ಲ, ಭಾರತೀಯ ಭಾಷೆಗಳಲ್ಲಿನ ಹೊಸ ತಲೆಮಾರಿನ ಸಿನಿಮಾ ವಿದ್ಯಾರ್ಥಿಗಳಿಗೆ ಅವರು ಮೇಷ್ಟ್ರು ರೂಪದಲ್ಲಿ ಸಲಹೆ–ಸೂಚನೆ ನೀಡುವುದಿದೆ; ಪರ್ಯಾಯ ಸಿನಿಮಾಗಳನ್ನು ರೂಪಿಸುವ ಪ್ರತಿಭೆಗಳಿಗೆ ಸ್ಫೂರ್ತಿಯಾಗಿ ಪರಿಣಮಿಸಿರುವುದಿದೆ.

'ಚೋಮನ ದುಡಿ'ಯ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದ ಗಿರೀಶ ಕಾಸರವಳ್ಳಿ ಅವರ ವೃತ್ತಿಜೀವನ ಐವತ್ತು ವರ್ಷಗಳ ಹೊಸ್ತಿಲಲ್ಲಿರುವ ಸಂದರ್ಭದಲ್ಲಿದೆಯಷ್ಟೇ; ಈ ಸಂದರ್ಭದಲ್ಲಿ ಎರಡು ಕಾರಣಗಳಿಗಾಗಿ ಅವರು ಸುದ್ದಿಯಲ್ಲಿದ್ದಾರೆ. ಒಂದು, 'ಘಟಶ್ರಾದ್ಧ' ಸಿನಿಮಾ ಮತ್ತೊಮ್ಮೆ ಅಂತರರಾಷ್ಟ್ರೀಯ ಗಮನಸೆಳೆದಿರುವುದು. ಮತ್ತೊಂದು 'ಬಿಂಬ ಬಿಂಬನ' ಕೃತಿಯ ಮೂಲಕ ಗಿರೀಶರು ತಮ್ಮ ಸಿನಿಮಾಗಳ ಮೀಮಾಂಸೆಯನ್ನು ಬರವಣಿಗೆಯಲ್ಲಿ ದಾಖಲಿಸಿರುವುದು.

ಬಿಂಬ ಬಿಂಬನ

ಗಿರೀಶ ಕಾಸರವಳ್ಳಿಯವರ ನಿರ್ದೇಶನದ ಚಿತ್ರಗಳ ಸಂಕಥನದ ಸಂಕಲನ – 'ಬಿಂಬ ಬಿಂಬನ.' 'ಅವಶೇಷ'ನಿಂದ 'ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ'ಯವರೆಗಿನ ಹದಿನಾರು ಸಿನಿಮಾಗಳ ಬಿಂಬ ಮೀಮಾಂಸೆಯ ಕುರಿತ ಗಿರೀಶರ ಬರವಣಿಗೆ ಈ ಕೃತಿಯಲ್ಲಿದೆ. ಪ್ರಶ್ನೋತ್ತರ ಮಾದರಿಯ ಈ ಕೃತಿಯಲ್ಲಿ, ಗಿರೀಶರ ವಿಚಾರಗಳಿಗೆ ನೆಪವಾಗಿ ಕಾದಂಬರಿಕಾರ ಗೋಪಾಲಕೃಷ್ಣ ಪೈ ಅವರ ಪ್ರಶ್ನೆಗಳಿವೆ. 'ವೀರಲೋಕ' ಪ್ರಕಾಶನ ಪ್ರಕಟಿಸಿರುವ 'ಬಿಂಬ ಬಿಂಬನ' ಇಂದು ಬೆಂಗಳೂರಿನಲ್ಲಿ ಬಿಡುಗಡೆಯಾಗುತ್ತಿದೆ.

ಚಲನಚಿತ್ರ ಪರಿಷ್ಕರಣೆ ಮತ್ತು ಪುನಶ್ಚೇತನ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಹಾಲಿವುಡ್‌ನ ನಿರ್ದೇಶಕ ಮಾರ್ಟಿನ್ ಸ್ಕಾರ್ಸೆಸಿ ಅವರ ಸಿನಿಮಾ ಪ್ರತಿಷ್ಠಾನದ 'ವರ್ಲ್ಡ್ ಸಿನಿಮಾ ಪ್ರಾಜೆಕ್ಟ್' ಹಾಗೂ 'ಸ್ಟಾರ್ ವಾರ್ಸ್' ಸರಣಿಯ ನಿರ್ದೇಶಕ ಜಾರ್ಜ್ ಲ್ಯುಕಾಸ್ ಅವರ 'ಹ್ಯಾಬ್ರನ್–ಲ್ಯುಕಾಸ್ ಫೌಂಡೇಶನ್' ಗಿರೀಶರ 'ಘಟಶ್ರಾದ್ಧ' ಚಿತ್ರದ ಸಂರಕ್ಷಣೆ, ಪುನಶ್ಚೇತನಕ್ಕೆ ಮುಂದಾಗಿವೆ. ಭಾರತೀಯ ಸಿನಿಮಾವೊಂದಕ್ಕೆ ಸಂದಿರುವ ಈ ಗೌರವ ಕನ್ನಡಕ್ಕೆ ಸಂದಿರುವ ಮನ್ನಣೆಯೂ ಹೌದು. 'ಘಟಶ್ರಾದ್ಧ' ಸಿನಿಮಾ ರಾಷ್ಟ್ರೀಯ–ಅಂತರರಾಷ್ಟ್ರೀಯ ಗಮನಸೆಳೆದಿರುವುದು ಇದು ಮೊದಲೇನಲ್ಲ. 2002ರಲ್ಲಿ, 'ನ್ಯಾಷನಲ್ ಆರ್ಕೈವ್ಸ್ ಆಫ್ ಪ್ಯಾರಿಸ್'ಗೆ ಆಯ್ಕೆಯಾದ ಏಕೈಕ ಭಾರತೀಯ ಸಿನಿಮಾ ಎನ್ನುವ ಹೆಗ್ಗಳಿಕೆಗೆ 'ಘಟಶ್ರಾದ್ಧ' ಪಾತ್ರವಾಗಿತ್ತು; ವಿಶ್ವ ಸಿನಿಮಾಕ್ಕೆ ನೂರು ವರ್ಷಗಳು ಸಂದರ್ಭದಲ್ಲಿ ಆರಿಸಿಕೊಂಡ ನೂರು ಸಿನಿಮಾಗಳಲ್ಲಿ ಗಿರೀಶರ ಚಿತ್ರವೂ ಸೇರಿತ್ತು. 2009ರಲ್ಲಿ, ಗೋವಾದಲ್ಲಿ ನಡೆದ 'ಇಂಟರ್‌ನ್ಯಾಷನಲ್ ಫಿಲ್ಮ್ ಫೆಸ್ಟಿವಲ್ ಆಫ್ ಇಂಡಿಯಾ'ದಲ್ಲಿ ಘೋಷಣೆಗೊಂಡ ಭಾರತದ ಅತ್ಯುತ್ತಮ 20 ಚಿತ್ರಗಳ ಪಟ್ಟಿಯಲ್ಲಿ 'ಘಟಶ್ರಾದ್ಧ'ಕ್ಕೆ ಸ್ಥಾನ ದೊರೆತಿತ್ತು. ಈಗ, 'ಹ್ಯಾಬ್ರನ್–ಲ್ಯುಕಾಸ್ ಫೌಂಡೇಶನ್' ಗೌರವದ ಸಮಯ.

'ಘಟಶ್ರಾದ್ಧ' ಅಂತರರಾಷ್ಟ್ರೀಯ ಗಮನಸೆಳೆದಿರುವ ಸಂದರ್ಭದಲ್ಲೇ ಗಿರೀಶರ 'ಬಿಂಬ ಬಿಂಬನ' ಕೃತಿ ಪ್ರಕಟಗೊಳ್ಳುತ್ತಿದೆ. ಈ ಕೃತಿ, ಐದು ದಶಕಗಳ ಗಿರೀಶರ ವೃತ್ತಿಜೀವನದ ಸಿನಿಮಾಮೀಮಾಂಸೆಯ ಸಂಕಲನ. ಸಾಹಿತಿಗಳು ಸಾಹಿತ್ಯಮೀಮಾಂಸೆ, ಕಾವ್ಯಮೀಮಾಂಸೆ ಬರೆಯುವುದು ರೂಢಿ. 'ಬಿಂಬ ಬಿಂಬನ' ಮೂಲಕ ಸಿನಿಮಾಮೀಮಾಂಸೆಯೊಂದು ಕನ್ನಡದಲ್ಲಿ ರೂಪುಗೊಂಡಿದೆ. ನಿರ್ದೇಶಕರೊಬ್ಬರು ತಮ್ಮ ಸಿನಿಮಾಗಳ ಕಟ್ಟೋಣ ಮತ್ತು ಬಿಂಬ ವ್ಯಾಕರಣದ ಕುರಿತು ದಾಖಲಿಸಿರುವ ಇಂಥ ಕೃತಿ ಭಾರತೀಯ ಭಾಷೆಗಳಲ್ಲೂ ಇದ್ದಂತಿಲ್ಲ.

ಕನ್ನಡ ವಾಕ್ಚಿತ್ರ ಪರಂಪರೆಗೆ ತೊಂಬತ್ತು ವರ್ಷಗಳು ತುಂಬಿರುವ ಸಂದರ್ಭದಲ್ಲಿ ಪ್ರಕಟಗೊಂಡಿರುವ 'ಬಿಂಬ ಬಿಂಬನ' ಸಿನಿಮಾ ಮತ್ತು ಸಾಹಿತ್ಯದ ವಿದ್ಯಾರ್ಥಿಗಳಿಗೆ ಕುತೂಹಲ ಹುಟ್ಟಿಸುವಂತಹದ್ದು. ಸಿನಿಮಾ ಪಠ್ಯಕ್ರಮದ ಭಾಗವಾಗಬೇಕು ಎನ್ನುವ ಒತ್ತಾಯಗಳು ವ್ಯಾಪಕವಾಗುತ್ತಿರುವ ಸಂದರ್ಭದಲ್ಲಿ, 'ಬಿಂಬ ಬಿಂಬನ' ಪ್ರಕಟಗೊಂಡಿದೆ. ಚಲನಚಿತ್ರ ವ್ಯಾಕರಣದ ಪಠ್ಯದ ರೂಪದಲ್ಲಿ ಮಾತ್ರವಲ್ಲದೆ, ಸಾಂಸ್ಕೃತಿಕ ಸಂಕಥನದ ರೂಪದಲ್ಲೂ ನೋಡಬಹುದಾದ ಈ ಕೃತಿ, ಸಿನಿಮಾಗಳಲ್ಲಿನ ಧ್ವನಿಶಕ್ತಿ ಹಾಗೂ ಬಿಂಬದ ಹಿಂದಿರಬಹುದಾದ ಸಾಧ್ಯತೆಗಳನ್ನು ಅರಿಯಲು ನೆರವಾಗುವ ಕೀಲಿಕೈಗಳ ಗೊಂಚಲಿನಂತಿದೆ.

ಮೊದಲ ಓದು

ಪ್ರಶ್ನೆಗಳನ್ನು ಹುಟ್ಟುಹಾಕುವ ಕೃತಿ


ಪು: 200
₹200

ಹೈವೇ 63
ಲೇ: ಸುನಂದಾ ಕಡಮೆ
ಪ್ರ: ಆಕೃತಿ ಪುಸ್ತಕ
ಸಂ: 080 23409479

ಈ ಕಾದಂಬರಿಯಲ್ಲಿ ಕಾಡು ಒಂದು ಪಾತ್ರ. ಕಾಡ್ಗಿಚ್ಚು ಒಂದು ಸನ್ನಿವೇಶ. ಆದರೆ ಆ ಕಾಡ್ಗಿಚ್ಚಿನ ತಾಪ ಪುಸ್ತಕದ ಉದ್ದಕ್ಕೂ ಸೋಕುತ್ತಲೇ ಇರುತ್ತದೆ. ಪ್ರೀತಿ–ಪ್ರತಿಕಾರ, ಪ್ರೇಮ–ಕಾಮ, ಸಾಂಗತ್ಯ–ಒಂಟಿತನ, ನೈತಿಕ ಮತ್ತು ಅನೈತಿಕಗಳ ಕಾವು ಆತ್ಮಕ್ಕೆ ತಾಕುತ್ತಲೇ ಇರುತ್ತದೆ.

ಬೆಟ್ಟ–ಕಾಡುಗಳ ನಡುವಿನ ಹೆಬ್ಬಾವಿನಂತೆ ಬಿದ್ದಿರುವ ಹೆದ್ದಾರಿ ಬದಿಯ ಧಾಬಾ ಕಾದಂಬರಿಯ ಕೇಂದ್ರಬಿಂದು. ಕಾಡನ್ನು ಅವಲಂಬಿಸಿದವರು, ಕಾಡಿನ ರಕ್ಷಣೆಗೆ ಹೋರಾಡುವವರು, ಹೋರಾಡಿದಂತೆ ಮಾಡುವವರು, ಆಶಾ ಕಾರ್ಯಕರ್ತೆ ನಳಿನಿ, ಪ್ರೇಮವನ್ನರಸಿ ಹೋದ ನಂದಿನಿ, ಪೆಟ್ಟಿಗೆ ಅಂಗಡಿಯ ಗಾಂವ್ಕಾರ್ ಕುಟುಂಬ. ಹೆಂಡತಿ ಅಗಲಿದಳೆಂದು ಕಣ್ಣೀರಾಗುವ ಕೇಣಿ ಅವರು, ಮಗ ಮನೆಗೆ ಮರಳಿದನೆಂದು ಸಮಾಧಾನಪಡಬೇಕು, ಮಗಳು ಮನೆ ಬಿಟ್ಟಳೆಂದು ದುಃಖಿಸಬೇಕೋ ಎಂಬ ಗೊಂದಲದಲ್ಲಿರುವಾಗಲೇ, ಬದುಕು ಮತ್ತೆ ಮಗ್ಗುಲು ಬದಲಿಸುತ್ತದೆ. ಮಗ ಮತ್ತೆ ಜೈಲು ಪಾಲಾಗುತ್ತಾನೆ. ಲಾರಿಗಳಿಂದಲೇ ಕಳ್ಳಸಾಗಣೆ ಮಾಡುವ ಮಂಜುನಾಥ, ನಂದಿನಿಯ ಪ್ರಿಯಕರ ವೆಂಕಟ್ ಆಚಾರಿ.. ಹೀಗೆ ಕೆಲವೇ ಪಾತ್ರಗಳಾದರೂ ಉತ್ತರ ಕನ್ನಡ ಜಿಲ್ಲೆಯ ತಳಮಳಗಳನ್ನೆಲ್ಲ ಕಾದಂಬರಿ ಒಂದೆಡೆ ಹೆಣೆದಿಡುತ್ತದೆ. ಈ ಯುಗದ ತಲ್ಲಣಗಳು, ಹಿರಿಯ ಜೀವದ ತವಕ, ಯತಾರ್ಥ ಜೀವಗಳು, ಅತ್ಯಾಸೆಯ ಮನುಷ್ಯರು–ಹೀಗೆ ಎಲ್ಲವನ್ನೂ ಒಂದೊಂದೇ ಎಳೆಯಾಗಿ ಬಿಡಿಸುತ್ತಲೇ ನಮ್ಮೊಳಗಿನ ಸಣ್ಣತನವನ್ನೂ, ಇರಬೇಕಾಗಿರುವ ಧಾರಾಳಿತನವನ್ನೂ ಲೇಖಕಿ ಸುನಂದಾ ಕಡಮೆ ಹೇಳುತ್ತ ಹೋಗುತ್ತಾರೆ.

ಪುಸ್ತಕ ಓದಿ ಮುಗಿಸಿದಾಗ ಕಥಾನಾಯಕ ವಿನಾಯಕನಿಗೇನಾಯಿತು? ನಂದಿನಿ ತನ್ನ ಪ್ರೇಮವನ್ನೇ ಸ್ಪಷ್ಟವಾಗಿ ತಿರಸ್ಕರಿಸುತ್ತಾಳೆಯೇ? ನಳಿನಿ ಮತ್ತು ವಿನಾಯಕನ ಪ್ರೇಮಕಥೆ ಏನಾಯಿತು? ಇನ್ನೊಂದು ಭಾಗ ಬರಲಿದೆಯೇ ಎಂಬ ನಿರೀಕ್ಷೆಯೊಡನೆ ಓದನ್ನು ಮುಗಿಸುತ್ತೇವೆ. ಕತೆಯೊಂದು ಓದಿನ ಉದ್ದಕ್ಕೂ ಪ್ರಶ್ನೆಗಳನ್ನು ಹುಟ್ಟಿಸುತ್ತ, ನಮ್ಮೊಳಗೆ ಜಿಜ್ಞಾಸೆಯನ್ನೂ ತಂದಿಡುವ ಕಥನಕಾರ್ಯ ಇಲ್ಲಿ ಕಸೂತಿಯಷ್ಟೇ ನಾಜೂಕಾಗಿದೆ.

ಭ್ರಷ್ಟಾಚಾರದ ಹಲವು ಮುಖಗಳು


ಪು: 637
₹695

ಬೆಂಗಳೂರಿನ ಭೂಮಾಫಿಯಾ ಭ್ರಷ್ಟಾಚಾರದ ಚಕ್ರವ್ಯೂಹ
ಲೇ: ಶಂಕರ ಕೆ. ಪ್ರಸಾದ್ ಮತ್ತು ನೆತ್ರಕೆರೆ ಉದಯಶಂಕರ
ಪ್ರ: ಸಂಪೂರ್ಣ ಸ್ವರಾಜ್ ಫೌಂಡೇಶನ್
ಸಂ: 98450 49970

ಬೆಂಗಳೂರಿನ ರಾಜರಾಜೇಶ್ವರಿ ನಗರದ ಸಚ್ಚಿದಾನಂದ ನಗರದಲ್ಲಿ ಖಾತೆಗಾಗಿ ನಡೆದ 'ಸಚ್ಚಿದಾನಂದ ನಗರ ನ್ಯಾಯಪರ ಆಂದೋಲನ'ದ ಹೋರಾಟದ ಮೂಲಕ ಹುಟ್ಟು ಪಡೆದಿದ್ದೇ 'ಬೆಂಗಳೂರಿನ ಭೂಮಾಫಿಯಾ, ಭ್ರಷ್ಟಾಚಾರದ ಚಕ್ರವ್ಯೂಹ– ಗಾಂಧಿಗಿರಿ, ತಂತ್ರಜ್ಞಾನ, ನ್ಯಾಯಕ್ಕಾಗಿ ಅಸ್ತ್ರ' ಎಂಬ ಪುಸ್ತಕ.

ಕಾನ್ಪುರ ಐಐಟಿಯಿಂದ ಎಂ.ಟೆಕ್ ಪದವಿ ಪಡೆದು, ಸ್ಟೇಟ್ ಯೂನಿವರ್ಸಿಟಿ ಆಫ್ ನ್ಯೂಯಾರ್ಕ್ ಸ್ಟೋನಿ ಬ್ರೂಕ್‌ನಿಂದ ಪಿ.ಎಚ್‌ಡಿ ಪದವಿ ಪಡೆದ ಡಾ. ಶಂಕರ ಕೆ. ಪ್ರಸಾದ್ ಅವರು ತಂತ್ರಾಂಶಗಳ ಅಭಿವೃದ್ಧಿಯ ಜತೆಗೆ, ಸಂಪೂರ್ಣ ಸ್ವರಾಜ್ ಪ್ರತಿಷ್ಠಾನದ ಸಂಸ್ಥಾಪಕರೂ ಹೌದು. 'ಪ್ರಜಾವಾಣಿ' ಪತ್ರಿಕೆಯನ್ನೂ ಒಳಗೊಂಡು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ನಾಲ್ಕು ದಶಕಗಳ ಕೆಲಸ ಮಾಡಿದ ನೆತ್ರಕೆರೆ ಉದಯಶಂಕರ ಅವರು ಇವರೊಂದಿಗೆ ಜತೆಗೂಡಿ ಸಚ್ಚಿದಾನಂದ ನಗರ ನ್ಯಾಯಪರ ಆಂದೋಲನ ನಡೆಸಿದವರು.

ಕಷ್ಟಪಟ್ಟು ದುಡಿದ ಹಣದಲ್ಲಿ ಸ್ವಂತ ಸೂರು ಹೊಂದಬೇಕೆಂಬ ಹಲವರು ಬೆಂಗಳೂರಿನ ಭೂಮಾಫಿಯಾದ, ಅಧಿಕಾರಶಾಹಿಗಳ ಭ್ರಷ್ಟಾಚಾರದಂತಹ ಚಕ್ರವ್ಯೂಹಕ್ಕೆ ಸಿಲುಕಿ ನರಳಾಡುತ್ತಿರುವ ಸಂದರ್ಭದಲ್ಲಿ, ತಾವು ಎದುರಿಸಿ, ಜಯಿಸಿದ ಕಥೆಯನ್ನೇ ಅಕ್ಷರ ರೂಪಕ್ಕೆ ಇಳಿಸಲಾಗಿದೆ. ಸುಮಾರು 42 ವಿವಿಧ ಸನ್ನಿವೇಶಗಳಲ್ಲಿ ಎದುರಾದ ಸಮಸ್ಯೆ, ಅದನ್ನು ಪರಿಹರಿಸಲು ಕೈಗೊಂಡ ಕ್ರಮಗಳು, ಅಧಿಕಾರಿಗಳು ಹಾಗೂ ಇನ್ನಿತರ ಪ್ರಮುಖರ ನೆರವು, ಹೆಜ್ಜೆ ಹೆಜ್ಜೆಗೂ ಎದುರಾಗುವ ಮಾಫಿಯಾ, ಭ್ರಷ್ಟಾಚಾರ ಇತ್ಯಾದಿಗಳು ಈ ಕೃತಿಯಲ್ಲಿ ದಾಖಲಾಗಿವೆ.

ಬೆಂಗಳೂರಿಗೆ ಬಂದು ಬದುಕು ಕಂಡುಕೊಳ್ಳಲು ಪರದಾಡುತ್ತಿರುವ 'ಪ್ರಜೆ' ಎಂಬ ವ್ಯಕ್ತಿ ಇಲ್ಲಿ ಆಯಾ ಸಂದರ್ಭದಲ್ಲಿ ಪ್ರಶ್ನೆಗಳನ್ನು ಕೇಳುತ್ತಾ ಹೋಗುತ್ತಾರೆ. ಅದಕ್ಕೆ ತಮ್ಮ ಹೋರಾಟದಲ್ಲಿ ಎದುರಾದ ಸವಾಲು ಮತ್ತು ಕಂಡುಕೊಂಡ ಮಾರ್ಗೋಪಾಯಗಳ ಕುರಿತು ಶಂಕ್ರಣ್ಣ ಹಾಗೂ ಉದಯಣ್ಣ ಉತ್ತರ ನೀಡುತ್ತಾ, ಸಂಕೀರ್ಣವಾಗಿದ್ದನ್ನು ಸರಳಗೊಳಿಸುತ್ತಾ ಸಾಗುತ್ತಾರೆ. ಇಲ್ಲಿ ಇವರ ಮಾತುಗಳೇ ಪ್ರೇರಣೆ ನೀಡುತ್ತವೆ. ಅಂತಿಮವಾಗಿ ಡಿಜಿಟಲ್ ಮೂಲಕ ಸಾರ್ವಜನಿಕರು ಅಗತ್ಯ ಮಾಹಿತಿ ಪಡೆಯುವ ಅವಕಾಶವೊಂದನ್ನು ಲೇಖಕರು ಇಲ್ಲಿ ಒತ್ತಿ ಹೇಳಿದ್ದಾರೆ. ಕೃತಿಯಲ್ಲಿ 458 ಉಲ್ಲೇಖಗಳನ್ನು ಬಳಸಿದ್ದು, ಇದು ಅವರ ಹೋರಾಟದ ಹಾದಿಯಲ್ಲಿ ದೊರೆತ ನೈಜ ಮಾಹಿತಿಗಳಾಗಿವೆ.

ಅಘನಾಶಿನಿ ತಟದ ಕಥೆಗಳು

ಪು: 160
₹170

ಭರತದ ಮಧ್ಯಾಹ್ನ
ಲೇ: ಚಿಂತಾಮಣಿ ಕೊಡ್ಲೆಕೆರೆ
ಪ್ರ: ಅಂಕಿತ ಪುಸ್ತಕ
ಸಂ: 90191 90502

21 ಕಥೆಗಳ ಈ ಸಂಕಲನವು 'ಭರತದ ಮಧ್ಯಾಹ್ನ' ಎನ್ನುವ ವಿಶೇಷ ಶೀರ್ಷಿಕೆಯಿಂದಲೇ ಗಮನ ಸೆಳೆಯುತ್ತದೆ. ಸರಳ ಭಾಷೆ ಹಾಗೂ ಸಹಜ ಎನಿಸುವ ನಿರೂಪಣೆ ಕತೆಗಾರನ ಭಾವವನ್ನು ಓದುಗರ ಮನಸಿಗೆ ಸುಲಭವಾಗಿ ದಾಟಿಸುತ್ತದೆ. ಕತೆಗಾರ ಚಿಂತಾಮಣಿ ಕೊಡ್ಲೆಕೆರೆ ಹುಟ್ಟೂರು ಉತ್ತರ ಕನ್ನಡ ಜಿಲ್ಲೆಯ ಅಘನಾಶಿನಿಯಾಗಿದ್ದರಿಂದ, ಕತೆಗಳಲ್ಲಿ ಅಲ್ಲಿನ ಪರಿಸರ ಇಣುಕುತ್ತಿರುತ್ತವೆ.

ತಮ್ಮ ಅನುಭವಗಳನ್ನು, ಸಮಾಜದ ಪಾತ್ರಗಳ ಮೂಲಕ ಓದುಗರ ಮನಸ್ಸಿಗೆ ಧಾರೆ ಎರೆಯುವ ಕಲೆ ಕತೆಗಾರನ ಹೆಚ್ಚುಗಾರಿಗೆ. ಕುತೂಹಲ ಮೂಡಿಸುತ್ತಾ ಕಥಾಲೋಕವು ಓದುಗನನ್ನು ಆವರಿಸಿಕೊಂಡು, ನಡುವೆ ರೋಚಕ ಅನುಭವ ನೀಡುತ್ತಾ ಸಾಗುತ್ತಿದ್ದಾಗ ಕೊನೆಗೆ ವಿಷಾದ ಭಾವ ಮೂಡುಸುತ್ತದೋ ಅಥವಾ ಸಂತಸದ ಹೊನಲು ಹರಿಸುತ್ತದೋ ಎಂಬುದು ಈ ಗುಚ್ಛದಲ್ಲಿನ ಗುಟ್ಟು. ಭಕ್ತಿ–ಶ್ರದ್ಧೆ, ತಮಾಷೆ–ವಾಸ್ತವ, ಸಿಟ್ಟು–ಸಮಾಧಾನ ಮುಂತಾದವುಗಳ ಅನುಸಂಧಾನ ಕತೆಗಳಲ್ಲಿ ಇದ್ದು, ಓದುಗರಿಗೆ ವಿಶೇಷ ಭಾವವನ್ನು ಮೂಡಿಸುತ್ತದೆ. ನಮ್ಮದೇ ಕಥೆಗಳಿವು ಅನಿಸುತ್ತದೆ. ಸರಳ ಸಂದೇಶವನ್ನು ಪರಿಣಾಮಕಾರಿಯಾಗಿ ಹೇಳುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಕತೆಗಳಲ್ಲಿನ ಪಾತ್ರಗಳು ನಮ್ಮ ಜೀವನದಲ್ಲಿ ಆಗಾಗ ಎದುರುಗೊಂಡವರಂತೆ ಅನಿಸುತ್ತದೆ. ಮನುಷ್ಯನ ಮನಸಿನ ತಳಮಳ, ಜಿಜ್ಞಾಸೆ, ಕುತೂಹಲ, ವಿಷಾದ, ಭಾವುಕತೆ, ತುಮುಲ, ಸಂತೋಷ ಮುಂತಾದ ಭಾವವಗಳನ್ನು ಕತೆಗಾರ ಸರಳವಾಗಿ ಹೇಳಿದ್ದಾರೆ. ಆಧ್ಯಾತ್ಮಿಕ-ಲೌಕಿಕವನ್ನು ಸ್ಪರ್ಶಿಸುವ ಸಾಹಸವನ್ನೂ ಲೇಖಕರು ಮಾಡಿದ್ದಾರೆ. ಆರೋಗ್ಯಕರ ಬದುಕಿಗೆ ಬೇಕಾದ ಮೌಲ್ಯಗಳನ್ನೂ ಕತೆಗಳಲ್ಲಿ ಲೇಖಕರು ಸಾರಿದ್ದಾರೆ. ಕತೆಗಳ ಪಾತ್ರಗಳು ತುಂಬಾ ಹೊತ್ತಿನವರೆಗೂ ಕಾಡುತ್ತವೆ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಬಂಧುಲೂನ

ಲೂನ(ನಾ).ಕತ್ತರಿಸಿದುದು; ತುಂಡುಮಾಡಿದ್ದು.

ಕುವೆಂಪು ಅವರು ತನ್ನ ತಂದೆ ತಾಯಿ ತೀರಿಹೋಗಿ, ಇಬ್ಬರು ತಂಗಿಯರು ಮರಣಹೊಂದಿ ತಾವೊಬ್ಬರೆ ಆಗಿ ಉಳಿದಿರುವುದನ್ನು ನೆನೆದು ನೊಂದಾಗ ಬರೆದ ಕವನ 'ಬಂಧುಲೂನ'. ಅವರು ತಾನು ಏಕಾಂಗಿಯಾಗಿ ದುಃಖದೀನ, ಶೋಕಲೀನ, ಹೃದಯಹೀನ, ಬಂಧುಲೂನ ಆಗಿರುವುದಕ್ಕೆ ವ್ಯಥೆಪಟ್ಟಿದ್ದಾರೆ. ತನ್ನನ್ನು ಕರುಣೆಯಿಂದ ಆಶೀರ್ವದಿಸಿ ಎಂದು ಕ್ರಮವಾಗಿ ತಂದೆ ದಾಶರಥಿ, ತಾಯಿ ಮೈಥಿಲಿ, ವೀರ ಮಾರುತಿ ಮತ್ತು ಧೀರ ಸೌಮಿತ್ರಿಯನ್ನು ಪ್ರಾರ್ಥಿಸಿದ್ದಾರೆ. ಹೀಗೆ ಪ್ರಾರ್ಥಿಸುವಾಗ ವಿಶಿಷ್ಟ ಪದ 'ಬಂಧುಲೂನ' ಸೃಷ್ಟಿಸಿ ಬಂಧುಗಳಿಂದ ತುಂಡರಿಸಿದವನು ತಾನು ಎಂದು ವ್ಯಥೆಪಟ್ಟಿದ್ದಾರೆ.

ಶ್ರೀತಂತ್ರ

ಕುವೆಂಪು ಅವರು ದೇಶದ ಗಣರಾಜ್ಯೋತ್ಸವದ ಘೋಷಣೆ (26-01-1950) ಯಂದು ರಚಿಸಿದ ಕವನ –'ಶ್ರೀಸಾಮಾನ್ಯ'ರ ದೀಕ್ಷಾಗೀತೆ. ಅದರಲ್ಲಿ ಅವರು ಗಣತಂತ್ರ ವ್ಯವಸ್ಥೆಯ ಸರಾಗ ನಡೆಗೆ ಮಹಾತ್ಮಗಾಂಧಿಯವರ 'ಸರ್ವೋದಯವೇ ಸ್ವಾತಂತ್ರ್ಯದ ಶ್ರೀತಂತ್ರ' ಎಂದು ಮಂತ್ರದ ರೀತಿ ಘೋಷಿಸಿದ್ದಾರೆ. ಸ್ವತಂತ್ರ ಗಣರಾಜ್ಯದ ಆಳ್ವಿಕೆಯ ಶ್ರೀ ಲಕ್ಷಣವಾದ ಕೀರ್ತಿ, ಪ್ರಭೆ, ಸಂಪದಭಿವೃದ್ಧಿಯನ್ನು ಆಗು ಮಾಡುವ 'ತಂತ್ರ' ಅರ್ಥಾತ್ ಪ್ರಯೋಗ ವಿಧಾನ, ಆಡಳಿತ ಸೂಕ್ಷ್ಮತೆ ಎಂಬ ಅರ್ಥವನ್ನು 'ಶ್ರೀತಂತ್ರ' ಹೊಂದಿದೆ. ಈ ಎಲ್ಲ ಅರ್ಥ ಒಳಗೊಂಡಂತೆ ಕುವೆಂಪು ಈ ಪದ ಪ್ರಯೋಗಿಸಿದ್ದಾರೆ.

'ಸರ್ವೋದಯ ಯುಗಮಂತ್ರ!
ಸರ್ವೋದಯವೇ ಸ್ವಾತಂತ್ರ್ಯದ ಶ್ರೀತಂತ್ರ!'

ಮನ್ಮಥನಿಗೆ ವರುಷಕೊಂದು ಹೊಸತು ಜನ್ಮ

ಹೋಳಿ ಸಂಭ್ರಮದಲ್ಲಿ ಡೊಳ್ಳು ಬಾರಿಸುತ್ತಿರುವ ಮಹಿಳೆಯರು

12ನೇ ಪುಟದಿಂದ...

ಆ ಶಿಲ್ಪಿಯು ಇದನ್ನು ಪರಿಪೂರ್ಣಗೊಳಿಸಿದ್ದರೆ ಅನಂಗದೈವ ಸಶರೀರವಾಗಿ ಅವತರಿಸಬಹುದು ಎಂದು ಹೇಳಲಾಗುತ್ತದೆ. ಇಲ್ಲಿ ಹೋಳಿ ಹುಣ್ಣಿಮೆ ಮತ್ತು ಯುಗಾದಿಯಂದು ಲಕ್ಷಾಂತರ ಜನರು ಬಂದು ದರ್ಶನ ಪಡೆಯುತ್ತಾರೆ. ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶಗಳಿಂದ ಬರುವ ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊತ್ತು ಹೋಗುತ್ತಾರೆ. ಕೆಲವರು ಪಾದಯಾತ್ರೆಯಲ್ಲಿಯೂ ಬರುತ್ತಾರೆ. ಬರಿಗಾಲಿನಲ್ಲಿ ಬರುವ ಹರಕೆ ಹೊತ್ತಿರುತ್ತಾರೆ.

ಓಣಿ ಓಣಿಗಳಲ್ಲಿ ರತಿ–ಮನ್ಮಥರನ್ನು ಪ್ರತಿಷ್ಠಾಪಿಸುವ ಪರಂಪರೆ ಈ ಭಾಗದಲ್ಲಿದೆ. ಮೊದಲೆಲ್ಲ ನುಗ್ಗೆಗಿಡದಲ್ಲಿ ಮಾಡಿದ ಮೂರ್ತಿಗಳನ್ನು ಪ್ರತಿಷ್ಠಾಪಿಸುತ್ತಿದ್ದರು. ಇದೀಗ ಮಣ್ಣಿನಲ್ಲಿಯೂ ಮೂರ್ತಿಗಳನ್ನು ಮಾಡಿ ಮಾರಾಟ ಮಾಡಲಾಗುತ್ತಿದೆ. ನೀಲಕಂಠ ಕಾಂಬಳೆ ಎಂಬ ಕಲಾವಿದರ ಮನೆಯಲ್ಲಿ ತಲೆತಲಾಂತರದಿಂದ ರತಿ–ಮನ್ಮಥರ ಪ್ರತಿಮೆಗಳನ್ನು ತಯಾರಿಸುವ, ಅಲಂಕರಿಸುವ ಕೆಲಸವನ್ನು ನಿರ್ವಹಿಸಲಾಗುತ್ತದೆ.

ಸಂಕ್ರಾಂತಿ ಮುಗಿದ ಕೂಡಲೆ ಕೆಲಸ ಆರಂಭವಾಗುತ್ತದೆ. ಇದೀಗ ಯಾರಾದರೂ ಕಾಷ್ಠಶಿಲ್ಪಗಳನ್ನು ಕೇಳಿದರಷ್ಟೇ ತಯಾರಿ ಮಾಡಿಕೊಡಲಾಗುತ್ತದೆ. ಇಲ್ಲದಿದ್ದಲ್ಲಿ ಮಣ್ಣಿನ ಮೂರ್ತಿಗಳನ್ನೇ ತಯಾರಿಸಿ ಮಾರಾಟ ಮಾಡಲಾಗುತ್ತದೆ. ಕಾಷ್ಠಶಿಲ್ಪಗಳ ತಯಾರಿಗೆ ಪ್ರತಿದಿನ ಇಬ್ಬರಿಂದ ಮೂವರು ಐದಾರು ಗಂಟೆಗಳಷ್ಟು ಶ್ರಮಿಸಿದರೆ ಒಂದು, ಒಂದೂವರೆ ತಿಂಗಳಿಗೆ ಒಂದು ಜೋಡಿ ಪ್ರತಿಮೆಯನ್ನು ಸಿದ್ಧಪಡಿಸಬಹುದಾಗಿದೆ.

'ನುಗ್ಗೆ, ಸಾಗವಾನಿ ಮರಗಳಲ್ಲಿಯೂ ಈ ಕಲಾಕೃತಿಗಳನ್ನು ಸಿದ್ಧಪಡಿಸಲು ಕೇಳಿಕೊಳ್ಳುತ್ತಿದ್ದರು. ಒಮ್ಮೆ ಮಾಡಿದರೆ ನೂರಾರು ವರ್ಷ ಬಾಳಿಕೆ ಬರುತ್ತವೆ. ಆದರೆ ಇದೀಗ ಬೆಲೆ ಏರಿಕೆಯಿಂದಾಗಿಯೂ ಕಡಿಮೆ ಬೇಡಿಕೆ ಇದೆ. ಶೋಕಿಗಾಗಿ ಕೇಳುವವರೇ ಬಹಳ ಜನರಿದ್ದಾರೆ. ಅವರಿಗಾಗಿ ಯಾವಾಗಲಾದರೂ ಮಾಡಿಕೊಡುತ್ತೇವೆ. ಈ ನಡುವೆ ಕೇರಳ, ಮುಂಬೈಗಳಿಂದ ಇಂಥ ಪ್ರತಿಮೆಗಳಿಗೆ ಹೆಚ್ಚಿನ ಬೇಡಿಕೆ ಇದೆ' ಎಂದು ನೀಲಕಂಠ ಹೇಳುತ್ತಾರೆ.

ಫಲವಂತಿಕೆಯ ಪ್ರತಿರೂಪವೆಂದೇ ನಂಬಿರುವುದರಿಂದ ಮಕ್ಕಳಾಗದವರು, ಮದುವೆಯಾಗದವರು ವಿಶೇಷ ಹರಕೆ ಹೊರುತ್ತಾರೆ. ಹಾವೇರಿ ಜಿಲ್ಲೆಯ ಕೆಲವು ಗ್ರಾಮಗಳಲ್ಲಿ, ಧಾರವಾಡದ ಪೇಟೆ ಬೀದಿಯಲ್ಲಿ ಕಾಮಣ್ಣನ ವೇಷಧರಿಸಿ ಕೂರುವ ಕಲಾವಿದರಿದ್ದಾರೆ. ಘನಗಂಭೀರ ರೂಪದಲ್ಲಿ ಕೂರುವ ಈ ಕಲಾವಿದರು ನಗುವಂತೆ, ಮುಗುಳ್ನಗುವಂತೆ ಮಾಡುವುದೇ ಸವಾಲು. ಅಷ್ಟನ್ನು ಮಾಡಿದರೆ ಅನೇಕ ನಗದು ಬಹುಮಾನಗಳನ್ನೂ ಇರಿಸಿರುತ್ತಾರೆ. ಈ ವರೆಗೆ ಈ ಸವಾಲು ಗೆದ್ದವರು ಯಾರೂ ಇಲ್ಲವೆಂಬುದೇ ಸೋಜಿಗ. ಮನ್ಮಥನ ಮುಂದೆ ಅಳುವುದು, ಅತ್ತಂತೆ ಮಾಡುವುದು, ನಗುವುದು, ಕುಡಿದವರಂತೆ ಆಡುವುದು, ಮಂಗನಂತೆ ಮಾಡುವುದು, ಜೋಕರ್‌ಗಳಂತೆ ಕುಣಿಯುವುದು, ಅನೇಕ ಹಾಸ್ಯದ ಪ್ರಸಂಗ ಹೇಳುವುದು, ಏನೆಲ್ಲ ಮಂಗಾಟಗಳನ್ನು ಮಾಡುತ್ತಿರುತ್ತಾರೆ. ಆದರೆ ಮನ್ಮಥ ಮಾತ್ರ, ಗುರಿಯೊಂದೇ ಸತ್ಯ ಎಂಬಂಥ ಮುಖಭಾವದಲ್ಲಿ ಕುಳಿತಿರುತ್ತಾನೆ.

ಈ ಏಕಾಗ್ರ ಮನೋಭಾವ ಮನ್ಮಥ ತಾನು ಅನಂಗನಾಗುವ ಅಥವಾ ಅಳಿಯುವ ಸಾಧ್ಯತೆ ಇದ್ದಾಗಲೂ ದೇವಲೋಕದ ಮನುಕುಲದ ಉದ್ಧಾರಕ್ಕಾಗಿ ತಾನು ಮುನ್ನುಗ್ಗಿದ. ಹೀಗೆ ನಿರುದ್ವಿಗ್ನವಾಗಿರುವುದನ್ನು ಮನ್ಮಥ ಕಲಿಸುತ್ತಾನೆ.

ಫಲವಂತಿಕೆಗಾಗಿ, ಸುಖ, ಆಸೆ, ತುಂಟತನ, ನಶ್ವರ ಇವುಗಳಿಗೆಲ್ಲ ಹೆಸರಾಗಿರುವ ಮನ್ಮಥ ಇಲ್ಲಿ ಜೀವನಪ್ರೀತಿಯ ಪ್ರತಿಮೆಯಾಗಿಯೂ ಕಾಣಿಸುತ್ತಾನೆ. ರತಿದೇವಿ ಬದ್ಧತೆಯ ಪ್ರತಿಮೆಯಾಗಿ. ರತಿ–ಮನ್ಮಥರಂತೆ ಬದುಕುವುದೆಂದರೆ ಸಮಾಜಕ್ಕಾಗಿ ತ್ಯಾಗ ಮಾಡಲು ಸಿದ್ಧರಾಗಿರಬೇಕು ಎಂಬ ಪಾಠ ಹೇಳುತ್ತವೆ. ತನ್ನ ಹಟಕ್ಕಾಗಿ ಹೋಳಿಗೆ ದಹನವಾಗುವ, ಯುಗಾದಿಗೆ ಮರುಹುಟ್ಟು ಪಡೆಯುವಂತೆ ಕೆಟ್ಟದ್ದನ್ನು ದಹಿಸಿ, ಹೊಸತನಕ್ಕಾಗಿ ಮರುಹುಟ್ಟು ಪಡೆಯಬೇಕು ಎಂಬಂತೆ ಆಚರಣೆಗಳು ಸಂಪನ್ನವಾಗುತ್ತವೆ.

ಡಡ್ಡಣ್ಣಕ್ಕ ಣಕ್ಕ ಣ್ಣಕ್ಕ... ಜಕ್ಕಣಕ್ಕ ಣಕ್ಕ ಣಕ್ಕ...

ಹಿಂಗೆ ಸದ್ದು ಕೇಳತೊಡಗಿದರೆ ಮನದೊಳಗೆ ಆತಂಕ ಮತ್ತು ಖುಷಿ ಎರಡೂ ಒಟ್ಟೊಟ್ಟಿಗೆ ಸಮ್ಮಿಳಿತವಾಗುತ್ತದೆ. ಆತಂಕ ಇದು ಪರೀಕ್ಷೆಯ ಸಮಯ. ಪರೀಕ್ಷೆ ಇದ್ದಾಗಲೇ ಈ ಮೋಜಿನ ಹಬ್ಬ ಹೋಳಿ ಬರುತ್ತದಲ್ಲ ಅಂತ. ಆದರೆ ಆ ಒತ್ತಡ ನಿರ್ವಹಣೆಗೆಂದೇ ಹೋಳಿ ಬರುತ್ತದೇನೋ ಎಂಬ ಖುಷಿ.

ಹುಬ್ಬಳ್ಳಿ–ಧಾರವಾಡ, ಹಾವೇರಿ– ಗದಗ, ಬಾಗಲಕೋಟೆ ಜಿಲ್ಲೆಗಳಲ್ಲಿ ದುಡಿ ಮಾರುವವರು ಶಿವರಾತ್ರಿಯ ನಂತರ ನೆರೆಯತೊಡಗುತ್ತಾರೆ. ಊರು ಪ್ರವೇಶಿಸುವ ಹೆದ್ದಾರಿಗಳಲ್ಲಿ, ಪ್ರಮುಖ ದೇಗುಲಗಳ ಮುಂದೆ ನೀಲಿ, ಕೆಂಪು ಬಣ್ಣದ ದುಡಿ, ಪುಟ್ಟ ಡೊಳ್ಳುಗಳು ಮಾರಾಟಕ್ಕೆ ಇಡುತ್ತಾರೆ. ಪ್ಲಾಸ್ಟಿಕ್ ಮತ್ತು ಚರ್ಮ ಎರಡೂ ಬಗೆಯ ವಾದ್ಯಗಳು ಮಾರಾಟಕ್ಕೆ ಲಭ್ಯ ಇರುತ್ತವೆ.

ಡಿಜೆ ಪೂರ್ವದ ಕಾಲದಲ್ಲಿ ಎಲ್ಲ ಮಕ್ಕಳೂ ದುಡಿ ಮತ್ತು ಡೊಳ್ಳುಗಳೊಂದಿಗೆ ಹೋಲಿಕಾ ದಹನ ಮಾಡುತ್ತಿದ್ದರು. ಈ ಸದ್ದು ನರನಾಡಿಗಳಲ್ಲಿರುವ ರೋಷ, ಉದ್ವೇಗ, ಆವೇಶಗಳನ್ನು ಆಚೆ ಹಾಕುವಂತೆ ಪ್ರೇರೇಪಿಸುತ್ತಿತ್ತು. ಹೋಲಿಕಾ ದಹನದ ಸಂದರ್ಭದಲ್ಲಿ ಮನಸಿನಿಂದಾಚೆ ಎಲ್ಲ ಕಶ್ಮಲವನ್ನೂ ಹೊರಹಾಕುವಂತೆ ಅವಾಚ್ಯ ಪದ, ಬೈಗುಳ ಬಳಸಬಹುದಿತ್ತು. ಅದಕ್ಕೆ ತಕ್ಕನಾಗಿ ಈ ದುಡಿ–ಡೊಳ್ಳು ವಾದ್ಯಗಳು ನಾವು ಬೈದದ್ದು ನಮಗೇ ಕೇಳದಷ್ಟು ಜೋರಾಗಿ ಸದ್ದು ಮಾಡುತ್ತಿದ್ದವು. ಈ ದಿನ ಬಾಯಿಯಿಂದಾಚೆ ಬಂದ ಪದಗಳು, ವರ್ಷೋಪ್ಪತ್ತಿನ ವರೆಗೆ ಮತ್ತೆ ತುಟಿ ತುದಿಗೆ ಬರುವಂತಿರುವುದಿಲ್ಲ. ಈಗ ಬೈಗುಳ, ಅವಾಚ್ಯ ಪದಗಳ ಬಳಕೆ ಕಡಿಮೆಯಾಗಿದೆ. ಡಿಜೆ ಸದ್ದಿಗೆ ಹೆಜ್ಜೆ ಹಾಕುವ ಯುವಜನ ಆ ಕೇಕೆ ಹಾಕುವುದರಲ್ಲಿ, ನರ್ತಿಸುವುದರಲ್ಲಿಯೇ ಮೈಮರೆಯುತ್ತಾರೆ. ಆದರೆ ಅಲೆಮಾರಿಗಳಿಗೆ ಪ್ರತಿಸಲವೂ ವ್ಯಾಪಾರಕ್ಕಂತೂ ಮೋಸ ಆಗುವುದಿಲ್ಲ.

ಗುಲಾಲೂ... ಸಕ್ಕರೆ ಸರವೂ..

ಐದು ವರ್ಷಗಳ ಒಳಗಿನ ಮಕ್ಕಳಿಗೆ ಬಣ್ಣವನ್ನು ಬಳಿಯುವಂತಿಲ್ಲ. ಹಿರಿಯ ಜೀವಗಳಿಗೂ ಅವರ ಇಷ್ಟದ ವಿರುದ್ಧ ಬಣ್ಣ ಬಳಿಯುವಂತಿಲ್ಲ. ಹಿರಿಯರಿಗೆ ವೀರತಿಲಕವಿರಿಸಿ, ಪಾದಕ್ಕೆ ಶರಣೆಂದು ಆಶೀರ್ವಾದ ಪಡೆಯಬೇಕು. ಹಿರಿಯರೂ ಒಂದಷ್ಟು ಹಣವನ್ನು ಆಶೀರ್ವಾದದ ರೂಪದಲ್ಲಿ ಈ ಮಕ್ಕಳಿಗೆ ನೀಡಬೇಕು. ಇನ್ನು ಐದುವರ್ಷದ ಒಳಗಿನ ಎಳೆಯ ಮಕ್ಕಳಿಗೆ ಬಣ್ಣ ಬಣ್ಣದ ಬತ್ತಾಸುಗಳಿರುವ ಸಕ್ಕರೆ ಸರವನ್ನು ಹಾಕಿ ಶುಭ ಕೋರಲಾಗುತ್ತದೆ. ದೀರ್ಘಾಯುಗಳಾಗಲಿ, ಸದೃಢಕಾಯವಾಗಲಿ ಎನ್ನುವುದು ಸಕ್ಕರೆ ಸರ ಹಾಕುವ ಆಶಯವಂತೆ.

ಇದೀಗ ಲಭ್ಯ
ಹೊನ್ನ ಕಣಜ
ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದ ಸಣ್ಣ ಕಥೆಗಳ ಸಂಕಲನ
ಪ್ರತಿಗಳಿಗಾಗಿ ಸಂಪರ್ಕಿಸಿ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು – 560001
ದೂರವಾಣಿ : 080 22161900/901/913/914
Shop Online www.navakarnataka.com

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ
ಮೂಲ: ಜೂಪಾಕ ಸುಭದ್ರ
ಕನ್ನಡಕ್ಕೆ :ಶಿವಕುಮಾರ್ ಕಂಪ್ಲಿ
ಅವರ
ರಿಜೆಕ್ಟೆಡ್ ಕಾಲ್
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ನಾ ದಿವಾಕರ
ಅವರ
ಹನಿಗೊಂದು ಬೊಗಸೆಗಾಗಿ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ ಎರಡನೇ ಆವೃತ್ತಿ ಶೀಘ್ರ

‘ಪ್ರಜಾವಾಣಿ’ ದಿನಪತ್ರಿಕೆ ಮತ್ತು ಕನ್ನಡ ಚಿತ್ರರಂಗದ ಒಡನಾಟ ಆರು ದಶಕದಿಂದಲೂ ಗಾಢವಾಗಿದೆ. ಇತಿಹಾಸದ ಪುಟಗಳನ್ನು ತಿರುವಿದರೆ ಹತ್ತಾರು ನಿದರ್ಶನಗಳು ಸಿಕ್ಕುತ್ತವೆ. ಚಿತ್ರೋದ್ಯಮದ ನಾಡಿಮಿಡಿತವನ್ನು ಸೂಕ್ಷ್ಮವಾಗಿ ಕೇಳಿಸಿಕೊಳ್ಳುತ್ತಾ, ಅಲ್ಲಿನ ಪಲ್ಲಟಗಳನ್ನು ಹೊಣೆಗಾರಿಕೆಯಿಂದ ದಾಟಿಸುತ್ತಾ, ಸಾಂಸ್ಕೃತಿಕ ದೃಷ್ಟಿಯಲ್ಲಿಯೂ ಸಿನಿಮಾಗಳನ್ನು ನೋಡುವಂತಹ ಗಾಂಭೀರ್ಯವನ್ನು ‘ಪ್ರಜಾವಾಣಿ’ ಉಳಿಸಿಕೊಂಡಿದೆ. ಹೀಗಾಗಿಯೇ ಕರ್ನಾಟಕದ ಶ್ರೀಮಂತ ಸಿನಿಮಾ ಪರಂಪರೆಯನ್ನು ಸಂಭ್ರಮಿಸುವ, ಬೆಸೆಯುವ ವೇದಿಕೆಯೊಂದನ್ನು 2023ರಲ್ಲಿ ‘ಪ್ರಜಾವಾಣಿ’ ಸೃಷ್ಟಿಸಿತು. ತನ್ನ ‘ಅಮೃತ ಸಂಭ್ರಮ’ದ ಸಂದರ್ಭದಲ್ಲಿ ಪ್ರಾರಂಭಿಸಿದ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ ಕನ್ನಡ ಚಿತ್ರರಂಗದ ಪ್ರೀತಿಗೆ ಪಾತ್ರವಾಗಿದೆ. ಚೊಚ್ಚಲ ಆವೃತ್ತಿಯಲ್ಲೇ ಮೆಚ್ಚುವಂತಹ ವರ್ಣರಂಜಿತ, ಅದ್ದೂರಿ, ಅರ್ಥಗರ್ಭಿತ ಕಾರ್ಯಕ್ರಮವನ್ನು ಆಯೋಜಿಸಿದ್ದ ‘ಪ್ರಜಾವಾಣಿ’ ಇದೀಗ ಎರಡನೇ ಆವೃತ್ತಿಗೆ ಸಜ್ಜಾಗುತ್ತಿದೆ.

ಸಿದ್ಧತೆ ಹೀಗಿದೆ?

2023ರಲ್ಲಿ ಇನ್ನೂರಕ್ಕೂ ಅಧಿಕ ಕನ್ನಡ ಸಿನಿಮಾಗಳು ತೆರೆಕಂಡಿವೆ. ಚಿತ್ರರಂಗದ ಪಿಆರ್‌ಒಗಳ ಸಹಕಾರದೊಂದಿಗೆ ಈ ಚಿತ್ರಗಳ ನಿರ್ಮಾಪಕರು ಮತ್ತು ನಿರ್ದೇಶಕರನ್ನು ಸಂಪರ್ಕಿಸಲಾಗಿದೆ. ಸಿನಿಮಾಗಳ ಸಂಗ್ರಹ ಪ್ರಕ್ರಿಯೆ ಶುರುವಾಗಿದ್ದು, ಇಲ್ಲಿಯವರೆಗೆ ನೂರಕ್ಕೂ ಹೆಚ್ಚು ಸಿನಿಮಾಗಳನ್ನು ಸ್ವೀಕರಿಸಲಾಗಿದೆ. ಈ ಸಂದರ್ಭದಲ್ಲಿ ಆಡಿಟ್ ಪಾರ್ಟ್‌ನರ್ ಆಗಿ ‘ಇವೈ’ ಸಂಸ್ಥೆ ಜೊತೆಯಾಗಿದೆ.

ಆಯ್ಕೆ ಪ್ರಕ್ರಿಯೆ ಹೇಗೆ?

2023ರ ಜನವರಿ 1ರಿಂದ ಡಿಸೆಂಬರ್ 31ರವರೆಗೆ ಸೆನ್ಸಾರ್ ಮಂಡಳಿಯಿಂದ ಪ್ರಮಾಣೀಕೃತಗೊಂಡು ಬಿಡುಗಡೆಯಾದ ಚಿತ್ರಗಳನ್ನು ಎರಡನೇ ಆವೃತ್ತಿಗೆ ಪರಿಗಣಿಸಲಾಗಿದೆ. ಆಯ್ಕೆ ಪ್ರಕ್ರಿಯೆ ವಿಶಿಷ್ಟವಾಗಿದೆ. ಚಿತ್ರರಂಗದವರು ಹಾಗೂ ಪ್ರೇಕ್ಷಕರನ್ನು ಒಳಗೊಳ್ಳುವಂತಹ ಆಲೋಚನೆಯಿದು. ನಾಮನಿರ್ದೇಶಿತರ ಹಾಗೂ ವಿಜೇತರ ಕುರಿತಂತೆ ಯಾವುದೇ ಪೂರ್ವಗ್ರಹ ಇರಕೂಡದು ಎಂಬ ಎಚ್ಚರಿಕೆ ಇದಾಗಿದೆ. ಆಯ್ಕೆಯು ಯಾವುದೇ ವ್ಯಕ್ತಿಗಳು, ಸಂಸ್ಥೆಗಳ ಹಸ್ತಕ್ಷೇಪಕ್ಕೆ ಅವಕಾಶವಿಲ್ಲದಂತೆ ಅತ್ಯಂತ ಪಾರದರ್ಶಕ ಮತ್ತು ವೃತ್ತಿಪರವಾಗಿ ನಡೆಯುತ್ತದೆ. ಇಡೀ ಆಯ್ಕೆ ಪ್ರಕ್ರಿಯೆಯನ್ನು ಮೂರು ಸ್ತರಗಳಲ್ಲಿ ನಡೆಸಲಾಗುತ್ತದೆ. ಚಿತ್ರಗಳನ್ನು ಸುಮಾರು 20 ಪರಿಣತರ ತಾಂತ್ರಿಕ ತೀರ್ಪುಗಾರರ ಮಂಡಳಿ ವೀಕ್ಷಿಸಲಿದ್ದು, ಪ್ರತಿ ವಿಭಾಗದಲ್ಲಿ ತಲಾ ಐದು ನಾಮನಿರ್ದೇಶನ ಮಾಡಲಿದೆ.

ಖ್ಯಾತ ನಿರ್ದೇಶಕ ಟಿ.ಎಸ್.ನಾಗಾಭರಣ ಮುಖ್ಯ ತೀರ್ಪುಗಾರರ ಸಮಿತಿಯಲ್ಲಿ ಮುಖ್ಯಭೂಮಿಕೆಯಲ್ಲಿ ಇದ್ದಾರೆ. ಬೆಂಗಳೂರು ಚಿತ್ರೋತ್ಸವದ ಸಂಸ್ಥಾಪಕ ಎನ್. ವಿದ್ಯಾಶಂಕರ್, ನಟಿಯರಾದ ಸುಧಾರಾಣಿ, ರಕ್ಷಿತಾ, ಶ್ರುತಿ ಹರಿಹರನ್, ನಿರ್ದೇಶಕಿ ಸುಮನಾ ಕಿತ್ತೂರು, ಸಂಗೀತ ನಿರ್ದೇಶಕ ವಿ.ಮನೋಹರ್ ಸಮಿತಿಯಲ್ಲಿರುವ ಮುಖ್ಯ ತೀರ್ಪುಗಾರರು. ಎರಡನೇ ಹಂತದಲ್ಲಿ ಮುಖ್ಯ ತೀರ್ಪುಗಾರರ ಮಂಡಳಿಯಿಂದ ನಾಮನಿರ್ದೇಶನಗಳಿಗೆ ಅಂತಿಮರೂಪ ದೊರೆಯಲಿದೆ. ಮೂರನೇ ಹಂತದಲ್ಲಿ, ವಿಜೇತರ ಆಯ್ಕೆಗಾಗಿ ಚಿತ್ರರಂಗದ ಸಾವಿರಕ್ಕೂ ಹೆಚ್ಚು ಜನರಿಂದ ಮತದಾನ ನಡೆಯಲಿದೆ. ಚಿತ್ರರಂಗದ ಪ್ರಮುಖ ಸಂಘ-ಸಂಸ್ಥೆಗಳ ಸದಸ್ಯರು ಮತದಾನದ ಮೂಲಕ ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಆಯ್ಕೆ ಮಾಡುತ್ತಾರೆ. ನಂತರ ಮುಖ್ಯ ತೀರ್ಪುಗಾರರ ಮಂಡಳಿಯಿಂದ ಮೇಲಿನ ಮೂರು ಸ್ತರಗಳಿಂದಾದ ಆಯ್ಕೆಗೆ ಅಂತಿಮ ಅನುಮೋದನೆ ದೊರೆಯುತ್ತದೆ. ‘ಪ್ರಜಾವಾಣಿ ಸಿನಿ ಸಮ್ಮಾನ’ದ ಎರಡನೇ ಆವೃತ್ತಿಯ ಕಾರ್ಯಕ್ರಮ ಮತ್ತಷ್ಟು ವಿಜೃಂಭಣೆಯಿಂದ ಶೀಘ್ರದಲ್ಲೇ ನಡೆಯಲಿದೆ.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ ಕಾರ್ಯಕ್ರಮದಲ್ಲಿ ಭಾವನಾ ರಾವ್ ಹೆಜ್ಜೆ ಹಾಕಿದ ಸಂದರ್ಭ

ಆಶಯ...

ಚಂದನವನದ ಪ್ರತಿಭೆಗಳನ್ನು ಗುರುತಿಸಲು ಮತ್ತು ಕನ್ನಡ ಚಿತ್ರರಂಗದ ಅಭೂತಪೂರ್ವ ಪರಂಪರೆಯನ್ನು ಎತ್ತಿಹಿಡಿಯಲು ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ ವೇದಿಕೆಯಾಗಬೇಕೆಂಬುದೇ ಆಶಯ.

ಸ್ಯಾಂಡಲ್‌ವುಡ್‌ನಲ್ಲಿರುವ ಅಸಾಧಾರಣ ಪ್ರತಿಭೆಗಳನ್ನು ಗುರುತಿಸಿ, ಪ್ರಶಂಸಿಸಿ ಚಿತ್ರರಂಗದ ಬೆಳವಣಿಗೆಗೆ ಉತ್ತೇಜನ ನೀಡುವ ಉದ್ದೇಶದಿಂದಲೇ ಎರಡನೇ ಆವೃತ್ತಿಗೂ ಅಣಿಯಾಗುತ್ತಿದೆ.

ಪ್ರತಿಭಾನ್ವಿತ ಕಲಾವಿದರು

- ಅತ್ಯುತ್ತಮ ನಟ
- ಅತ್ಯುತ್ತಮ ನಟಿ
- ವರ್ಷದ ಅತ್ಯುತ್ತಮ ಚಿತ್ರ
- ಅತ್ಯುತ್ತಮ ಪೋಷಕ ನಟ
- ಅತ್ಯುತ್ತಮ ಪೋಷಕ ನಟಿ
- ಅತ್ಯುತ್ತಮ ನಿರ್ದೇಶನ
- ಅತ್ಯುತ್ತಮ ಚೊಚ್ಚಲ ನಿರ್ದೇಶನ
- ಅತ್ಯುತ್ತಮ ಸಂಗೀತ ನಿರ್ದೇಶನ
- ಅತ್ಯುತ್ತಮ ಛಾಯಾಚಿತ್ರಗ್ರಹಣ
- ಅತ್ಯುತ್ತಮ ಸಂಕಲನ
- ಅತ್ಯುತ್ತಮ ಚಿತ್ರಕಥೆ
- ಅತ್ಯುತ್ತಮ ಹಿನ್ನೆಲೆ ಗಾಯಕ
- ಅತ್ಯುತ್ತಮ ಹಿನ್ನೆಲೆ ಗಾಯಕಿ
- ಅತ್ಯುತ್ತಮ ಗೀತ ಸಾಹಿತ್ಯ
- ಅತ್ಯುತ್ತಮ ನೃತ್ಯ ನಿರ್ದೇಶನ

26 ನಾಲ್ಕು ವಿಭಾಗಗಳಲ್ಲಿ ಒಟ್ಟು ಪ್ರಶಸ್ತಿಗಳು

ಚಿತ್ರೋದ್ಯಮಕ್ಕೆ ದಿಕ್ಸೂಚಿಯಾಗಬಲ್ಲ ಸಿನಿಮಾಗಳು

- ಸಾಮಾಜಿಕ ಪರಿಣಾಮ ಬೀರಿದ ಅತ್ಯುತ್ತಮ ಚಿತ್ರ
- ಅತ್ಯುತ್ತಮ ನಿರ್ಮಾಣ ವಿನ್ಯಾಸ
- ಅತ್ಯುತ್ತಮ ವಿಎಫ್‌ಎಕ್ಸ್, ಪೋಸ್ಟ್ ಪ್ರೊಡಕ್ಷನ್ ಹಾಗೂ ಆ್ಯನಿಮೇಷನ್
- ಅತ್ಯುತ್ತಮ ಧ್ವನಿಗ್ರಹಣ ಹಾಗೂ ಶಬ್ದವಿನ್ಯಾಸ

ಜನಮೆಚ್ಚಿದ ವಿಭಾಗದ ಪ್ರಶಸ್ತಿ

- ಜನಮೆಚ್ಚಿದ ಸಿನಿಮಾ
- ಜನಮೆಚ್ಚಿದ ನಟ
- ಜನಮೆಚ್ಚಿದ ನಟಿ
- ಜನಮೆಚ್ಚಿದ ಸಂಗೀತ

ಸಂಪಾದಕರ ಆಯ್ಕೆ

- ವರ್ಷದ ಗಮನಾರ್ಹ ಸಾಧನೆ
- ಕನ್ನಡ ಸಿನಿಮಾಗೆ ಶ್ರೇಷ್ಠ ಕೊಡುಗೆ

“ನನ್ನ ದಿಕ್ಕುಗಳನ್ನು ನಿಗದಿಪಡಿಸಿದ ಪತ್ರಿಕೆ ‘ಪ್ರಜಾವಾಣಿ’. ‘ಗ್ರಹಣ’ಕ್ಕೆ ಎರಡು ರಾಷ್ಟ್ರೀಯ ಪ್ರಶಸ್ತಿಗಳು ಬಂದಾಗ ಪ್ರಜಾವಾಣಿ ಕೊಟ್ಟ ಪ್ರೋತ್ಸಾಹ ನೆನಪಿನಲ್ಲಿದೆ. ವಿಚಾರ, ವೈಚಾರಿಕತೆ, ಆಲೋಚನೆ, ಭವಿಷ್ಯದ ಬಗ್ಗೆ ಚಿಂತನೆಯನ್ನು ನನಗೆ ಪ್ರಜಾವಾಣಿ ಕೊಟ್ಟಿದೆ. ಇದೀಗ ಪ್ರಜಾವಾಣಿಯ ಕನ್ನಡ ಸಿನಿ ಸಮ್ಮಾನದ ಎರಡನೇ ಆವೃತ್ತಿಯ ಪ್ರಶಸ್ತಿಗಳ ಆಯ್ಕೆ ಸಮಿತಿಯ ಮುಖ್ಯಭೂಮಿಕೆಯಲ್ಲಿ ಇದ್ದೇನೆ. ಪ್ರತಿಯೊಬ್ಬರಿಗೂ ಗೌರವ, ಪುರಸ್ಕಾರ ಜೊತೆಗೆ ಹೆಗಲಿಗೆ ಏರುವ ಜವಾಬ್ದಾರಿಯನ್ನು ಕೊಡುವ ಕೆಲಸವನ್ನು ಪ್ರಜಾವಾಣಿ ನಿರಂತರವಾಗಿ ಮಾಡುತ್ತಿದೆ. ನನ್ನ ಕೆಲವು ಕ್ಷಣಗಳನ್ನು ಇದರೊಂದಿಗೆ ನಾನು ಕಳೆಯಲಿದ್ದೇನೆ.”

ಟಿ.ಎಸ್.ನಾಗಾಭರಣ, ನಿರ್ದೇಶಕ.

ಟಿ.ಎಸ್. ನಾಗಾಭರಣ

ಚಿತ್ರರಂಗ, ರಂಗಭೂಮಿ ಮತ್ತು ಕಿರುತೆರೆ ಕ್ಷೇತ್ರಗಳಲ್ಲಿ ಅಭಿನಯ ಮತ್ತು ನಿರ್ದೇಶನದ ಸಾಮರ್ಥ್ಯದಿಂದ ಗುರುತಿಸಿಕೊಂಡವರು. ‘ಬೆನಕ’ದಿಂದ ಹೊಮ್ಮಿದ ಹೊಂಗಿರಣಗಳಲ್ಲಿ ಇವರು ಪ್ರಮುಖರು. ಕಲಾತ್ಮಕ ಮತ್ತು ಮುಖ್ಯವಾಹಿನಿ ಸಿನಿಮಾಗಳನ್ನು ನಿರ್ದೇಶಿಸಿ ಛಾಪು ಮೂಡಿಸಿದ್ದಾರೆ. 1978 ರಲ್ಲಿ ತೆರೆಕಂಡ ‘ಗ್ರಹಣ’ ಚಿತ್ರದ ಮೂಲಕ ನಿರ್ದೇಶಕರಾದರು. ಈ ಚಿತ್ರ ಎರಡು ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳನ್ನು ಪಡೆಯಿತು. ‘ಬಂಗಾರದ ಜಿಂಕೆ’, ‘ಅನ್ವೇಷಣೆ’ ಬಳಿಕ ನಿರ್ದೇಶಿಸಿದ ‘ಬ್ಯಾಂಕರ್ ಮಾರ್ಗಯ್ಯ’ ಚಿತ್ರವೂ ರಾಷ್ಟ್ರ ಪ್ರಶಸ್ತಿ ಪಡೆಯಿತು. ಇವರ ಸಿನಿಮಾಗಳಿಗೆ ಒಟ್ಟು ಎಂಟು ರಾಷ್ಟ್ರ ಪ್ರಶಸ್ತಿಗಳು ದೊರಕಿವೆ. ‘ಆಕ್ಸಿಡೆಂಟ್’ ಚಿತ್ರದಲ್ಲಿನ ನಟನೆ ಮೂಲಕ ಜನಮನ್ನಣೆ ಗಳಿಸಿಕೊಂಡರು. ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಎನ್. ವಿದ್ಯಾಶಂಕರ್



ಸಾಹಿತ್ಯದ ವಿದ್ಯಾರ್ಥಿ ಆಗಿದ್ದುಕೊಂಡೇ ಸಿನಿಮಾವನ್ನು ಆಳವಾಗಿ ಅಭ್ಯಸಿಸಿದವರು. ಇವರು ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಕಲಾತ್ಮಕ ನಿರ್ದೇಶಕರಾಗಿ ವರ್ಷಗಳ ಕಾಲ ಕೆಲಸ ಮಾಡಿ, ಅದಕ್ಕೆ ಗುಣಮಟ್ಟ ದಕ್ಕಿಸಿಕೊಟ್ಟವರು. ಅದರ ಸಂಸ್ಥಾಪಕ ಸದಸ್ಯರೂ ಹೌದು. ಕಾನ್, ಬೂಸಾನ್‌ನಂತಹ ಪ್ರತಿಷ್ಠಿತ ಚಲನಚಿತ್ರೋತ್ಸವಗಳಲ್ಲಿ ತೀರ್ಪುಗಾರರಾಗಿ ಕಾರ್ಯನಿರ್ವಹಿಸಿದ ಅನುಭವ ಅವರದ್ದು. ಭಾರತೀಯ ಚಲನಚಿತ್ರಗಳ ಸೂಕ್ಷ್ಮಗಳನ್ನೂ ಅರಿತವರು ವಿದ್ಯಾಶಂಕರ್.

ವಿ.ಮನೋಹರ್

ಕನ್ನಡ ಚಿತ್ರರಂಗದಲ್ಲಿ ಸಂಗೀತ ನಿರ್ದೇಶಕರಾಗಷ್ಟೇ ಅಲ್ಲದೆ ನಟ, ನಿರ್ದೇಶಕ, ಗೀತ ರಚನಾಕಾರರಾಗಿಯೂ ಇವರು ಪರಿಚಿತರು. ‘ತರ್ಲೆ ನನ್ಮಗ’ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ ಇವರು ‘ಜನುಮದ ಜೋಡಿ’, ‘ಚಿಗುರಿದ ಕನಸು’, ‘ಸೂರ್ಯವಂಶ’ ಚಿತ್ರಗಳ ಮೂಲಕ ಜನಪ್ರಿಯರಾದರು. ಇಲ್ಲಿತನಕ 200 ಕ್ಕೂ ಹೆಚ್ಚು ಚಿತ್ರಗಳಲ್ಲಿ ಸಂಗೀತ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇದಲ್ಲದೆ ‘ಓ ಮಲ್ಲಿಗೆ, ‘ಇಂದ್ರಧನುಷ್’ ಸೇರಿ ಮೂರು ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಇವರಿಗೆ ಕರ್ನಾಟಕ ರಾಜ್ಯ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಸಂದಿವೆ.

ಸುಧಾರಾಣಿ

ಜಾಹೀರಾತು, ಸಿನಿಮಾಗಳಲ್ಲಿ ಬಾಲನಟಿಯಾಗಿ ಅಭಿನಯ. 1986ರಲ್ಲಿ ಶಿವರಾಜ್‌ಕುಮಾರ್ ನಟನೆಯ ಚೊಚ್ಚಲ ಸಿನಿಮಾ ‘ಆನಂದ್’ ಮೂಲಕ 14ನೇ ವಯಸ್ಸಿನಲ್ಲೇ ನಾಯಕಿಯಾಗಿ ಬೆಳ್ಳಿತೆರೆಯ ಪಯಣ ಆರಂಭಿಸಿದರು. ಕನ್ನಡದ ಜೊತೆಗೆ ತೆಲುಗು, ತಮಿಳು, ಮಲಯಾಳ, ತುಳು ಚಿತ್ರಗಳಲ್ಲೂ ನಟಿಸಿದ್ದಾರೆ. 80 ಮತ್ತು 90ರ ದಶಕಗಳಲ್ಲಿ ಕನ್ನಡದಲ್ಲಿ ವೈವಿಧ್ಯಮಯ ಪಾತ್ರಗಳನ್ನು ಅಭಿನಯಿಸಿದ ಹೆಗ್ಗಳಿಕೆ ಇವರದು. ಸಿನಿಮಾಗಳ ಜೊತೆಗೆ ಕಿರುತೆರೆಯಲ್ಲೂ ಪ್ರಮುಖ ಪಾತ್ರಗಳಲ್ಲಿ ಛಾಪು ಮೂಡಿಸಿದ್ದಾರೆ.

ರಕ್ಷಿತಾ ಪ್ರೇಮ್

ಪುನೀತ್ ರಾಜ್‌ಕುಮಾರ್ ಅಭಿನಯದ ‘ಅಪ್ಪು’ ಚಿತ್ರದ ಮೂಲಕ ನಾಯಕಿಯಾಗಿ ಚಿತ್ರರಂಗ ಪ್ರವೇಶಿಸಿದವರು ಇವರು. ದರ್ಶನ್ ಜೊತೆಗಿನ ‘ಕಲಾಸಿಪಾಳ್ಯ’ ದೊಡ್ಡ ಹಿಟ್ ಆಗಿ ಇವರ ವೃತ್ತಿ ಬದುಕಿನಲ್ಲಿ ಮಹತ್ವದ ತಿರುವು ನೀಡಿತು. ಕನ್ನಡ, ತೆಲುಗು ಚಿತ್ರಗಳ ಟಾಪ್ ನಾಯಕರ ಜೊತೆ ತೆರೆ ಹಂಚಿಕೊಂಡ ಹೆಗ್ಗಳಿಕೆ ಇವರದು. ತಮ್ಮದೇ ನಿರ್ಮಾಣ ಸಂಸ್ಥೆ ಪ್ರಾರಂಭಿಸಿ ಹಿಟ್ ಚಿತ್ರಗಳನ್ನು ನೀಡಿದ್ದಾರೆ. ಪ್ರಸ್ತುತ ಇವರು ಕಿರುತೆರೆ ರಿಯಾಲಿಟಿ ಶೋಗಳಲ್ಲಿ ತೀರ್ಪುಗಾರರಾಗಿಯೂ ಸಕ್ರಿಯ.

ಸುಮನಾ ಕಿತ್ತೂರು

ಕನ್ನಡ ಚಿತ್ರರಂಗದಲ್ಲಿ ಹೊಸ ಅಧ್ಯಾಯ ಬರೆದ ‘ಎದೆಗಾರಿಕೆ’ ಸಿನಿಮಾ ನಿರ್ದೇಶಿಸಿದವರು. ದಕ್ಷಿಣ ಭಾರತದ ಕೆಲವೇ ಗಟ್ಟಿ ನಿರ್ದೇಶಕಿಯರ ಪೈಕಿ ಇವರೂ ಒಬ್ಬರು. ‘ಕಳ್ಳರ ಸಂತೆ’ ಸಿನಿಮಾ ಮೂಲಕ ನಿರ್ದೇಶಕಿಯಾದರು. ಅದಕ್ಕೂ ಮೊದಲು ಪತ್ರಕರ್ತ ಅಗ್ನಿ ಶ್ರೀಧರ್ ಅವರ ಜೊತೆ ‘ಆ ದಿನಗಳು’ ಸಿನಿಮಾದಲ್ಲೂ ಕೆಲಸ ಮಾಡಿ ಅನುಭವ ಗಿಟ್ಟಿಸಿಕೊಂಡವರು. 2016ರಲ್ಲಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಕಾದಂಬರಿ ಆಧಾರಿತ ‘ಕಿರಗೂರಿನ ಗಯ್ಯಾಳಿಗಳು’ ಚಿತ್ರವನ್ನು ನಿರ್ದೇಶಿಸಿದರು. ಇವರ ಚಿತ್ರಗಳಿಗೆ ರಾಜ್ಯ ಪ್ರಶಸ್ತಿಗಳು ದೊರಕಿವೆ.

ಶ್ರುತಿ ಹರಿಹರನ್

‘ಲೂಸಿಯಾ’ ಸಿನಿಮಾ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದ ಇವರು, ‘ನಾತಿಚರಾಮಿ’ ಸಿನಿಮಾದಲ್ಲಿನ ನಟನೆಗಾಗಿ ರಾಷ್ಟ್ರ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡವರು. ತೆರೆಯಿಂದ ಕೊಂಚ ಸಮಯ ಬಿಡುವು ಪಡೆದುಕೊಂಡಿದ್ದ ಇವರು, ಇದೀಗ ಮತ್ತೆ ಬೆಳ್ಳಿತೆರೆಯಲ್ಲಿ ಕಾಣಿಸಿಕೊಳ್ಳತೊಡಗಿದ್ದಾರೆ. ಕನ್ನಡದಲ್ಲಿ ‘ಸ್ಟ್ರಾಬೆರಿ’ ಅವರ ಮುಂದಿನ ಚಿತ್ರ. ಜೊತೆಗೆ ಎರಡು ಹೊಸ ಸಿನಿಮಾಗಳನ್ನೂ ಒಪ್ಪಿಕೊಂಡಿದ್ದಾರೆ. ನಿರ್ದೇಶನದ ತಾಲೀಮಾಗಿ ಒಂದು ಮ್ಯೂಸಿಕ್ ವಿಡಿಯೊ ನಿರ್ದೇಶಿಸಿ, ನಿರ್ಮಾಣ ಮಾಡಿದ್ದಾರೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಣ್ಣ ಚಕ್ಕು ಕೆಶ್ರಪ್ಪ ಕಥೆಯ — ರಜೆಯಲ್ಲಿ ಬಿಲ್ಲು-ಬಾಣದಾಟ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಗುಂಡನಿಗೆ ಬೇಸಿಗೆ ರಜೆ ಆರಂಭವಾಗಿತ್ತು. ಅಪ್ಪನಿಗೆ ಕೇಳಿ ಪೇಟೆಗೆ ಹೋಗಿ ಆಡಲು ಬಿಲ್ಲು, ಬಾಣವೊಂದನ್ನು ತಂದಿದ್ದ. ದೊಡ್ಡ ಪೇಪರ್‌ನಲ್ಲಿ ಗುರಿಯನ್ನು ಬಿಡಿಸಿ, ಅದನ್ನು ಮರಕ್ಕೆ ನೇತು ಹಾಕಿದ. ಬಿಲ್ಲನ್ನು ಜೋರಾಗಿ ಎಳೆದು ಬಾಣ ಬಿಟ್ಟ. ಬಾಣದ ವೇಗ ಎಷ್ಟಿತ್ತೆಂದರೆ ಗುರಿಯನ್ನು ಛೇದಿಸಿ, ಮರವನ್ನೂ ತುಂಡು ಮಾಡಿಕೊಂಡು ಅದು ಮುಂದಕ್ಕೆ ಹೋಯಿತು.

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಶ್ರಾವ್ಯ ಧಾತ್ರಿ ವಿ.ಎಚ್, ರಾಣೆಬೆನ್ನೂರು

ವೈಭವ್, ದಾವಣಗೆರೆ



ಜಯ್ ಕೃಷ್ಣ ಡಿ., ಬೆಂಗಳೂರು

ಎಸ್. ಭುವನ್, ಚಿತ್ರದುರ್ಗ

ಪ್ರತಿಷ್ಠ ಎಂ., ಹಾವೇರಿ

ಪ್ರಿಯಾಂಶು ಕೃಷ್ಣ, ಮೈಸೂರು

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ: 1.ಚಿಗುರುತ್ತ 2.ರಮಣಕ 3.ತಗಡುವು 4.ಕೇಸರಿಗೆ 5.ಶಹರಕೆ 6.ತಗಣಿತ

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಗತಿ | ಕಡಿ | ತರಿ | ಸಿವು | ವಾಹ | ಭಾರ

ಅಕ್ಷರ ಪಟ್ಟಿ: ಹ, ಪ್ರ, ಸು, ಸು, ಖಾ, ಆ, ಡು, ಸಂ, ತು, ನ, ತ, ಸು

ಜಾಣಪದ ಆಟ

ಕೆಳಗೆ ಕೊಟ್ಟಿರುವ ಅಕ್ಷರಗಳಿಗೆ ಪದಪಟ್ಟಿಯಿಂದ ಸೂಕ್ತವಾದ ಪದ ಆರಿಸಿ ತುಂಬಿ ಪದ ಮಾಡಿ

ತಮ	ರವ	ರವ	ರಸ	ಕರ
ಕಾಶಿ	ಹಾರು	ವನ	ರವ	ರವ

1 ಕೌ __ __   2 ಗಾ __ __   3 ಚಾ __ __   4 ನಾ __ __   5 ಗಾ __ __

6 ಚೌ __ __   7 ಹಾ __ __   8 ಸಾ __ __   9 ಯಾ __ __   10 ಕಾ __ __

ನಿಮ್ಮ ಜಿ.ಕೆ. ಎಷ್ಟು ಒ.ಕೆ?

1. ನಮ್ಮ ರಾಷ್ಟ್ರ ಪಕ್ಷಿ ನವಿಲು. ಆದರೆ ರಾಜ್ಯ ಪಕ್ಷಿ ಯಾವುದು?
2. ಅತ್ಯಂತ ಪ್ರಾಚೀನವಾದ ಕನ್ನಡ ಪದ ಯಾವುದು?
3. ಒಂದು ಪದವಿದೆ. ಆ ಪದ ಸರಿ ಇದ್ದರೂ, ಎಲ್ಲರೂ ತಪ್ಪು ಎನ್ನುತ್ತಾರೆ. ಆ ಪದ ಯಾವುದು.
4. ಕರ್ನಾಟಕದಲ್ಲಿ ಒಂದು ಪಕ್ಷಿಯ ಹೆಸರು ತಾಲೂಕಿನ ಹೆಸರೂ ಆಗಿದೆ. ಅದು ಯಾವುದು?
5. ಇಂಗ್ಲಿಷ್‌ನಲ್ಲಿ ಅಂತ್ಯಂತ ಪ್ರಾಚೀನವಾದ ಶಬ್ದ ಯಾವುದು?

ತಿರುಚುಳಿ ಮುರುಚುಳಿ

ಶಬ್ದ ಭಂಡಾರ

ಇಲ್ಲಿ ಕೊಟ್ಟಿರುವ ಪದಗಳನ್ನು ಮುಂದಕ್ಕಾದರೂ ಓದಿ, ಹಿಂದಕ್ಕಾದರೂ ಓದಿ

ಮಲಾಯಾಮ	ನಯನ
ಸಮಾಸ	ಕುಲುಕು
ಸಮೋಸ	ಕುಟುಕು
ನವವನ	ಕಿಟಕಿ
ಕನಕ	ಗದಗ
ಚಮಚ	ಗುಡುಗು
ನಮನ	ಗರಗ

ಗಣಿತದಲ್ಲಿ ಗರ್ದಿ ಗಮ್ಮತ್ತು

ಹೇಳುವುದು ಒಂದು, ಮಾಡುವುದು ಇನ್ನೊಂದು

ಒಂದು ಗುಣಾಕಾರ

ಲೆಕ್ಕದಲ್ಲಿ ಗುಣ್ಯದಲ್ಲಿದ್ದಷ್ಟೇ ಗುಣಕದಲ್ಲೂ ಇರುವ ಹಾಗೂ ಕೇವಲ 9ರಿಂದ ಉಂಟಾದ ಸಂಖ್ಯೆಗಳಿದ್ದಲ್ಲಿ ಅಂಥ ಗುಣಕಾರ ಲೆಕ್ಕಗಳನ್ನು ಗುಣಿಸು ಎಂದರೆ ನನ್ನ ಗೆಳೆಯ ಕಳೆದು ಉತ್ತರ ತರಿಸುತ್ತಾನೆ. ಅದು ಹೇಗೆ? ಹೀಗೆ ನೋಡಿ...

ನನ್ನ ಗೆಳೆಯನಿಗೆ 75X99 ಎಷ್ಟು ಎಂದು ಕೇಳಿದರೆ, 75ರ ಮುಂದೆ ಗುಣಕದಲ್ಲಿ ಎರಡು 9 ಇರುವುದರಿಂದ ಎರಡು ಸೊನ್ನೆ ಸೇರಿಸಿ, ಆ ಸಂಖ್ಯೆಯಲ್ಲಿ ಮೂಲ ಗುಣ್ಯ ಸಂಖ್ಯೆ ಕಳೆದುಬಿಡುತ್ತಾನೆ. ಉತ್ತರ ಸರಿಯಾಗಿರುತ್ತದೆ.

ಬಿಡಿ ಅಂಕಿ ಹೇಳು– ಇಡೀ ಸಂಖ್ಯೆ ಕೇಳು

ಇಲ್ಲಿ 7500

− 75

7425

ಗುಣಿಸಿ ತಾಳೆ ನೋಡಿದರೆ: 75x99 = 7425

ಉದಾ 2: 895X999 (ಗುಣಕದಲ್ಲಿ ಮೂರು 9ಗಳಿವೆ, ಹೀಗಾಗಿ ಮೂರು ಸೊನ್ನೆ ಸೇರಿಸಿ)

895000

− 895

894105 (ಆದರೆ ಗುಣಿಸಿ ಖಾತ್ರಿ ಮಾಡಿಕೊಳ್ಳಿ)

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಭಾರತದ ಕಿದಂಬಿ ಶ್ರೀಕಾಂತ್

ವಿಶ್ವ ಕ್ರಾಸ್ ಕಂಟ್ರಿ: ಆರು ಮಂದಿಯ ತಂಡ ಆಯ್ಕೆ

ನವದೆಹಲಿ (ಪಿಟಿಐ): ಏಷ್ಯನ್ ಕ್ರೀಡೆಗಳಲ್ಲಿ ಬೆಳ್ಳಿ ಪದಕ ಗೆದ್ದ ಕಾರ್ತಿಕ್ ಕುಮಾರ್ ಅವರು ಸರ್ಬಿಯಾದ ಬೆಲ್‌ಗ್ರೇಡ್‌ನಲ್ಲಿ ಇದೇ ತಿಂಗಳ 30ರಂದು ನಡೆಯಲಿರುವ ವಿಶ್ವ ಕ್ರಾಸ್ ಕಂಟ್ರಿ ಚಾಂಪಿಯನ್‌ಷಿಪ್‌ಗೆ ಆಯ್ಕೆ ಮಾಡಿರುವ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಭಾರತ ಅಥ್ಲೆಟಿಕ್ ಫೆಡರೇಷನ್ ಶನಿವಾರ ಆರು ಸದಸ್ಯರ ತಂಡ ಪ್ರಕಟಿಸಿತು. ಕಾರ್ತಿಕ್ ಜೊತೆ ಏಷ್ಯನ್ ಕ್ರೀಡೆಗಳಲ್ಲಿ ಕಂಚಿನ ಪದಕ ಪಡೆದ ಗುಲ್ವೀರ್ ಸಿಂಗ್ ಮತ್ತು ರಾಷ್ಟ್ರೀಯ ಚಾಂಪಿಯನ್ ಹೇಮರಾಜ್ ಗುಜ್ಜಾರ್ ಅವರು ಪುರುಷರ ವಿಭಾಗದಲ್ಲಿ ಕಣಕ್ಕಿಳಿಯಲಿ-ದ್ದಾರೆ.

25 ವರ್ಷದ ಗುಲ್ವೀರ್ ಇತ್ತೀಚೆಗೆ 10,000 ಮೀ. ರೇಸ್ ಓಟವನ್ನು 27ನಿ.41.81 ಸೆ.ಗಳಲ್ಲಿ ಪೂರೈಸಿ 16 ವರ್ಷ ಹಳೆಯ ರಾಷ್ಟ್ರೀಯ ದಾಖಲೆ ಮುರಿದಿದ್ದರು. ಹಳೆಯ ದಾಖಲೆ ಹೊಂದಿದ್ದ ಸುರೇಂದ್ರ ಸಿಂಗ್ 2008ರಲ್ಲಿ 28ನಿ.02.89 ಸೆ.ಗಳಲ್ಲಿ ಓಟ ಪೂರೈಸಿದ್ದರು.

ಆದರೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವ ಅವಕಾಶವನ್ನು ಅವರು ಸ್ವಲ್ಪದರಲ್ಲೇ ಕಳೆದುಕೊಂಡರು. ಅವರು ಇದಕ್ಕಾಗಿ ಓಟವನ್ನು 27.00.00 ಸೆ.ಗಳಲ್ಲಿ ಪೂರೈಸಬೇಕಾಗಿತ್ತು.

ಮಹಿಳಾ ತಂಡದಲ್ಲಿ ರಾಷ್ಟ್ರೀಯ ಚಾಂಪಿಯನ್ ಅಂಕಿತಾ, ಸೀಮಾ ಮತ್ತು ಅಂಜಲಿ ಕುಮಾರಿ ಅವರು ಇದ್ದಾರೆ.

ಕಾರ್ತಿಕ್ ಕುಮಾರ್

ಬ್ಯಾಡ್ಮಿಂಟನ್: ಒಂದೇ ಗುಂಪಿನಲ್ಲಿ ಭಾರತ, ಇಂಡೊನೇಷ್ಯಾ

ಚೆಂಗ್ಡು (ಪಿಟಿಐ): ಹಾಲಿ ಚಾಂಪಿಯನ್ ಭಾರತ ಪುರುಷರ ತಂಡ, ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕಳೆದ ವರ್ಷದ ರನ್ನರ್ ಅಪ್ ಇಂಡೊನೇಷ್ಯಾ ಜೊತೆ 'ಸಿ' ಗುಂಪಿನಲ್ಲಿದೆ. ಊಬರ್ ಕಪ್‌ನಲ್ಲಿ ಭಾರತ ಮತ್ತು ಪ್ರಬಲ ಚೀನಾ ಜೊತೆ ಒಂದೇ ಗುಂಪಿನಲ್ಲಿದೆ.

ಶುಕ್ರವಾರ ಈ ಪಂದ್ಯಾವಳಿಯ 'ಡ್ರಾ' ನಡೆಯಿತು. ಭಾರತ, ಇಂಡೊನೇಷ್ಯಾ ಜೊತೆ ಥಾಯ್ಲೆಂಡ್, ಇಂಗ್ಲೆಂಡ್ ತಂಡಗಳೂ 'ಸಿ' ಗುಂಪಿನಲ್ಲಿವೆ. ಬ್ಯಾಂಕಾಕ್‌ನಲ್ಲಿ 2022ರಲ್ಲಿ ನಡೆದ ಥಾಮಸ್ ಕಪ್ ಫೈನಲ್‌ನಲ್ಲಿ ಭಾರತ 3–0 ಯಿಂದ ಇಂಡೊನೇಷ್ಯಾ ತಂಡವನ್ನು ಮಣಿಸಿತ್ತು. ಭಾರತ ಊಬರ್ ಕಪ್‌ನಲ್ಲಿ ಚೀನಾ ಜೊತೆ 'ಎ' ತಂಡದಲ್ಲಿದೆ. ಕೆನಡ ಮತ್ತು ಸಿಂಗಪುರ ಇದೇ ಗುಂಪಿನಲ್ಲಿವೆ. 1957, 2014 ಮತ್ತು 2016ರಲ್ಲಿ ಭಾರತ ಮಹಿಳಾ ತಂಡ ಉಬರ್ ಕಪ್‌ನಲ್ಲಿ ಸೆಮಿಫೈನಲ್ ತಲುಪಿತ್ತು.

ಸ್ವಿಸ್ ಓಪನ್: ಸೆಮಿ ತಲುಪಿದ ಶ್ರೀಕಾಂತ್

ಬಾಸೆಲ್ (ಪಿಟಿಐ): ಕಿದಂಬಿ ಶ್ರೀಕಾಂತ್ ಅವರು ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಸಿಂಗಲ್ಸ್ ಸೆಮಿಫೈನಲ್ ತಲುಪುವ ಮೂಲಕ ಕಣದಲ್ಲಿ ಉಳಿದಿರುವ ಭಾರತದ ಏಕೈಕ ಸಿಂಗಲ್ಸ್ ಆಟಗಾರ ಎನಿಸಿದ್ದಾರೆ. ಅವರು ಎಂಟರ ಘಟ್ಟದ ಪಂದ್ಯದಲ್ಲಿ ಚೀನಾ ತೈಪಿಯ ಚಿಯಾ ಹಾವೊ ಲೀ ಅವರನ್ನು ನೇರ ಆಟಗಳಿಂದ ಸೋಲಿಸಿದರು.

ಈ ವರ್ಷ ಎಂಟನೇ ಟೂರ್ನಿ ಆಡುತ್ತಿರುವ ಅವರು ಕೊನೆಗೂ ಉತ್ತಮ ಸಾಧನೆ ತೋರಿದ್ದಾರೆ. ಕಳೆದ 16 ತಿಂಗಳ ಅವಧಿಯಲ್ಲಿ ಮೊದಲ ಬಾರಿ ಅವರು ನಾಲ್ಕರ ಘಟ್ಟ ತಲುಪಿದ್ದಾರೆ. ಶುಕ್ರವಾರ ರಾತ್ರಿ 35 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಅವರು 21–10, 21–14ರಲ್ಲಿ ಜಯಗಳಿಸಿದರು.

2022ರ ನವೆಂಬರ್‌ನಲ್ಲಿ ಹೈಲೊ ಓಪನ್ ಟೂರ್ನಿಯಲ್ಲಿ ಅವರು ಸೆಮಿಫೈನಲ್ ತಲುಪಿದ ನಂತರ ಯಾವುದೇ ಟೂರ್ನಿಯಲ್ಲಿ ನಾಲ್ಕರ ಘಟ್ಟ ತಲುಪಲು ಆಗಿರಲಿಲ್ಲ.

2021ರ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ವಿಜೇತ ಶ್ರೀಕಾಂತ್ ಅವರು ಸೆಮಿಫೈನಲ್‌ನಲ್ಲಿ 22ನೇ ಕ್ರಮಾಂಕದ ಆಟಗಾರ ಲಿನ್ ಚುನ್-ಯಿ ಅವರನ್ನು ಎದುರಿಸಲಿದ್ದಾರೆ.

ಆದರೆ ಕಿರಣ್ ಜಾರ್ಜ್ ಇನ್ನೊಂದು ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಡೆನ್ಮಾರ್ಕ್‌ನ ರೋಸ್ಮಸ್ ಗೆಮ್ಕೆ ವಿರುದ್ಧ ವೀರೋಚಿತ ಹೋರಾಟ ತೋರಿದರೂ ಅಂತಿಮವಾಗಿ 23–21, 17–21, 15–21ರಲ್ಲಿ ಸೋಲನ್ನು ಕಾಣಬೇಕಾಯಿತು.

ಭಾರತದ ಇನ್ನೊಬ್ಬ ಉದಯೋನ್ಮುಖ ಆಟಗಾರ ಪ್ರಿಯಾಂಶು ರಾಜಾವತ್ ಕೂಡ ಹೊರಬಿದ್ದರು. ಅವರು ಜಾಕೋಬ್‌ಶಲ್ಲೆ ಕ್ರೀಡಾಂಗ-ಣದಲ್ಲಿ 43 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ 15–21, 19–21ರಲ್ಲಿ ಚೌ ಟಿಯೆನ್ ಚೆನ್ ಎದುರು ಸೋತರು.

ಶಹರ್ಯಾರ್ ಖಾನ್ ನಿಧನ



ಶಹರ್ಯಾರ್ ಖಾನ್

ಲಾಹೋರ್ (ಪಿಟಿಐ): ಪಾಕಿಸ್ತಾನ ಕ್ರಿಕೆಟ್ ಮಂಡಳಿ ಮಾಜಿ ಅಧ್ಯಕ್ಷ ಶಹರ್ಯಾರ್ ಖಾನ್ (89) ಅವರು ಶನಿವಾರ ನಿಧನರಾದರು.

2000ರ ದಶಕದ ಆರಂಭದಲ್ಲಿ ಭಾರತದೊಂದಿಗೆ ಕ್ರಿಕೆಟ್ ಸಂಬಂಧವನ್ನು ಮರುಸ್ಥಾಪಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

ಭಾರತದ ಮಾಜಿ ನಾಯಕ ಮನ್ಸೂರ್ ಅಲಿ ಖಾನ್ ಪಟೌಡಿ ಅವರ ಸೋದರ ಸಂಬಂಧಿ ಆಗಿದ್ದ ಭೋಪಾಲ್ ಮೂಲದ ಪಾಕಿಸ್ತಾನದ ರಾಜತಾಂತ್ರಿಕ ಅಧಿಕಾರಿ ದೀರ್ಘಕಾಲ ಅನಾರೋಗ್ಯದಿಂದ ಬಳಲಿದ್ದರು.

ಅವರು 1990-94 ರ ನಡುವೆ ಪಾಕಿಸ್ತಾನದ ವಿದೇಶಾಂಗ ಕಾರ್ಯದರ್ಶಿಯಾಗಿ ಮತ್ತು ನವದೆಹಲಿ ಮತ್ತು ಇಂಗ್ಲೆಂಡ್‌ನ ಹೈಕಮಿಷನರ್ ಆಗಿದ್ದರು.

2003 ರಿಂದ 2006 ರವರೆಗೆ ಶಹರ್ಯಾರ್ ಪಿಸಿಬಿ ಮುಖ್ಯಸ್ಥರಾಗಿದ್ದರು, ಈ ಅವಧಿಯಲ್ಲಿ ಭಾರತ ಎರಡು ಬಾರಿ ಪಾಕಿಸ್ತಾನ ಪ್ರವಾಸ ಕೈಗೊಂಡಿತ್ತು.

1999ರ ಭಾರತ ಪ್ರವಾಸ ಹಾಗೂ 2003ರ ವಿಶ್ವಕಪ್ ವೇಳೆ ಪಾಕಿಸ್ತಾನ ತಂಡದ ಮ್ಯಾನೇಜರ್ ಆಗಿಯೂ ಕಾರ್ಯ ನಿರ್ವಹಿಸಿದ್ದರು. ಅವರು ಭೋಪಾಲ್‌ನ ರಾಜ-ಮನೆತನಕ್ಕೆ ಸೇರಿದವರು. ವಿದೇಶಾಂಗ ಸಂಬಂಧಗಳು ಮತ್ತು ಕ್ರಿಕೆಟ್‌ನಲ್ಲಿ ತಮ್ಮ ಅನುಭವಗಳ ಬಗ್ಗೆ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ.

Application Deadline: 30/04/2024

GM UNIVERSITY
Innovating Minds

Apllications are invited for
Ph.D. PROGRAMME
March-2024

